ಸಂಶೋಧನ ರತ್ನಮಾಲಿಕೆ

ಟಿ. ಕೇಶವ ಭಟ್ಟ, ಎಂ. ಎ.

ಸತ್ಯಂ, ಶಿವಂ, ಸುಂದರಂ.

ಸಾಹಿತ್ಯ ಪ್ರಕಾಶನ, ಬೆಂಗಳೂರು

ಈ ಎಲ್ಲ ಬರೆವಣಿಗೆಯಲ್ಲಿ ಜಾಗೃತವಾದ ಜಿಜ್ಞಾಸೆಯಿದೆ, ನವೀನ ವಿಚಾರವಿದೆ, ಮತ್ತು ವಿನಯಪೂರ್ವಕವಾದ ಪಾಂಡಿತ್ಯವಿದೆ.

ಡಾ॥ ರಂ. ಶ್ರೀ. ಮುಗಳಿ

[ಇಲ್ಲಿ] ಕೈಗೊಂಡಿರುವ ಕೆಲವು ನಿರ್ಣಯಗಳು ನಿಜಕ್ಕೂ ಆಯಾಯ ಶಾಖೆಗಳ ಜ್ಞಾನನಿಧಿಗೆ ವಿಶೇಷ ಕೊಡುಗೆಗಳಾಗಿವೆ.

ಪ್ರೊ॥ ದೇ. ಜವರೇಗೌಡ

ಬೆಲೆ : ರೂ ೧೦-೫೦/೧೫-೦೦.

ಡಾ। ಸೂರ್ಯನಾಥ ಕಾಮತ್ - ಅವರಿಗೆ
ಸ್ನೇಹಪೂರ್ವಕ
ಟಿ. ಕೇಶವ ಭಟ್ಟ
೧೨.೧.೭೦.

ಗೆಂದ

ಸಂಶೋಧನ ರತ್ನಮಾಲಿಕೆ

ಟಿ. ಕೇಶವ ಭಟ್ಟ, ಎಂ. ಎ.

ಶ್ರೀ ವಿದ್ಯಾನಟಿ ಕಾವ್ಯಾ
ಕ್ಷಾವಳಿ–ನಿರ್ಭೀತಿ–ವರದ–ಕರಯುತೆ ನುತೆ ಸ
ತ್ವಾವಹೆ ಚಿರಸಾಹಿತ್ಯ ಧ
ರಾ ವರರಂಗದೊಳಿರುತ್ತೆ ನರ್ತಿಸುಗೆಂದುಂ ॥

ಪ್ರಕಾಶಕರು :
ಚಿರಸಾಹಿತ್ಯ ಪ್ರಕಾಶನ
28, ಮಾಳಿಗೆ, 3 ಮೆಯಿನ್ ರಸ್ತೆ,
ಎನ್. ಆರ್. ಕಾಲೊನಿ, ಬೆಂಗಳೂರು–19.

ಮೊದಲನೆ ಮುದ್ರಣ 1969

ಬೆಲೆ : ರೂ. 10–50

ಗ್ರಂಥಾಲಯ ಪ್ರತಿ ರೂ. 15–00

ಮುದ್ರಕರು :
ಜ್ಯುಪಿಟರ್ ಪ್ರೆಸ್
ಬಳೇಪೇಟೆ, ಬೆಂಗಳೂರು–2.

ಅರಿಕೆ

ಆಗಾಗ ಸಂಶೋಧನಾತ್ಮಕವಾಗಿ ಬರೆದ ನನ್ನ ಒಂಬತ್ತು ಲೇಖನಗಳನ್ನು ಇಲ್ಲಿ ಒಂದುಗೂಡಿಸಲಾಗಿದೆ. ಇವಕ್ಕೆ ಸಂಪೋಷಕವಾಗಿ ಇನ್ನೆರಡು ಚಿಕ್ಕ ಲೇಖನಗಳು ಅನುಬಂಧದಲ್ಲಿವೆ. ಇವುಗಳಲ್ಲಿ ಹೆಚ್ಚಿನವು ಬೇರೆ ಬೇರೆ ಪ್ರೌಢ ಪತ್ರಿಕೆಗಳಲ್ಲಿ ಸ್ಮೃತಿಗ್ರಂಥಗಳಲ್ಲಿ ಪ್ರಕಟವಾಗಿವೆ (ಪೂರ್ವ ಪ್ರಕಟನ ವಿವರಕ್ಕೆ ಪುಟ ೨೨೦ ನೋಡಿ). ಹಿಂದೆ ಆಗಿರುವ ಪ್ರಕಟನಗಳಲ್ಲಿ ಈ ಲೇಖನಗಳು ಅಸಮಗ್ರವಾದುದುಂಟು. ಆದರೆ ಇಲ್ಲಿ ಇವಕ್ಕೆ ಪರಿಪೂರ್ಣತೆಯಿದೆ, ಏಕದೇಶೀಯತೆಯಿದೆ. 'ನಾಮ ವಿಭಕ್ತಿಗಳು' ಎಂಬ ಲೇಖನದಿಂದಾಯ್ದ 'ಪ್ರಥಮಾ ವಿಭಕ್ತಿ' ಮತ್ತು 'ಚತುರ್ಥೀ ವಿಭಕ್ತಿ' ಎಂಬಿವು ಮಾತ್ರ ಹಿಂದೆ ಪ್ರಕಟವಾಗಿದ್ದವು. 'ಸಾಂಗತ್ಯದ ಧಾಟಿ ಮತ್ತು ಛಂದಸ್ಸು', 'ಹವಿಕರ ಕನ್ನಡ', ಸಂಶೋಧನದ ನೆಲೆ'—ಎಂಬಿವು ಇದೇ ಮೊದಲಾಗಿ ಈ ರೂಪದಲ್ಲಿ ಹೊರಬರುತ್ತಿವೆ. 'ಛಂದಸ್ಸು ಮತ್ತು ಗುರುಲಘುಗಳ ರಹಸ್ಯ'ವು ಉಲ್ಲೇಖನೀಯವಾದ ಮಾರ್ಪಾಡಿಲ್ಲದೆ ಇಲ್ಲಿ ಬಂದಿದೆ. ಉಳಿದವು ಯಥಾನುಸಾರ ಸಂಕ್ಷೇಪಣ ವಿಸ್ತರಣ ಪರಿವರ್ತನಗಳನ್ನು ಎತ್ತಿವೆ. ಸಾಹಿತ್ಯ ಸೃಷ್ಟಿಗೆ ಪೂರ್ವಾದೇಯಗಳಾದ ಭಾಷೆ, ವ್ಯಾಕರಣ, ಛಂದಸ್ಸು ಎಂಬೀ ಶಾಸ್ತ್ರಗಳ ವಿಚಾರವೇ ಈ ರಚನೆಗಳೆಲ್ಲಕ್ಕೂ ವಸ್ತು. ಈ ವಿಚಾರದ ಒಳಹೊಕ್ಕಷ್ಟೂ, ಅಧ್ಯಯನ ನಡೆಯಿಸಿದಷ್ಟೂ, ಸಂಶೋಧನೆ ಮಾಡಿದಷ್ಟೂ ಆಸಕ್ತ ಮತಿಗೆ ನವೀನ ದ್ಯುತಿ ಸಂಗತಿಗೊಳ್ಳುವುದು. ಈ ದ್ಯುತಿಯ ಪ್ರಕಟಣೆ ಅಧ್ಯಯನಶೀಲರಿಗೆ ವಿದ್ಯುತಿ ಅಥವಾ ವಿದ್ಯುತ್ಪ್ರಕಾಶವಾಗುವುದು.

ಶಾಸ್ತ್ರ ಪ್ರಯೋಗ ಇವೆರಡೂ ಅನ್ಯೋನ್ಯಾಶ್ರಿತಗಳು. ಶಾಸ್ತ್ರವು ಲಕ್ಷಣ ನಿರೂಪಕವಾಗಿ ಪ್ರಯೋಗಾನುಸಾರಿ. ಶಾಸ್ತ್ರ ನಿರ್ಮಿತಿಯಾಗುವವರೆಗೆ ಪ್ರಯೋಗವೇ ಶಾಸ್ತ್ರದ ನಿರ್ಣಯಕ್ಕೆ ಆಧಾರ. ಈ ಆಧಾರದಿಂದ ಶಾಸ್ತ್ರವುದಿಸಿದ ಮೇಲೆ ಅದರ ಪುನಃ ಪರಿಷ್ಕರಣಕ್ಕೂ, ಮುಂದಿನ ಪ್ರಯೋಗ ಸಂಕುಲಕ್ಕೂ, ಹಿಂದಿನ ಪ್ರಯೋಗ ಶಾಸ್ತ್ರ ಎಂಬಿವೆರಡೂ ಆಧಾರಗಳು. ಕಾಲ ಮುಂದುವರಿದಂತೆ ಪ್ರಯೋಗವೂ ಮುಂಬರಿವುದರಿಂದ, ಕೆಲವೆಡೆ ಹಿಂದಿನ

ಶಾಸ್ತ್ರವನ್ನು ಉಲ್ಲಂಘಿಸುವ ಪ್ರಸಂಗ ಬರುವುದೂ ಇದೆ. ಈ ಉಲ್ಲಂಘನೆ ಎಲ್ಲೆಲ್ಲಿ ಎಷ್ಟು ತಕ್ಕುದು ಅಥವಾ ತಗದು ಎಂಬ ವಿವೇಕ ಸಾಹಿತ್ಯಕಾರನಿಗೆ ಇರಬೇಕು. ಹಾಗೆಯೇ ಮುಂದುವರಿವ ಪ್ರಯೋಗವು ಎಲ್ಲೆಲ್ಲಿ ಅಬದ್ಧವೆನ್ನ ಬಹುದೆಂಬ ಶಾಸ್ತ್ರಾನುಸರಣೆಗೂ ವಿವೇಚನೆ ಬೇಕು. ಮಾರ್ಗೋಲ್ಲಂಘನದಲ್ಲಿ ಮಾರ್ಗ ನಿರ್ಮಾಣದ ಲಕ್ಷ್ಯವಿರಬೇಕು. ಆದುದರಿಂದ ಪರಸ್ಪರ ಪೋಷಕವಾಗಿಯೇ ಶಾಸ್ತ್ರ ಪ್ರಯೋಗ ಇವು ಬಳೆದು ಬರುತ್ತವೆ ಈ ಬಗೆಯ ಪೋಷಕ ಸಂಬಂಧವಿಲ್ಲದ ಕ್ರಮ ಅನುಸರಣೀಯವಲ್ಲ—ಎಂಬೀ ತತ್ವದೃಷ್ಟಿ ಹಿನ್ನೆಲೆಯಾಗಿರುವ ಸೃಷ್ಟಿಯೇ ಇಲ್ಲಿನ ಲೇಖನಗಳು. ಇವು ಅಲ್ಲಲ್ಲಿನ ಗ್ರಂಥೋಕ್ತಿಗಳ ವ್ಯಕ್ತಿಭಾಷಿತಗಳ ಶುಕಚರ್ಚೆಯಲ್ಲ ಅವನ್ನು ಲಕ್ಷಿಸಿರುವ ಲೇಖಕನು ಶಾಸ್ತ್ರ ಪ್ರಯೋಗಗಳೆರಡರ ಸಮನ್ವಯದಿಂದ ಪಡೆದ ಸ್ವಾನುಭೂತಿಯ ಪರಿಣಾಮಗಳು. ಸಂಶೋಧನದ ನಿರ್ಣಯವೆಂಬುದು ಕೆಲವೆಡೆ 'ಅರುಂಧತೀದರ್ಶನ ನ್ಯಾಯ'ದಂತೆ. ಸಂಶೋಧಿಸಿದಷ್ಟೂ ಕೆಲವೊಮ್ಮೆ ಸತ್ಯವು ದೂರವುಳಿಯಬಹುದಾದರೂ ಪ್ರಯತ್ನವನ್ನೇ ನಿಂದಿಸಬಹುದೆ? ಮಾಡಿರುವ ಪ್ರಯತ್ನವು ಮುಂದೆ ಸತ್ಯಾನ್ವೇಷಣ ಮಾಡುವವರಿಗೆ ತಳಹದಿ ಅಥವಾ ತುಳಿದ ಹಾದಿ ಆಗದೆ? ಆದುದರಿಂದ ತಾನೆಂದುದೆ ಸಿದ್ಧಾಂತವೆಂಬ, ವಿಭಾಷೆಗೆ ಅವಕಾಶವಿಲ್ಲವೆಂಬ ತೀರ್ಪು ಇಲ್ಲಿಲ್ಲ. ಆಧಾರಗಳಿದ್ದು, ನಿರ್ವಿಕಾರ ಮತಿಗೆ ಸಮಂಜಸವೆನಿಸುವ ಅಭಿಪ್ರಾಯಕ್ಕೆ ಮಾನ್ಯತೆ ಇದ್ದೇ ಇದೆ

ಸಂಶೋಧನ ಕೃತಿಯೆಂದೊಡನೆ, 'ಯಾರಿಗಿದು? ಯಾಕಿದು? ಲೇಖಕನಿಗೆ ಬೇರೆ ಕೆಲಸವಿಲ್ಲವೆ? ಹಾಸ್ಯ ಶೃಂಗಾರಗಳ ಸರಸ ಸಾಹಿತ್ಯವನ್ನು ಬರೆಯ ಬಾರದಿತ್ತೆ'? ಎನ್ನುತ್ತ, ರಚಿಸಿರುವುದನ್ನು ಅಲಕ್ಷಿಸಿ ರಚಿಸದಿರುವುದನ್ನು ಮೆಚ್ಚುವ ವರ್ಗ ನಮ್ಮಲ್ಲಿದೆ ಈ ಬಗೆಯ ಅವ್ಯುತ್ಪನ್ನರ ಮೆಚ್ಚಿಕೆಗೆ ಇದಲ್ಲ. ಹಾಗೆಯೇ ಪರಿಣತರೆನಿಸಿಕೊಂಡವರಲ್ಲಿಯೂ ಅನ್ಯರ ಗುಣವನ್ನು ಕಾಣದ ಆತ್ಮಾನಂಮನ್ಯರೆನಿಸುವ ಅಸಹಿಷ್ಣುಗಳ ಮೆಚ್ಚುಗೆಗೂ ಇದಲ್ಲ. ವಿದ್ವಜ್ಜನರಲ್ಲಿ ಹಿರಿತನದ ಉದಾರ ಮನದವರಿದ್ದಾರೆ ಕಿರಿಯರನ್ನು ಹರಸಿ ಸರಿ ನಡೆಯಿಸುವ ಗುರುತ್ವ ಅವರಲ್ಲಿದೆ. ಗುಣವನ್ನು ಗ್ರಹಿಸುವ ಹಂಸತ್ವದ ಅಂತಸ್ಸತ್ವಪವರದು. ಅವರ ಸಹೃದಯ ಸದನದಲ್ಲಿ ಇಂತಹ ಸಂಶೋಧನಾ

ತ್ಮಕ ರಚನೆಗಳಿಗೆ ಆಸ್ಪದವಿರುತ್ತದೆ ಎಂಬುದಕ್ಕೆ ಈ ಗ್ರಂಥದ ಮುನ್ನುಡಿ ಮತ್ತು ವಿದ್ವಜ್ಜನಾಭಿಪ್ರಾಯಗಳು ಎಂಬ ಭಾಗಗಳೇ ಸಾಕ್ಷಿ. ಓದುಗರ ಇನ್ನೊಂದು ವರ್ಗ ಸರಿವರೆಯದವರದು ಹಾಗೂ ಕಿರಿಯರದು. ಗುಣವನ್ನು ಮೆಚ್ಚುವ ಜಿಜ್ಞಾಸುಗಳೂ ಆದ ಇಂಥವರಿಗೆ ಈ 'ಸಂಶೋಧನ ರತ್ನಮಾಲಿಕೆ' ಕೊರಲೊಗ್ಗುವುದರಲ್ಲಿ ಅಚ್ಚರಿಯಿಲ್ಲ.

ಕೃತಜ್ಞತೆ : ಈ ಬಗೆಯ ಪ್ರಕಟನ ಕೃತಿ ಸರ್ವಾಂಗ ಪೂರ್ಣವೂ ಅಮೂಲ್ಯವೂ ಎನಿಸುವುದು ಕೇವಲ ರಚನೆಯಿಂದಲ್ಲ; ಇದೇ ಬಗೆಯ ಇನ್ನಷ್ಟು ಉತ್ಕೃಷ್ಟ ಗ್ರಂಥರಚನೆಯಲ್ಲಿ ಸಮರ್ಥರಾದ ವಿದ್ವಾಂಸರ ಮುನ್ನುಡಿಯಿಂದ ಸಮೀಕ್ಷೆಗಳಿಂದ. ಅವನ್ನು ಪಡೆಯಲು ಸಾಧ್ಯವಾದುದಕ್ಕೆ ಧನ್ಯನಾಗಿದ್ದೇನೆ. ಹಿರಿಯ ಸಂಶೋಧಕರೂ ಶಾಸ್ತ್ರವಿದರೂ ಆದ **ಪ್ರೊ॥** ಡಿ ಎಲ್. ನರಸಿಂಹಾಚಾರ್, ಎಂ. ಎ. ಅವರು ಈ ಗ್ರಂಥಕ್ಕೆ ಮುನ್ನುಡಿಯನ್ನಿತ್ತು ಮಾರ್ಗದರ್ಶನ ಮಾಡಿದ್ದಾರೆ. ಅವರಿಗೆ ಭಕ್ತಿ ಪೂರ್ವಕವಾಗಿ ನಮಸ್ಕರಿಸುತ್ತೇನೆ. ಗ್ರಂಥವನ್ನೋದಿ ಮೆಚ್ಚಿ, ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ನೀಡಿರುವ ವಿದ್ವನ್ಮಣಿಗಳಾದ ಡಾ॥ ಕೆ. ಕೃಷ್ಣಮೂರ್ತಿ, ಪ್ರೊ॥ ಸ. ಸ. ಮಾಳವಾಡ, ಪ್ರೊ॥ ಎಂ. ವಿ. ಸೀತಾರಾಮಯ್ಯ, ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟ, ಡಾ॥ ರಂ. ಶ್ರೀ. ಮುಗಳಿ, ಡಾ॥ ವಿ. ಕೃ. ಗೋಕಾಕ್, ಪ್ರೊ॥ ಸಿ. ಮಹಾದೇವಪ್ಪ, ಪ್ರೊ॥ ಎಂ. ಮರಿಯಪ್ಪ ಭಟ್ಟ, ಪ್ರೊ॥ ದೇ. ಜವರೇಗೌಡ, ಡಾ॥ ಎ. ಎನ್. ಉಪಾಧ್ಯೆ ಇವರೆಲ್ಲರಿಗೂ ನಮ್ರ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಪ್ರಕಾಶನ : ಈ ಬಗೆಯ ಸಂಶೋಧನ ಕೃತಿಯನ್ನು ಬರೆಯಲು ನನ್ನಂಥವರಿಗೆ ಪ್ರೇರಣೆ ಯಾವುದು? ಧನಾರ್ಜನೆಯೂ ಅಲ್ಲ, ಖ್ಯಾತಿಕಾಂಕ್ಷೆಯೂ ಅಲ್ಲ. ಶ್ರಮವನ್ನು ಲೆಕ್ಕಿಸದ ಅಂತಃಪ್ರಜ್ಞೆಯೊಂದೆ. ಸ್ವಾಂತಃ ಸುಖದ ಲಕ್ಷ್ಯವೊಂದೆ. ಇದು ಬರೆದಲ್ಲಿಗೆ ನಿಲ್ಲದು. ಬರೆದಾಗ ಈ ಸ್ವಾಂತಸ್ಸುಖದ ಒಂದು ಅಂಶ ಮಾತ್ರ ಈಡೇರುವುದು. 'ಸ್ವ' ಎಂಬುದನ್ನು ಜ್ಞಾನಿಗಳು ಆತ್ಮವೆನ್ನುತ್ತಾರೆ. ಆತ್ಮನು ವ್ಯಾಪಕನಾಗಿ ಎಲ್ಲರ ಹೃದ್ದೇಶಗಳಲ್ಲಿ

ಇರುವನು-ಎನ್ನುತ್ತಾರೆ. ಆದುದರಿಂದ ಇತರರಲ್ಲಿಯೂ ಇದೇ ಬಗೆಯ ಅಂತಸ್ಸುಖವಾದಾಗ ಈ ಸುಖವು ಪರಿಪೂರ್ಣವಾಗುವುದು. ಅದಕ್ಕಾಗಿ ಬರೆದ ಗ್ರಂಥ ಪ್ರಕಟವಾಗಬೇಕು. ಮೇಲಿನ ಅರ್ಥದ ಸ್ವಾಂತಸ್ಸುಖವೇ ಪ್ರಕಟಣೆಗೂ ಪ್ರೇರಣೆ. ಆದರೆ ಇಲ್ಲಿ ಆರ್ಥಿಕ ಪ್ರಶ್ನೆಯಿರುವುದರಿಂದ ಪ್ರಕಟನಕ್ಕೇನು ಉಪಾಯ ?

ಹಿಂದೆ ೧೯೪೮ರಲ್ಲಿ ಬರೆದ 'ಸತ್ವಾಲೋಕನಂ' ಎಂಬ ಹಳಗನ್ನಡದ ಹೊಸ ಚಂಪೂ ಕಾವ್ಯಕ್ಕೆ ೧೯೫೫ವರೆಗೂ ಪ್ರಕಾಶಕರು ಸಿಗದೆ, ನಾನೇ ಅಚ್ಚು ಹಾಕಿಸಬೇಕಾಯಿತು. ಪ್ರಕಾಶಿತ ಕೃತಿ ವಿದ್ಮನ್ಮಾನ್ಯವಾಯಿತು; ಸರಕಾರದ ಬಹುಮಾನಕ್ಕೂ ಪಾತ್ರವಾಯಿತು. 'ತೂಗು ದೀವಿಗೆ' ಎಂಬ ಕವನಸಂಕಲನವನ್ನೂ ಸ್ವತಃ ಪ್ರಕಟಿಸಬೇಕಾಯಿತು. 'ಹಾಡಿನ ಚೂಡಾಮಣಿ' ಎಂಬ ಜನಪದಗೀತಗಳ ಸಂಕಲನ ೧೯೬೨ ರಲ್ಲಿ ಕೈಬರಹದಲ್ಲಿದ್ದಾಗಲೇ ಸರಕಾರದಿಂದ ಮಾನಿತ ಸಹಾಯಧನ ಪಡೆದರೂ ಅಚ್ಚಿಗೆ ಸಾಲದೆ ಹಾಗೆಯೇ ಉಳಿಯಿತು. 'ರಾಮವಿಜಯ ಕಾವ್ಯ'ವನ್ನು ಮಾತ್ರ ಪ್ರಕಾಶನಪಡಿಸಲು ಭಾರತೀಯ ಜ್ಞಾನಪೀಠ ಮುಂದೆ ಬಂತು. ಸುಮಾರು ಐನೂರು ಪುಟಗಳ ಈ ಬೃಹದ್ಗ್ರಂಥ ಈಗ ಪ್ರಕಟಗೊಂಡಿದೆ. ಆದರೆ, ಈ ಸಂಶೋಧನ ರತ್ನಮಾಲಿಕೆ'ಯ ಪ್ರಕಟನವನ್ನು ಯಾರೂ ವಹಿಸಲೊಪ್ಪದುದರಿಂದ 'ಆತ್ಮೈವ ಹ್ಯಾತ್ಮನೋ ಬಂಧು' ವಾಗಬೇಕಾಯಿತು. ಆದರೆ ಬಲವೆಲ್ಲಿ ? ಬೆಂಬಲವೆಲ್ಲಿ ? ಇದಲ್ಲದೆ, ಇನ್ನೂ ಹಲವಾರು ಸವಿಮರ್ಶ-ಸಂಶೋಧನ-ಸಂಪಾದನ ಗ್ರಂಥಗಳೂ ಮೌಲಿಕ ರಚನೆಗಳೂ ಮುದ್ರಣಕ್ಕೆ ಅಣಿಯಾಗಿ 'ನಾಮುಂದೆ ತಾಮುಂದೆ' ಎನ್ನುತ್ತಿರುವಾಗ ಜನೋಪಯುಕ್ತವಾದ ಇವನ್ನೆಲ್ಲ ಹೊರಗೆ ತರಲು ಸಹಾಯವೆಲ್ಲಿ ? ಹಸುಳೆ ಅಂಬೆಗಾಲಿಕ್ಕಲಿ, ನಡೆಯಲಿ ! ಓಸರಿಸಿ ಬೀಸರಿಸಿ ಬೀಳುವಾಗ ಅದಕ್ಕೆ ಪೋಷಕರ ಕರಾವಲಂಬನ ಬಾರದೆ ಇದ್ದೀತೆ ? ಹಾಗೆಂದು ಮುಂದಿಟ್ಟ ಹೆಜ್ಜೆಯೇ "ಚಿರಸಾಹಿತ್ಯ ಪ್ರಕಾಶನ". ಈ ಪ್ರಕಾಶನಕ್ಕೆ ದೊರೆಯಬಹುದಾದ ವಾರ್ಷಿಕ, ಪ್ರೇರಕ, ಪೋಷಕ ಸದಸ್ಯರ ಸಹಾಯವೇ ಕರಾವಲಂಬನ.

ಕನ್ನಡದಲ್ಲಿ ಅಮೂಲ್ಯ ಸಾಹಿತ್ಯರಚನೆಗಳನ್ನು ಹೊಸತಾಗಿ ಮುದ್ರಿಸಿ, ಪ್ರಕಟಗೊಳಿಸಲು ಮುಂದೆ ಬಂದಿರುವ ಈ ಪ್ರಕಾಶನಕ್ಕೆ ಸಹಕರಿಸಬೇಕಾಗಿ ವಿನಂತಿ. ಬೆಲೆಗೆ ಕೊಳ್ಳುವ-ಕೊಡುವ, ಪ್ರೋತ್ಸಾಹಿಸುವ-ಪ್ರೋತ್ಸಾಹ ಗೊಳ್ಳುವ ಉಭಯತರಿಗೂ ಒಳ್ಳಿತೆನಿಸುವ ಈ ಕಾರ್ಯಕ್ಕೆ ಉದಾರಚರಿತರು ನೆರವು ನೀಡಬೇಕಾಗಿ ಪ್ರಾರ್ಥನೆ.

ಈ ಪ್ರಕಾಶನಕ್ಕೊಪ್ಪುವ ಸಂಕೇತಾಕೃತಿಯನ್ನು ಬರೆದುಕೊಟ್ಟ ಚಿತ್ರ ಕಲಾಭಿಜ್ಞ ಶ್ರೀ ಕೆ. ಟಿ. ರಾವ್ ಅವರಿಗೂ ಈ ಗ್ರಂಥವನ್ನು ಆದಷ್ಟು ಶಾಳ್ಮೆಯಿಂದ ಮುದ್ರಿಸಿರುವ ಜುಪಿಟರ್ ಪ್ರೆಸ್ಸಿನವರಿಗೂ ಅಭಿವಂದನೆಗಳು.

ಬೆಂಗಳೂರು — ಟಿ. ಕೇಶವ ಭಟ್ಟ, ಎಂ. ಎ.
ವಿಜಯದಶಮಿ, ೨೦-೧೦-೧೯೬೯

ವಿ. ಸೂ.—ಈ ಪುಸ್ತಕದ ೨೮ನೆಯ ಪುಟದ ೧೭ ನೆಯ ಪಂಕ್ತಿಯ ಕೊನೆಯ ಅಕ್ಷರವಾಗಿರುವ 'ಕ' ಎಂಬುದನ್ನು 'కై' ಎಂಬ ತೆಲುಗು ಅಕ್ಷರವಾಗಿ ತಿಳಿಯಬೇಕು. ಇತರ ತಪ್ಪುಗಳನ್ನು ಮುಂದೆ ಕೊಟ್ಟಿರುವ ತಿದ್ದುಪಡಿಯಿಂದ ಸರಿಮಾಡಿಯೇ, ಓದಬೇಕಾಗಿ ಅರಿಕೆ.

ಮುನ್ನುಡಿ

ನನ್ನ ಮಾನ್ಯ ಮಿತ್ರರಾದ ವಿದ್ವಾನ್ ಟಿ. ಕೇಶವ ಭಟ್ಟ, ಎಂ.ಎ. ಅವರು ಕೆಲವು ಉತ್ತಮ ಗ್ರಂಥಗಳನ್ನು ರಚಿಸಿ, ಕನ್ನಡಿಗರಿಗೆ ಈ ಮೊದಲೇ ಪರಿಚಿತರಾಗಿದ್ದಾರೆ. ಹಳಗನ್ನಡದ ಚಂಪೂ ಶೈಲಿಯಲ್ಲಿ ಸ್ವತಂತ್ರವಾಗಿ ಅವರು ಬರೆದಿರುವ 'ಸತ್ವಾಲೋಕನಂ' ಎಂಬ ಕಾವ್ಯವು ಸರಕಾರದಿಂದ ಬಹುಮಾನಿತ ವಾಗಿದೆ. ಕಂದ ವೃತ್ತಗಳನ್ನು ಅವರು ಧಾರಾಳವಾಗಿ ರಚಿಸಬಲ್ಲವರಾಗಿದ್ದಾರೆ. ಹೊಸ ಛಂದಸ್ಸಿನಲ್ಲಿಯೂ ಕವನಗಳನ್ನು ರಚಿಸುವ ಅವರ ಶಕ್ತಿಗೆ 'ತೂಗು ದೀಪಿಗೆ' ಎಂಬ ಕವನಸಂಕಲನ ನಿದರ್ಶನವಾಗಿದೆ. ಭಾರತೀಯ ಜ್ಞಾನ ಪೀಠದ ಮೂಲಕ ಹೊರ ಬಂದಿರುವ ದೇವಪ್ಪ ಕವಿಕೃತ ರಾಮವಿಜಯ ಕಾವ್ಯವು ಅವರು ಗ್ರಂಥ ಸಂಪಾದನೆಯಲ್ಲಿಯೂ ತಕ್ಕಷ್ಟು ಪರಿಣತಿ ಪಡೆದಿರು ವುದಕ್ಕೆ ಸಾಕ್ಷಿಯಾಗಿದೆ. ಇದೀಗ 'ಸಂಶೋಧನ ರತ್ನಮಾಲಿಕೆ' ಎಂಬ ಹೆಸರಿ ನಿಂದ ಭಾಷೆ, ವ್ಯಾಕರಣ, ಛಂದೋವಿಷಯಗಳನ್ನುಳ್ಳ ಅವರ ಲೇಖನಗಳು ಒಟ್ಟುಗೂಡಿ ಹೊರಬರುತ್ತಿವೆ.

ಸಾಹಿತ್ಯದ ಎಲ್ಲ ಪ್ರಕಾರದ ಕ್ಷೇತ್ರಗಳಲ್ಲಿಯೂ ಪ್ರವೇಶ, ಅಭ್ಯಾಸ, ರಚನೆ, ವಿಮರ್ಶೆ ಇವು ಹೆಚ್ಚು ಹೆಚ್ಚಾಗಿ ನಡೆದಂತೆ ಸಂಶೋಧನೆಯೂ ನಡೆಯ ಬೇಕು. ಸಂಶೋಧನೆಯ ಮೂಲಕ ಹಲವಾರು ರಹಸ್ಯಗಳು ಬಯಲಾಗಿ ಜನತೆಯ ಜ್ಞಾನಭಂಡಾರ ತುಂಬುತ್ತದೆ. ಈ ಬಗೆಯ ಸಂಶೋಧನೆ ಇಂದಿಗೆ ಹಲವು ಕವಿಕೃತಿಗಳ ವಿಚಾರದಲ್ಲಿ ಕಾವ್ಯತತ್ವಗಳ ವಿಷಯದಲ್ಲಿ ನಡೆದು ಬಂದಿದೆ. ಆದರೆ ಸಾಹಿತ್ಯಸೃಷ್ಟಿಯ ಹಾಗೂ ಭಾಷಾಭ್ಯಾಸದ ಅಡಿಪಾ ಯಕ್ಕೆ ಸಂಬಂಧಿಸುವ ಲಿಪಿ, ಭಾಷೆ, ವ್ಯಾಕರಣ, ಛಂದೋವಿಷಯಗಳಲ್ಲಿ ಸಂಶೋಧನೆ ನಡೆಸುವವರು ವಿರಳ. ಪ್ರಸ್ತುತ ಲೇಖಕರು ಅಂತಹ ವಿಷಯ ಗಳಲ್ಲಿ ತಾವು ನಡೆಸಿರುವ ಸಂಶೋಧನೆಗಳಿಂದಲೇ ಈ ಗ್ರಂಥವನ್ನು ತುಂಬಿ ದ್ದಾರೆ. ಲೇಖಕರು ಸ್ವತಃ ಸಂಸ್ಕೃತದಲ್ಲಿ, ಹಳಗನ್ನಡದಲ್ಲಿ, ಭಾಷೆ–ವ್ಯಾಕರಣ– ಛಂದಸ್ಸು ಮೊದಲಾದ ಶಾಸ್ತ್ರಗಳಲ್ಲಿ, ಗಳಿಸಿರುವ ವಿದ್ವತ್ತಿನಿಂದ ಕನ್ನಡದ ಬೇರೆ ಬೇರೆ ಪ್ರಯೋಗವನ್ನು, ಭಾಷಾ ಸ್ವರೂಪವನ್ನು, ಉಚ್ಚಾರಣೆಯನ್ನು

ದೋಷಾದೋಷ ನಿರ್ಣಯದ ಜೊತೆಗೆ ಹಚ್ಚಿ ವಿವೇಚಿಸುವ ಅಂತಃಪ್ರಜ್ಞೆಯನ್ನು ಇಟ್ಟುಕೊಂಡಿರುವುದು ಮಾತ್ರವಲ್ಲ, ಈ ವಿವೇಚನೆಯಲ್ಲಿ ತಾಳ್ಮೆಯಿಂದ ಕೂಡಿದ ತಾದಾತ್ಮ್ಯವನ್ನೂ ಪಡೆದವರೆಂಬುದು ಈ ಗ್ರಂಥವನ್ನೋದುವಾಗ ವಿದಿತವಾಗುತ್ತದೆ. ಆಳವಾದ ಅಧ್ಯಯನದ ಆಧಾರಯುಕ್ತ ವಿವೇಚನೆಯ ದೀರ್ಘಪರ್ಯಾಲೋಚನೆಯ ಫಲಿತಾಂಶವೇ ಈ ಗ್ರಂಥರಚನೆ.

ಈ ಗ್ರಂಥದ ಮೊದಲನೆಯ ಲೇಖನ ಭಾಷಾಭ್ಯಾಸದ ಪ್ರಥಮ ಪಾಠವಾಗಿರುವ ಅಕ್ಷರಗಳ ಆಕಾರದ ಕುರಿತಾಗಿದೆ. ಅಕ್ಷರ, ವರ್ಣ, ನಾದ-ಇವುಗಳ ವಿವರಣೆ, ಕಾಗುಣಿತ, ಶಾಸ್ತ್ರೀಯವಾದ ಅಕ್ಷರಾವಯವಗಳು-ಇವೆಲ್ಲ ಇಲ್ಲಿವೆ. ಇವು ಪ್ರತಿಯೊಬ್ಬನೂ ಅರಿತಿರಬೇಕಾದ ಸಂಗತಿಗಳು. ಕೇಶಿರಾಜನು ಹೇಳಿರುವ 'ಆವಾವಿಂದ್ರಿಯದ ವಿಷಯಮುಂ' ಎಂಬುದು ಅಕ್ಷರಮಾಲೆಯ ಆದ್ಯಕ್ಷರಗಳನ್ನು ನಿರೂಪಿಸುವಂತಿದೆಯೆಂದು ಮಾಡಿರುವ ವಿವರಣೆ ಚಮತ್ಕಾರಯುಕ್ತವಾಗಿದೆ. 'ನಾಮ ವಿಭಕ್ತಿಗಳು' ಎಂಬ ಲೇಖನದಲ್ಲಿ ವಿದ್ವಜ್ಜನರ ಅಭಿಪ್ರಾಯಗಳನ್ನು ಲಕ್ಷಿಸಿ, ಶಾಸ್ತ್ರ ಪ್ರಯೋಗ ಜ್ಞಾನವನ್ನು ಆಶ್ರಯಿಸಿ ಸಂಶೋಧನಾತ್ಮಕವಾದ ನಿರ್ಣಯವನ್ನು ಮಾಡಲಾಗಿದೆ. ಪ್ರಥಮಾ,ಚತುರ್ಥೀ,ಪಂಚಮೀ ವಿಭಕ್ತಿಗಳ ವಿಚಾರದಲ್ಲಿ ಇಲ್ಲಿ ನೂತನ ವಿಚಾರಗಳನ್ನು ಕಾಣಬಲ್ಲೆವು, 'ಭಾಷಾಶುದ್ಧತೆಯ ರಹಸ್ಯ' ಎಂಬುದು ಭಾಷಾಭ್ಯಾಸಿಗಳು ಮತ್ತು ಪರಿಣತರು ಕೂಡ, ಲಕ್ಷ್ಯವಿಡತಕ್ಕ ಸಂಗತಿಗಳಿಂದ ಕೂಡಿದೆ. ಛಂದಸ್ಸು ಮತ್ತು ಗುರುಲಘುಗಳ ರಹಸ್ಯ, ಪದ್ಯರಚನೆಯ ರಹಸ್ಯ, ಒನಕೆವಾಡು, ಸಾಂಗತ್ಯದ ಧಾಟಿ ಮತ್ತು ಛಂದಸ್ಸು-ಈ ನಾಲ್ಕು ಲೇಖನಗಳು ಪದ್ಯರಚನೆಗೆ ಸಂಬಂಧಿಸಿವೆ. ಲೇಖಕರು ಸ್ವತಃ ಕವಿ, ಗಮಕಿ, ಯಕ್ಷಗಾನ ಗಾನನಿಪುಣರಿರುವುದರಿಂದ ಇಲ್ಲಿನ ಕೆಲವು ವಿಷಯಗಳಲ್ಲಿ ಎದೆ ತಟ್ಟಿ ಹೇಳುವ ಧೈರ್ಯ ಕಾಣುತ್ತಿದೆ ತ್ರಿಪದಿಯನ್ನು ತಾಳಹೀನವೆಂದು ಹೇಳಿರುವ ಪೂರ್ವ ಲಾಕ್ಷಣಿಕರ ಉಕ್ತಿಗೆ ತ್ರಿಪದಿಯನ್ನು ಹಾಗೂ ತ್ರಿಪದಿಜನ್ಯವಾಗಿರುವ ಸಾಂಗತ್ಯವನ್ನು ಐಚ್ಛಿಕ ತಾಳಗಳಲ್ಲಿ ಹಾಡಬಹುದೆಂದು ಲೇಖಕರು ಪ್ರಸ್ತಾರ ಹಾಕಿಯೇ ತೋರಿಸಿರುತ್ತಾರೆ. ಈ ವಿಷಯವನ್ನು ತಿಳಿಯಬೇಕೆನ್ನುವವರು ಬೇರೆ ಬೇರೆ ತಾಳಗಳಲ್ಲಿ ಅವರಿಂದ ಹಾಡಿಸಿ ಕೇಳಬಹುದು.

'ಹವಿಕರ ಕನ್ನಡ' ಎಂಬ ಲೇಖನವು ಹವಿಕರು ಆಡುವ ಕನ್ನಡದ ವೈಶಿಷ್ಟ್ಯವನ್ನು ನಿರೂಪಿಸಿ, ಆ ನುಡಿಯಲ್ಲಿ ಬರುವ ಕೆಲವು ಶಬ್ದಗಳನ್ನು ಸಂಶೋಧಿಸಿದೆ. ಅವುತಣ, ಹೊದಳು, ಸಕ್ಕಣ—ಇತ್ಯಾದಿ ಶಬ್ದಗಳ ವ್ಯುತ್ಪತ್ತಿಯನ್ನು ತಿಳಿಸಿರುವುದು ಆಲೋಚನೆಗೆ ತಕ್ಕ ವಿಷಯವಾಗಿದೆ. ಹವ್ಯಕರ ಕನ್ನಡವನ್ನು ಕುರಿತು ಇಬ್ಬರು ಮೂವರು ವಿದ್ವಾಂಸರು ಬಿಡಿಲೇಖನಗಳನ್ನೂ ಬರೆದಿದ್ದಾರೆ. ಆ ಭಾಷೆಯಲ್ಲಿ ಕೆಲವು ವಿಶಿಷ್ಟ ರೂಪಗಳನ್ನೂ ನುಡಿಗಟ್ಟುಗಳನ್ನೂ ಕಾಣಿಸುವುದು ಈ ಲೇಖನಗಳ ಉದ್ದೇಶವೆಂದು ತೋರುತ್ತದೆ. ಆದರೆ ಇದಿಷ್ಟೇ ಸಾಲದು. ಆ ಉಪಭಾಷೆಯಲ್ಲಿರುವ ಹಾಡು, ಕತೆ, ಗಾದೆ ಮುಂತಾದ ಜನಪದ ಸಾಹಿತ್ಯದ ಮಾದರಿಗಳನ್ನು ಆ ಜನ ಉಚ್ಚರಿಸುವ ರೀತಿಯಲ್ಲೇ ನಿರೂಪಿಸಿ ಅವುಗಳ ಆಧಾರದ ಮೇಲೆ ಆ ಭಾಷೆಗೆ ಒಂದು ಸಣ್ಣ ವ್ಯಾಕರಣವನ್ನು ರಚಿಸಬೇಕಾದ ಆವಶ್ಯಕತೆ ಇದೆ. ಶ್ರೀ ಎಸ್. ಯು. ಪಣಿಯಾಡಿ ಅವರು ಬರೆದಿರುವ ತುಳು ವ್ಯಾಕರಣದಂತೆ ಇದೂ ಇದ್ದರೆ ಒಳ್ಳೆಯದು. ಈ ಕೆಲಸವನ್ನು ವಿದ್ವಾನ್ ಟಿ. ಕೇಶವ ಭಟ್ಟರು ಮಾಡಲು ಸಮರ್ಥರಾಗಿದ್ದಾರೆ.

'ಸಂಶೋಧನದ ನೆಲೆ' ಎಂಬ ಪ್ರಬಂಧದಲ್ಲಿ, ಸತ್ಯಾನ್ವೇಷಣಕ್ಕೆ ಹೊರಟಿರುವ ಸಂಶೋಧಕನ ಪ್ರಾಮಾಣಿಕತೆ, ಆಧಾರಗಳನ್ನು ಕಂಡುಹಿಡಿಯುವ ತಾಳ್ಮೆ ಜಾಣ್ಮೆಗಳು, ಅವನ್ನು ಸಮನ್ವಯಗೊಳಿಸುವ ತರ್ಕಶಕ್ತಿ—ಇವೆಲ್ಲ ಸ್ಫುಟವಾಗಿ ವಿವರಿಸಲಾಗಿವೆ.

ನವರತ್ನಗಳು ಎಂಬ ಭಾವನೆಗೊಪ್ಪುವಂತೆ ಇರುವ ಒಂಬತ್ತು ಲೇಖನಗಳು ಮುಗಿದನಂತರ ಬಂದಿರುವ ಪರಿಶಿಷ್ಟ ಲೇಖನಗಳು, ಶಬ್ದ ಸಂದರ್ಭಗಳು ಎಂಬ ಅನುಬಂಧಗಳೂ ಈ ಗ್ರಂಥವನ್ನು ಕುರಿತ ವಿದ್ವಜ್ಜನರ ಅಭಿಪ್ರಾಯಗಳೂ ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸಿವೆ. ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಬರಮಾಡಿಕೊಂಡು, ತಾವೇ ಪ್ರಕಾಶಕರೂ ಆಗಿರುವ ಈ ಲೇಖಕರಿಗೆ ಪ್ರೋತ್ಸಾಹ ನೀಡಲೆಂದು ಆಶಿಸುತ್ತೇನೆ.

— ಡಿ. ಎಲ್. ನರಸಿಂಹಾಚಾರ್

ವಿಷಯಾನುಕ್ರಮ

ತಿದ್ದುಪಡಿ

ಪುಟ	ಪಂಕ್ತಿ	ಅಚ್ಚಾದುದು	ತಿದ್ದುಪಡಿ
೨೦	೧೬	ಏತ್ತವು	ಏತ್ವವು
೨೧	೬	ೕ	ೀ
೩೩	೨	ಅಂತವೆಂಬ	ಅಂಶವೆಂಬ
೪೪	೧೩	ರಾಯಾಯು	ರಾವಾಯು
೧೦೩	೧೦	ಹೃಸ್ವ	ಹ್ರಸ್ವ
೧೦೪	೬	ಅಸ್ತಿತ್ವವಲ್ಲ	ಅಸ್ತಿತ್ವವಿಲ್ಲ
೧೩೦	೨	ವಿವರವನೋ	ವಿವರವನ್ನೋ
೧೩೯	೫	ಪ್ರಸ್ತಾಪಿತ	ಪ್ರಸ್ತಾವಿತ
೧೫೬	೧೮	ಭರತೆ ಶ	ಭರತೇಶ
೧೫೯	೧	ವ ಟ್ಟೈತಾಳ	ವಟ್ಟೈತಾಳ
೧೬೬	೧೧	ತಜಿಸಂದು	ತಱಿಸಂದು
	೧೨	ಮಜಿಯು	ಮಱಿಯು
	೧೩	ಬೇಸಲುಗುಂ	ಬೇಸಱುಗುಂ
	೧೪	ವೇಜಪ್ಪುದಜಿಂ	ವೇಱಪ್ಪುದಱಿಂ
೧೭೩	೨೧	ಕುಷ್ಟ	ಕುಷ್ಠ
೧೮೬	೧೩	ವಸ್ತುನಿಷ್ಟ	ವಸ್ತುನಿಷ್ಠ
೧೯೨	೨೪	ಪದ್ಕ	ಪದ್ಯ
೨೦೮	೧೫	ಶಬ್ಧವನ್ನು	ಶಬ್ದವನ್ನು
೨೦೯	೮	ಸರೆ	ಸರಿ
	೨೨	(ದಿ)	(ದ್ವಿ)
೨೧೩	೧೧	69	96

ಅಕ್ಷರ ಸಂಜ್ಞಾಕಾರ

[ಲಾಕ್ಷಣಿಕರ ಹೇಳಿಕೆ–ಲಿಪಿಯ ಪ್ರಾಚೀನತೆ-ಸುಧಾರಣೆ-ಅಕ್ಷರ ವರ್ಣ ಲಕ್ಷಣ–'ಕಾರ' ಸಂಜ್ಞೆ-ಶುದ್ಧಾಕ್ಷರ-ಗುಣಿತಾಕ್ಷರ–ಸ್ವರಗಳ ವೈಶಿಷ್ಟ್ಯ-ಅಕಾರವ್ಯಾಪ್ತಿ–ಸಾಮ್ಯಾರ್ಥ ವಿವರಣೆ–ಸ್ವರಚಿಹ್ನೆಗಳು–ಒತ್ತುಗಳು – 'ತನಮಯರಲ' ವೊತ್ತುಗಳ ಸಂಶೋಧನ-ಅರ್ಕಾರೊತ್ತು–ಅರ್ಧನಕಾರ-ಲಿಪಿಪಂಕ್ತಿ ವೈಶಿಷ್ಟ್ಯ-ಸಂಜ್ಞಾಚಿತ್ರ-ಗ್ರಂಥಾಧಾರ.]

ಜ್ಞಾನದ ಸಾಕ್ಷಾತ್ಕಾರಕ್ಕೆ ಅಕ್ಷರವೇ ಮೂಲ. ಅಕ್ಷರರೂಪದಿಂದ ಅಭಿವ್ಯಕ್ತವಾದ ಮನೋಭಾವನೆಯೇ ಭಾಷೆ. ಭಾಷೆ ವಾಕ್ಯಮಯ. ವಾಕ್ಯವು ಅರ್ಥಯುಕ್ತವಾದ ಶಬ್ದ (ಪದ) ಗಳಿಂದಲೂ ಶಬ್ದಗಳು ಅಕ್ಷರಗಳಿಂದಲೂ ಪೈದಾಳುತ್ತವೆ. ಇದರಿಂದ ಅಕ್ಷರವೇ ಎಲ್ಲಕ್ಕೂ ಮೊದಲು–ಎಂಬಂತೆ ಆಯಿತು. ಅಕ್ಷರಗಳನ್ನು ಕಣ್ಣಿಗೆ ಗೋಚರಿಸುವಂತೆ ಮಾಡಲು ನಿಶ್ಚಿತವಾಗಿರುವ ಸಂಕೇತಗಳು ಅಥವಾ ಚಿಹ್ನೆಗಳು ಲಿಪಿಗಳೆನಿಸುತ್ತವೆ. ಇವನ್ನು **"ಅಕ್ಷರ ಸಂಜ್ಞೆಗಳು"** ಎಂದು ಕರೆದಿದ್ದಾರೆ. ಈ ಅಕ್ಷರ ಸಂಜ್ಞೆಗಳ ಸರಿಯಾದ ಪರಿಜ್ಞಾನವೇ ಭಾಷಾಭ್ಯಾಸಕ್ಕೆ ಪ್ರಾಥಮಿಕವೆನಿಸುವ ಸಾಧನವೆಂದು ವೈಯಾಕರಣರು ಹೇಳುತ್ತಾರೆ.

ಆರಯೆ ತಚ್ಛಾಸ್ತ್ರವ್ಯವ
ಹಾರಜ್ಞಾನಾರ್ಥಮಾಗಿ ಪೇೞಲ್ಪಡುಗುಂ
ಧೀರರಿನಕ್ಷರಸಂಜ್ಞಾ
ಕಾರಂ ವ್ಯಾಕರಣದಾದಿಯೊಳ್ ಪರಿವಿಡಿಯಿಂ[1]

ಹೀಗೆ ಕೇಶಿರಾಜನು (ಕಾಲ–೧೨೬೦) ತನ್ನ ಗ್ರಂಥಾರಂಭದಲ್ಲಿ ಅಕ್ಷರ ಸಂಜ್ಞೆಗಳ ಆಕಾರವನ್ನು ಹೇಳುವಂತೆ ತಿಳಿಸಿರುವುದು ಲಕ್ಷ್ಯಾರ್ಹ. ಮುಂದೆ ಆತನು 'ಅಕ್ಕರಮುದಯಿಪ ತಾಣ'ಗಳನ್ನು ಹೇಳಿದ್ದಾನೆ; ಅಕ್ಷರಗಳ ಸಂಖ್ಯೆಯನ್ನೂ ವಿವೇಚಿಸಿದ್ದಾನೆ. ಅಕ್ಷರಗಳ ಉತ್ಪತ್ತಿಕ್ರಮವನ್ನು ನಿರೂಪಿಸಿ, ಅವುಗಳ ಸ್ವರೂಪವನ್ನು ಕುರಿತು' ಧವಳವರ್ಣಮಕ್ಷರರೂಪಂ' (ಸೂತ್ರ ೩೪)

1 ಕೇಶಿರಾಜ-ಶಬ್ದಮಣಿದರ್ಪಣ, ಅಧ್ಯಾಯ ೧, ಸೂತ್ರ ೧.

ಎಂದಿದ್ದಾನೆ. ಈ ಧವಳ ವರ್ಣವು ನೇತ್ರಗ್ರಾಹ್ಯವಲ್ಲ, ಭಾವಗ್ರಾಹ್ಯವಾದ ರೂಪವನ್ನೆ ಕಲ್ಪಿಸಿ ಹೇಳಿದುದಾಗಿ ತೋರುತ್ತದೆ. ಅಕ್ಷರಗಳ ಆಕಾರವನ್ನು ಕುರಿತು ಕೇಶಿರಾಜನು ಹೇಳಿರುವುದು ನಾಲ್ಕನ್ನು. ಅವು ಬಿಂದು-ವಿಸರ್ಗ-ಜಿಹ್ವಾಮೂಲೀಯ-ಉಪಧ್ಮಾನೀಯಗಳು. ಇತರ ಅಕ್ಷರಗಳ ಆಕಾರವನ್ನು-ಅಂದರೆ ಅವುಗಳ ಚಾಕ್ಷುಷರೂಪವನ್ನು, ಕೇಶಿರಾಜನು ತಿಳಿಸಿಲ್ಲ.

ಕೇಶಿರಾಜನಿಗೆ ಹಿಂದಿನವನಾದ ಎರಡನೆಯ ನಾಗವರ್ಮನು (ಕಾಲ ೧೧೪೫) "**ಅಕಾರಾದಯಃ ಪ್ರಸಿದ್ಧಾ ವರ್ಣಾಃ**"[2] ಎಂದಿದ್ದಾನೆ. ಈ ಸೂತ್ರದ ವೃತ್ತಿಯಲ್ಲಿ "**ಅಕಾರ ಮೊದಲಾಗಿ ಹಕಾರ ಪರ್ಯಂತವಾದ ಅಕ್ಷರಗಳು ಅನಾದಿಪ್ರಸಿದ್ಧಗಳಾಗಿರುವುದರಿಂದ ಅವುಗಳನ್ನು ಪ್ರತ್ಯೇಕವಾಗಿ ಹೇಳಕೆಲಸವಿಲ್ಲ**" ಎಂದು ಹೇಳಿದೆ. ಬಿಂದು-ವಿಸರ್ಗಗಳ ಸ್ವರೂಪವನ್ನು ಈ ಗ್ರಂಥದಲ್ಲಿಯೂ ತಿಳಿಸಿದೆ. ನಾಗವರ್ಮನ ಇನ್ನೊಂದು ಕೃತಿಯಾಗಿರುವ ಕಾವ್ಯಾವಲೋಕನದ ಶಬ್ದಸ್ಮೃತ್ಯಧಿಕರಣದಲ್ಲಿ ಸಂಜ್ಞಾವಿಭಾಗಗಳನ್ನು ಹೇಳಿದೆಯಲ್ಲದೆ ಸ್ವರೂಪವನ್ನು ಹೇಳಿಲ್ಲ.

ಕೇಶಿರಾಜನಿಗಿಂತ ಆಧುನಿಕನಾದ ಭಟ್ಟಾಕಲಂಕನು (ಕಾಲ ೧೬೦೪) ತನ್ನ ಶಬ್ದಾನುಶಾಸನದ **ಮಂಜರೀ ಮಕರಂದ** ವ್ಯಾಖ್ಯಾನದಲ್ಲಿ—"ತತಃ ಶಾಸ್ತ್ರಾದಾವಕ್ಷರ ಸಮಾಮ್ನಾಯಃ ಕರ್ತವ್ಯಃ, ಪೂರ್ವಾಚಾರ್ಯೈರಪಿ ತಥೈವ ಕೃತತ್ವಾತ್"[3] ಎಂದು ವ್ಯಾಕರಣದ ಆದಿಯಲ್ಲಿ ಅಕ್ಷರಮಾಲೆಯನ್ನು ತಿಳಿಸುವುದು ಕರ್ತವ್ಯವೆಂದಿದ್ದಾನೆ. ಆದರಂತೆ "**ಸಿದ್ಧಾ ಹಿ ಶುದ್ಧಕಾಃ**"[4] ಅಂದರೆ, ಅಕ್ಷರಮಾಲೆ ಲೋಕಪ್ರಸಿದ್ಧವಾಗಿಯೇ ಇದೆ—ಎಂದು ಹೇಳಿ, ಶಾಸ್ತ್ರಾರಂಭ ಮಾಡಿದ್ದಾನೆ. ಈ ಗ್ರಂಥದಲ್ಲಿ ಅಕ್ಷರಗಳ ಕುರಿತು ಅವುಗಳ ವಿಭಾಗ-ಸಂಖ್ಯೆ-ಉತ್ಪತ್ತಿಸ್ಥಾನ ಮುಂತಾದವುಗಳ ಸುಸ್ಪಷ್ಟವಾದ ನಿರೂಪಣೆಯಿದೆ. ಹೀಗೆ ಈ ವ್ಯಾಕರಣಗ್ರಂಥಗಳಲ್ಲಿ ಅಕ್ಷರಗಳ ಲಿಖಿತರೂಪವನ್ನು ವಿವೇಚಿಸುವ ಯಾವ ಪ್ರಯತ್ನವೂ ನಡೆದಂತಿಲ್ಲ.

---

2 ನಾಗವರ್ಮ-ಭಾಷಾಭೂಷಣ, ಅಧ್ಯಾಯ ೧, ಸೂತ್ರ ೧.

3 ಭಟ್ಟಾಕಲಂಕದೇವ—ಶಬ್ದಾನುಶಾಸನ, ಪುಟ ೧೫.

4 ಅಲ್ಲೇ.

ಕೇಶಿರಾಜನು ಅಕ್ಷರಗಳನ್ನು **ಶ್ರಾವಣ** ಮತ್ತು **ಚಾಕ್ಷುಷ** ಎಂದು ವಿಂಗಡಿಸಿ ವಿವರಿಸಿದ್ದಾನೆ. ಬರೆಯಲೂ ಉಚ್ಚಾರಣೆಮಾಡಲೂ ಸಾಧ್ಯವಿರುವ ಅಕ್ಷರವನ್ನು **ಚಾಕ್ಷುಷ** ಎಂದು ಕರೆದಿದ್ದಾನೆ. ಚಾಕ್ಷುಷದ ರೂಪವನ್ನು ತಿಳಿಸದಿರಲು ಕಾರಣ ಹೀಗಿರಬಹುದು:—

ಅಕ್ಷರಗಳ ಮುಖ್ಯರೂಪ ಅವುಗಳ ಉಚ್ಚಾರಣೆ. ಉಚ್ಚಾರಣೆಯಲ್ಲಿ ಅವಕ್ಕೆ ಮಾರ್ಪಾಡಿಲ್ಲ, ಚ್ಯುತಿಯಿಲ್ಲ. ಅವು **ಅ + ಕ್ಷರಗಳು.** ಅವನ್ನು ಆಕಾರದಲ್ಲಿ–ಲಿಪಿರೂಪದಲ್ಲಿ ಕಾಣಿಸುವ **ಆ "ಅಕ್ಷರಸಂಜ್ಞೆಗಳು"** ಕಾಲಾನುಗುಣವಾಗಿ ಭಾಷಾನುಗುಣವಾಗಿ ಮಾರ್ಪಡುವುವು[5]. ಕನ್ನಡದ ಲಿಪೀತಿಹಾಸದ ಪರಿಶೀಲನೆ ಈ ಮಾತಿಗೆ ಪುಷ್ಟಿಕೊಡುವುದು–ಲಿಪಿ ಹೇಗೆ ಕಾಲಾನುಗುಣವಾಗಿ ಮಾರ್ಪಡುತ್ತ ಬಂದಿದೆಯೆಂಬುದರ ಅರಿವನ್ನು ಕೊಡುವುದು.

ಪ್ರಾಚೀನತೆ: ಇಂದಿಗೆ ಪ್ರಚಲಿತವಿರುವ ಭಾರತೀಯ ಭಾಷೆಗಳಲ್ಲಿರುವ ಅಕ್ಷರಸಂಜ್ಞೆಗಳಿಗೆ ಅಶೋಕನ ಕಾಲದಲ್ಲಿ ಪ್ರಚಲಿತವಾಗಿದ್ದ **"ಬ್ರಾಹ್ಮೀಲಿಪಿ"** ಮೂಲವೆಂದು ನಿರ್ಣಯವಾಗಿದೆ. ಆ ಕಾಲಕ್ಕೂ ಹಿಂದೆ-ಅಂದರೆ ಕ್ರಿಸ್ತಪೂರ್ವ ಮೂರನೆಯ ಶತಮಾನಕ್ಕೂ ಹಿಂದೆ, ಬರೆವಣಿಗೆ ಇತ್ತು ಎಂಬುದಕ್ಕೆ ಆಧಾರಗಳು ದೊರೆಯುತ್ತವೆ. ಅತಿ ಪ್ರಾಚೀನ ಸಾಹಿತ್ಯವಾಗಿರುವ ಋಗ್ವೇದದಲ್ಲಿ ಮಂತ್ರವನ್ನು ಓದುವ ಸಂಗತಿ ಬರುತ್ತದೆ. ಓದಬೇಕಾದರೆ ಬರೆವಣಿಗೆ ಇರಬೇಕಾಗುವುದಷ್ಟೆ. ಅಥರ್ವವೇದದಲ್ಲಿ (೨೦-೧೩೫-೩) "**ಗ್ರಂಥ**" ಎಂಬ ಶಬ್ದವೂ (೨೦-೧೩೨-೮ರಲ್ಲಿ) "ಲಿಖ್" (ಬರೆ) ಎಂಬ ಧಾತು ಪ್ರಯೋಗವೂ ಬಂದಿದೆ.

ಸಂಸ್ಕೃತ ವೈಯಾಕರಣ ಶ್ರೇಷ್ಠನಾದ ಪಾಣಿನಿ[6] ತನ್ನ ಗ್ರಂಥದಲ್ಲಿ

---

5 ಮಾರ್ಪಾಡು ಆಗದಿರುವದೆಂದು ಬಿಂದು-ವಿಸರ್ಗಗಳ ಲಿಪಿರೂಪವನ್ನು ವೈಯಾಕರಣರು ತಿಳಿಸಿದ್ದಾರೆನ್ನಬಹುದು.

6 ಪಾಣಿನಿಯ ಕಾಲ ಕ್ರಿ. ಪೂ. 2,400ರಿಂದ ಕ್ರಿ. ಪೂ. 300ವರೆಗೆ ಬರುತ್ತದೆ. ಪಾಣಿನಿ ಬುದ್ಧನಿಗಿಂತ ಪೂರ್ವಿಕನು. ಬುದ್ಧ ನಿರ್ವಾಣ ಕಾಲ ಕ್ರಿ. ಪೂ. 543. ಇದರಿಂದ ಪಾಣಿನಿಯ ಕಾಲವನ್ನು ಭಂಡಾರಕಾರರು ಹೇಳಿರುವಂತೆ ಕ್ರಿ. ಪೂ. 700 ಎಂದಿಟ್ಟುಕೊಳ್ಳಬಹುದು.

"**ಲಿಪಿಕಾರ**" ಎಂಬ ಪದವನ್ನು ಪ್ರಯೋಗಿಸಿದ್ದಾನೆ. ಅಲ್ಲದೆ, "**ಪಟಲ**" ಎಂಬುವನ್ನು '**ಬರೆವ ಹಾಳೆ**' (ಪತ್ರ) ಎಂಬ ಅರ್ಥದಲ್ಲಿಯೂ ಪ್ರಯೋಗಿಸಿದ್ದಾನೆ. **ಗ್ರಂಥ, ಪಾಠ, ಪುಟ** ಇವುಗಳ ವ್ಯುತ್ಪತ್ತಿಯನ್ನೂ ಹೇಳಿದ್ದಾನೆ. ಪಾಣಿನಿಗೆ ಲಿಪಿಯೇ ಗೊತ್ತಿದ್ದಿಲ್ಲವೆಂದು ಹೇಳಿದ ಮೆಕ್ಸ್‌ಮುಲ್ಲರನನ್ನು ಥಿಯೊಡರ್ ಗೋಲ್ಡ್ ಸ್ಟ್ರಕ್ಕರ್ ಎಂಬವನು "Panini: His Place in Sanskrit Literature" ಎಂಬ ತನ್ನ ಪುಸ್ತಕದಲ್ಲಿ ಖಂಡಿಸಿದ್ದಾನೆ. ಹೀಗೆ ಅತಿ ಪ್ರಾಚೀನ ಕಾಲದಲ್ಲೇ ಭಾರತೀಯರಿಗೆ ಅಕ್ಷರಜ್ಞಾನದೊಡನೆ ಲಿಪಿಜ್ಞಾನವೂ ಇದ್ದಿತೆಂದು ತಿಳಿದುಬರುತ್ತದೆ. ಆದರೆ ಲಿಪಿಸ್ವರೂಪವನ್ನು ಇಂದಿಗೆ ತಿಳಿಸಲು ಆಧಾರವಿಲ್ಲವಾಗಿದೆ.

ಪರಿವರ್ತನೆ ಸುಧಾರಣೆ: ಬ್ರಾಹ್ಮೀಲಿಪಿ ಕಾಲಾನುಗುಣವಾಗಿ ಮಾರ್ಪಡುತ್ತ ಬಂದಿದೆ. ಬ್ರಾಹ್ಮಿಯಲ್ಲಿ ಉತ್ತರಲಿಪಿ-ದಕ್ಷಿಣಲಿಪಿ ಎಂಬ ಎರಡು ಭೇದಗಳಾದುವು. ಉತ್ತರದ ಲಿಪಿಯಿಂದ ದೇವನಾಗರಿ, ಬಂಗಾಳಿ, ಶಾರದಾ ಮುಂತಾದ ಲಿಪಿಗಳೂ ದಕ್ಷಿಣದ ಬ್ರಾಹ್ಮೀಲಿಪಿಯಿಂದ ಕನ್ನಡ, ತೆಲುಗು, ತಮಿಳು, ಗ್ರಂಥಲಿಪಿಗಳೂ ರೂಪುದಾಳಿದವು. ಬ್ರಾಹ್ಮೀಲಿಪಿ ಹೆಚ್ಚಿನ ಮಟ್ಟಿಗೂ ರೇಖಾಕೃತಿಯದು. ಬರುಬರುತ್ತ ಅದು ಚೌಕಾಕೃತಿಯನ್ನೂ ಚೌಕಾಕೃತಿಯಲ್ಲಿದ್ದುದು ಬರುತ್ತ ವೃತ್ತಾಕೃತಿಯನ್ನೂ ತಾಳಿತು. ಸುಮಾರು "ಕ್ರಿ. ಶ. ೧೦೫೭ರ ಹೊತ್ತಿಗೆ ಕನ್ನಡ-ತೆಲುಗು ಲಿಪಿಗಳು ಬೇರೆ ಬೇರೆ ಎಂಬ ಭಾವನೆ ಬರುವಷ್ಟು ಎರಡಾಗಿ ಒಡೆದಿದ್ದವು ಎಂದು ಭಾವಿಸಬಹುದು."[7] ಹೀಗೆ ಮಾರ್ಪಡುತ್ತ ಬರುವ ಲಿಪಿಸ್ವರೂಪವಿಷಯಕ್ಕೆ ಶಾಸ್ತ್ರವನ್ನು ನಿರ್ಮಿಸುವುದು ಅಂದಿಗೆ ಸಾಧ್ಯವೂ ಅಲ್ಲ, ಸೂಕ್ತವೂ ಅಲ್ಲ-ಎಂದು ವೈಯಾಕರಣರು ಭಾವಿಸಿರಬೇಕು—ಕನ್ನಡದ ಲಿಪಿಸ್ವರೂಪವನ್ನೂ ಆ ಸ್ವರೂಪಕ್ಕೆ ಲಕ್ಷಣವನ್ನೂ ತಿಳಿಸುವ ಗ್ರಂಥಗಳು ಸಮಗ್ರವಾಗಿ ಇದುವರೆಗೆ ನಿರ್ಮಾಣವಾಗಿಲ್ಲ. ಕೆಲವು ಆಧುನಿಕ ವ್ಯಾಕರಣ ಪುಸ್ತಕಗಳಲ್ಲಿ, ಕೆಲವು ವಿದ್ವಾಂಸರ ಲೇಖನಗಳಲ್ಲಿ ಹೀಗೆ ಅಲ್ಲಿಲ್ಲಿ ಈ ವಿಚಾರ ಸ್ವಲ್ಪ ಹೇಳಿದುದುಂಟು (ಅವುಗಳಲ್ಲಿ ಕೆಲವನ್ನು ಮುಂದೆ

---

7 ಡಾ|| ಎಂ. ಚಿದಾನಂದಮೂರ್ತಿ — ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ 236.

ತಿಳಿಸಲಾಗಿದೆ.) ಕನ್ನಡದ ಈಗಿನ ಲಿಪಿಯನ್ನು ಲಿಪಿಯಂತ್ರಕ್ಕೂ (Type Writer) ಮುದ್ರಣಕ್ಕೂ ಲಘುವಾಗಿ ಹೊಂದಿಸುವ ದೃಷ್ಟಿಯಿಂದ ಲಿಪಿಸುಧಾರಣೆಯ ಬಗೆಗೆ ಕೆಲವು ಪ್ರಯತ್ನಗಳೂ ನಡೆದಿವೆ.

ಕನ್ನಡದ ಲಿಪಿಸ್ವರೂಪವು ಅಕ್ಷರಾತ್ಮಕವಾದುದು. ಇಂಗ್ಲಿಷ್ ಮುಂತಾದ ಪಾಶ್ಚಾತ್ಯ ಭಾಷೆಗಳಂತೆ ಇದು ವರ್ಣಾತ್ಮಕವಲ್ಲ. ಮುದ್ರಣಕ್ಕೂ ಲಿಪಿಯಂತ್ರಕ್ಕೂ ಯೋಜಿಸುವುದಕ್ಕೆ ತೊಡಕೆನಿಸುವ ತಲೆಕಟ್ಟು, ಇಳಿ, ಗುಡಿಸು, ಕೊಂಬು, ಅಡಿಯೊತ್ತುಗಳು ಕನ್ನಡದ ಬರೆವಣಿಗೆಯ ವೈಶಿಷ್ಟ್ಯಗಳು. ಇವುಗಳಲ್ಲಿ ಅಡಿಯೊತ್ತುಗಳನ್ನು ಪರಿಹರಿಸಿ ಬರೆವ ಪ್ರಯತ್ನ ಹಿಂದಿನಿಂದಲೇ ನಡೆದಿದೆ. ಸುಮಾರು ಒಂಬತ್ತನೆಯ ಶತಮಾನದ ಕುಮುದೇಂದು ಮುನಿ ವಿರಚಿತವಾದ ಅಂಕಲಿಪಿಯಲ್ಲಿರುವ "ಸಿರಿಭೂವಲಯ" ಎಂಬ ಸರ್ವಭಾಷಾ ಮಯೀಗ್ರಂಥದ ರಚನೆ ಒತ್ತುಗಳನ್ನು ಬಿಡಿಸಿದ ರೂಪದಲ್ಲೇ ಇದೆ. ಕ್ರಿ.ಶ.೧೮೫೭ ರಲ್ಲಿ ಮಂಗಳೂರಿನ ಮಿಶನ್ ಛಾಪಖಾನೆಯಲ್ಲಿ ಮುದ್ರಿತವಾದ "ರಾಜೇಂದ್ರ ನಾಮೆ" ಅಕ್ಷರಗಳ ಅಡಿಯೊತ್ತುಗಳನ್ನು ನಿವಾರಿಸಿದ ರೂಪದಲ್ಲಿದೆ. ಉದಾಹರಣೆ:—'ಅಷ್ಟು ಹೊತ್ತಿಗೆ' ಎಂಬುದು ಅಲ್ಲಿ 'ಅಷ್‌ಟು ಹೊತ್‌ತಿಗೆ' ಎಂಬ ರೀತಿಯಲ್ಲಿದೆ. ಆಚಾರ್ಯ ಬಿ. ಎಂ. ಶ್ರೀಯವರು ಬರೆದ "ಕನ್‌ನಡದ ಬಾವುಟ" ಎಂಬ ಕವನದಲ್ಲಿ[8] ಒತ್ತುಗಳನ್ನು ಪರಿಹರಿಸುವ ವಿಧಾನವನ್ನು ಕಾಣಬಹುದು. ಕೈಬರೆಹಕ್ಕೆ ಇಂತಹ ಸಂಜ್ಞಾರೂಪಗಳು ಒಪ್ಪಿಗೆಯಾಗವು. ಹೀಗೆ ಬರೆಯುವುದು ಸುಕರವೂ ಅಲ್ಲ; ಸೌಂದರ್ಯಕರವೂ ಅಲ್ಲ.

ಈಚೆಗೆ ತೆಲುಗು-ಕನ್ನಡಗಳೆರಡಕ್ಕೂ ಏಕಲಿಪಿ ಯೋಜನೆಯ ಮಾತು ಕೇಳಿಬರುತ್ತಿದೆ. ಇದೇನೋ ಸಾಧ್ಯಸಂಗತಿಯಾದರೂ ವ್ಯವಹಾರ್ಯವಾಗಿ ಕಾಣುವುದಿಲ್ಲ. ಇದರಿಂದ ಈ ಯೋಜನೆ ಕಾರ್ಯರೂಪಕ್ಕೆ ಬರುವ ಲಕ್ಷಣವಿಲ್ಲ. ಈ ಬಗೆಯ ಏಕರೂಪತೆಗೆ ಮೂರು ಮಾರ್ಗಗಳಿವೆ:

೧. ತೆಲುಗರು ಕನ್ನಡ ಲಿಪಿಯನ್ನು ತಮ್ಮದಾಗಿ ಸ್ವೀಕರಿಸುವುದು.
೨. ಕನ್ನಡಿಗರು ತಮ್ಮದನ್ನು ಬಿಟ್ಟು ತೆಲುಗು ಲಿಪಿಯನ್ನು ತಮ್ಮದಾಗಿ ಬಳಸಿಕೊಳ್ಳುವುದು.

---

[8] ಕನ್ನಡ ಬಾವುಟ—ಪುಟ IX.

೩. ಈ ಎರಡೂ ಭಾಷಾಲಿಪಿಗಳಲ್ಲಿ ಸಮಾರ್ಧವಾಗಿ ಸ್ವೀಕರಿಸಿ, ಎರಡು ಭಾಷೆಗಳಿಗೂ ಪ್ರಯೋಗಿಸುವುದು.

ಇವುಗಳಲ್ಲಿ ಮೂರನೆಯ ಪದ್ಧತಿ ತೀರ್ಮಾನಕ್ಕೆ ಸೊಗಸೆನಿಸಬಹುದು. ಆದರೆ ಈ ಬೆರಕೆಯ ಲಿಪಿ ವಿರೂಪವಾಗಿ ಅಥವಾ ಕುರೂಪವಾಗಿ ಕಾಣಿಸದಿರದು. ಆದುದರಿಂದ ಅನುಸರಣೀಯವಾಗದು. ಲಿಪಿಸೌಂದರ್ಯದ ಹಾಗೂ ಶಾಸ್ತ್ರೀಯತೆಯ ಪ್ರಶ್ನೆಯೂ ಅಡ್ಡಹಾದು, ಈ ತೆರದ ಬಳಕೆ ಅವ್ಯವಹಾರ್ಯವಾಗುವುದು. ಇನ್ನು ಉಳಿದ ಒಂದನೆಯ ಮತ್ತು ಎರಡನೆಯ ವಿಧಾನಗಳು ತೆಲುಗರ ಅಥವಾ ಕನ್ನಡಿಗರ ಸ್ವಾಭಿಮಾನಕ್ಕೆ ಅಡ್ಡಬಾರದೆ ಇರಲಾರವು. ಇದರಿಂದ ಈಯೆರಡು ಭಾಷೆಗಳಿಗೆ ಏಕಲಿಪಿ ಸಾಧನೆಯೆಂಬುದು ಮನದ ಮಂಡಿಗೆಯಾಗಿ ಉಳಿಯುವುದು. "ಸಮಗ್ರ ಭರತಖಂಡಕ್ಕೇ ಏಕಲಿಪಿಯಿರಬೇಕು, ಅದು ನಾಗರಿಲಿಪಿಯಾಗಿರಬೇಕು" ಎಂಬ ಸುಧಾರಕರೂ ಇದ್ದಾರೆ. ಇದು ವ್ಯವಹಾರಕ್ಕೆ ಬಂದಲ್ಲಿ ಕನ್ನಡದ ಲಿಪಿಯ ವಿಚಾರವೇ ಉಳಿಯುವುದಿಲ್ಲವಾದುದರಿಂದ ಇಲ್ಲಿ ಪ್ರಸ್ತುತವಲ್ಲ.

ಕನ್ನಡ ಅಕ್ಷರಸಂಜ್ಞೆಗಳ ಮಾತೆತ್ತುವಾಗ, ಹಲವರು ಪ್ರತೀಕ್ಷಿಸುವ ಒಂದು ವಿಚಾರವೆಂದರೆ, ಕೆಲವು ನವೀನ ಅಕ್ಷರಗಳ ನಿರ್ಮಾಣ. ಅನ್ಯದೇಶೀ ಶಬ್ದಗಳಾದ Coffee, Elephant, Physics, Vision — ಇತ್ಯಾದಿಗಳನ್ನು ಅವುಗಳ ಉಚ್ಚಾರಣೆಗನುಸರಿಸಿ ಕನ್ನಡದಲ್ಲಿ ಹೇಗೆ ಬರಯಬೇಕು ?- ಎಂಬೀ ವಿಚಾರತರ್ಕವೂ ಇಲ್ಲಿ ಪ್ರಸ್ತುತವಲ್ಲ. ವರ್ಣಾತ್ಮಕ ಲಿಪಿಯ ಅನುಸರಣೆಯಾಗಲೀ ಲಿಪಿಸುಧಾರಣೆಯಾಗಲೀ ನವೀನ ಲಿಪಿಸೃಷ್ಟಿಯ ಯೋಜನೆಯಾಗಲೀ ಪ್ರಕೃತದ ಉದ್ದೇಶವಲ್ಲ. ಇಂದಿನ ಕನ್ನಡದ ವರ್ಣಗಳ ಶುದ್ಧಸ್ವರೂಪ ಯಾವುದು ? ಎಲ್ಲ ಕಡೆ ಎಲ್ಲರೂ ಬರೆವ ಲಿಪಿಸ್ವರೂಪಗಳೆಲ್ಲವೂ ಸರಿಯೆ ? ಸರಿಯಾದ ರೂಪವಾವುದು ? ಯಾವ ಸ್ವರೂಪವು ಕನ್ನಡದ ಜಾಯಮಾನಕ್ಕೆ ಒಪ್ಪುವುದು ? ಯಾವ ರೂಪವು ಶಾಸ್ತ್ರೀಯ ? ಎಂಬುದನ್ನು ಯಥಾಮತಿ ವಿವೇಚಿಸಿ ಅರ್ಥ ಮಾಡಿಕೊಂಡುದನ್ನು ತಿಳಿಸುವುದು ಇಲ್ಲಿ ಉದ್ದೇಶ. ಕನ್ನಡದ ಲಿಪಿ ಇಂದಿಗೆ ಸರ್ವಾಂಗಪೂರ್ಣವಾಗಿ, ಸುಂದರವಾಗಿ, ಪರಿಷ್ಕೃತವಾಗಿ ಶಾಸ್ತ್ರೋಕ್ತವೆನಿಸಲು ಅರ್ಹವಾಗಿದೆ-ಎಂದು ತೋರಿಸುವ ಯತ್ನವಿದು ; ಅಭಿಮಾನದ ಜಾಗೃತಿಗೆ ಪ್ರೇರಕವಿದು.

ಅಕ್ಷರ—ವರ್ಣ : ವ್ಯಾಕರಣಕಾರರು ವರ್ಣವನ್ನು ಹಾಗೂ ವರ್ಣಮಾಲೆಯನ್ನು ದ್ಯೋತಿಸುವ ಶಬ್ದಗಳಾಗಿ ಅಕ್ಕರ (ಅಕ್ಷರ), ವರ್ಣ, ಶುದ್ಧಾಕ್ಷರ (ಶುದ್ಧಕಾಃ), ಶುದ್ಧಗೆ, ಸುದ್ದಗೆ-ಎಂಬವನ್ನು ಪ್ರಯೋಗಿಸಿದ್ದಾರೆ.

ಅಕ್ಕರಮುಂ ವರ್ಣಮುಮೆಂ
ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ...." (ಶ.ದ. ಸೂ. ೨)

ಹೀಗೆ ಹೇಳುವಲ್ಲಿ ಕೇಶಿರಾಜನು ಅಕ್ಷರ, ವರ್ಣ-ಎಂಬಿವೆರಡನ್ನೂ ಸಮಾನಾರ್ಥಕವಾಗಿಯೇ ಗಣಿಸಿದುದು ಸ್ಪಷ್ಟವಾಗಿದೆ. ಇದಲ್ಲದೆ, "ವರ್ಣಂಗಳ ಪಾಠಕ್ರಮಂ" (ಸೂ. ೪), "ಅಂತ್ಯವರ್ಣಮವರ್ಗಂ" (ಸೂ. ೧೩), "ವರ್ಗದ್ವಿತೀಯವರ್ಣಂ ವರ್ಗಚತುರ್ಥಾಕ್ಷರಂ ಮಹಾಪ್ರಾಣಂ" (ಸೂ. ೧೪)-ಮುಂತಾದ ಕಡೆಗಳಲ್ಲಿ ನೋಡಿದರೂ ಇದು ಹೀಗೆಯೇ ಸ್ಪಷ್ಟವಾಗುವುದು. ನಾಗವರ್ಮ ಭಟ್ಟಾಕಲಂಕರ ಗ್ರಂಥಗಳಲ್ಲಿಯೂ ಅಕ್ಷರ-ವರ್ಣಗಳ ವ್ಯತ್ಯಾಸ ಕಂಡುಬರುವುದಿಲ್ಲ. ಈ ಎರಡು ಶಬ್ದಗಳ ಅರ್ಥದಲ್ಲಿ ವ್ಯತ್ಯಾಸವಿದೆ; ಪ್ರಾಚೀನರು ಕಲ್ಪಿಸಿರುವ ಲಕ್ಷ್ಯದಿಂದಲೂ ವ್ಯತ್ಯಾಸವು ಕಾಣುತ್ತಿದೆ. ಇವೆರಡರ ಲಕ್ಷಣವನ್ನು ಮೊದಲು ಅರಿತುಕೊಳ್ಳಬೇಕು.

ಅಕ್ಷರ : ಅಕ್ಷರ ಎಂಬುವನ್ನು ನಾಶರಹಿತ ಪರಬ್ರಹ್ಮವೆಂದು ಹೇಳಿದ್ದಾರೆ—"ಅಕ್ಷರಂ ಬ್ರಹ್ಮಪರಮಂ", "ಕೂಟಸ್ಥೋಽಕ್ಷರ ಉಚ್ಯತೇ" (ಭಗವದ್ಗೀತೆ). ವಿದ್ಯೆ-ಜ್ಞಾನ ಎಂಬ ಅರ್ಥಗಳಲ್ಲಿಯೂ ಈ ಶಬ್ದ ಬಳಕೆಯಾಗಿದೆ. "ಅಕ್ಕರಿಗರ್" ಎಂದು ವಿದ್ವಾಂಸರು. ಪರಮಾತ್ಮ, ವಿದ್ಯೆ, ಜ್ಞಾನ, ಮುಕ್ತಿ—ಇವೆಲ್ಲ ಅ+ಕ್ಷರಗಳು, ಅಂದರೆ ನಾಶವಿಲ್ಲದವು. ವಿದ್ಯೆ-ಜ್ಞಾನ-ಪರಮಾತ್ಮ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಅಂಶಗಳು ಶಬ್ದಗಳ ಮೂಲಕ ಮುಖೋಚ್ಚಾರಣೆಯಲ್ಲಿ ಬಂದಾಗ ಅಕ್ಷರಾತ್ಮಕವಾದ ಆ ನಾದ ಕಿವಿಗೆ ಒಮ್ಮೆ ಕೇಳಿಸಿ ಮರೆಯಾಗುವುದಷ್ಟೆ ? ಆದರೆ ಅದನ್ನೇ ಲಿಪಿರೂಪದಲ್ಲಿ ನೆಲೆಗೊಳಿಸಿದಾಗ ಅದು ಅ+ಕ್ಷರವೇ ಆಗಿ ನಿಲ್ಲುವುದು. ಈ ಅರ್ಥದಿಂದಲೇ ಲಿಪಿರೂಪಗಳನ್ನೂ "**ಅಕ್ಷರಗಳು**" ಎಂಬ ರೂಢಿ ಬಂತು. ಈ ಅಕ್ಷರಗಳನ್ನು ಉಚ್ಚಾರಣೆಯ ಲಕ್ಷಣಗಳಿಂದ ವರ್ಗೀಕರಿಸಿದಾಗ "ಅಕ್ಷರಮಾಲೆ" ಆಯಿತು. 'ವರ್ಣಮಾಲೆ' ಎಂದು ಇದಕ್ಕೆ ಇನ್ನೊಂದು ಹೆಸರು.

ಸೂಕ್ಷ್ಮಮತಿಗೆ "ಅಕ್ಷರ" ಎಂಬ ಶಬ್ದವೇ ಅಕ್ಷರಮಾಲೆಯ ಸೂಚಿಯೆನಿಸುವುದು. ಸಂಸ್ಕೃತ-ಕನ್ನಡಗಳ ವರ್ಣಮಾಲೆ ಅಕಾರಾದಿ ಸ್ವರಗಳಿಂದಲೂ ಕಕಾರಾದಿ ವ್ಯಂಜನಗಳಿಂದಲೂ ಮುಂಬರಿದು ವಿಸರ್ಗಾಕ್ಷರದಲ್ಲಿ ಕೊನೆಗೊಳ್ಳುವುದು. "ಅಕ್ಷರ" ಎಂಬ ಶಬ್ದವನ್ನು ವರ್ಣವಿಭಾಗ (ಧ್ವನಿಯ ವಿಂಗಡಣೆ) ಮಾಡಿದರೆ ಅಲ್ಲಿ "ಅ + ಕ್ + ಷ್ + (ಅ) + ರ್ + (ಅ)" ಎಂಬ ಆರು ಧ್ವನಿಗಳ ಸಮಾಮ್ನಾಯ ಕಾಣುತ್ತದೆ. ಇವುಗಳಲ್ಲಿ ಆದಿಯ ಅಕಾರವು ಸ್ವರಾಕ್ಷರಗಳ ಸೂಚಕ. ಇತರ ಕಡೆಗಳಲ್ಲಿ ಬಂದಿರುವ ಅಕಾರವು ವ್ಯಂಜನ ಯೋಗವಾಹಗಳಲ್ಲಿಯೂ ಅದು ಗಳಿಸಿರುವ ವ್ಯಾಪಕತೆಯ ದ್ಯೋತಕ. 'ಕ್' ಎಂಬುದು ವ್ಯಂಜನ ಸೂಚಿ (ಕಾದಯೋ ವ್ಯಂಜನಂ-ಶಬ್ದಾನುಶಾಸನ). ಷ್ ಮತ್ತು ರ್-ಎಂಬಿವೆರಡು ವ್ಯಂಜನಗಳು "ಸ್ರೋ ವಿಸರ್ಗಃ" ಎಂಬ ಸೂತ್ರಾನುಗುಣವಾಗಿ ವಿಸರ್ಗವನ್ನು ಸೂಚಿಸುತ್ತವೆ. ವಿಸರ್ಗವು ವರ್ಣಮಾಲೆಯಲ್ಲಿ ಕೊನೆಯದು.

ಬಿಂದು ವಿಸರ್ಗಗಳು ಸ್ವರಾಂಗವೆ? ವ್ಯಂಜನಾಂಗವೆ? ಎಂಬ ವಿಚಾರದಲ್ಲಿ ವೈಯಾಕರಣರ ಚರ್ಚೆ ನಡೆದಿದೆ. ಕಾತಂತ್ರ ವ್ಯಾಕರಣವನ್ನು ಅನುಸರಿಸಿ ಕೇಶಿರಾಜನು ಹೀಗೆಂದಿದ್ದಾನೆ—

ಪರಿಕಿಸೆ ಬಿಂದು ವಿಸರ್ಗಂ
ಸ್ವರಾಂಗಮುಂ ವ್ಯಂಜನಾಂಗಮುಂ ತಾಮೆಂಬರ್"[9]

ಇವು ಸ್ವರ-ವ್ಯಂಜನಗಳೆರಡಕ್ಕೂ ಸೇರುವವಾದರೆ, ಅಕ್ಷರಮಾಲೆಯಲ್ಲಿ ಇವಕ್ಕೆ ಸ್ಥಾನವೆಲ್ಲಿ? ಎಂಬುದು ನಿಶ್ಚಿತವಾಗುವುದಿಲ್ಲ. 'ಪರಮಾಗಮ' ವ್ಯಾಕರಣ ಗ್ರಂಥದಲ್ಲಿ ಈ ಯೋಗವಾಹಗಳಿಗೆ ಪೃಥಕತ್ವವಿದೆ. ಆದುದರಿಂದಲೇ ಸ್ವರ-ವ್ಯಂಜನ-ಯೋಗವಾಹ ಎಂಬೀ ವಿಭಾಗಕ್ರಮ ಬರುತ್ತದೆ. ಶಬ್ದಾನುಶಾಸನಕಾರನು ಈ ವಿಭಾಗ ಕ್ರಮವನ್ನೇ ಒಪ್ಪಿದ್ದಾನೆ—

"ವರ್ಣಾಸ್ತಾವತ್ ದ್ವೇಧಾ, ಮೂಲವರ್ಣಾಃ ಸಂಯುಕ್ತವರ್ಣಾಶ್ಚೇತಿ; ತತ್ರ ಮೂಲವರ್ಣಾಃ ಸಾಮಾನ್ಯತಃ ತ್ರೇಧಾ, ಸ್ವರ ವ್ಯಂಜನ ಯೋಗವಾಹಭೇದಾತ್" [10]

---

9 ಕೇಶಿರಾಜ–ಶ.ದ. ಸೂತ್ರ ೧೨

10 ಭಟ್ಟಾಕಲಂಕ-ಶಬ್ದಾನುಶಾಸನ, ಪುಟ ೧೭.

ಹೀಗೆ ಅಕ್ಷರ ಎಂಬ ಪದಸಂಜ್ಞೆ ಅ, ಕ್, ಷ್, ರ್-ಎಂಬೀ ವರ್ಣಗಳಿಂದ ಸ್ವರ-ವ್ಯಂಜನ-ಯೋಗವಾಹ (ಯೋಗವಾಹಗಳಲ್ಲಿ ಕೊನೆಯದಾದ ವಿಸರ್ಗ)ಗಳನ್ನೇ ನಿರೂಪಿಸುವುದು ಸ್ಪಷ್ಟವಾಗಿ ಕಾಣುತ್ತಿದೆ. 'ಅಕ್ಷರ' ಎಂಬುದು ಭಾರತೀಯ ವರ್ಣಮಾಲೆಗೆ ಲಕ್ಷಣ-ಲಕ್ಷ್ಯಗಳೆರಡೂ ಆಗಿದೆಯೆಂದು ನಿರ್ಧಾರವಾಗುತ್ತದೆ. ಈ ದೃಷ್ಟಿಯಿಂದ ಇಂಗ್ಲಿಷ್ ಮುಂತಾದ ವಿದೇಶೀ ಭಾಷೆಗಳ ವರ್ಣಮಾಲೆ "**ಅಕ್ಷರಮಾಲೆ**" ಎನಿಸುವುದಿಲ್ಲ. ಅವನ್ನು ಅಕ್ಷರಮಾಲೆ ಎನ್ನುವುದೂ ಭಾರತೀಯ ವರ್ಣಮಾಲೆಯನ್ನು 'ಆಲ್ಫಬೆಟ್' ಎನ್ನುವುದೂ ಸರಿಯಲ್ಲ.

ಇಂಗ್ಲಿಷಿನಲ್ಲಿ ಆಲ್ಫಬೆಟ್ (Alphabet) ಎಂಬ ಶಬ್ದವು ವರ್ಣಮಾಲೆಯ ದ್ಯೋತಕವಾಗಿ ಗ್ರೀಕಿನಿಂದ ಬಂದುದು. ಗ್ರೀಕ್ ಭಾಷೆಯ ವರ್ಣಮಾಲೆಯಲ್ಲಿ ಮೊದಲನೆಯದು 'ಎ' (A) ಇದನ್ನು ಆಲ್ಫ (Alpha) ಎನ್ನುವರು. ಎರಡನೆಯ 'ಬಿ' (B) ಎಂಬುದನ್ನು ಬೇಟ (Beta) ಎನ್ನುತ್ತಾರೆ. ಈ ಎರಡು ವರ್ಣಗಳ ಹೆಸರೇ ಅಲ್ಲಿ ವರ್ಣಮಾಲೆಗೆ ಬಂದಿದೆ. ಇಂದು ಕನ್ನಡಿಗರ ಆಡುಮಾತಿನಲ್ಲಿ "ಅ ಆ ಬರೆಯುವುದು" "ಅ ಆ ಇ (ಆಯಿ) ಬರೆಯುವುದು" ಎಂಬ ಪ್ರಯೋಗವಿದೆ. ಇಂಗ್ಲಿಷಿನ 'ಆಲ್ಫಬೆಟ್' ಎಂಬುದಕ್ಕೆ ಕನ್ನಡದ 'ಅ ಆ', 'ಅ ಆ ಇ' ಅಥವಾ "ಆಯೀ" ಎಂಬುದು ಸಂವಾದಿಯಾಗುತ್ತದೆ. ಆದರೆ ಸಾಹಿತ್ಯಭಾಷೆಯಲ್ಲಾಗಲೀ ವ್ಯಾಕರಣ ಗ್ರಂಥದಲ್ಲಾಗಲೀ ಈ ದೇಶೀ ಪ್ರಯೋಗವು ಸ್ಥಾನ ಗಳಿಸಿಲ್ಲ. [11]

---

11 ಕೇಶಿರಾಜನು ತನ್ನ ಶಬ್ದಮಣಿದರ್ಪಣಗ್ರಂಥದ ಮೊದಲ ಪದ್ಯದಲ್ಲಿ ಹೀಗೆಂದಿದ್ದಾನೆ—

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮುಂ ಶ್ರೋತ್ರದೊಳು
ದ್ಭಾವಿಪ ನಿರ್ಮಲಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವಸತನಪ್ಪೆಂ ||

ಇಲ್ಲಿ ಹೇಳಿರುವ 'ಆವಾವಿಂದ್ರಿಯ' (ಅ+ಅ+ಆ+ಇಂದ್ರಿಯ) ಎಂಬುದು ಅ, ಆ+ಇ ಆಗಿರುವಂತೆ ತೋರುತ್ತದೆ. ಅ,ಆ ಎಂಬ ಅವರ್ಣದ ಇಂದ್ರಿಯವೇ ಸಮಸ್ತ

ಸಂಸ್ಕೃತ ವೈಯಾಕರಣರು "ಅಕ್ಷರ" ಎಂಬುದನ್ನು 'ಸ್ವರ' ಅಥವಾ 'ಸ್ವರ ಸೇರಿರುವ ವ್ಯಂಜನ' ಎಂದು-ಅಂದರೆ, ಒಂದು ಪೂರ್ಣಾಕ್ಷರ ಎಂಬ ಅರ್ಥದಲ್ಲಿ ಹೇಳಿದ್ದಾರೆ. ವೇದದಲ್ಲಿಯೂ ಅಕ್ಷರವೆಂದರೆ ಸ್ವರ ಅಥವಾ ಸ್ವರ ಯುಕ್ತವಾದುದು—

ಋಚೋ ಅಕ್ಷರೇ ಪರಮೇ ವ್ಯೋಮನ್
ಯಸ್ಮಿನ್ ದೇವಾ ಅಧಿವಿಶ್ವೇ ನಿಷೇದುಃ [12]

[ಋಕ್ಕುಗಳು ಪರಮ ಆಕಾಶರೂಪವಾದ ಅವ್ಯಯವಾದ ಅಕ್ಷರದಲ್ಲಿ ನೆಲಸಿವೆ. ಈ ಅಕ್ಷರದಲ್ಲೇ ದೇವತೆಗಳು—(ಜ್ಞಾನವಿಷಯಗಳು) ನೆಲಸಿರುತ್ತಾರೆ].

ಸಂಸ್ಕೃತದಲ್ಲಿ ಪಾತಂಜಲಿ ಮಹಾಭಾಷ್ಯಕ್ಕೆ "ಮಹಾಭಾಷ್ಯಪ್ರದೀಪ" ಎಂಬ ಟೀಕೆಯನ್ನು ಬರೆದ ಕೈಯಟನು "ಅಕ್ಷರಮಚ್" ಎಂದಿದ್ದಾನೆ. 'ಅಚ್' ಎಂದರೆ ಅಕಾರಾದಿ ಔಕಾರದ ವರೆಗಿನ ಸ್ವರಗಳು. ಇದಲ್ಲದೆ "ಅಕ್ಷರಂ ವ್ಯಂಜನಸಹಿತೋಽಚ್" ಅಂದರೆ, ವ್ಯಂಜನ ಸಹಿತವಾಗಿರುವ ಸ್ವರವು (ಗುಣಿತವು) ಅಕ್ಷರವೆನಿಸುವುದು-ಎಂದಿದ್ದಾನೆ. ಇದಕ್ಕೆ ಉದಾಹರಣೆಯಾಗಿ 'ಯೇ ಯಜಾಮಹ-ಇತಿ ಪಂಚಾಕ್ಷರಮಿತಿ'-ಎಂದಿದ್ದಾನೆ. ಈ ಅರ್ಥದಂತೆಯೇ ಇಂಗ್ಲಿಷಿನಲ್ಲಿ ಅಕ್ಷರವನ್ನು ಸಿಲಬಲ್ (Syllable) ಎನ್ನುತ್ತಾರೆ. 'ಸಿಲಬಲ್' ಎಂದರೆ ಹ್ರಸ್ವರೂಪದ ಅಥವಾ ದೀರ್ಘರೂಪದ ಒಂದು ಪೂರ್ಣಾಕ್ಷರ. ಈ ವಿವರಣೆಗಳ ಪ್ರಕಾರ ಅರೆಯಕ್ಕರ (ಅರ್ಧಾಕ್ಷರ)ಗಳಾದ ಕ್, ಚ್ ಇತ್ಯಾದಿ ರೂಪದಲ್ಲಿರುವ ವ್ಯಂಜನಗಳು ಅಕ್ಷರಗಳೆನಿಸುವುದಿಲ್ಲ. ಅವನ್ನು ವರ್ಣಗಳೆಂದು ಹೇಳಬಹುದು. ವೇದದ ನಿರುಕ್ತಕ್ಕೆ ವ್ಯಾಖ್ಯಾನ ಬರೆದಿರುವ ದುರ್ಗಾಚಾರ್ಯನು "ಅಕ್ಷರ" ಎಂದರೆ 'ಸ್ವರ' ಎಂತಲೇ ತಿಳಿಸಿದ್ದಾನೆ. ಋಕ್‌ಪ್ರಾತಿಶಾಖ್ಯೆಯಲ್ಲಿ "ಸ್ವರೋ ಅಕ್ಷರಮ್" ಎನ್ನಲಾಗಿದೆ.

ಅಕ್ಷರಗಳ ಮಾಲೆ, ಮತ್ತು ಅಕ್ಷರಗಳ ಮಾಲೆಯಿಂದ ವ್ಯಾಪ್ತವಾದ ಸಾಹಿತ್ಯದ ಹಾಗೂ ಜ್ಞಾನದ ನಿಧಿ. 'ಇಂದ್ರಿಯ' ಎಂದರೆ ಜ್ಞಾನ ಕರ್ಮಗಳಿಗೆ ಸಾಧಕವಾದ ಅವಯವಶಕ್ತಿ. ಹೀಗೆ ಇಲ್ಲಿ 'ಅಮಾಇಂದ್ರಿಯ' ಎಂದರೆ ಅಕ್ಷರವನ್ನು (ಅಕ್ಷರಮಾಲೆಯನ್ನು) ಎಂತಲೂ ತಿಳಿದುಕೊಳ್ಳಬಹುದು. ಹೀಗೆ ತಿಳಿದುಕೊಂಡರೆ 'ಅ ಆಯಿ' ಎಂಬುದನ್ನು ಕೇಶಿರಾಜನೇ ಪ್ರಯೋಗಿಸಿದ್ದಾನೆಂದು ನೆನಸಿಕೊಳ್ಳಬಹುದು.

12 ಋಗ್ವೇದ—೧-೧೬೪-೩೯.

ಅಕ್ಷರದ (ಲಿಪಿಯ) ಮುಖ್ಯ ಲಕ್ಷಣವೇ ನೇತ್ರರಮಣೀಯತೆ. **"ಅಕ್ಷೀಣಿ ರಮಂತೇ ಯಸ್ಮಿನ್"** (That which delights the eyes of a seer.) ಈ ಮಾತನ್ನೇ ಸಮರ್ಥಿಸುವ ಶ್ಲೋಕವಿದು—

ನಾಕರಿಷ್ಯದ್ಯದಿ ಬ್ರಹ್ಮಾ ಲಿಖಿತಂ ಚಕ್ಷುರುತ್ತಮಂ
ತತ್ರೇಯಮಸ್ಯ ಲೋಕಸ್ಯ ನಾಭವಿಷ್ಯತ್ ಶುಭಾ ಗತಿಃ (ನಾರದಸ್ಮೃತಿ)

[ಕಣ್ಣಿಗೆ ಉತ್ತಮವೆನಿಸುವ ಅಕ್ಷರಗಳನ್ನು ಬ್ರಹ್ಮನು ಸೃಷ್ಟಿಸದಿರುತ್ತಿದ್ದರೆ, ಈ ಲೋಕಕ್ಕೆ ಶುಭವೆನಿಸುವ ಗತಿ ಉಂಟಾಗುತ್ತಿದ್ದಿಲ್ಲ.]

ಕಣ್ಣಿಗೆ ಸೊಗಸೆನಿಸುವ ಲಕ್ಷಣ ಇಂದಿನ ಕನ್ನಡದ ಲಿಖಿತಾಕ್ಷರಗಳಿಗೆ ಸರಿಯಾಗಿ ಅನ್ವಯಿಸುತ್ತದೆ. ಕನ್ನಡದ ಅಕ್ಷರಗಳು ದುಂಡಗೆ-ಪೂರ್ಣ ಚಂದ್ರನಂತೆ. ಕೆಲವಕ್ಕೆ ಹೊಟ್ಟೆ, ಹೊಕ್ಕುಳ, ಗೆರೆ, ತಲೆಕಟ್ಟು, ಗುಡಿಸು, ಕೊಂಬು, ಇಳಿ, ಸುಳಿ, ಸೊನ್ನೆ-ಮುಂತಾದ ಮುಖ್ಯಾವಯವಗಳೂ ಉಪಾವಯವಗಳೂ ಇರುತ್ತವೆ. ಉಪಾವಯವಗಳು, ಒತ್ತುಗಳು ಮುಂತಾದವು ಇದ್ದರೂ ಅಕ್ಷರಗಳ ದುಂಡುತನ ಉಳಿದಿರುತ್ತದೆ. ಕನ್ನಡದ ಲಿಖಿತಾಕ್ಷರಗಳ ಸೊಬಗನ್ನು ಒಂದೆಡೆ ಹೀಗೆ ವರ್ಣಿಸಿದೆ—

ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳಿ ಚೆಲ್ವು, ಮಾತ್ರೆಯೊಳ್
ನಿಂದ ಬೆಡಂಗು, ಬಳ್ಳಿಯೊಳೊಡಂಬಡುತಿರ್ಪ ನಯಂ, ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿವರ್ಣಿಸಲ್ ನವಿ
ಲ್ಗುಂದದ ಮಾದಿರಾಜವಿಬುಧಂ ವಿಬುಧೋದಿತ ನವ್ಯಕಾವ್ಯಮಂ ‖ 13

ಎರಡನೆಯ ಗುಣವರ್ಮನ ಪುಷ್ಪದಂತಪುರಾಣದ ಒಂದು ಪ್ರತಿಯನ್ನು ಬರೆದ ನವಿಲ್ಗುಂದದ ಮಾದಿರಾಜನ (ಕಾಲ ೧,೩೦೦) ಲೇಖನ ಕಲೆಯ ವರ್ಣನೆಯಿದು.

ಹೊಕ್ಕುಳ ಎಂಬುದು ಕೆಲವು ಅಕ್ಷರಗಳಿಗೆ ನಡುವೆ ಬರುವ ಒಳಸುಳಿ. ದ, ಪ, ಬ–ಇಂತಹ ಅಕ್ಷರಗಳಲ್ಲಿ ಹೊಕ್ಕುಳವನ್ನು ಕಾಣಬಹುದು. ಈ

13 ಕರ್ಣಾಟಕ ಕವಿಚರಿತೆ ಭಾಗ ೧ (೧೯೬೧) ಪುಟ ೪೬೨.

ಹೊಕ್ಕುಳದ ಪಕ್ಕದ ಎರಡೂ ಕಡೆಗಳಲ್ಲಿ ಉಬ್ಬಿರುವ ಭಾಗವೇ ಹೊಟ್ಟೆ (ಹೊಟ್ಟು), ಕೆಲವು ಅಕ್ಷರಗಳಿಗೆ ಹೊಟ್ಟೆ ಹೊಕ್ಕುಳಗಳಿಲ್ಲ.

ಉದಾಹರಣೆ: **ಗ, ಳ,** ಇತ್ಯಾದಿ.

ವರ್ಣ: ಕಣ್ಣಿಗೆ ಹೊಳೆದು ಕಾಣುವಂಥದು–ಎಂದು ಈ ಶಬ್ದಕ್ಕೆ ಅರ್ಥವಿದೆ. **'ವರ್ಣ್ಯತೇ ದೀಪ್ಯತೇ ಅನೇನೇತಿ ವರ್ಣಃ'**—ಅಂದರೆ ರೂಪವೆಂದು ಅರ್ಥವಾಗುವುದು. ಮೂಲತಃ ರೂಪರಹಿತವಾಗಿ ಧ್ವನಿಯುಕ್ತವಾಗಿ ಕಿವಿಗೆ ಕೇಳಿಸಿ, ಮನಸ್ಸಿಗೆ ಗೋಚರಿಸುವ ವಿಚಾರಕ್ಕೆ ಚಾಕ್ಷುಷರೂಪವು (ಕಣ್ಣಿಗೆ ಕಾಣಿಸುವ ರೂಪ) ಬಂತೆಂದರೆ, ಅದನ್ನು "ವರ್ಣ" ಎನ್ನಬಹುದು. ಲಾಕ್ಷಣಿಕರು ಅದರ ಉಚ್ಚಾರಣೆಯ ರೂಪವನ್ನೆ ವರ್ಣವೆಂದು ಕರೆದಿದ್ದಾರೆ—

ಮಂತ್ರೋ ಹೀನಃ ಸ್ವರತೋ ವರ್ಣತೋ ವಾ
ಮಿಥ್ಯಾಪ್ರಯುಕ್ತೋ ನ ತದರ್ಥಮಾಹ
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ
ಯಥೇಂದ್ರಶತ್ರುಃ ಸ್ವರತೋऽಪರಾಧಾತ್ ॥ [14]

[ಸ್ವರ ಅಥವಾ ವರ್ಣ ತಪ್ಪಾಗಿ ಉಚ್ಚಾರಣೆಗೊಂಡ ಮಂತ್ರವು "ಇಂದ್ರಶತ್ರುಃ" ಎಂಬಲ್ಲಿ ಸ್ವರೋಚ್ಚಾರಣೆಯ (ಸ್ವರಾಘಾತದ) ದೋಷದಿಂದ "ಇಂದ್ರನ ಶತ್ರು" ಎಂಬುದಕ್ಕೆ ಪ್ರತಿಯಾಗಿ 'ಶತ್ರುವಾದ ಇಂದ್ರನು' ಎಂದು ಅರ್ಥವಾಗುವುದು. ಈ ತಪ್ಪಾದ ಉಚ್ಚಾರಣೆಯೇ ವಾಗ್ವಜ್ರವಾಗಿ ಯಜಮಾನನನ್ನು (ಯಾಗ ಕರ್ತೃವನ್ನು) ಘಾತಿಸುವುದು.]

ಇಲ್ಲಿ ಸ್ವರವನ್ನು ಉದಾತ್ತ–ಅನುದಾತ್ತ–ಸ್ವರಿತಗಳೆಂದೂ ವರ್ಣ ಎಂಬುದನ್ನು ಮೂಲಾಕ್ಷರವೆಂದೂ ತಿಳಿಯುವುದು.

"**ವರ್ಣ**" ಎಂಬುದು ಕೇವಲ ಧ್ವನಿ, ಏಕಧ್ವನಿ "Letter" [15] ಇದು ಅಕ್ಷರೋಚ್ಚಾರಣೆಯ ಕನಿಷ್ಠ ಧ್ವನಿ; ಬೇರ್ಪಡಿಸಲು ಸಾಧ್ಯವಿಲ್ಲದುದು. ಅದೇ ಕನಿಷ್ಠ ಧ್ವನಿಯ ಲಿಖಿತರೂಪಕ್ಕೂ 'ವರ್ಣ' ಎಂತಲೇ ಹೆಸರು. 'ವರ್ಣ'

---

14 ಋಗ್ವೇದ ಸಂಹಿತೆ—ಭಾಗ ೧, ಪುಟ ೫೫೨.

15 ಸೇಡಿಯಾಪು ಕೃಷ್ಣಭಟ್ಟ—ಕನ್ನಡ ವರ್ಣಗಳು, ಪುಟ ೬೮.

ಎಂಬ ಶಬ್ದದಲ್ಲಿ ಇರುವ ಅಕ್ಷರಗಳು ಎರಡು. ವರ್ಣಗಳು ವ್+ಅ+ರ್+ಣ್+ಅ—ಎಂದು ಐದು. ಇದರಿಂದ ವರ್ಣಗಳೆಂದರೆ ಮೂಲಾಕ್ಷರಗಳೆಂದು ಹೇಳಬಹುದು. ಸ್ವರಗಳು, ಸ್ವರರಹಿತ ವ್ಯಂಜನಗಳು ವರ್ಣಗಳೆನಿಸುವವು. ಯೋಗವಾಹಗಳಿಗೂ ವರ್ಣ ಸಂಜ್ಞೆಯುಂಟು. ನಾಗವರ್ಮ-ಕೇಶಿರಾಜಾದಿ ಲಾಕ್ಷಣಿಕರು ಅಕ್ಷರಕ್ಕೂ ವರ್ಣಕ್ಕೂ ವ್ಯತ್ಯಾಸವನ್ನು ಹೇಳಿಲ್ಲ.

ಕಾರ: ಏಕಾಕ್ಷರವನ್ನು (ಒಂದು ಪೂರ್ಣಾಕ್ಷರವನ್ನು) ಉಲ್ಲೇಖ ಮಾಡುವಲ್ಲಿ 'ಕಾರ' ಎಂಬ ಪ್ರತ್ಯಯವನ್ನು ಹಚ್ಚಿ ಅಕಾರ, ಕಕಾರ, ಮಕಾರ ಎಂದು ಹೇಳುವುದುಂಟು. ಇಲ್ಲಿ 'ಕಾರ' ಎಂಬುದು ಪೂರ್ಣಾಕ್ಷರದ್ಯೋತಕ. '**ಕಕಾರ**' ಎಂದರೆ 'ಕ' ಎಂಬ ಅಕ್ಷರ. ವ್ಯಂಜನವನ್ನು ಹೇಳುವಾಗ "**ವ್ಯಂಜನ ಕಕಾರ**" ಅಥವಾ "**ಅರ್ಧ ಕಕಾರ**" ಎನ್ನುವರು. 'ಕ್ ಕಾರ' ಎನ್ನುವಂತಿಲ್ಲ. ಕೇವಲ 'ಕಾರ' ಎಂಬುದಕ್ಕೆ 'ಅಕ್ಷರ' ಎಂಬ ಅರ್ಥವೂ ಇಲ್ಲ.

ತಮಿಳಿನಲ್ಲಿ ಹ್ರಸ್ವವನ್ನು 'ಕರ' ಎಂಬ ಪ್ರತ್ಯಯದಿಂದಲೂ ದೀರ್ಘವನ್ನು 'ಕಾರ' ಎಂಬ ಪ್ರತ್ಯಯದಿಂದಲೂ ಸೂಚಿಸುತ್ತಾರೆ.

ಉದಾಹರಣೆ: 'ಅ' ಎಂಬುದನ್ನು 'ಅಕರ' ಎಂತಲೂ 'ಆ' ಎಂಬುದನ್ನು 'ಆ ಕಾರ' ಎಂತಲೂ ಅಲ್ಲಿ ಹೇಳುತ್ತಾರೆ. ಕನ್ನಡದಲ್ಲಿ ಮಾತ್ರ ಎಲ್ಲ ಪೂರ್ಣಾಕ್ಷರವನ್ನೂ 'ಕಾರ' ಎಂಬ ಸಂಜ್ಞೆಯಿಂದಲೇ ನಿರೂಪಿಸುವುದು.

ಶುದ್ಧಾಕ್ಷರ–ಗುಣಿತಾಕ್ಷರ — ಶಬ್ದಮಣಿದರ್ಪಣದಲ್ಲಿ ಶುದ್ಧಾಕ್ಷರ, ಶುದ್ಧಗೆ-ಎಂತಲೂ ಶಬ್ದಾನುಶಾಸನದಲ್ಲಿ "ಶುದ್ಧಕಃ" ಎಂತಲೂ ಅಕ್ಷರಕ್ಕೆ ಹೆಸರುಗಳು ಬಂದಿವೆ. "ಸುದ್ದಗೆ" ಎಂಬ ಪ್ರಯೋಗವೂ ಇದೆ.[16]

ಶಬ್ದಾನುಶಾಸನ ವ್ಯಾಖ್ಯಾನದಲ್ಲಿ ಶುದ್ಧಕದ ವಿವರಣೆಯಿದು—

"**ವರ್ಣೋ ವರ್ಣಸಮಾಮ್ನಾಯೇ ಶುದ್ಧಕಃ ಪರಿಕೀರ್ತಿತಃ**"[17]

ಇದರಿಂದ '**ಶುದ್ಧಕ**' ಎಂದರೆ ವರ್ಣವೆಂತಲೂ ವರ್ಣಮಾಲೆ

---

16 ಪಂಪಭಾರತ ಆ. ೨—ಪದ್ಯ ೩೪.

17 ಭಟ್ಟಾಕಲಂಕ—ಶ. ಶಾ. ಸೂ ೧ ವ್ಯಾಖ್ಯಾನ, ಪುಟ 16.

ಯೆಂತಲೂ ಅಭಿಪ್ರಾಯವಾಗುವುದು. ಶುದ್ಧಾಕ್ಷರ-ಶುದ್ಧಕ ಇವೆರಡೂ ಸಮಾನಾರ್ಥಕಗಳು. ಈ ಎರಡು ಶಬ್ದಗಳಲ್ಲಿಯೂ ವಿಶೇಷಣವಂತೆ ತೋರುವ 'ಶುದ್ಧ' ಎಂಬುದನ್ನು ಬಿಟ್ಟರೆ, ಒಂದು ಶಬ್ದದಲ್ಲಿ 'ಅಕ್ಷರ' ಎಂಬುದೂ. ಇನ್ನೊಂದರಲ್ಲಿ 'ಕ' ಎಂಬುದೂ ಸಮಾನಾರ್ಥಕಗಳೇ ಆಗುತ್ತವೆ. 'ಕ' ಎಂಬುದು ಗುಣಿತಾಕ್ಷರಗಳಲ್ಲಿ ಆದಿಯದು. ಇದರಿಂದ ಕಕಾರಾದಿಯಾದ ಎಲ್ಲ ಗುಣಿತಗಳಿಗೆ ಒಟ್ಟಾಗಿ 'ಕಾಗುಣಿತ' 'ಕಾಬಳ್ಳಿ' ಎಂಬ ಹೆಸರುಗಳಾಗಿವೆ.

ಕವರ್ಗ, ಚವರ್ಗ, ಎಂಬಲ್ಲೆಲ್ಲ ಆಯಾ ವರ್ಗದ ಆದ್ಯಕ್ಷರದ ಹೆಸರಲ್ಲಿ ಆಯಾ ವರ್ಗವಿದೆ. ಅದರಂತೆ ಗುಣಿತಾಕ್ಷರಗಳಿಗೆಲ್ಲ ಮೊದಲನೆಯದಾಗಿರುವ ಕಕಾರದ ಹೆಸರಲ್ಲಿ "ಕಗುಣಿತ" ಎಂಬುದೇಕಿಲ್ಲ? 'ಕಾಗುಣಿತ' ಎನ್ನುವರಲ್ಲ! ವರ್ಗಾಕ್ಷರಗಳನ್ನು ಹೇಳುವಾಗ 'ಕಾವರ್ಗ' 'ಚಾವರ್ಗ' ಎನ್ನುವುದಿಲ್ಲವಷ್ಟೆ? ಆದರೆ ಇಲ್ಲಿ ಮಾತ್ರ 'ಕಾಗುಣಿತ' ಎಂಬುದು ಸಾಧುವೆ? ಎಂಬ ಪ್ರಶ್ನೆ ಉದ್ಭವಿಸುವುದು. ಇಲ್ಲಿ ಆದಿಗೆ ದೀರ್ಘವು ಉಚ್ಚಾರಣೆಯ ಸೌಲಭ್ಯಕ್ಕಾಗಿ ಎಂದೆನ್ನಬಹುದು. ಆದರೆ ಇದೂ ಕಾರಣವಲ್ಲ. "ಕಾದಿ (ಕ+ಆದಿ) ಗುಣಿತ" ಎಂಬ ರೂಪದಲ್ಲಿ ಒಂದು ಅಕ್ಷರ ಮರೆಯಾಗಿ 'ಕಾಗುಣಿತ'ವಾಗಿದೆಯೆನ್ನಬೇಕಾಗುತ್ತದೆ. ಕೇವಲ 'ಕಗುಣಿತ' ಎಂದರೆ 'ಕ' ಎಂಬ ಅಕ್ಷರದ ಗುಣಿತವೆನಿಸುವುದಲ್ಲದೆ, ಅದು ಇತರ ಎಲ್ಲಾ ಗುಣಿತಾಕ್ಷರಗಳನ್ನು ಪ್ರತಿನಿಧಿಸದು.

ಕನ್ನಡವು ಸಂಸ್ಕೃತದಂತೆಯೇ ಧ್ವನಿಯುಕ್ತವಾದ ಭಾಷೆ. ಸ್ಪಷ್ಟವಾದ ಉಚ್ಚಾರಣೆಗೆ ಇಲ್ಲಿ ಮಹತ್ವವಿದೆ. ಉಚ್ಚಾರಣೆಯಂತೆಯೇ ಬರಹ, ಬರಹದಂತೆಯೇ ಉಚ್ಚಾರಣೆ-ಇದು ತಪ್ಪಿದರೆ ಅರ್ಥದೋಷವುಂಟಾಗುವುದು. ಕನ್ನಡದ ಭಾಷಾವಿದರು ಶಬ್ದಗಳ ಉಚ್ಚಾರಣೆಯ ಶುದ್ಧತೆಗೆ ಪ್ರಾಶಸ್ತ್ಯವಿತ್ತಿದ್ದಾರೆ. ಬರೆವ ಲಿಪಿಯ ಸ್ವರೂಪಸಾಧುತ್ವಕ್ಕೂ ಅಷ್ಟೇ ಮಹತ್ವವಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ವರ್ಣಮಾಲೆಯಲ್ಲಿ ಸ್ವರಾಕ್ಷರಗಳನ್ನು ಜೀವಾಕ್ಷರಗಳೆಂದೂ ಅಚ್ಚುಗಳೆಂದೂ ಕರೆಯುತ್ತಾರೆ.[18] ಜೀವಾಕ್ಷರಗಳನ್ನು ಕೂಡಿಸದಿರುವವು 'ನಿರ್ಜೀವಾ

---

[18] ಟಿ. ಜಿ. ಮಾಟೆನ್--ಕನ್ನಡ ವ್ಯಾಕರಣ ಬೋಧಿನಿ (1896) ಪುಟ 14.

ಕ್ಷರಗಳು. ಇವನ್ನು ವ್ಯಂಜನಗಳು, ಅರ್ಧಾಕ್ಷರಗಳು-ಅಥವಾ ಬೀಜಾಕ್ಷರಗಳು–ಎನ್ನುತ್ತಾರೆ. ಈ ವಿಚಾರವನ್ನು ಒಂದು ಆಧುನಿಕ ವ್ಯಾಕರಣ ಪುಸ್ತಕದಲ್ಲಿ ಹೀಗೆ ಹೇಳಿದೆ—

ಪ್ರಾಣಂಗಳ್ ಸ್ವರಗಳು ನಿ
ಷ್ಪ್ರಾಣಗಳರ್ಧಾಕ್ಷರಂಗಳಿವಪೂರ್ಣಂಗಳ್ ‖19

ತಮಿಳಿನಲ್ಲಿ ಸ್ವರವನ್ನು ಉಯಿರ್ (ಉಸಿರ್ = ಪ್ರಾಣ) ಎಂತಲೂ ವ್ಯಂಜನವನ್ನು "**ಮೆಯ್ಯೆಟುತ್ತು**" (ಮೆಯ್ = ದೇಹ. ಎಟುತ್ತು = ಅಕ್ಷರ) ಎಂತಲೂ ಕರೆವುದು ಇಲ್ಲಿ ಪರಸ್ಪರವಾಗಿ ಹೋಲಿಕೆಯಾಗುತ್ತದೆ.

ತೆಲುಗಿನಲ್ಲಿ ಸುಮಾರು ೧೭ನೆಯ ಶತಮಾನದಿಂದ ಈಚಿನ ಗ್ರಂಥಗಳಲ್ಲಿ ಗುಣಿತಾಕ್ಷರಗಳ ಮಾತು ಬಂದಿದೆ. ನನ್ನಯ್ಯ ಕವಿಯ ಆಂಧ್ರ ಶಬ್ದ ಚಿಂತಾಮಣಿಯ ವ್ಯಾಖ್ಯಾನ ಗ್ರಂಥವಾಗಿರುವ 'ಅಪ್ಪಕವೀಯಮು' ಎಂಬ ಛಂದೋವ್ಯಾಕರಣ ಗ್ರಂಥದಲ್ಲಿ 'ಸ್ವರಗುಣಿತಮು' 'ಗುಣಿಂಚಡಿ ವಿಧಂ' ಎಂಬ ಪ್ರಯೋಗಗಳಿವೆ. ತೆಲುಗಿನಲ್ಲಿ ಅಯ್ಯಲರಾಜು ನಾರಾಯಣಾಮಾತ್ಯ ವಿರಚಿತ "**ಹಂಸವಿಂಶತಿ**" ಎಂಬ ಕಾವ್ಯದಲ್ಲಿ ಗುಣಿತಾಕ್ಷರವನ್ನು ಬರೆವ ಅನುಭವದ ಉಲ್ಲೇಖವಿದೆ. §

ಕನ್ನಡದಲ್ಲಿ ಗುಣಿತಾಕ್ಷರದ ಪ್ರಸ್ತಾವವು ಅರ್ವಾಚೀನ ಎಂದು ತೋರುತ್ತದೆ. ನಾಗವರ್ಮ-ಕೇಶಿರಾಜ–ಭಟ್ಟಾಕಲಂಕರು 'ಗುಣಿತಾಕ್ಷರ' ಎಂಬುದನ್ನು ಹೇಳಿಲ್ಲ. ಬೇರೆ ಕಡೆ ಕಾವ್ಯ ಸಾಹಿತ್ಯಗಳಲ್ಲಿ ಸಾಂದರ್ಭಿಕವಾಗಿ ಬಂದ ಉದಾಹರಣವೂ ದೊರಕಿಲ್ಲ. ಕ್ರಿ.ಶ. ೧೬೫೦ರಲ್ಲಿದ್ದ ಸಿದ್ಧನಂಜೇಶನೆಂಬ ವೀರಶೈವ ಕವಿ ತನ್ನ "**ರಾಘವಾಂಕಚಾರಿತ್ರ**"ದಲ್ಲಿ ಪ್ರಣವದಿಂದಲೇ ಪಂಚಾಕ್ಷರಿ ಹುಟ್ಟಿದುದನ್ನು ವಿವರಿಸಿ, ಆ ಪಂಚಾಕ್ಷರಗಳಿಂದಲೇ ವರ್ಣಮಾಲೆಯ

---

19 ಮುನಿಪಿ ಶ್ರೀನಿವಾಸಯ್ಯ—ಪದ್ಯಕಾವ್ಯ ವ್ಯಾಕರಣ (1837) ಪುಟ ೧೪.

§ ತೆಲುಗಿಗೆ ಸಂಬಂಧಿಸಿದ ವಿಚಾರವನ್ನು ನನಗೆ ತಿಳಿಸಿ ಉಪಕಾರ ಮಾಡಿದವರು ಮಿತ್ರರಾದ ಶ್ರೀ ಸಿ. ತಿರುಪತಿರಾವ್, ಎಂ.ಎ., ತೆಲುಗು ಪ್ರಾಧ್ಯಾಪಕರು.

ಐವತ್ತೊಂದು ಅಕ್ಷರಗಳಾದುವೆಂದು ಹೇಳಿದ್ದಾನೆ. ಅವನು ಹ್ರಸ್ವಸ್ವರಗಳನ್ನು "**ಪ್ರಕೃತಿ ಸ್ವರ**"ಗಳೆಂದೂ ದೀರ್ಘ ಸ್ವರಗಳನ್ನು "**ವಿಕೃತಿಸ್ವರ**"ಗಳೆಂದೂ ಹೆಸರಿಸಿದ್ದಾನೆ. ಸ್ವರಸಹಿತ ವ್ಯಂಜನವನ್ನು "**ಸಕಲಾಕ್ಷರ**"ವೆಂತಲೂ ಸ್ವರ ರಹಿತ ವ್ಯಂಜನವನ್ನು "**ವಿಕಲಾಕ್ಷರ**"ವೆಂತಲೂ ಕರೆದಿದ್ದಾನೆ—

ಮುದದಿ ವಿಕಲಾಕ್ಷರಂ ಪಂಚೋತ್ತರತ್ರಿಂಶ
ಮದಕೆ ಸ್ವರವೊದವೆ ಸಕಲಾಕ್ಷರಾಹ್ವಯುಮುಕ್ಕು [20]

ಹೀಗೆ ಹಿಂದಿನ ಕೃತಿಗಳಲ್ಲಿ ಗುಣಿತಾಕ್ಷರವೆಂದು ಉಲ್ಲೇಖಿಸಿದ ಉದಾಹರಣೆ ಸಿಕ್ಕಿಲ್ಲ. ಅಕ್ಷರ, ಸಜೀವಾಕ್ಷರ, ಸಕಲಾಕ್ಷರ, ಪೂರ್ಣಾಕ್ಷರ, ಸ್ವರ ಯುಕ್ತ ವ್ಯಂಜನ,–ಎಂಬಿವೆಲ್ಲ ಗುಣಿತಾಕ್ಷರವನ್ನೆ ನಿರ್ದೇಶಿಸಿವೆಯೆಂದು ತಿಳಿದುಕೊಳ್ಳಬಹುದು.

ಅಕಾರ: ಅಕ್ಷರಗಳ ಉಚ್ಚಾರಣೆಗೆ ಕಾರಣಗಳು ಧ್ವನಿ, ಪ್ರಯತ್ನ, ಸ್ಥಾನ ಎಂಬೀ ಮೂರು. ಇವುಗಳಲ್ಲಿ ಧ್ವನಿಯಿಲ್ಲದೆ ಯಾವ ಉಚ್ಚಾರಣೆಯೂ ಇರದು. ಅದು ಎಲ್ಲ ಅಕ್ಷರಗಳಿಗೂ ಅನಿವಾರ್ಯ. ಪ್ರಯತ್ನವು ಅಭ್ಯಂತರ, ಬಾಹ್ಯ ಎಂದೆರಡು ವಿಧ. ಅಭ್ಯಂತರ ಪ್ರಯತ್ನದಲ್ಲಿ ವಿವೃತದಿಂದ ಸ್ವರಗಳೂ ಸ್ಪೃಷ್ಯದಿಂದ ವ್ಯಂಜನಗಳೂ ಹುಟ್ಟುತ್ತವೆ.

ಸ್ವರಗಳಲ್ಲಿ ಮೊದಲನೆಯದು ಅ ಕಾರ. ಇದಕ್ಕೆ **'ಅಕ್ಷರಮುಖ'** ಎಂಬ ಹೆಸರೂ ಇದೆ. ಪ್ರಯೋಗಕಾಲದಲ್ಲಿ ಇದರ ಉಚ್ಚಾರಣೆಗೆ 'ಸಂವೃತ' ಪ್ರಯತ್ನವೆಂದೂ ಪ್ರಕ್ರಿಯಾಕಾಲದಲ್ಲಿ ವಿವೃತ ಪ್ರಯತ್ನವೆಂದೂ ಸಿದ್ಧಾಂತ ಕೌಮುದಿಯಲ್ಲಿ ಹೇಳಿದೆ. ಇದರ ಉಚ್ಚಾರಣೆ ಸಹಜವಾಗಿ, ಸರಳವಾಗಿ ಆಗುತ್ತದೆ. ಬಾಯಿತೆರೆದೊಡನೆ ತಾನೇ ತಾನಾಗಿ ಹೊರಡಿಸಿದ ಹ್ರಸ್ವಸ್ವರ ಅಕಾರ. ಇದರ ದೀರ್ಘ ಆಕಾರ. ಅಕ್ಷರೋತ್ಪತ್ತಿ ಸ್ಥಾನಗಳಲ್ಲಿ ಮೊದಲನೆಯದಾದ ಕಂಠದಿಂದಲೇ ಇದರ ಹುಟ್ಟು. ಉರಸ್ಸನ್ನು ಉತ್ಪತ್ತಿಸ್ಥಾನವಾಗಿ ಹೇಳಿರುವ ಅಕ್ಷರಗಳೂ ಧ್ವನಿತವಾಗುವುದು ಕಂಠದಿಂದಲೇ. ಕಂಠದ

20 ಸಿದ್ಧನಂಜೇಶ—ರಾಘವಾಂಕ ಚಾರಿತ್ರ, ಸಂ. ೨, ಪದ್ಯ ೫೬.

ಸಹಾಯವಿಲ್ಲದೆ ಯಾವ ಅಕ್ಷರದ ಉಚ್ಚಾರಣವೂ ಆಗದು. ಆದರಂತೆ ಅಕಾರದ ಸಹಾಯವಿಲ್ಲದೆ ಇತರ ಅಕ್ಷರಗಳ ಉಚ್ಚಾರಣೆ ಇರದು. "ಸಮಸ್ತ ಅಕ್ಷರಗಳ ಸಮೂಹ, ಸಮಸ್ತ ಶಬ್ದಸಮೂಹ ಮತ್ತು ಸಮಸ್ತ ಧ್ವನಿಸಮೂಹ ಇವು ಸ್ಥಾನ-ಪ್ರಯತ್ನ ಭೇದದಿಂದ ಅಕಾರದ ರೂಪಾಂತರಗಳೇ ಆಗಿವೆ"[21] ಎಂದು ಒಬ್ಬರು ವಿದ್ವಾಂಸರು ಹೇಳಿದ್ದಾರೆ. ಅಕಾರದ ಉಚ್ಚಾರಣೆಗಾಗಿ ತೆರೆದ ಬಾಯ ವಾಗವಯವಗಳನ್ನು ಅಲ್ಲಿಗೇ ಸಂಕುಚಿಸಿ, ತಿರುಗಿಸಿ, ಅಥವಾ ಮಣಿಸಿ ಉಚ್ಚಾರಣೆ ಮಾಡಿದಾಗ ಇತರವು-ಅಂದರೆ, ಔಕಾರ ಪರ್ಯಂತವಾಗಿರುವ ಮುಂದಿನ ಸ್ವರಗಳು ಸಂಜನಿಸುತ್ತವೆ. **ಅ, ಆ** ಎಂಬ ಅವರ್ಣದ ಉಚ್ಚಾರಣೆಗೆ ಮಾತ್ರ ಯಾವ ವಾಗವಯವಗಳನ್ನೂ ಮಣಿಯಿಸುವ ಆವಶ್ಯಕತೆಯಿಲ್ಲ. ಆದುದರಿಂದಲೇ ಅವರ್ಣವನ್ನುಳಿದ ಸ್ವರಗಳನ್ನು 'ನಾಮಿಗಳು' ಎಂದು ಕರೆದಿದ್ದಾರೆ.[22] "**ನಮತಿ (ನಮಯತಿ) ಇತಿ ನಾಮೀ**" ಅಂದರೆ ಮಣಿಯುವುದು ಅಥವಾ ಮಣಿಯಿಸುವುದು 'ನಾಮಿ'. ಇಂಗ್ಲೀಷಿನಲ್ಲಿ ಇದನ್ನು ಬೆಂಡರ್ (Bender) ಎಂದು ಕರೆದಿದ್ದಾರೆ. **ಅಕಾರವೇ** ನಮನ ಕ್ರಿಯೆಗೆ ಒಳಗಾಗಿ, ಉಳಿದ ಸ್ವರಗಳಾದುವೆಂದು ಅಭಿಪ್ರಾಯ. ಈ ಸ್ವರಗಳು ವ್ಯಂಜನಗಳೊಡನೆ ಸೇರಿ ಅವಕ್ಕೆ ಪ್ರಾಣವನ್ನೀಯುವುದರಿಂದ ಅಕಾರವೇ ಎಲ್ಲ ಅಕ್ಷರಗಳಲ್ಲಿಯೂ ವ್ಯಾಪಿಸಿರುವುದು ವಿದಿತವಾಗುತ್ತದೆ. ಅಕಾರವೇ ಅಕ್ಷರಗಳಿಗೆ '**ಆದಿ**'-ಎಂಬಲ್ಲಿ ಮೊದಲನೆಯದು-ಎಂದು ಮಾತ್ರ ಅರ್ಥವಲ್ಲ. ಅಕಾರದಿಂದಲೇ ಇತರ ಅಕ್ಷರಗಳಾಗಿವೆ-ಎಂದು ತಿಳಿಯಬೇಕು-ಬೀಜದಿಂದ ವೃಕ್ಷವಾಗಿರುವಂತೆ. ತಿರುವಳ್ಳು ಕವಿಯ 'ಕುಱಳ್' ಗ್ರಂಥದ ವಾಕ್ಯವಿದು—

ಅಕರ ಮುದಲ ಎೞುತ್ತೆಲ್ಲಾಂ
ಆದಿ ಬಗವನ್ ಮುದಟ್ರೇ ಉಲಗ್ ॥

ಇದರ ಕನ್ನಡ ಕಂದ ಹೀಗಿದೆ—

---

21 ಪಂ. ರಘುನಂದನ ಶರ್ಮ—ವೈದಿಕ ಸಂಪತ್ತಿ, ಪುಟ ೨೫೫.

22 "ಪರಿಹರಿಸೆಯವರ್ಣಮನಾ। ಸ್ವರಂಗಳವು ನಾಮಿಯೆಂಬುವಕ್ಕುಂ" (ಶಬ್ದಸ್ಮೃತಿ ಸೂತ್ರ ೩).

ತಿರೆಯೊಳ್ ನೆಗೞ್ತೆವಡೆದ
ಕ್ಷರ ಮಾಲೆಯೊಳೆಲ್ಲಮೆಂತುಟಾದಿಯಕಾರಂ
ನಿರುಪಮ ಕಲ್ಯಾಣ ಗುಣಾಕರ
ನಕ್ಷರದಂತುಟಾದಿಯೀ ಜಗಕೆಲ್ಲಂ ॥ [23]

ಇಲ್ಲಿ ಕೂಡ, "**ಆದಿ**" ಎಂಬುದಕ್ಕೆ '**ಉಳಿದವುಗಳ ಹುಟ್ಟಿಗೆ ಕಾರಣ**' ಎಂಬ ಅರ್ಥ ಸಿಹಿತವಾಗಿದೆ.

ಬ್ರಹ್ಮನು ಓಂಕಾರವನ್ನು ಉಪದೇಶಿಸುವಾಗ ಅಕಾರವನ್ನು ಋಗ್ವೇದ ದಿಂದಲೂ ಉಕಾರವನ್ನು ಯಜುಸ್ಸಿನಿಂದಲೂ ಮಕಾರವನ್ನು ಸಾಮವೇದ ದಿಂದಲೂ ಸಂಗ್ರಹಿಸಿದನೆಂದು ಮನುಧರ್ಮಶಾಸ್ತ್ರದಲ್ಲಿ ಹೇಳಿದೆ. ಋಗ್ವೇದದ ಮೊದಲನೆಯ ಮಂತ್ರದ ("**ಅಗ್ನಿಮೀಳೇ ಪುರೋಹಿತಂ**"–ಎಂಬಲ್ಲಿನ) ಮೊದಲನೆಯ ಅಕ್ಷರ ಅಕಾರವಾಗಿಯೇ ಇದೆ. ಋಗ್ವೇದದ ವಿಸ್ತರಣವೇ ಇತರ ವೇದಗಳೆಂದು ಹೇಳುತ್ತಾರೆ. ಈ ಅಕಾರವು ಋಗ್ವೇದವನ್ನು ಪ್ರತಿ ನಿಧಿಸುತ್ತದೆ. ಇದರಿಂದ ಅಕಾರವೆಂಬುದು ಸಮಸ್ತ ಜ್ಞಾನರಾಶಿಯೂ ಆಗಿದ್ದು ಇತರ ಅಕ್ಷರಗಳಿಗೆಲ್ಲ ಆದಿಯದು. ಅದರ ಉಚ್ಚಾರಣೆಯ ಸ್ಥಾನ ಕೂಡ, ಅಕ್ಷರೋತ್ಪತ್ತಿ ಸ್ಥಾನಗಳಲ್ಲಿ ಮೊದಲನೆಯದಾಗಿರುವ ಕೊರಲು.

"ಅವರ್ಣಂ ಪಿಂಗಿದಾ ಸ್ವರಂ ನಾಮಿಯೆಂದು ಪೇೞಲ್ಪಡುಗುಂ" (ಶ.ದ.ಸೂ.೯.) 'ನಾಮಿ' ಎಂಬುದಕ್ಕೆ Bending; changing a dental to a cerebral (ಬಾಗುವಿಕೆ; ದಂತ್ಯಾಕ್ಷರವು ಮೂರ್ಧನ್ಯವಾಗಿ ಮಾರ್ಪಡುವಿಕೆ) ಎಂದು ಕಿಟ್ಟೆಲ್ ಕೋಶದಲ್ಲಿ ಹೇಳಿದೆ. ಅವರ್ಣವು ಅಂತ್ಯವಾಗುಳ್ಳ ರಾಮ, ರಮಾ–ಇತ್ಯಾದಿ ಪುಲ್ಲಿಂಗ ಸ್ತ್ರೀಲಿಂಗ ಶಬ್ದಗಳು ಸಪ್ತಮೀ ಬಹುವಚನದಲ್ಲಿ ರಾಮೇಷು, ರಮಾಸು–ಎಂದಾಗುತ್ತವೆ. ನಾಮ್ಯಕ್ಷರಾಂತ್ಯ ಶಬ್ದಗಳು ಮಾತ್ರ ಸಪ್ತಮೀ ಬಹುವಚನದಲ್ಲಿ ಹರಿಷು, ಗೌರೀಷು, ಧಾತೃಷು–ಎಂದಾಗುತ್ತವೆಂದು ಉದಾಹರಿಸಬಹುದು. ಮೋನೀರ್ ವಿಲಿಯಮ್ಸ್ ಸಂಸ್ಕೃತ–ಇಂಗ್ಲಿಷ್ ಕೋಶದಲ್ಲಿಯೂ 'ನಾಮಿನ್' ಶಬ್ದಕ್ಕೆ ಮೇಲಿನ ಅರ್ಥವಿದೆ. ಪ್ರಾತಿಶಾಖ್ಯೆಯಲ್ಲಿ ಅದರ ವಿಚಾರ ಬಂದಿರುವಂತೆ ಹೇಳಿದೆ. ಸಾರಸ್ವತ ವ್ಯಾಕರಣದಲ್ಲಿ 'ನಾಮಿ'ಯ ಪ್ರಸ್ತಾಪವಿದ್ದರೂ ಆ ಹೆಸರು ಬರಲು ಕಾರಣ ಹೇಳಿಲ್ಲ.

23 ಆರ್. ನರಸಿಂಹಾಚಾರ್ಯ—ನೀತಿ ಮಂಜರಿ, ಭಾಗ ೨. ಪದ್ಯ ೧.

ತಲೆಕಟ್ಟು : ಕನ್ನಡದ ಲಿಪಿಪದ್ಧತಿ ಅಕ್ಷರಾತ್ಮಕವಾದುದು. ವರ್ಣಾತ್ಮಕವಾಗಿದ್ದರೆ "**ಕ**" ಎಂಬುದನ್ನು '**ಕ್ ಅ**' ಎಂದು ಎರಡು ಸಂಜ್ಞೆಗಳಿಂದ ಬರೆಯಬೇಕಿತ್ತು—ಇಂಗ್ಲಿಷಿನ 'Ka' ಎಂಬಂತೆ. 'ಕ' ಎಂಬುದರ ಉಚ್ಚಾರಣೆಯಲ್ಲಿ ಕ್ ಮತ್ತು ಅ ಎಂಬಿವೆರಡೂ ಸೇರಿರುವಂತೆ, ಅದರ ಲಿಖಿತ ರೂಪದಲ್ಲಿಯೂ ಈಯೆರಡರ ಅಂಶಗಳನ್ನು ಗುರುತಿಸಬಲ್ಲೆವು. ಅದರಲ್ಲಿ ಕಾಣುವ "**ತಲೆಕಟ್ಟು**" ಅಕಾರದ ಅಂಶವಾಗಿ ಅಕಾರವನ್ನು ಸಂಕೇತಿಸುತ್ತದೆ. ಈ ಚಿಹ್ನೆಯನ್ನು (ತಲೆಕಟ್ಟನ್ನು) ತಲಕಟ್ಟು, ತಲೆಕೊಟ್ಟು—ಎಂತಲೂ ಹೇಳುತ್ತಾರೆ.[24] ಹುಂಜದ ಹಾಗೂ ನವಿಲಿನ ತಲೆಯಲ್ಲಿ ಮೂಡಿ ಬರುವ ಕೆಂಪಾದ ಭಾಗ "**ಕೊಟ್ಟು**" (crest). ಅದರಂತೆ ಮಣ್ಣನ್ನು ಕಡಿದು ಮೊಗಚುವ ಉಪಕರಣವಾದ 'ಹಾರೆ'ಗೂ 'ಕೊಟ್ಟು' ಎನ್ನುವರು. ಇದು ಅಕ್ಷರಗಳ ತಲೆಯ ಮೇಲೆ ಕೊಡುವ ಚಿಹ್ನೆಯಾಗಿ 'ತಲೆ ಕೊಟ್ಟು' ಎಂಬ ರೂಪವನ್ನೂ ಒಪ್ಪಬಹುದು. ಇದು ತಲೆಯ (ಕೂದಲಿನ) ಕಟ್ಟನಂತೆ ಕಾಣಿಸುವುದೂ ಹೌದು.

ಉಚ್ಚಾರಣೆಯಲ್ಲಿ ಅಕಾರದ ಅಂಶವಿದ್ದರೂ ತಲೆಕಟ್ಟಿಲ್ಲದ ಅಕ್ಷರಗಳು ಕನ್ನಡದಲ್ಲಿ ಹಲವಿವೆ.

ಸ್ವರಗಳಲ್ಲಿ ತಲೆಕಟ್ಟಿಲ್ಲದವು :

ಇ, ಉ, ಊ, ಎ, ಏ, ಐ, ಒ, ಓ, ಔ. (**೯.**)

ವ್ಯಂಜನಗಳಲ್ಲಿ ತಲೆಕಟ್ಟಿಲ್ಲದವು :

ಖ, ಙ, ಜ, ಞ, ಟ, ಣ, ಬ, ಲ, ಳ. (**೯**)

ತಲೆಕಟ್ಟು ಒಳ ಹೊಕ್ಕಿರುವವು :

ಅ, ಆ, ಱ. (೩)

ಸ್ವರಾಕ್ಷರಗಳಲ್ಲಿ ತಲೆಕಟ್ಟುಳ್ಳವು :

ಈ, ಋ, ೠ. (೩)

---

24 **ಚ. ಸುಂದರೇಶನ್—ತಲೆಕಟ್ಟು (೧೯೬೩), ಪುಟ ೧.**

ಉತ್ತರ ಕರ್ನಾಟಕದಲ್ಲಿ (ಧಾರವಾಡದ ಕಡೆ) 'ಭ' ಎಂಬುದನ್ನು ತಲೆ ಕಟ್ಟಿಲ್ಲದೆ 'ಭ' ಹೀಗೆ ಬರೆಯುತ್ತಾರೆ. ಎಲ್ಲ ಕಡೆಯ ಮುದ್ರಣದಲ್ಲಿಯೂ ಇತರ (ಧಾರವಾಡೇತರ) ಕಡೆಯ ಬರವಣಿಗೆಯಲ್ಲಿಯೂ ಅದಕ್ಕೆ ತಲೆಕಟ್ಟು ಇದ್ದೇ ಇರುತ್ತದೆ. ಇದರಿಂದ ಅದಕ್ಕೆ ತಲೆಕಟ್ಟು ಕೊಡುವುದೇ ಸಾಧುವೆಂದು ಎಲ್ಲರೂ ಸ್ವೀಕರಿಸಬಹುದು.

ಅತ್ವದ (ಅಕಾರದ) ಸ್ವರ ಸಂಕೇತಕ್ಕೆ **'ತಲೆಕಟ್ಟು'** ಎಂಬ ಹೆಸರಿರುವಂತೆಯೇ ಇನ್ನುಳಿದ ಔಕಾರದವರೆಗಿನ ಸ್ವರ ಸಂಕೇತಗಳಿಗೂ ಬೇರೆ ಬೇರೆ ಹೆಸರುಗಳಿವೆ. ಈ ಸ್ವರಸಂಕೇತಗಳು ವ್ಯಂಜನಗಳಿಗೆ ಸೇರಿ ಗುಣಿತ (ಕಾಗುಣಿತ)ಗಳಾಗಿವೆ. ತಲೆಕಟ್ಟಿನ ಅನಂತರದ ಸ್ವರ ಚಿಹ್ನೆಗಳನ್ನು ಪದ್ಯ ರೂಪದ ಸೂತ್ರವಾಗಿ ಒಂದೆಡೆ ಹೀಗೆ ಹೇಳಿದೆ :

ಇಳಿ ಗುಡಿಸು ಕೊಂಬು ವಟ್ರಸುಳಿ
ಯಳವಡಲೇ ತ್ವೈತ್ವವೋತ್ವ ವೌತ್ವಗಳೆಂಬೀ
ದಳಸರದಿಂ ಕಾಗುಣಿತದಿ
ತಿಳಿವಿಕೆಗೊಂದೆರಡು ಸೊನ್ನೆ ತೋರುವುದದರೊಳ್" [25]

'ಇಳಿ' ಎಂಬುದು ಅಕಾರದ ದೀರ್ಘ. 'ಗುಡಿಸು' ಎಂಬುದು ಇತ್ವ. 'ಕೊಂಬು' ಉತ್ವ. 'ವಟ್ರಸುಳಿ' ಎಂಬುದು ಋತ್ವ ಚಿಹ್ನೆ. ಏತ್ವವು ಎಕಾರದ ದೀರ್ಘ ಚಿಹ್ನೆ. 'ಐತ್ವ'ವು 'ಐ' ಎಂಬ ಚಿಹ್ನೆ. ಓತ್ವ ಔತ್ವಗಳು ಓಕಾರ ಔಕಾರಗಳ ದೀರ್ಘ ಚಿಹ್ನೆಗಳು. ಇವುಗಳ ಸೇರಿಕೆಯು ವ್ಯಂಜನಗಳೇ ಕಾಗುಣಿತಗಳು. ಒಂದು, ಎರಡು ಸೊನ್ನೆಗಳು ಬಿಂದು ವಿಸರ್ಗಗಳು.

---

[25] ಶ್ರೀನಿವಾಸಯ್ಯ—ಪದ್ಯಕಾವ್ಯ ವ್ಯಾಕರಣ, (೧೮೩೭) ಪದ್ಯ ೯.

ಸ್ವರ ಚಿಹ್ನೆಗಳನ್ನೂ ಅವುಗಳ ಹೆಸರುಗಳನ್ನೂ ಇಲ್ಲಿ ಪಟ್ಟಿಮಾಡಿದೆ

ಸ್ವರಾಕ್ಷರಗಳು	ಸ್ವರಚಿಹ್ನೆಗಳು	ಸ್ವರಚಿಹ್ನೆಗಳ ಹೆಸರುಗಳು	ಕಾಗುಣಿತ ಸ್ವರೂಪಗಳು
ಅ	ˇ	ತಲೆಕಟ್ಟು	ಕ
ಆ	ಾ	ಇಳಿ, ಅತ್ವದೀರ್ಘ, ಆತ್ವ (ದೀರ್ಘ)	ಕಾ
ಇ	ಿ	ಗುಡಿಸು (ಇತ್ವ)	ಕಿ
ಈ	ೀ	ಗುಡಿಸು ಇಳಿ (ಈತ್ವ)	ಕೀ
ಉ	ು	ಕೊಂಬು (ಉತ್ವ)	ಕು
ಊ	ೂ	ಕೊಂಬು ಇಳಿ (ಊತ್ವ)	ಕೂ
ಋ	ೃ	ವಟ್ಟೃಸುಳಿ (ಋಸುಳಿ, ಋತ್ವ)	ಕೃ
ೠ	ೄ	ವಟ್ಟೃಸುಳಿ ಇಳಿ (ೠತ್ವ)	ಕೄ
ಎ	ೆ	ಮೇಲೆಯ್ತು (ಎತ್ವ)	ಕೆ
ಏ	ೇ	ಮೇಲೆಯ್ತು ಇಳಿ (ಏತ್ವ)	ಕೇ
ಐ	ೈ	ಐತ್ವ	ಕೈ
ಒ	ೊ	ಒತ್ವ	ಕೊ
ಓ	ೋ	ಓತ್ವ	ಕೋ
ಔ	ೌ	ಔತ್ವ	ಕೌ

ಮೇಲಿನ ಸ್ವರ ಚಿಹ್ನೆಗಳ ಪರಿಶೀಲನೆಯಿಂದ, ಅತ್ವ ಹೊರತಾದ ಎಲ್ಲಾ ಸ್ವರಗಳ ಸಂಕೇತವಾಗಿ ನಾವು ಕಾಣುವುದು ? ಇಂತಹದೊಂದು ಕೊಕ್ಕೆಯನ್ನು. ಕೊಕ್ಕೆ ಎಂಬುದು ಎಳೆವ ಉಪಕರಣವಷ್ಟೆ ? ಕೆಲವೆಡೆ ಇಂತಹ ಎರಡು ಕೊಕ್ಕೆಗಳೂ ಇರುತ್ತವೆ ಅಥವಾ ಕೊಕ್ಕೆಗೆ ಒಂದು ಬಾಲ ಸೇರಿದಂತೆ ಇರುತ್ತದೆ. ನಾಗರಿಲಿಪಿಯಲ್ಲಿಯೂ ಅವರ್ಣ ಹೊರತಾದ ಸ್ವರಗಳ ಸಂಕೇತವಾಗಿ ಗುಣಿತಾಕ್ಷರಗಳಲ್ಲಿ ಈ ಕೊಕ್ಕೆಯೇ ಕೆಲಸ ಮಾಡುವುದನ್ನು ಕಾಣಬಲ್ಲೆವು. ಉದಾ :

कि की कु कू कृ के कै को कौ

ಕೈಬರೆಹದಲ್ಲಿ ಆತ್ವ, ಊತ್ವ, ಒತ್ವ, ಓತ್ವ, ಔತ್ವಗಳ ಕೊಕ್ಕೆಗಳಿಗೆ ಸುಳಿಯಿಲ್ಲದಿರುವುದುಂಟು; ಉತ್ವದ ಕೊಂಬಿನ ಸುಳಿ ಈಗ ಮಾಯವಾಗಿದೆ. ಬರೆವ ಅಕ್ಷರ ಸ್ವರೂಪದ ಶುದ್ಧತೆಯ ನಿರ್ಣಯಕ್ಕೆ ಅಚ್ಚಿನ ಅಕ್ಷರಗಳು ಒಳ್ಳೆಯ ಮಾರ್ಗದರ್ಶಕವಾಗುತ್ತವೆ ; ಏಕೆಂದರೆ ಆಕೃತಿಲಕ್ಷಣಗಳಿಂದ ಕನ್ನಡದಲ್ಲಿ ಮುದ್ರಣದ ಅಕ್ಷರಗಳೂ ಕೈಬರೆಹದ ಅಕ್ಷರಗಳೂ ಒಂದೇ ರೀತಿ. ಸದ್ಯಃ ಕಾಗುಣಿತರೂಪಗಳ ಲಾಕ್ಷಣಿಕ ವಿವೇಚನೆಯ ಕಡೆಗೆ ಬಗೆಹರಿಸುವ.

ಕಕಾರ. ಇಂದು 'ಕ' ಎಂಬ ಲಿಪಿಯ ಮುದ್ರಣರೂಪವು ಸರ್ವತ್ರ ಏಕ ಪ್ರಕಾರವಾಗಿದೆ. ಆದರೆ ಬರೆಯುವುದರಲ್ಲಿ ಕೆಲವರು ದೊಡ್ಡ ರೇಫದ ಮೇಲೆ ಚಿಕ್ಕದೊಂದು ರೇಫವನ್ನು ಬರೆವ ಪದ್ಧತಿಯೂ ಕಾಣುತ್ತಿದೆ. ಕೆಲವರು ಅಧ್ಯಾಪಕರು ಚಿಕ್ಕ ಮಕ್ಕಳಿಗೆ ಹೀಗೆ ಕಲಿಸುವುದೂ ಇದೆ. ಮಕ್ಕಳಿಗಾಗಿ ಬರೆದು ಪ್ರಕಟಿಸಿರುವ ಪುಸ್ತಕದಲ್ಲಿಯೂ ಇಂತಹ ರೂಪಗಳನ್ನೂ ಕಾಣಿಸಿ, ಚಿಕ್ಕ ಮಕ್ಕಳ ಸರಿಯಾದ ಅಭ್ಯಾಸದ ದಾರಿಯನ್ನೇ ತಪ್ಪಿಸುವ ಕೆಲಸವೂ ನಡೆದಿದೆ. ಈ ದ್ವಿರೇಫದ ಕಕಾರವು (ಸಂಜ್ಞಾ ಚಿತ್ರ ಸೂಚಿ ೧ ನೋಡಿ.) ಅಕ್ಷರದ ರೂಪಲಕ್ಷಣಕ್ಕೆ ಸರಿಯಾದುದಲ್ಲ. ಕಕಾರದಲ್ಲಿ ಅದರ ನಡುವಣ ಅಡ್ಡ ಗೆರೆಯೇ ತಿರುಳು. ಕನ್ನಡ–ಸಂಸ್ಕೃತ ಲಿಪಿಗಳೆರಡಕ್ಕೂ ಮೂಲವೆನಿಸುವ ಬ್ರಾಹ್ಮಿಯಲ್ಲಿ 'क' ಎಂಬುದು ಕೂಡಿಸುವ ಚಿಹ್ನೆಯಂತಿದೆ (ಸಂ. ೨ ನೋಡಿ). ನಾಗರಿಯಲ್ಲಿ ಇದೇ ಲಿಪಿ ಮಾರ್ಪಾಡಾಗಿ ಬಲಮಗ್ಗಲು ಮಲಗಿದಂತಿದೆ.

"ಞ" ಇದರ ಬಲಮಗ್ಗುಲನ್ನು ಮೇಲಕ್ಕೆ ಮಾಡಿ, ಅದರ ಎಡಗಡೆಗಿರುವ ಗೆರೆಯನ್ನು ತೆಗೆದು, ತಲೆಕಟ್ಟು ಕೊಟ್ಟರೆ, ಕನ್ನಡದ ಕಕಾರವಾಗುವುದು. ಈ ಕಕಾರದ ಒತ್ತಾಗಿ ಇಂದಿಗೂ "್ಕ" ಈ ರೂಪವಿದೆಯಲ್ಲದೆ ರೇಫ (ರ) ಒತ್ತಾಗಿಲ್ಲ. ಇದರಿಂದ ಇಂದಿನ ಮುದ್ರಣದಲ್ಲಿ ಬರುವ ರೂಪವೇ ಶುದ್ಧವಾದ ಕಕಾರವೆಂದು ನಿರ್ಧಾರವಾಗುತ್ತದೆ.

ಇಳಿ-ಗುಡಿಸು-ಕೊಂಬುಗಳು: ಈ ಸ್ವರಚಿಹ್ನೆಗಳ ದೀರ್ಘರೂಪಗಳಲ್ಲಿ ಇಂದು ಎಲ್ಲ ಕಡೆ ಬಹಳ ತಪ್ಪುಗಳಾಗುತ್ತಿವೆ. ಈ ತಪ್ಪುಗಳು ಮುದ್ರಣದಲ್ಲಿಯೂ ಒಳಹೊಕ್ಕಿವೆ, ಲಕ್ಷಣಗ್ರಂಥಗಳ ಮತ್ತು ಶಬ್ದಕೋಶಗಳ ಪ್ರಕಟಣೆಗಳಲ್ಲಿಯೂ ಕುಣಿದಾಡುತ್ತಿವೆ. ಆದರೆ ಇಷ್ಟು ಮಾತ್ರದಿಂದ ಆ ಪ್ರಯೋಗಗಳನ್ನು ಸಾಧುವೆನ್ನಲಾಗುವುದಿಲ್ಲ. ಮುಖ್ಯವಾಗಿ ಝು, ಮು, ಯು— ಎಂಬೀ ಅಕ್ಷರಗಳ ಆ ತ್ವ-ಈತ್ವ-ಊತ್ವ-ಓತ್ವ ರೂಪಗಳಾವುವು ? ಎಂಬುದನ್ನು ಪರಿಶೀಲಿಸಬೇಕು. ಇಲ್ಲಿ ಈಗ 'ಮು' ಕಾರವೊಂದನ್ನೆ ತೆಗೆದುಕೊಂಡು ವಿವೇಚಿಸಿದರೆ ಸಾಕು. ಇದರ ನಿಯಮ ಝುಕಾರ, ಯಕಾರಗಳಿಗೂ ಅನ್ವಿತವಾಗುವುದು. ಮಾತು-ಮೊತು-ಮೀತು ಈ ಮೂರು ಬಗೆಗಳಲ್ಲಿ ಕೊನೆಯದು ವ್ಯವಹಾರದಲ್ಲಿಲ್ಲವುದರಿಂದ ಅದು ಸರಿಯಲ್ಲವೆಂದು ಮೊದಲಾಗಿಯೇ ನಿರ್ಣಯಿಸಬಹುದು. ಆದರೆ 'ಮಾ' ಮತ್ತು 'ಮೊ' ಇವೆರಡರಲ್ಲಿ ಯಾವುದು ಸರಿ ? ಮತ್ತು ಏಕೆ ? ಮಿಾಸೆ-ಮಿೂಸೆ-ಮೀಸೆ ಈ ಮೂರರಲ್ಲಿ ಶುದ್ಧವಾದುದು ಯಾವುದು ? ಮತ್ತು ಏಕೆ ? ಮೂಗು-ಮೂಗು ಇವೆರಡರಲ್ಲಿ ಸರಿಯಾದುದು ಯಾವುದು ? ಮತ್ತು ಏಕೆ ? ಎಂಬೀ ವಿವರಣೆ ಪ್ರತಿಯೊಬ್ಬನಿಗೂ ಬೇಕು.

"ಅಕ್ಷರಗಳ ಲಿಪಿ ರೂಪವು ಹೇಗಿದ್ದರೇನು ? ಒಟ್ಟಿನಲ್ಲಿ ಸರಿಯಾಗಿ ಓದಿದರಾಯಿತು, ಓದಿ ಅರ್ಥ ಮಾಡಿಕೊಂಡರೆ ಸಾಕು. ಮಿಾ, ಮಿೂ, ಮೀ ಈ ಮೂರನ್ನೂ ಒಂದೇ ವಿಧವಾಗಿ ಉಚ್ಚಾರಣೆ ಮಾಡುತ್ತೇವೆ. ಹೀಗಿರುವಾಗ ಅವುಗಳ ರೂಪನಿರ್ಣಯದ ವಾದವೇಕೆ ?" ಎಂದು ಪ್ರಶ್ನಿಸುವ ನಿರಂಕುಶರೂ ಇರುತ್ತಾರೆ. ಅಂಥವರಿಗಾಗಿ ಈ ನಿರೂಪಣೆಯಲ್ಲ. ಮಾತಿನಲ್ಲಿ, ಬರೆವಣಿಗೆಯಲ್ಲಿ, ಬರೆವಣಿಗೆಯ ಲಿಪಿಸ್ವರೂಪದಲ್ಲಿ ಕೂಡ, ಸರಿಯಾವುದು ? ಸರಿಯಲ್ಲದುದು ಯಾವುದು ? ಎಂಬುದನ್ನು ತಿಳಿಯಲು ಹಾಗೂ ತಿಳಿದು

ವರ್ತಿಸಲು ಅಪೇಕ್ಷಿಸುವವರಿಗಾಗಿಯೇ ಇಂತಹ ಶಾಸ್ತ್ರೀಯ ವಿಚಾರಗಳಿರುತ್ತವೆ—ಎಂಬುದನ್ನು ಮೊದಲು ತಿಳಿದುಕೊಳ್ಳಬೇಕಾಗುತ್ತದೆ.

ಗುಣಿತವ ದೀರ್ಘರೂಪಗಳಲ್ಲಿ ಮೇಲೆ ಕಾಣಿಸಿದಂತೆ ಎರಡು ಅಥವಾ ಮೂರು ರೂಪಗಳಿವೆ. ಕಿಟ್ಟೆಲರ ಕೋಶದಲ್ಲಿ "ಮಿಾ" ಹೀಗಿದೆ. ದಿ. ತೀ. ನಂ. ಶ್ರೀಯವರ ಕಾವ್ಯಮಿಾಮಾಂಸೆಯಲ್ಲಿಯೂ 'ಮಿಾ" ಹೀಗಿದೆ. ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶದಲ್ಲಿ ಅದು–"ಮೀ" ಹೀಗೆ ಮುದ್ರಿತವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನಲ್ಲಿ "ಅಮಿಾಕ್ಷೆ, ಅಮಿಾನ, ಅಮಿಾರ"-ಎಂದೇ ಮುದ್ರಿತವಾಗಿದೆ. ಅರ್ಥದ ಭಾಗದಲ್ಲಿ 'ಅಮೀಕ್ಷೆ' ಎಂತಲೂ ಇದೆ. ಇದರಿಂದ ಈ ಗ್ರಂಥದಲ್ಲಿಯೂ ನಿರ್ದಿಷ್ಟವಾಗಿ ಯಾವ ನಿಯಮವನ್ನೂ ಈ ಲಿಪಿರೂಪ ವಿಷಯದಲ್ಲಿ ಅನುಸರಿಸಿದಂತಿಲ್ಲವೆಂಬ ಸಿದ್ಧವಾಗುತ್ತದೆ. ಇವುಗಳ ಶುದ್ಧರೂಪದ ಸಕಾರಣ ನಿರ್ಣಯಕ್ಕಾಗಿ ತಿಳಿದುಕೊಳ್ಳಬೇಕಾದ ಅಂಶಗಳಿವು :

ಕನ್ನಡದಲ್ಲಿ ದೀರ್ಘ ಸ್ವರಗಳು ಆ, ಈ, ಊ, ೠ, ಏ, ಐ, ಓ, ಔ—ಎಂದು ಎಂಟು ಬಗೆಯವಾದರೂ ದೀರ್ಘಸ್ವರ ಚಿಹ್ನೆಗಳು ಮೂರೇ. ಅವು ಅಕಾರದ ದೀರ್ಘ (ಆತ್ವ), ಇಕಾರದ ದೀರ್ಘ (ಈತ್ವ) ಮತ್ತು ಉಕಾರದ ದೀರ್ಘ (ಊತ್ವ)–ಎಂದು. ಆತ್ವ, ಈತ್ವ, ಊತ್ವಗಳಿಗೆ ಆಯಾ ಸ್ವರ ಚಿಹ್ನೆಗಳನ್ನು ಬಳಸುವುದೇ ಸಾಧು. ಉಳಿದವಕ್ಕೆ ತಮ್ಮದೇ ಆದ ದೀರ್ಘ ಚಿಹ್ನೆಯಿಲ್ಲ. 'ೠ' ದೀರ್ಘದಲ್ಲಿ ಉಕಾರದ ದೀರ್ಘ ಬಳಕೆಯಾಗುವುದು. ಇನ್ನುಳಿದವಕ್ಕೆ ಎತ್ವ ಸಹಿತ ಇವುಗಳಲ್ಲಿ ಒಂದನ್ನೋ ಎರಡನ್ನೋ ಕೊಡುವುದು ಕ್ರಮ. ಉದಾ ! 'ಕೇ' ಇಲ್ಲಿ ಎತ್ವಕ್ಕೆ ಇಕಾರದ ದೀರ್ಘ ಚಿಹ್ನವಿದೆ. 'ಕೈ' ಎಂಬಲ್ಲಿ ಎತ್ವ ಐತ್ವಗಳಿವೆ. 'ಕೋ' ಎಂಬಲ್ಲಿ ಎತ್ವಕ್ಕೆ ಉಕಾರದೀರ್ಘ ಇಕಾರದೀರ್ಘಗಳಿವೆ. 'ಕೌ' ಎಂಬಲ್ಲಿ ಔಕಾರದ ಸ್ವತಂತ್ರ ದೀರ್ಘ ಚಿಹ್ನೆಯಿದೆ.

ಇದರಿಂದ 'ಮಾ' ಎಂಬಲ್ಲಿ ಅಕಾರದ ದೀರ್ಘಚಿಹ್ನೆ ಕೊಡುವುದು ಸರಿಯಾದುದು. 'ಮೂ' ಎಂದು ಬರೆದಾಗ ಅಕಾರಕ್ಕೆ ಉಕಾರದ ದೀರ್ಘವನ್ನು ಕೊಟ್ಟಂತಾಗುವುದರಿಂದ ಅಶುದ್ಧವಾಗುವುದು. ಮಿಾ, ಮೀ, ಮೀ—

ಈ ಮೂರರಲ್ಲಿ ಇಕಾರಕ್ಕೆ ಇಕಾರದ ದೀರ್ಘವನ್ನೇ ಕೊಟ್ಟಿರುವ ('ಮೀ' ಎಂಬ) ರೂಪವೇ ಸರಿಯೆನಿಸುವುದು.† **'ಮೂ'** ಎಂಬುದು ಸರಿ; **'ಮೂ'** ಎಂಬುದು ಅಶುದ್ಧದ ಬರೆಹ. ಹೀಗೆಯೇ **ಕೊ, ನೊ**–ಇತ್ಯಾದಿಗಳೂ ಅಶುದ್ಧಗಳಾಗಿವೆ.

ಕೆಲವು ಕಾಗುಣಿತಗಳಿಗೆ ಗುಡಿಸು (ಇತ್ವ) ಕೊಡುವುದರಲ್ಲಿ ವಿಶಿಷ್ಟವೆನಿಸುವ ಕ್ರಮಗಳಿವೆ :—**ಖಿ, ಘಿ, ಚಿ, ಛಿ, ಟಿ, ಪಿ, ಬಿ, ಮಿ, ಯಿ,** ಇವು ಅಂಥವು. ತಲೆಕಟ್ಟನ್ನು ಕೊಡುವ ಸ್ಥಳದಲ್ಲೆ ಎಡಕ್ಕೆ ಸುಳಿಯಾಗಿ ಗುಡಿಸು ಕೊಡುವ ಕ್ರಮವು ಮೇಲಿನವುಗಳಿಗೆ ಅನ್ವಿತವಾಗುವುದು. ತಲೆಕಟ್ಟು ಕೊಡಲು ಸ್ಥಳವಿಲ್ಲದ ಜ, ಝ, ಣ, ಜ, ಟ ಎಂಬಿವಕ್ಕೆ ಗುಡಿಸು ಚಿಹ್ನೆ ಆಯಾ ಅಕ್ಷರದ ಬಲಗಡೆಯ ಮೇಲಿನ ಭಾಗದಲ್ಲಿ **ಚಿಗುರೊಡೆದ** ಮಾಳ್ಕೆಯಲ್ಲಿ ಕಾಣಿಸುವುದು. ಉದಾ : ಜಿ, ಝಿ, ಣಿ, ಜಿ, ಟಿ.

ಟಿ : ಮುದ್ರಣದಲ್ಲಿ ಬರುವ ಇತ್ವದ ಟಕಾರವು ಕೈಬರೆಹದ ರೂಪದಂತಿಲ್ಲ. ಕೈಬರೆಹದಲ್ಲಿ ಟಕಾರದ ಕೊನೆಗೆ ಗುಡಿಸು ಬರುತ್ತದೆ. ಮುದ್ರಣದಲ್ಲಿ ಈ ಬಗೆಯ ಮೊಳೆಗಳೂ ಇವೆ. ಆದರೆ ಹೆಚ್ಚಾಗಿ ಬಳಕೆಯಲ್ಲಿರುವ ಅಚ್ಚುಮೊಳೆಗಳಲ್ಲಿ ಟಕಾರದ ಪ್ರಾರಂಭದಲ್ಲೇ ಎಡಕ್ಕೆ ಗುಡಿಸು ಕೊಟ್ಟಿರುವ ರೂಪಗಳಿರುತ್ತವೆ. ಹಳೆಯ ತಾಳೆಯೋಲೆಗಳಲ್ಲಿ ಹೀಗೆ (**ಚಿತ್ರ ೩**) ಬರೆದಿರುವವೂ ಸಿಗುತ್ತವೆ. ಈಗಿನ ಕೆಲವರು (**ಚಿತ್ರ ೪ ನೋಡಿ.**) ಹೀಗೂ ಬರೆಯುತ್ತಾರೆ. ಇದು ಸರಿಯಲ್ಲ. ಏಕೆಂಬುದಕ್ಕಾಗಿ ಕನ್ನಡ ಟಕಾರದ ರೂಪನಿಷ್ಪತ್ತಿಯನ್ನು ಪರಿಶೀಲಿಸಬೇಕು. ಕನ್ನಡದ 'ಟ' ಎಂಬ ಅಕ್ಷರವು ಸಂಸ್ಕೃತದ ಎರಡು ಟಕಾರಗಳನ್ನು ಎದುರು ಬದುರಾಗಿ ಜೋಡಿಸಿದಂತಿದೆ. (**ಚಿತ್ರ-೫**). ಆದುದರಿಂದ ಗುಡಿಸು ಕೊಡುವಾಗ ಅದಕ್ಕೆ ತಲೆಕಟ್ಟು ಕೊಡುವ ಸ್ಥಾನದಲ್ಲಿ ಕೊಡುವುದೇ ಶುದ್ಧವೆನಿಸುವುದು.

---

† ದಿ. ತೀ. ನಂ. ಶ್ರೀಯವರು ಈತ್ವ ಚಿಹ್ನೆಯುಳ್ಳ 'ಮೀ' ಎಂಬ ರೂಪವೇ ನಿರ್ಬಾಧವಾದುದೆಂದು ವೈಯಕ್ತಿಕವಾಗಿ ನಾನು ಚರ್ಚಿಸಿದಾಗ ನನ್ನೊಡನೆ ಒಪ್ಪಿದ್ದರು.

ಅತ್ವಯುಕ್ತವಾದ ಗುಣಿತಕ್ಕೆ ಕೊಂಬು ಕೊಟ್ಟಾಗ ಅದಕ್ಕೆ ಉತ್ವ ಬರುವುದು. ಈ ಕೊಂಬನ್ನು ಕೊಡುವುದು ಆಯಾ ಅಕ್ಷರದ ಬಲಗಡೆಗೆ. ವಕಾರಕ್ಕೆ ಮಾತ್ರ ಅದರ ಹೊಕ್ಕುಳದಿಂದ ಕೊಂಬು ಕೊಡಬೇಕು. ಬಲಗಡೆಯಿಂದ ಕೊಟ್ಟರೆ ಅದು "ಮು" ಕಾರವಾಗುವುದರಿಂದ 'ವ'ಕಾರಕ್ಕೆ ಮಾತ್ರ ಈ ವ್ಯವಸ್ಥೆಯಿದೆ. ಆದರೆ 'ಪ'ಕಾರಕ್ಕೂ ಹೊಕ್ಕುಳದಿಂದ ಕೊಂಬು ಕೊಡುವ ರೂಢಿ ಬಂದಿದೆ. ಹಲವರ ಕೈಬರಹದಲ್ಲಿ ಮತ್ತು ಕೆಲವು ಅಚ್ಚಿನ ಮೊಳೆಗಳ ರೂಪದಲ್ಲಿ ಈ ಎರಡನ್ನೂ ಕಾಣುತ್ತೇವೆ. ಹೀಗೆ 'ಪ'ಕಾರಕ್ಕೆ ಹೊಕ್ಕುಳದಿಂದ ಕೊಂಬು ಕೊಡುವುದರಲ್ಲಿ ಔಚಿತ್ಯ ಕಾಣುವುದಿಲ್ಲ. 'ಹ' ಕಾರಕ್ಕೆ ಮತ್ತು 'ಬ' ಕಾರ 'ಭ'ಕಾರಗಳಿಗೆ ಅಡಿಯಿಂದ (ಹೊಕ್ಕುಳದಿಂದ) ಕೊಂಬು ಕೊಡುವುದು ಅಶುದ್ಧ ಲಿಪಿಯ ಪ್ರದರ್ಶನವೆನ್ನಬಹುದು.

ವಟ್ಟೃಸುಳಿ †. ಋತ್ವದ ಸ್ವರಚಿಹ್ನೆಯನ್ನು ಕನ್ನಡ ಸೀಮೆಯ ಕೆಲವೆಡೆ "ವಟ್ಟೃಸುಳಿ" (ವಟ್ರಸುಳಿ) ಎನ್ನುತ್ತಾರೆ. ಉಳಿದೆಡೆಗಳಲ್ಲಿ ಇದನ್ನು ಋವೊತ್ತು, ಋಸುಳಿ—ಎನ್ನುವರು. 'ವಟ್ರ' ಎಂಬುದು 'ವೃತ್ತ'ದ ಅಪಭ್ರಂಶವೆಂದೂ 'ವೃತ್ತ + ಸುಳಿ' ಇದರ ಸ್ವರೂಪವಾದುದರಿಂದ ಈ ಹೆಸರು ಬಂದಿರಬೇಕೆಂದೂ ಕೆಲವರ ಮತವಿದೆ. ಆದರೆ ಇದಕ್ಕೆ ತಕ್ಕ ಸಮರ್ಥನೆಯಿಲ್ಲ. ಇದು ವೃತ್ತದ-ಅಂದರೆ, ಸೊನ್ನೆಯ ಅಂಶವಾಗಿದ್ದರೆ ಸೊನ್ನೆಯ ಉಚ್ಚಾರಣೆಯೂ ಇದಕ್ಕೆ ಬರುತ್ತಿತ್ತು; ಆದರೆ ಬಂದಿಲ್ಲ.

ಇದರಿಂದ ಇದು 'ವಟ್ರಸುಳಿ' ಅಲ್ಲ. 'ವಟ್' ಎಂಬುದೇನೇ ಇರಲಿ 'ರ' ಎಂಬುದರ ಸುಳಿಯೂ ಅಲ್ಲ. ಇದು ಋಕಾರದ ಸುಳಿ. 'ಋ' ಎಂಬ ಅಕ್ಷರದ ಪ್ರಾರಂಭದ ಬಿಲ್ಲಿನ ಕೆಳಗಿನ ಖಂಡವಿದು. ಇದನ್ನು 'ಋವೊತ್ತು' ಎನ್ನುವೆವಾದರೂ ಇದು ಒತ್ತಲ್ಲ. ಒತ್ತಿನಂತೆ ಇದ್ದರೂ ನಾವು ಒತ್ತದೆ ಇದನ್ನು ಉಚ್ಚಾರಣೆ ಮಾಡುತ್ತೇವೆ. ವಿಕೃತ, ಪಿತೃದೇವ, ಸವಿತೃ—ಎಂಬಲ್ಲೆಲ್ಲ ಒತ್ತಿ ಉಚ್ಚಾರಣೆ ಮಾಡುವುದಿಲ್ಲ. ಸ್ವರಚಿಹ್ನೆ ಒತ್ತಲ್ಲ. (ಒತ್ತು ಎಂಬುದು ವ್ಯಂಜನ

† ಶರಣ ಸಾಹಿತ್ಯ-ರಜತಸಂಚಿಕೆ (೧೯೬೩) ಯಲ್ಲಿ "ವಟ್ಟೃಸುಳಿ" ಎಂಬ ನನ್ನ ಲೇಖನವನ್ನು ನೋಡಿ. ಅನುಬಂಧದಲ್ಲಿ ಇದನ್ನು ಕೊಡಲಾಗಿದೆ.

ಚಿಹ್ನೆ.) ಇದು "ವಟ್ಟ + ಋ ಸುಳಿ". ಈ ಸುಳಿ ಅತ್ವವನ್ನೊಂದಿದ ಗುಣಿತಾಕ್ಷರಕ್ಕೆ ಮಾತ್ರ ಅದರ ಹೊರಗೆ 'ವಟ್ಟ'ವಾಗಿ ನಿಲ್ಲುತ್ತದೆ. ವ್ಯಾಪಾರದಲ್ಲಿ 'ವಟ್ಟ' (Extra)ಎಂಬುದು ಬೆಲೆಯಿಲ್ಲದೆ ಸಲ್ಲುವ ಹೆಚ್ಚಿನದು. ಬರೆವಣಿಗೆಯಲ್ಲಿಯೂ ಇದು ಇದೇ ಅರ್ಥದಲ್ಲಿ ಪ್ರಯೋಗಗೊಳ್ಳುತ್ತದೆ.

ಎತ್ವ : (ಎಯ್ತ್ತ, ಮೇಲೆಯ್ತ್ತ). ಎಕಾರದ ಹೊಕ್ಕುಳ ಸುಳಿಯ ಚಿಹ್ನೆ ಎತ್ವವೆನಿಸುತ್ತದೆ. ತಲೆಕಟ್ಟಿನ ತುದಿಗೆ ಈ ಸುಳಿಯನ್ನು ಜೋಡಿಸಿದಾಗ ಎತ್ವದ ಗುಣಿತಾಕ್ಷರವಾಗುತ್ತದೆ ಉದಾ : ಕ-ಕೆ.

ತಲೆಕಟ್ಟಿಗೆ ಸ್ಥಾನವಿಲ್ಲದವುಗಳಿಗೆ ಮತ್ತು ತಲೆಕಟ್ಟು ಒಳಹೊಕ್ಕಿರುವ 'ಜ' ಎಂಬ ಅಕ್ಷರಕ್ಕೆ ಎತ್ವ ಬಂದಾಗ, ಅರೆಕೊಂಬು ಅಥವಾ ಇಡಿಕೊಂಬು ಕೊಟ್ಟು ಆ ಕೊಂಬಿನ ತುದಿಗೆ ತಲೆಕಟ್ಟು ಕೊಟ್ಟು ಆ ಮೇಲೆ ಎತ್ವವನ್ನು ಕೊಡಬೇಕಾಗುತ್ತದೆ. ಉದಾ :— ಙೆ, ಞೆ, ಣೆ, ಜೆ, ಬೆ.

ತಲೆಕಟ್ಟಿಲ್ಲದಿದ್ದರೂ ತಲೆಕಟ್ಟು ಕೊಡಲು ಸ್ಥಾನವಿರುವ ಅಕ್ಷರಗಳ ಎತ್ವಕ್ಕೆ ಉದಾಹರಣೆಗಳು:—ಘೆ. ಜೆ, ಟೆ, ಬೆ, ಲೆ.

ಇವುಗಳಲ್ಲಿ ಎರಡು ಅಕ್ಷರಗಳಿಗೆ ಮುದ್ರಣದಲ್ಲಿ ಬೇರೆ ಕ್ರಮಗಳಿವೆ :—ಟೆ, ಣೆ. ಇವನ್ನು ಬರೆವ ಕ್ರಮದಲ್ಲಿ ಟಕಾರವು ಪೂರ್ಣವಾದ ಮೇಲೆ ತಲೆಕಟ್ಟು ಎತ್ವ ಕೊಡುವುದೂ ಣಕಾರ ಪೂರ್ಣವಾದ ಮೇಲೆ ಅದಕ್ಕೆ ಕೊಂಬು ತಲೆಕಟ್ಟು ಎತ್ವ ಕೊಡುವುದೂ ರೂಢಿಯಲ್ಲಿದೆ.

ಎಕಾರದ ಮುಂದಿನ ಏ,ಐ,ಒ,ಓ,ಔ-ಎಂಬ ಸ್ವರಗಳಲ್ಲಿ ಏ,ಒ,ಓ,- ಎಂಬಿವುಗಳ ಅಂಶವನ್ನು ಗುಣಿತಾಕ್ಷರಗಳಿಗೆ ಸಂಕೇತವಾಗಿ ಆಯ್ದುಕೊಂಡಂತಿಲ್ಲ.

ಎತ್ವಕ್ಕೆ ಈತ್ವ ಸೇರಿ ಏತ್ವವಾಗಿದೆ—**ಕೇ.**

ಎತ್ವಕ್ಕೆ ಊತ್ವ ಚಿಹ್ನೆ ಸೇರಿ ಒತ್ವವಾಗಿದೆ—**ಕೊ.**

ಒತ್ವದ ಗುಣಿತಾಕ್ಷರಕ್ಕೆ ಈತ್ವ ಚಿಹ್ನೆ ಸೇರಿ ಓತ್ವವಾಗಿದೆ—**ಕೋ.**†

---

† ಸಂಧ್ಯಕ್ಷರ ಲಕ್ಷಣಗಳಾಗಿರುವ—ಅವರ್ಣಕ್ಕೆ ಇವರ್ಣ ಸೇರಿ ಏಕಾರವಾಗುವುದು, ಅವರ್ಣಕ್ಕೆ ಉವರ್ಣ ಸೇರಿ ಓಕಾರವಾಗುವುದು—ಎಂಬವು ಲಿಪಿರೂಪನಿಷ್ಪತ್ತಿಗೆ ಅನ್ವಯಿಸುವುದಿಲ್ಲ.

ಸಹಜವಾಗಿ ಕೊಂಬು ಇರತಕ್ಕ ಝ,ಮ,ಯ-ಎಂಬಿವಕ್ಕೆ **ಒತ್ವ** ಬಂದಾಗ ಆ ಸಹಜದ ಒಂದು ಕೊಂಬನ್ನು ಲೋಪಿಸುವರು.

ಉದಾಹರಣೆ : **ಝೊ, ಮೊ, ಯೊ.**

ಆದರೆ '**ಘ**' ಎಂಬುದು 'ಅರೆಕೊಂಬು' ಉಳ್ಳುದಾದುದರಿಂದ ಇದನ್ನು ಒತ್ವಯುಕ್ತವಾಗಿ ಬರೆವಾಗ ಈ ಅರೆಕೊಂಬು ಲೋಪವಾಗುವುದಿಲ್ಲ—**ಘೋ.**

ಐತ್ವ : 'ಐ' ಎಂಬ ಅಕ್ಷರವನ್ನು ಎಡಕ್ಕೆ ಒರಗಿಸಿ ಬರೆದು, ಅದರ ಪೂರ್ವಾರ್ಧವನ್ನು ತೆಗೆದುಕೊಂಡರೆ ಐವೊತ್ತಿನ ರೂಪ ಸಿಗುವುದು. ಋ ಸುಳಿ ಚಿಹ್ನೆಯನ್ನು 'ಋ ವೊತ್ತು' ಎನ್ನುವಂತೆ ಇದನ್ನೂ 'ಒತ್ತು' ಎನ್ನುವರಲ್ಲದೆ, ಇದು ಒಂದು ಒತ್ತಲ್ಲ. ಇದೂ ಸ್ವರಚಿಹ್ನೆ-ಇದೊಂದು ದೀರ್ಘ ಸ್ವರಚಿಹ್ನೆ. ಈ ಐತ್ವವನ್ನು ಎತ್ವಯುಕ್ತ ಗುಣಿತಾಕ್ಷರಕ್ಕೆ ಮಾತ್ರ ಕೊಡಬೇಕು. 'ರೂಪಾಯಿ' ಎಂಬುದನ್ನು 'ರೂಪ್ಯಾ' ಎಂದು ಬರೆಯಬಾರದು. ಪಾಣಿ, ಹಸ್ತ, ಕರ–ಎಂಬ ಸಂಸ್ಕೃತಾರ್ಥವುಳ್ಳ ಕನ್ನಡದ ಶಬ್ದವಾಗಿರುವ "**ಕೈ**" ಎಂಬುದನ್ನು '**ಕಯ್**' ಎಂದು ಉಚ್ಚಾರಣೆ ಮಾಡಬೇಕು. 'ಕೆಯ್' ಎಂಬುದು **ಬತ್ತದ ಸಸಿ.**

ಸಂಸ್ಕೃತದ ಲಿಪಿಯಲ್ಲಿ ಐತ್ವಕ್ಕೆ ಎರಡು ಕೊಕ್ಕೆಗಳಿರುತ್ತವೆ (**कै**–ಹೀಗೆ). "ಕನ್ನಡ-ತೆಲುಗು ರೂಪಗಳಲ್ಲಿ ಐ ಸೂಚಕವಾದ ೆ ಈ ಎರಡು ಚಿಹ್ನೆಗಳಲ್ಲಿ ಒಂದು ಮೆಲ್ಲಗೆ ಕೆಳಗಿಳಿದಿದೆ. ಇದರ ಪರಿಣಾಮವಾಗಿ ಈಗ ತೆಲುಗಿನಲ್ಲಿ ಒಂದು ಮೇಲೆ ಎಡಗಡೆಯಲ್ಲಿಯೇ ಉಳಿದು,ಮತ್ತೊಂದು ಅಡಿಗೆ ಬಂದು ಕುಳಿತಿದೆ '**కై**' ಹೀಗೆ. ಕನ್ನಡದಲ್ಲಿ ಒಂದು ಮೇಲೆ ಬಲಗಡೆ ಸರಿದು, ಮತ್ತೊಂದು ಅಪ್ರದಕ್ಷಿಣವಾಗಿ ಕೆಳ ಕೆಳಗಿಳಿದು, ಈಗ ಬಲಗಡೆಯ ಕೆಳಮೂಲೆಗೆ ಬಂದು ಬಿದ್ದಿದೆ '**ಕೈ**'ಹೀಗೆ. (ಇದರ ಕೆಳಗಿನ ಗುರುತನ್ನೂ **ಕೃ** ಎಂಬುದರಲ್ಲಿ ನಾವು ಬರೆಯುವ ಋಕಾರ ಚಿಹ್ನವನ್ನೂ ಭೇದಿಸುವುದಕ್ಕಾಗಿ ಮೊದಲಿನದಕ್ಕೆ ಒಂದು ಗೋಣಸನ್ನು ಇತ್ತೀಚೆ ಹೆಚ್ಚಿಸಿದ್ದೇವೆ–**ಕೈ** ಹೀಗೆ.)" ಹೀಗೆಂದು ಒಬ್ಬರು ವಿದ್ವಾಂಸರು ವಿವರಿಸಿ, ಎರಡು ಏಕಾರ ಚಿಹ್ನೆಗಳಿಂದ ಐಕಾರವಾಗುವುದೆಂದು ತಿಳಿಸಿದ್ದಾರೆ.[26]

---

26 ಸೇಡಿಯಾಪು ಕೃಷ್ಣಭಟ್ಟ—ಕನ್ನಡ ವ್ಯಾಕರಣದ ಕೆಲವು ಸಮಸ್ಯೆಗಳು (ಪ್ರಥಮ ಭಾಗ)–ಕನ್ನಡ ವರ್ಣಗಳು (೧೯೫೪), ಪುಟ ೪೯.

ಐವೊತ್ತಿನ ಗೋಣಸು ಇತ್ತೀಚೆಗಿನದಲ್ಲ. ಮೂರು ನಾಲ್ಕು ಶತಮಾನಗಳ ಹಿಂದಿನ ಓಲೆಪ್ರತಿಗಳಲ್ಲಿಯೂ ಕಾಣುತ್ತಿದೆ. ಆದುದರಿಂದ ಕನ್ನಡದ ಐತ್ವಚಿಹ್ನೆ ಐತ್ವದ ಒಂದು ಅಂಶವೇ ಆಗಿದೆಯೆಂದು ನಿರ್ಣಯವಾಗುವುದು.

ಔತ್ವ—ಔತ್ವವನ್ನು ಅತ್ವಾನ್ವಿತ ಅಕ್ಷರದ ತಲೆಕಟ್ಟಿನ ಮೇಲುಗಡೆ ಕೊಡುವುದು ಸಾಮಾನ್ಯ ಕ್ರಮ. ಸಹಜವಾಗಿ ಕೊಂಬುಳ್ಳ ಝ,ಮ, ಯಗಳಿಗೂ ಅರೆಕೊಂಬುಳ್ಳ ಘಕಾರಕ್ಕೂ ಇರುವ ಸಹಜವಾದ ಕೊಂಬಿನ ತುದಿಗೆ ತಲೆಕಟ್ಟಿನೊಡನೆ ಔತ್ವವನ್ನು ಕೊಡುವುದು ವಾಡಿಕೆ.

ಉದಾ : ಝೌ, ಮೌ, ಘೌ, ಹೀಗೆ.

ಒತ್ತುಗಳು—

ಕನ್ನಡದಲ್ಲಿ ಒತ್ತುಗಳಿಂದ ಕೂಡಿದ ಅಕ್ಷರಗಳನ್ನು ಒತ್ತಕ್ಕರ, ದಡ್ಡಕ್ಕರ, ದ್ವಿತ್ವಾಕ್ಷರ, ಸಂಯುಕ್ತಾಕ್ಷರ-ಎನ್ನುವರು. ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಸೇರಿದಾಗ ಇಂತಹ ಅಕ್ಷರಗಳಾಗುತ್ತವೆ. ಈ ಒತ್ತಿನ ಚಿಹ್ನೆಗಳೆಲ್ಲವೂ ಆಯಾ ವ್ಯಂಜನಗಳ ಪೂರ್ಣ ಅಥವಾ ಆಂಶಿಕ ಭಾಗಗಳಾಗಿವೆ. ಒತ್ತುಗಳಿವು :—

್ಕ ್ಖ ್ಗ ್ಘ ್ಙ
್ಚ ್ಛ ್ಜ ್ಝ ್ಞ
್ಟ ್ಠ ್ಡ ್ಢ ್ಣ
್ತ ್ಥ ್ದ ್ಧ ್ನ
್ಪ ್ಫ ್ಬ ್ಭ ್ಮ
್ಯ ್ರ ್ಲ ್ವ ್ಶ ್ಷ ್ಸ ್ಹ ್ಳ
್ಱ ್ೞ.

ಈ ಒತ್ತುಗಳು ನಾಲ್ಕು ಬಗೆಯವಾಗಿ ಗೋಚರಿಸುತ್ತವೆ—

೧. ಕಾಗುಣಿತದ ಪೂರ್ಣ ರೂಪಗಳೇ ಒತ್ತುಗಳ ಚಿಹ್ನೆಗಳಾಗಿರುವವು:—

ಖ, ಙ, ಜ, ಞ, ಟ, ಣ, ಬ, ಱ, ೞ—ಇವು.

೨. ತಲೆಕಟ್ಟನ್ನು ಮಾತ್ರ ಛೇದಿಸಿರುವ ರೂಪಗಳಿವು :

ಕ' ,' ಚ' ಛ' ಝ' ಠ' ಡ' ಢ' ಥ' ಬ' ಧ' ಭ' ಶ' ಹ' ಳ

೩. ತಲೆಕಟ್ಟನೊಡನೆ ಅದಕ್ಕೆ ಅಂಟಿರುವ ಭಾಗವನ್ನು ಕಳೆದುಕೊಂಡಿರುವ ರೂಪವುಳ್ಳವು :—

೩ (ಷ), ೨ (ಪ), ೩ (ಫ) ೨ (ಷ), ೨ (ಸ) †

೪. ಮೂಲದ ಛಾಯೆಯನ್ನೆ ಕಳೆದುಕೊಂಡಂತೆ ಭಾಸವಾಗುವ ರೂಪವುಳ್ಳವು

್ತ (ತ), ್ಸ (ಸ), ್ಮ (ಮ), ್ಯ (ಯ), ್ರ (ರ), ್ಲ (ಲ).

ತ, ಸ, ಮ, ಯ, ರ, ಲ— ಎಂಬ ಅಕ್ಷರಗಳ ಒತ್ತುಗಳು ತಮ್ಮ ಮೂಲದ ಛಾಯೆಯನ್ನು ಕಳೆದುಕೊಂಡಿವೆಯೆ? ಒಬ್ಬರು ವಿದ್ವಾಂಸರು ಇದನ್ನೆ ಸಮರ್ಥಿಸಿ ಹೇಳಿರುವ ಅಂಶಗಳಿವು—

"ಅಕ್ಷರದ ಮೂಲರೂಪ ಇಟ್ಟುಕೊಂಡು ಒತ್ತುಗಳನ್ನು ಕಲ್ಪಿಸಲು ಸಾಧ್ಯವಾಗದಾಗ ಕನ್ನಡ ಅಂಕೆಗಳನ್ನು ಈ ಕಾರ್ಯಕ್ಕೆ ತಂದೊಡ್ಡಿರಬಹುದೆ? ಎಂದು ಒಮ್ಮೊಮ್ಮೆ ಭಾಸವಾಗುವುದು. ಆದರೆ ಒಟ್ಟನಲ್ಲಿ ಎಲ್ಲವೂ ಯದ್ವಾತದ್ವಾ ಎಂದರೂ ಅನ್ನಬಹುದು. **ತ, ರ, ಲ, ನ, ಮ, ಯ,** ಅಕ್ಷರಗಳು ಒತ್ತು ಆಗಿ ಬರುವಾಗ ಅವುಗಳ ಮೂಲರೂಪಕ್ಕೂ ಇವಕ್ಕೂ ಯಾವುದೊಂದು ಸಾಮ್ಯವನ್ನೂ ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ"[27]

ತ, ಸ, ಮ, ಯ, ರ, ಲ ಎಂಬೀ ಅಕ್ಷರಗಳಿಂದಲೇ ಇವುಗಳ ಒತ್ತುಗಳೂ ರೂಪಗೊಂಡಿದ್ದು ಅವನ್ನು ಇಲ್ಲಿ ಗುರುತಿಸಲಾಗುವುದು —

'ತ' ವೊತ್ತು (್ತ): ತಕಾರದ ಒತ್ತನ್ನು ನಿಷ್ಪನ್ನಗೊಳಿಸುವುದರಲ್ಲಿ 'ತ' ಎಂಬ ಅಕ್ಷರವನ್ನು ಶುದ್ಧವಾಗಿ ಬರೆವುದು ಹೇಗೆಂಬ ಅಂಶವೂ ಒಳಗೊಳ್ಳ

---

† ಯಾವ ಒತ್ತೆಂದು ಸೂಚನೆಗಾಗಿ ಆಯಾ ಅಕ್ಷರವನ್ನು ಆವರಣದೊಳಗೆ ಕೊಡಲಾಗಿದೆ.

27 ದಾಮೋದರ ಬಾಳಿಗ—ಇವರ ಲೇಖನ "ಕನ್ನಡ ಭಾಷೆಯ ವಿಕಾಸ" 'ತೆಂಕನಾಡು' ಎಂಬ ಪುಸ್ತಕದಲ್ಲಿ ಪುಟ ೧೧೭.

ತ್ತದೆ. ತಕಾರದ ನಡುವೆ ಅಡ್ಡಚಾಚಿರುವ ಸುಳಿ (ಬಲಗಡೆಯಲ್ಲಿ ಒಳಕ್ಕೆ ಬಂದಿರುವ ಸುಳಿ) ಈ ಅಕ್ಷರದ ಮುಖ್ಯ ಭಾಗವಾಗಿದೆ. ತೆಲುಗಿನಲ್ಲಿ ಇಂದಿಗೂ ಈ ಸುಳಿ ಸುಸ್ಪಷ್ಟವಾಗಿಯೇ ಇದೆ. ಪೂರ್ವದಲ್ಲಿ ಬರೆಯುತ್ತಿದ್ದ ಕನ್ನಡ ದಲ್ಲಿಯೂ ಇಂದಿಗೆ ಹಲವರು ಬರೆವ ತಕಾರದಲ್ಲಿಯೂ ಇದು ಸ್ಪಷ್ಟವಾಗಿ ಇರುತ್ತದೆ. ಆ ನಡುವಿನಿಂದಲೇ ಸುಳಿಯಾಗಿ ಪ್ರಾರಂಭಿಸಿ, ಎಡಕ್ಕೆಳೆದ ಗೆರೆಯೇ 'ತ'ವೊತ್ತು (ಸಂಜ್ಞಾ ಚಿತ್ರ ಸೂಚಿ ೬.). ಹೀಗೆ ಇದು ತಕಾರದಿಂದಲೇ ಆಯ್ದುದು ಸ್ಪಷ್ಟವಿದೆ. ಇದನ್ನು ಬಲಗಡೆಯಿಂದ ಪ್ರಾರಂಭಿಸಿ. ಎಡಕ್ಕೆ ಎಳೆಯುವುದು ಪದ್ಧತಿ. ೨ ಹೀಗೆ.

'ನ' ವೊತ್ತು (್ನ): ಈ ಒತ್ತನ್ನು ಅದರ ತಲೆಕಟ್ಟಿನಿಂದ ಆಯ್ದು ಕೊಳ್ಳಲಾಗಿದೆ. ಇತರ ಅಕ್ಷರಗಳ ತಲೆ ಕಟ್ಟುಗಳಲ್ಲಿಯೂ ಈ ಚಿಹ್ನೆಯನ್ನು ಗುರುತಿಸಬಹುದಾಗಿದ್ದರೂ, ಆ ಅಕ್ಷರಗಳ ಉಚ್ಚಾರಣೆ ಇಲ್ಲಿ ಬಾರದಿರುವುದ ರಿಂದ ಮತ್ತು ಇತರ ಒತ್ತುಗಳನ್ನು ಬೇರೆ ರೀತಿಯಲ್ಲಿ ತೆಗೆದುಕೊಂಡಿರುವು ದಕ್ಕೆ ಸಾಕ್ಷಿಯಿರುವುದರಿಂದ ಇದನ್ನು 'ನ' ಎಂಬ ಅಕ್ಷರದ ತಲೆಕಟ್ಟಿನಿಂದ ಆಯ್ದುದೆಂಬುದು ನಿರ್ಣಯಕ್ಕೆ ಬರುತ್ತದೆ. (ಚಿತ್ರ-೭).

'ಮ' ವೊತ್ತು (್ಮ): 'ಮ' ಎಂಬ ಅಕ್ಷರವನ್ನು ಬಲಕ್ಕೆ ಮಲಗಿಸಿ 'ಬ್ರ' ಹೀಗೆ ಇಟ್ಟು ನೋಡಿದರೆ, ಇದೇ ಅಕ್ಷರದ ಪ್ರಾರಂಭದ ಭಾಗವೇ ಇದರ ಒತ್ತಾಗಿರುವುದು ಸ್ಪಷ್ಟವಾಗುತ್ತದೆ. ಈ ಅಕ್ಷರವನ್ನು ಇದ್ದಂತೆಯೇ ಪ್ರಾರಂಭ ಭಾಗದ ಅಂಶವನ್ನು ಆಯ್ದಾಗ ಅದು ಪಕಾರದ ಒತ್ತಾಗುವುದು. ಆದುದ ರಿಂದ ಇದನ್ನು ತಿರುಗಿಸಿ ತೆಗೆದುಕೊಳ್ಳಲಾಗಿದೆ. (ಚಿತ್ರ : ೮ ನೋಡಿ.)

'ಯ' ವೊತ್ತು (್ಯ): ಸಂಸ್ಕೃತದ (ದೇವನಾಗರಿಯ) ಯಕಾರ ದಿಂದ (य) ಈ ಒತ್ತನ್ನು ಆಯ್ದಿರುವಂತೆ ಕಾಣುವುದಾದರೂ, ಹಾಗೆ ತಿಳಿಯ ಬೇಕಾಗಿಲ್ಲ. ಕನ್ನಡದ ಯಕಾರದಲ್ಲೇ ಇದರ ರೂಪವಿದೆ. ಯಕಾರದ ನಡು ವಣ ಭಾಗವೇ 'ಯ'ವೊತ್ತು ಎನ್ನಬಹುದು. (ಚಿತ್ರ ೯.)

ಈ ಒತ್ತಿಗೆ "ಕೀಯಾವಾಡಿ" ಎಂತಲೂ ಹೆಸರು ಬಂದಿದೆ—ಎಂದು ಒಂದೆಡೆ ಹೇಳಿದೆ.[28] ಕನ್ನಡಿಗರಲ್ಲಿ ಈ ಹೆಸರು ಪ್ರಚಲಿತವಾಗಿರುವಂತೆ

---

28 ಟ. ಜಿ. ಮಾಬೆನ್—ಕನ್ನಡ ವ್ಯಾಕರಣ ಬೋಧಿನಿ (೧೮೯೬) ಪುಟ ೧೩.

ಅಷ್ಟೇನೂ ತಿಳಿದುಬಂದಿಲ್ಲ. ತೆಲುಗರು ಈ ಒತ್ತನ್ನು-ಅಂದರೆ 'ಯ'ವೊತ್ತನ್ನು 'ಕ್ಯಾವಡಿ' ಎಂತಲೂ 'ರ'ವೊತ್ತನ್ನು 'ಕ್ರಾವಡಿ' ಎಂತಲೂ ಹೇಳುತ್ತಿರುವುದಾಗಿ ತಿಳಿದುಬಂದಿದೆ.

'ಯ'ವೊತ್ತನ್ನು ಬರೆವಾಗ ಅದನ್ನು ಮೇಲುಗಡೆಯಿಂದ ಪ್ರಾರಂಭಿಸಿ, ಕೆಳಗಿಳಿಸಿ, ಪುನಃ ಬಲಗಡೆಗಾಗಿ ಮೇಲೆತ್ತಿ ಬರೆಯಬೇಕು. ಹಾಗೆ ಮಾಡದೆ ಕೆಳಗಿಂದ ಪ್ರಾರಂಭಿಸಿದರೆ 'ಸ'ಕಾರದ ಒತ್ತಾಗುವುದು. ಆದುದರಿಂದಲೇ ಯ-ಸ ಒತ್ತುಗಳ ತಾರತಮ್ಯದ ಅರಿವು ಲಿಪಿಕಾರನಿಗಿರಬೇಕು.

'ರ'ವೊತ್ತು (್ರ) ಮತ್ತು ಅರ್ ಒತ್ತು (೯) :

'ರ' ಎಂಬ ಅಕ್ಷರವನ್ನು ಅಡ್ಡಕ್ಕೆ ತುಂಡುಮಾಡಿದರೆ, ಕೆಳಗಿನ ತುಂಡು 'ರ'ವೊತ್ತೆನಿಸುವುದು. ಕೆಲವರು **ಅರ್** (೯) ಒತ್ತನ್ನೂ 'ರ'ವೊತ್ತು ಎಂದು ಹೇಳುವುದು ತಪ್ಪಾಗುತ್ತದೆ. 'ಅರ್' ಒತ್ತು 'ರ' ವೊತ್ತಿನಂತೆ ಉಚ್ಚಾರಣೆಗೊಳ್ಳುವುದಿಲ್ಲ. 'ಪತ್ರ' ಎಂಬಲ್ಲಿ 'ರ'ವೊತ್ತು ಇದೆ. "ದರ್ಪ (ದರ್ಪ)" ಎಂಬಲ್ಲಿ 'ಅರ್ ಒತ್ತು' ಇದೆ.

ಕೇಶಿರಾಜನು ಈ 'ಅರ್ ಒತ್ತು' ಬರತಕ್ಕ ಪದಗಳನ್ನು 'ಸರೇಫ ಪದಂಗಳ್' ಎಂದೂ 'ರೇಫಸಂಯೋಗಂಗಳ್' ಎಂದೂ ಕರೆದಿದ್ದಾನೆ (ಶ, ದ, ಸೂ, ೩೭, ೩೮, ೩೯). ಹಾಗೆಯೇ ರೇಫದ ಒತ್ತಿನಿಂದ ಕೂಡಿದ 'ತ್ರಿಪಥಗೆ' ಎಂಬಂತಹ ಪದವನ್ನೂ ಸರೇಫವೆಂದಿದ್ದಾನೆ. ಉದಾ :- "**ಸರೇಫಪಿಂದಿರಾಗೆ ಶಿಥಿಲಮೆಂದನುಕರಿಪರ್**" (ಶ. ದ ಸೂ. ೩೯). ಈ ಎರಡು ಬಗೆಯ ಸರೇಫಗಳ ಸ್ವರೂಪ ಬೇರೆ ಬೇರೆ. "ಉರ್ದು (ಉರ್ದು)" ಎಂಬಲ್ಲಿ ದಕಾರದ ಒತ್ತಿನಿಂದ ಕೂಡಿದ ರೇಫವಿದೆ; ಹಾಗೆಯೇ 'ತ್ರಿ' ಎಂಬಲ್ಲಿ ರೇಫದ ಒತ್ತಿನಿಂದ ಕೂಡಿದ ಅಕ್ಷರವಿದೆ. 'ಅರ್ ಒತ್ತು' ಎಂಬುದನ್ನು ಕೇಶಿರಾಜನು ಹೇಳಿಲ್ಲ.

"೯" ಈ ಒತ್ತನ್ನು ಸಾಮಾನ್ಯವಾಗಿ ಎಲ್ಲರೂ "**ಅರ್ಕಾವೊತ್ತು**" ಎನ್ನುತ್ತಾರೆ. ತೆಲುಗಿನಲ್ಲಿ ಇದನ್ನು "**ವಲಪಲಗಿಲಕ**" ಎನ್ನುವರು. "ಬಲಗಡೆಯ ಕೊಂಕುಗೆರೆ (A curve on the right side) ಎಂದು

ಈ ಪದಕ್ಕೆ ಅರ್ಥ. ಹೀಗೆನ್ನುವಾಗ ಈ ಒತ್ತಿನ ಸ್ವರೂಪ ನಿರ್ದೇಶನವಾಗುವುದಲ್ಲದೆ, ಈ ಒತ್ತು ಯಾವುದರ ಅಂತವೆಂಬ ಪರಿಚಯವಾಗುವುದಿಲ್ಲ.

ಅರ್ಕಾವೊತ್ತು : ಎಂಬೀ ಉಚ್ಚಾರಣೆ ಸರಿಯೆ? ಇದು "ಅರ್+ಕಾ" ವೊತ್ತು ಹೇಗೆ? ಇದರಲ್ಲಿ ಕಕಾರದ ಛಾಯೆ ಏನಿದೆ? ಹಾಗಿದ್ದರೆ 'ಅರ್ಕಾವೊತ್ತು' ಎಂಬುದು ಹೇಗೆ ಬಂತು? ಇದು ಕಕಾರದ ಒತ್ತಲ್ಲ; 'ಅರೆ+ಕ' ಒತ್ತೂ ಅಲ್ಲ. ಇದನ್ನು 'ಅರ್ಕವೊತ್ತು' ಎನ್ನುವುದೂ ಇಲ್ಲ. ಹಾಗಿದ್ದರೆ, ಈ ಉಚ್ಚಾರಣೆಯಲ್ಲಿ 'ಅರ್ಕಾ' ಎಂಬ ದೀರ್ಘದ ಔಚಿತ್ಯವೇನಿದೆ? ಒಟ್ಟಿನಲ್ಲಿ ಈ ಉಚ್ಚಾರಣೆಯಲ್ಲಿ ಏನೋ ತಪ್ಪಿದೆಯೆಂದು ಭಾಸವಾಗುತ್ತದೆ. ನಿಜವಾಗಿ ಇದು '**ಅರ್ಕಾರೊತ್ತು**' ಅಂದರೆ '**ಅರ್‌ಕಾರದ ಒತ್ತು**'. ತಪ್ಪಾಗಿ ಉಚ್ಚಾರಣೆಗೊಂಡು ಪರಂಪರೆವಿಡಿದು ಅರ್ಕಾವೊತ್ತಾಗಿದೆ. ಇದನ್ನು ಬಾಲಬೋಧನೆಯಿಂದಲೇ ಇನ್ನು ಮುಂದಾದರೂ ತಿದ್ದಿಕೊಳ್ಳುವುದು ಆವಶ್ಯಕ.

ಅರ್ಕಾರೊತ್ತಿನ ಮೂಲ—ಅರ್ಕಾರೊತ್ತೆಂಬುದು ಕನ್ನಡದದಲ್ಲ. ಕನ್ನಡದಲ್ಲಿ ಯಾವ ಒತ್ತಿಗೂ ಅಕ್ಷರಪಂಕ್ತಿಯಲ್ಲಿ ಸ್ಥಾನವಿರುವುದಿಲ್ಲ. ಕನ್ನಡಕ್ಕೆ ಇದು ಬೇಕಾಗುವುದೂ ಇಲ್ಲ. ಮಾರ್ಗ, ಗರ್ವ, ಕಾರ್ಯ, ನಿರ್ಲೇಪ, ಅರ್ಕ–ಹೀಗೆ ಅರ್ಕಾರೊತ್ತಿಲ್ಲದೆ ಬರೆಯಲು ಸಾಧ್ಯವಾಗುತ್ತದೆ. ಆದರೆ ದೇವನಾಗರಿಯಲ್ಲಿ ಇದು ಇಲ್ಲದೆ ತೀರುವುದಿಲ್ಲ. **मार्ग, गर्व, कार्य** ಇವನ್ನು ಹೀಗಲ್ಲದೆ ಕನ್ನಡದಂತೆ ರೇಫಯುತವಾಗಿ ಬರೆಯಲು ಆಗುವುದಿಲ್ಲ. ಇದು ಸಂಸ್ಕೃತದ ಲಿಪಿಯ ಒತ್ತಾಗಿದ್ದು ಕನ್ನಡಕ್ಕೆ ದಾಟಿ ಬಂದಿದೆ. ಇದರಲ್ಲಿ ಮೇಲಿಂದ ಕೆಳಗಾಗಿ ಕಾಣುವ ನೀಟಗೆರೆ ಅಕಾರದ ಚಿಹ್ನೆ, ಆ ಚಿಹ್ನೆಯ ಮೇಲ್ಗಡೆ ಕಾಣುವ ವಕ್ರರೇಖೆ ಋಕಾರದ ಚಿಹ್ನೆ-ಎಂದು ತಿಳಿಯಬಹುದು (ಸಂಜ್ಞಾ ಚಿತ್ರ ೧೦ ನೋಡಿ). ಹೀಗೆ ಇದು 'ಅರ್ ಒತ್ತು' ಅಥವಾ ಅರ್ಕಾರೊತ್ತು-ಎನಿಸುತ್ತದೆ. ಇದನ್ನು 'ರ್‌ವೊತ್ತು' ಎಂದರೆ ಋಸುಳಿಯ (ಋವೊತ್ತಿನ) ನೆನಕೆಯಾದೀತು; 'ರ' ವೊತ್ತು ಎಂದಾಗ ರೇಫದ ಒತ್ತಾಗುವುದು. ಆದುದರಿಂದಲೇ '**ಅರ್ ಒತ್ತು**' ಅಥವಾ '**ಅರ್ಕಾರೊತ್ತು**' ಎನ್ನಬೇಕು.

ಅರ್ಕಾರೊತ್ತಿನ ಪ್ರಯೋಗ :—ಈ ಒತ್ತನ್ನು ಅಕ್ಷರದನಂತರ

ಕೊಟ್ಟರೂ ಆ ಅಕ್ಷರದ ಮೊದಲೇ ಇದರ ಉಚ್ಚಾರಣೆ ಬರುತ್ತದೆ. ದೀರ್ಘ ಯುಕ್ತವಾದ ಅಕ್ಷರಕ್ಕೆ ಈ ಒತ್ತನ್ನು ಕೊಡುವಾಗ ಇಳಿ ಚಿಹ್ನೆ ಕೊಟ್ಟ ನಂತರವೇ ಇದನ್ನು ಕೊಡಬೇಕು. ಉದಾಹರಣೆ :—'ದುರ್ಯೋಧನ' ಎಂಬುದನ್ನು 'ದುರ್ಯೋಧನ' ಎಂದು ಬರೆಯಬಾರದು. 'ಉರ್ವೀಶ' ಎಂಬುದನ್ನು 'ಉರ್ವೀಶ' ಹೀಗೆ ಬರೆಯಬಾರದು.

"ಲ" ವೊತ್ತು (್ಲ). ಸ್ಥೂಲ ದೃಷ್ಟಿಗೆ ಈ ಒತ್ತಿನ ರೂಪವು ಸಂಸ್ಕೃತದ ಲಕಾರದಿಂದ (ल) ಬಂದಂತೆ ಕಾಣುತ್ತದೆ. ಆದರೆ ಹಾಗೆ ತಿಳಿಯಬೇಕಾಗಿಲ್ಲ. ಪ್ರಾಚೀನ ಲಕಾರದಲ್ಲಿ ಇದರ ಛಾಯೆಯಿದೆ. ಕನ್ನಡದ 'ಲ' ಎಂಬ ಅಕ್ಷರದ ಐತಿಹಾಸಿಕ ರೂಪಗಳನ್ನು ಪರಿಶೀಲಿಸಿದರೆ ಅಲ್ಲಿ ಇದರ ಛಾಯೆಯನ್ನು ಕಾಣಬಹುದು. ಕ್ರಿ.ಶ. ೭೦೦ ಕಾಲದ ಪೂರ್ವದ ಹಳಗನ್ನಡದಲ್ಲಿ ಲಕಾರವನ್ನು (ಸಂ. ಚಿತ್ರ ೧೧) ಹೀಗೆ ಬರೆಯುತ್ತಿದ್ದರು. ಕ್ರಿ.ಶ. ೯೦೦ ಕಾಲದಲ್ಲಿ (ಸಂ. ಚಿತ್ರ ೧೨) ಹೀಗೂ ಅದರಿಂದೀಚೆಗೆ (ಲ) ಹೀಗೂ ಬರೆಯುತ್ತಿದ್ದರು. ಇಂದಿಗೂ ದೊಡ್ಡದಾಗಿ ಬರೆವಲ್ಲಿ 'ಲ' ಹೀಗೆಯೇ ಬರೆಯುತ್ತಾರೆ. ಈ ರೂಪಗಳಲ್ಲೆಲ್ಲ ಈ ಅಕ್ಷರದ ಪ್ರಾರಂಭದ ಭಾಗದಲ್ಲಿ 'ಲ' ವೊತ್ತಿನ ಛಾಯೆ ಕಾಣುತ್ತಿದೆ. ಇಂದಿನ ಲಕಾರಗಳೆರಡನ್ನು ಜೋಡಿಸಿ ಬರೆದು, ಅದನ್ನೆ ತಲೆಕೆಳಗಾಗಿ ಮಾಡಿದರೆ, ಈ ಒತ್ತಿನ ರೂಪವು ಕಾಣಿಸುವುದಾದರೂ ಹಿಂದಿನ ಕಾಲದಿಂದಲೇ ಪ್ರಚಲಿತವಾಗಿದ್ದ ಈ ಒತ್ತಿನ ರೂಪಸಿದ್ಧಿಗೆ ಇದನ್ನು ಒಂದಿಸಲಿಕ್ಕಾಗುವುದಿಲ್ಲ. ಅಂತು 'ಲ' ವೊತ್ತು ಕನ್ನಡದ ಲಕಾರದಿಂದಲೇ ಬಂದುದು.

'ವ' ವೊತ್ತನ್ನು ಪಕಾರದ ಒತ್ತಿಗಿಂತ ಬೇರೆಯೆಂದು ತೋರಿಸುವುದಕ್ಕಾಗಿ ಆ ಒತ್ತಿನ ಬಲಗಡೆಯ ತುದಿಯಲ್ಲಿ ಒಂದು ಒಳಸುಳಿ ತೆಗೆಯುತ್ತಾರೆ– '್ವ' ಹೀಗೆ. ಮುದ್ರಣದಲ್ಲಿಯೂ ಕೈಬರೆವಣಿಗೆಯಲ್ಲಿಯೂ ಈಗೀಗ 'ವ' ಎಂಬ ಅಕ್ಷರವನ್ನೆ ಒತ್ತಾಗಿ ಪ್ರಯೋಗಿಸುವ ರೂಢಿ ಬಂದಿದೆ. ಆದುದರಿಂದ 'ವ' ವೊತ್ತು ಇಂದಿಗೆ ಎರಡು ರೂಪಗಳನ್ನು ತಳೆದಿದೆ.

'ಟ' ವೊತ್ತನ್ನು "್ಟ" ಹೀಗೆ ಕಾಣಿಸುತ್ತಾರೆ. ಆದರೆ 'ಟ' ಎಂತಲೇ ಒತ್ತು ಕೊಡುವುದು ತಪ್ಪಲ್ಲ.

ವಿದ್ವಾನ್, ಶ್ರೀಮಾನ್ ಎಂಬೀ ಶಬ್ದಗಳ ಕೊನೆಯ ವ್ಯಂಜನರೂಪದ ನಕಾರವನ್ನು ೝ ಹೀಗೆ ಬರೆದಿರುವುದನ್ನು ಹೆಚ್ಚಾಗಿ ಹೆಸರುಹಲಗೆಗಳಲ್ಲಿ ಮತ್ತು ಕೆಲವು ಮುದ್ರಣಗಳಲ್ಲಿ ಕಾಣುತ್ತೇವೆ. ಈ ವರ್ಣವು 'ನ್' ಎಂಬ ಉಚ್ಚಾರಣೆಯುಳ್ಳುದಾಗಿ ಅಕ್ಷರಗಳ ಪಂಕ್ತಿಯನ್ನೇ ಸೇರಿಕೊಳ್ಳುತ್ತದೆ. ಇದು ಒತ್ತಲ್ಲ, ಒಂದು ಅರ್ಧಾಕ್ಷರ. ಇದು 'ನ್' ಎಂಬುದರ ರೂಪವಳಿದ ರೂಪ. 'ನ್' ಎಂಬುದರ ಕೆಳಗಿನ (ಅಂದರೆ ಪ್ರಾರಂಭದ) ಭಾಗವನ್ನು ಬಲಕ್ಕೆ ಬಗ್ಗಿಸಿದಾಗ ಈ ಲಿಪಿಯ ಸ್ವರೂಪವಾಗುವುದು (ಸಂಜ್ಞಾ ಚಿತ್ರ ೧೩). ರೂಪವಳಿದ ಈ ಅರ್ಧಾಕ್ಷರ ಪ್ರಯೋಗವನ್ನು ಕನ್ನಡಿಗರು ವರ್ಜಿಸುವುದು ಒಳಿತು.

ಸತ್ವ (ಸತ್ + ತ್ವ), ವಿದ್ವತ್ವ (ವಿದ್ವತ್ + ತ್ವ)—ಇಂಥವನ್ನು ಸತ್ತ್ವ, ವಿದ್ವತ್ತ್ವ–ಹೀಗೆ ಬರೆಯಬೇಕೆಂದು ಅಭಿಪ್ರಾಯಪಡುವವರಿದ್ದಾರೆ. ಆದರೆ ಉಚ್ಚಾರಣೆಯಲ್ಲಿ 'ಸತ್ವಾವಲೋಕನ' ಎಂಬುದಕ್ಕೂ 'ಸತ್ತ್ವಾವಲೋಕನ' ಎಂಬುದಕ್ಕೂ ವ್ಯತ್ಯಾಸವಿಲ್ಲ. ಆದುದರಿಂದ ವಿಜಾತೀಯ ದ್ವಿತ್ವವು ಬರುವ ಮೊದಲು ಬರತಕ್ಕ ಸಜಾತೀಯ ದ್ವಿತ್ವದ ಚಿಹ್ನವನ್ನು ಕೊಡುವುದು ಬೇಕಾಗಿಲ್ಲ, ಕೊಟ್ಟರೆ ತಪ್ಪಲ್ಲ, ಕೊಡದಿದ್ದರೆ ದೋಷವೇನೂ ಇಲ್ಲ. ಆದರೆ ತನ್ನೃಪ–ಎಂಬಲ್ಲಿ ಸಜಾತೀಯವಾದ ಒತ್ತು ಬೇಕಾಗುತ್ತದೆ. (ತತ್ + ನೃಪ—ತನ್ನೃಪ). ಇಲ್ಲಿ ನಕಾರಕ್ಕೆ 'ನ' ಒತ್ತನ್ನು ಕೊಡದಿದ್ದರೆ ಅದು ದ್ವಿತ್ವವಾಗುವುದಿಲ್ಲ; ಶಿಥಿಲೋಚ್ಚಾರಣೆಯನ್ನು ತಾಳುತ್ತದೆ– ವಿಕೃತಿ, ಸುಕೃತ ಎಂಬಂತೆ. ಆದುದರಿಂದ 'ತನ್ನೃಪ' ಎಂದೇ ಬರೆಯಬೇಕು.

ವೈಶಿಷ್ಟ್ಯ: ಸಂಸ್ಕೃತದ (ದೇವನಾಗರಿಯ) ಅಕ್ಷರಪಂಕ್ತಿಗೂ ಕನ್ನಡದ ಅಕ್ಷರಪಂಕ್ತಿಗೂ ವ್ಯತ್ಯಾಸವಿದೆ. ಇವೆರಡನ್ನು ತೌಲನಿಕವಾಗಿ ನೋಡುವವರು ಕನ್ನಡದ ಅಕ್ಷರಪಂಕ್ತಿ ಶಾಸ್ತ್ರೀಯವಲ್ಲವೆನ್ನುವುದುಂಟು. ಉದಾಹರಣೆ: "ಸತ್ಯ" ಎಂದು ಕನ್ನಡದಲ್ಲಿ ಬರೆದಾಗ ಇಲ್ಲಿ 'ತ' ಎಂಬುದು ಪೂರ್ಣವಾಗಿಯೂ ಅದಕ್ಕೆ ಕೊಟ್ಟಿರುವ 'ಯ' ಒತ್ತು, ಅಪೂರ್ಣ ರೂಪದಲ್ಲಿಯೂ ಇರುತ್ತದೆ. ಆದರೆ ಉಚ್ಚಾರಣೆಯಲ್ಲಿ ತಕಾರವನ್ನು ಅರ್ಧಾಕ್ಷರವಾಗಿಯೂ ಅದರ ಒತ್ತನ್ನು ಪೂರ್ಣ ಯಕಾರವಾಗಿಯೂ ಗಣಿಸುತ್ತೇವೆ. ಸಂಸ್ಕೃತದಲ್ಲಿ **सत्य** ಎಂಬ ಬರೆವ ರೂಪವು ಉಚ್ಚಾರಣೆಗೆ ಅನುಗುಣವಾಗಿ

ಅರ್ಧ ತಕಾರದಿಂದಲೂ ಪೂರ್ಣ ಯಕಾರದಿಂದಲೂ ಕೂಡಿದೆ. ಆದುದರಿಂದ ಸಂಸ್ಕೃತದ ಲಿಪಿಲೇಖವು ಶಾಸ್ತ್ರೀಯವೆಂದೂ ಕನ್ನಡವು ಅಶಾಸ್ತ್ರೀಯವೆಂದೂ ಹೇಳುವವರಿದ್ದಾರೆ. ಇವನ್ನು 'ಕನ್ನಡದ ವೈಶಿಷ್ಟ್ಯ' ಎಂದು ಒಂದೇ ಮಾತಿನಲ್ಲಿ ಉತ್ತರ ಕೊಟ್ಟು ಕನ್ನಡದ ಗೌರವವನ್ನು ಉಳಿಸಬಹುದಾದರೂ ಇದಕ್ಕಿಂತಲೂ ವಿಶೇಷದ ಗೌರವಯುತ ಕಾರಣವು ಕನ್ನಡದ ಅಕ್ಷರ ಸಂಧಾನಕ್ಕಿದೆ.

ಕನ್ನಡದ ಲಿಪಿಪಂಕ್ತಿಯಲ್ಲಿ ಪೂರ್ಣಾಕ್ಷರಗಳಿಗೆ ಮಾತ್ರ ಸ್ಥಾನವಿರುತ್ತದೆ. ಒತ್ತುಗಳಿಗೆ ಇವುಗಳೊಡನೆ ಎಂದಿಗೂ ಸಹಪಂಕ್ತಿ ಇಲ್ಲ. 'ಒತ್ತು' ಎಂಬುದು ಯಾವಾಗಲೂ ಅಡಿಗಡೆಯೇ ಕೊಡಬೇಕಾದುದು. ಅರ್ಧಾಕ್ಷರಕ್ಕೂ ಶಬ್ದಗಳ ನಡುವೆ ಸ್ಥಾನವೇ ಇಲ್ಲ. ಒಂದು ವೇಳೆ ಅರ್ಧಾಕ್ಷರವು ಶಬ್ದಗಳ ಅಂತ್ಯದಲ್ಲಿ ಮಾತ್ರ ಬರಬಹುದು—ಅವರ್, ಇವರ್, ನುಡಿದರ್, ಪೋದಳ್ ಇನಿಪಾಲ್-ಇತ್ಯಾದಿ ಶಬ್ದಗಳ ಅಂತ್ಯದಲ್ಲಿ ಅರ್ಧಾಕ್ಷರವಿರುತ್ತದೆ. ಪಂಕ್ತಿಯ ಕೊನೆಯಲ್ಲಿ ಕುಳ್ಳಿರಿಸುವುದು ಗೌರವದ ದ್ಯೋತಕವಾಗುವುದಿಲ್ಲವಾದುದರಿಂದ ಅಲ್ಲಿ ಮಾತ್ರ ಅರ್ಧಾಕ್ಷರಕ್ಕೆ ಸ್ಥಾನ ದೊರಕುತ್ತದೆ. ಒತ್ತುಗಳಿಗಂತು ಸಹಜವಾಗಿ ನೀಚಸ್ಥಾನವೆ ಹೀಗೆ ಒತ್ತು ಕೆಳಗೆ ಬಂದಾಗ, ಅದಕ್ಕೆ ಪೂರ್ಣಾಕ್ಷರದ ಉಚ್ಚಾರಣೆಯೂ ಅದರಿಂದ ಕೂಡಿರುವ ಪೂರ್ಣಾಕ್ಷರಕ್ಕೆ ಅರ್ಧೋಚ್ಚಾರಣೆಯೂ ಅನಿವಾರ್ಯವಾಗುತ್ತದೆ. ಈ ಬಗೆಯು ಕನ್ನಡದ ಹಿರಿಮೆಗೆ ಕಳೆಯಲ್ಲದೆ ಕೊಳೆಯಲ್ಲ. ಇದು ಕನ್ನಡದ ಬರೆವಣಿಗೆಯ ವಿವೇಕಯುತ ತಾರತಮ್ಯದ ಸಂಸ್ಕೃತಿಗೆ ಅನುಗುಣವಾಗಿರುವ ವೈಶಿಷ್ಟ್ಯ.


[ಬಿಂದು ವಿಸರ್ಗಗಳು ಸ್ವರಗಳ ಮುಂದೆ ಬಂದರೆ ಮಾತ್ರವೇ ಅವಕ್ಕೆ ಉಚ್ಚಾರಣೆಯಿರುವುದರಿಂದ ಅವು ಪಂಕ್ತಿಗೆ ಸೇರದೆ ನಿರ್ವಾಹವಿಲ್ಲ. ಉದಾ: 'ಅಂತಃಕರಣ' ಎಂಬಲ್ಲಿ ಬಿಂದು-ವಿಸರ್ಗ ಎಂಬೆರಡೂ ಅಕ್ಷರಪಂಕ್ತಿಯಲ್ಲೇ ಇವೆ.]

ಈ ವೈಶಿಷ್ಟ್ಯವು ಕನ್ನಡದ ಮೂಲ ಲಿಪಿಯಾಗಿರುವ ಬ್ರಾಹ್ಮಿಯಲ್ಲೇ ಇದ್ದಿತು. ಅದರಲ್ಲಿ "ಸಂಯುಕ್ತಾಕ್ಷರಗಳನ್ನು ಬರೆವುದಿದ್ದಲ್ಲಿ ಮೊದಲು ಉಚ್ಚಾರವಾಗುವ ವ್ಯಂಜನವನ್ನು ದೊಡ್ಡದಾಗಿ ಬರೆದು, ಹಿಂದಿನಿಂದ ಉಚ್ಚಾರವಾಗುವ ವ್ಯಂಜನವನ್ನು ಅದರ ಕೆಳಬದಿಗಾಗಲಿ, ಮೇಲ್ಬದಿಗಾಗಲಿ ಮೊದಲಿನ

ಅಕ್ಷರಕ್ಕೆ ಹೊಂದಿಸಿ ಬರೆಯುತ್ತಿದ್ದರು"[29] ಇದರಿಂದ ಕನ್ನಡವು ತನ್ನ ಮೂಲ ಪದ್ಧತಿಯನ್ನು ಯೋಗ್ಯವಾಗಿ ಉಳಿಸಿಕೊಂಡಿದೆಯೆಂದು ಅಭಿಮಾನ ಪಡಬಹುದು.

ಕನ್ನಡದ ಅಕ್ಷರಸಂಜ್ಞಾಕಾರವು ಶತಮಾನ-ಸಹಸ್ರಮಾನಗಳಿಂದ ರೂಪಾಂತರಗಳನ್ನು ಪಡೆಯುತ್ತ ಇಂದಿನ ಸ್ವರೂಪಕ್ಕೆ ಬಂದಿದೆ. ಲಿಪಿ ದುಂಡಗಾಗಿದೆ, ಸುಂದರವಾಗಿದೆ, ಬರೆವಣಿಗೆಯ ವೇಗಕ್ಕೆ ಅನುಕೂಲವಾಗಿದೆ. ಲಿಪಿಕಾರನ ಕಯ್ಗೆ ಇದು ಹೆಚ್ಚು ದಣಿವನ್ನು ಉಂಟುಮಾಡುವುದಿಲ್ಲ. ಲೇಖನ ಕ್ರಮವಿದು ಶಾಸ್ತ್ರಸಿದ್ಧವೂ ಸಂಶುದ್ಧವೂ ಆಗಿದೆ. ಹೀಗಿದ್ದರೂ ಕನ್ನಡಕ್ಕೆ ಸುಯೋಗ್ಯ ಮತ್ತು ಸಮರ್ಪಕ ಲಿಪಿಸ್ವರೂಪ ಶಾಸ್ತ್ರವಾಗಿಲ್ಲ, ಲಿಪಿ ಶುದ್ಧಿಯ ವಿವೇಚನೆಯೂ ಸಾಕಷ್ಟು ನಡೆದಿಲ್ಲ. ಅಕ್ಷರಗಳನ್ನು ಶುದ್ಧವಾಗಿ ಬರೆವ ಸರಿಯಾದ ಪಾಠಕ್ರಮವು ಇಂದಿನ ಪ್ರಾಥಮಿಕ ತರಗತಿಗಳಲ್ಲಿ ನಡೆಯುವುದಿಲ್ಲ. ಆದುದರಿಂದಲೇ ಈ ಕೊರತೆ (ಅಶುದ್ಧವಾದ ಲಿಪಿಲೇಖನ) ವಿಶ್ವವಿದ್ಯಾಲಯದ ಮಹೋನ್ನತ ತರಗತಿಯ ತನಕವೂ ತಲೆಯೆತ್ತಿದೆ. ಪರಿಣಾಮತಃ ಬರೆಹದಲ್ಲಿ ತಾತ್ವಿಕವಾದ ಏಕರೂಪತೆ ಇಲ್ಲವಾಗಿದೆ. ಪ್ರತಿವ್ಯಕ್ತಿಯ ಕೈಬರೆಹವೇನೋ ಬೇರೆ ಬೇರೆಯಾಗಿ ಕಂಡರೂ ಅದರಲ್ಲಿ ಸ್ಥೂಲವೂ ತಾತ್ವಿಕವೂ ಶಾಸ್ತ್ರಬದ್ಧವೂ ಆದ ಏಕರೂಪತೆಯಿರುವುದು ಆವಶ್ಯಕ. ಅದಕ್ಕಾಗಿ ನಿಶ್ಚಿತ ರೂಪದಲ್ಲಿ ಅಕ್ಷರಗಳ ಆಕಾರ ಇರಬೇಕಾದುದು ಅವಶ್ಯ. ಈ ದಿಶೆಯಲ್ಲಿ ಒಂದು ಪ್ರಯತ್ನವಾಗಿ ಈ ನಿಬಂಧವನ್ನು ತಿಳಿದುಕೊಳ್ಳಬಹುದು.

ಸಂಜ್ಞಾ ಚಿತ್ರಗಳು.



[29] ಪ್ರ. ಗೋ. ಕುಲಕರಣಿ—ಕನ್ನಡ ಭಾಷೆಯ ಚರಿತ್ರೆ (1967) ಪುಟ 128-129.

ನಾಮ ವಿಭಕ್ತಿಗಳು

[ನಾಮವಿಭಕ್ತಿಗಳ ಉಪಯೋಗ ಪರಿಚಯ–ಪ್ರಥಮೆಯ ಪ್ರತ್ಯಯ 'ಮ್' ಉಚ್ಚಾರಣೆಯ ಅನುಸ್ವಾರ–ಪ್ರತ್ಯಯ ಲೋಪ ವಿಚಾರ–ಪ್ರಥಮಾ ವಿಭಕ್ತಿಯಿಲ್ಲವೆನ್ನಲು ಕಾರಣ–ಇದೆಯೆಂಬ ಸಮಾಧಾನ–ಪ್ರಥಮೆಯ ಅರ್ಥಾಭಿವ್ಯಕ್ತಿ–ದ್ವಿತೀಯೆ ಬಂದಾಗ ಪ್ರಥಮೆಗೆ ಸಕಾರಮಕಾರಾದೇಶ–ಮಕಾರಕ್ಕೆ ವಕಾರಾದೇಶ–ದ್ವಿತೀಯಾರ್ಥದಲ್ಲಿ ಷಷ್ಠಿ–ತೃತೀಯೆಯ ರೂಪಗಳು–ಚತುರ್ಥಿ ಕೆ, ಗೆ ಗಳು–'ಇಗೆ' ಎಂದು ಪ್ರತ್ಯಯವಿಲ್ಲ-ನಿನಗೆ ಎನಗೆ ತನಗೆಗಳಲ್ಲಿ ಸ್ವರಾಗಮ–ಪಂಚಮಿಯ ಪ್ರತ್ಯಯ 'ಅತ್' 'ಅತ್ತಣಿಂ' ಆದುದು–ಷಷ್ಠಿ ವಿಭಕ್ತಿಯ ಸ್ಥಿರತೆ-ಸಪ್ತಮಿಯ ವಿವಿಧ ಪ್ರತ್ಯಯಗಳು.]

ವಿಭಕ್ತಿ ಪರಿಜ್ಞಾನವು ಭಾಷಾಮೀಮಾಂಸೆಗೆ ಮುಖ್ಯ ಆಧಾರ. ಭಾಷೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವಲ್ಲಿ ಬರುವ ಪ್ರಮುಖ ವಿಷಯವಿದು. ಆದುದರಿಂದಲೇ ಭಾಷೆಯ ಪ್ರಯೋಗದಲ್ಲಿ ಶುದ್ಧಾಶುದ್ಧತೆಯನ್ನು ನಿರ್ಣಯಿಸುವ ವ್ಯಾಕರಣದಲ್ಲಿಯೂ ಸ್ವರೂಪ ನಿಷ್ಪತ್ತಿಯನ್ನು ಸಾಹಜಿಕವಾಗಿ ವಿವೇಚಿಸುವ ಭಾಷಾಶಾಸ್ತ್ರದಲ್ಲಿಯೂ ವಿಭಕ್ತಿಗಳ ವಿವರಣವು ಅನಿವಾರ್ಯವಾಗುತ್ತದೆ.

ಪ್ರಾರಂಭದಶೆಯಲ್ಲಿ ಭಾಷೆ ಕೇವಲ ನಾಮವಾಚಿ ಶಬ್ದಗಳನ್ನು ತಾಳಿದ್ದು, ಕ್ರಮೇಣ ವ್ಯಕ್ತಿಗೆ ಸ್ನೇಹಾಭಿವೃದ್ಧಿಯ ಆವಶ್ಯಕತೆ ಬಂದಂತೆ, ಆ ಶಬ್ದಗಳಿಗೆ ಪ್ರತ್ಯಯಾದಿಗಳು ಸೇರಿ, ಭಾಷೆ ವಿಕಾಸಗೊಂಡಿತೆಂದು ಅತಿ ಪ್ರಾಚೀನ ಸಾಹಿತ್ಯಗಳಲ್ಲಿ–ಮುಖ್ಯವಾಗಿ, ಬೃಹಸ್ಪತಿಯ ಬ್ರಹ್ಮಜ್ಞಾನಸೂಕ್ತದಲ್ಲಿ ಹೇಳಿದೆ. ಈ ಸೂಕ್ತಕ್ಕೆ 'ಭಾಷಾಸೂಕ್ತ' ಎಂತಲೂ ಹೆಸರಿದೆ.[1] ಇಂದಿಗೂ ಒಂದು ಎಳೆ ಮಗುವಿನಲ್ಲಿ ಭಾಷಾಜ್ಞಾನದ ವಿಕಾಸವಾಗುವ ಕ್ರಮ ಇದೇ ರೀತಿಯಿದೆ. ಮೊದಲು ಅದು ಒಂದೊಂದು ಶಬ್ದವನ್ನು ಮಾತ್ರ ಉಚ್ಚಾರಣೆ ಮಾಡುತ್ತದೆ. ಕ್ರಮೇಣ ಆಯಾ ಶಬ್ದಗಳನ್ನು ಪ್ರತ್ಯಯಯುಕ್ತವಾಗಿ

---

[1] H. K. Bhattacharya—The Language and Scripts of Ancient India 1959, page 70.

ಕೂಡಿಸಿ ಭಾಷಾರೂಪದಲ್ಲಿ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡುತ್ತದೆ. ವಿಭಕ್ತಿಯುತವಾದ ಶಬ್ದಗಳು ವಾಕ್ಯವಾಗಿ ಮನೋಭಿಪ್ರಾಯವನ್ನು ಸ್ಪಷ್ಟವಾಗಿ ಅಭಿವ್ಯಕ್ತ ಮಾಡಬಲ್ಲವು.

ವ್ಯಾಕರಣ ಶಾಸ್ತ್ರದ ಪ್ರಯೋಜನಗಳನ್ನು ಹೇಳುತ್ತ, ವರರುಚಿ ತನ್ನ ವಾರ್ತಿಕ ಸೂತ್ರದಲ್ಲಿ "**ರಕ್ಷೋ ಹಾಗಮ ಲಘ್ವ ಸಂದೇಹಾಃ ಪ್ರಯೋಜನ ಮಿತಿ**" ಎಂದು ತಿಳಿಸಿದ್ದಾನೆ. ಈ ಪ್ರಯೋಜನಗಳನ್ನು ಪಾತಂಜಲಿ ಮಹಾಭಾಷ್ಯದಲ್ಲಿ ವಿವರಿಸಲಾಗಿದೆ. ರಕ್ಷಾ, ಊಹಾ, ಆಗಮ, ಲಘು, ಅಸಂದೇಹ–ಈ ಐದು ಪ್ರಯೋಜನಗಳಿಗಾಗಿ ವ್ಯಾಕರಣವನ್ನು ಅಧ್ಯಯನ ಮಾಡಬೇಕೆಂದು ಅಲ್ಲಿ ವಿವರಿಸಿದೆ.[2] ಅದರ ಸಾರಾಂಶವಿದು—

ರಕ್ಷೆ : (Preservation) ಪೂರ್ವಕಾಲದಿಂದಲೇ ಬಂದ ವಿದ್ಯಾಸಂಪತ್ತನ್ನು ರಕ್ಷಿಸಬೇಕಾದರೆ, ಲೋಪ–ಆಗಮ–ಆದೇಶಾದಿ ವರ್ಣ ವಿಕಾರಗಳ ಪರಿಜ್ಞಾನ ಅವಶ್ಯ. ಈ ಪರಿಜ್ಞಾನವಾಗಬೇಕಾದರೆ ವ್ಯಾಕರಣವನ್ನು ಅಭ್ಯಸಿಸಬೇಕು.

ಊಹೆ : (Modification) ಲಿಂಗ-ವಚನ-ವಿಭಕ್ತಿ-ಕಾಲಗಳಿಗನುಗುಣವಾಗಿ ಶಬ್ದಗಳನ್ನು ಮಾರ್ಪಡಿಸುವ ಅನುಭವವಿದು. ವ್ಯಾಕರಣವನ್ನು ತಿಳಿದವನಿಗೆ ಮಾತ್ರ ತಪ್ಪಿಲ್ಲದಂತೆ ಈ ಕಾರ್ಯವನ್ನು ಮಾಡಲು ಸಾಧ್ಯ.

ಆಗಮ : (Knowledge) ಇದು ಶಾಸ್ತ್ರಜ್ಞಾನ. ವ್ಯಾಕರಣದ ಪರಿಜ್ಞಾನವನ್ನು ಗಳಿಸಿ, ಅಧ್ಯಯನ ಮಾಡುವವನಿಗೆ ಶಾಸ್ತ್ರಜ್ಞಾನ ಲಭ್ಯವಾಗುವುದು.

ಲಘು : (Short-cut) ಇದು ಪದ ಪ್ರಯೋಗಗಳನ್ನು ಸುಲಭವಾಗಿ ಬೇಗನೆ ತಿಳಿವ ಗುಣ; ಕಿರಿದರಲ್ಲೇ ಹಿರಿದನ್ನರಿವ ಶಕ್ತಿ ವ್ಯಾಕರಣದಿಂದ ಉಂಟಾಗುವುದು. ಒಂದು ಲಕ್ಷಣವನ್ನು ತಿಳಿದು, ಲಕ್ಷ್ಯದಿಂದ ಅದನ್ನು ಮನ

---

[2] ಋಗ್ವೇದ ಸಂಹಿತೆ, ಸಾಯಣ ಭಾಷ್ಯ ಭೂಮಿಕೆ, ಭಾಗ ೧., ಪುಟ, 564.

ದಟ್ಟು ಮಾಡಿದರೆ, ಅದೇ ರೀತಿಯ ಇತರ ನೂರಾರು ಪದ ಸ್ವರೂಪಗಳ ಸಿದ್ಧಿ ಆಗುವುದು.

ಅಸಂದೇಹ : (Doubtlessness) ಪದಗಳನ್ನು ವಿಂಗಡಿಸುವುದರಲ್ಲಿ, ತನ್ಮೂಲಕ ಮಾಡುವ ಅರ್ಥನಿರ್ಣಯದಲ್ಲಿ "ಇದಮಿತ್ಥಂ" ಎಂದು ನಿರ್ಧರಿಸುವ ಶಕ್ತಿ ವ್ಯಾಕರಣದಿಂದ ಬರುವುದು.

ಮೇಲಿನ ಪ್ರಯೋಜನಗಳೆಲ್ಲವೂ ಹೆಚ್ಚಿನ ಮಟ್ಟಿಗೆ "ವಿಭಕ್ತಿ ಪರಿಜ್ಞಾನ" ವನ್ನು ಅವಲಂಬಿಸುತ್ತವೆ. ಇದಲ್ಲದೆ ಮಹಾಭಾಷ್ಯದಲ್ಲಿ ವ್ಯಾಕರಣವನ್ನು "**ವಾಗ್ಯೋಗ**" ಎಂತಲೂ ಕರೆದಿದೆ. ಪ್ರಕೃತಿ ಪ್ರತ್ಯಯಗಳ ಪರಿಚಯ, ಈ ಪರಿಚಯದಿಂದಾಗುವ ಅರ್ಥವಿಶೇಷದ ಪರಿಜ್ಞಾನ—ಇವು ವ್ಯಾಕರಣದಿಂದ ಸಾಧ್ಯವಾಗುವುದರಿಂದ ಅದಕ್ಕೆ "**ವಾಗ್ಯೋಗ**" ಎಂಬ ಹೆಸರು ಒಪ್ಪುವುದು—ಕಾತ್ಯಾಯನನ ಮಾತಿದು :

ಯಸ್ತು ಪ್ರಯುಂಕ್ತೇ ಕುಶಲೋ ವಿಶೇಷೇ
ಶಬ್ದಾನ್ಯಥಾವತ್ ವ್ಯವಹಾರ ಕಾಲೇ
ಸೋಽನಂತಮಾಪ್ನೋತಿ ಜಯಂ ಪರತ್ರ
ವಾಗ್ಯೋಗವಿದ್ದುಷ್ಯತಿ ಚಾಪಶಬ್ದೈಃ [3]

ವ್ಯಾಕರಣವನ್ನರಿತವನು ಯಾವ ಶಬ್ದವನ್ನು ಯಾವ ಸಂದರ್ಭದಲ್ಲಿ ಹೇಗೆ ಪ್ರಯೋಗಿಸಬೇಕೆಂದು ತಿಳಿದು ಪ್ರಯೋಗ ಮಾಡಿದರೆ, ಆತನು ಈ ಲೋಕದಲ್ಲಿ ಯಶಸ್ಸನ್ನೂ ಪರದಲ್ಲಿ ಉತ್ತಮ ಗತಿಯನ್ನೂ ಪಡೆಯುವನು. ಅಪಶಬ್ದವನ್ನು ಪ್ರಯೋಗಿಸುವುದರಿಂದ ಹಾನಿಯುಂಟಾಗುವುದು-ಎಂದು ಇಲ್ಲಿ ಅಭಿಪ್ರಾಯ. ಈ ವಾಗ್ಯೋಗದ (ವ್ಯಾಕರಣದ) ಮುಖ್ಯ ವಿಷಯಗಳಲ್ಲೊಂದಾದ ವಿಭಕ್ತಿಯ ಒಂದು ಸೂಕ್ಷ್ಮದ ಅಧ್ಯಯನವೇ ಈ ಬರೆವಣಿಗೆಯ ಗುರಿ.

---

[3] ಅದರಲ್ಲೆ, ಪುಟ 566,567.

ವಿಭಕ್ತಿ ಎಂದರೇನು ? "**ವಿಭಜ್ಯತೇ ಅನಯಾ**" ಎಂಬ ವಿವರದಂತೆ ಪ್ರಕೃತ್ಯರ್ಥವನ್ನು ವಿಭಜಿಸಿ, ಬೋಧಿಸಲು ಸಾಧಕವೆನಿಸುವ ಪ್ರತ್ಯಯು ವದು :—

ಪದದರ್ಥಮಂ ವಿಭಾಗಿಸು
ವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂ
ಬುದು ತತ್ಪ್ರತ್ಯಯದಿಂ ಪೂ
ರ್ವದೊಳಿರ್ಕುಂ ಪ್ರಕೃತಿಯೆರಡುಮುಮುದೋದವೆ ಪದಂ 4

ವಾಕ್ಯದಲ್ಲಿ ವ್ಯವಸಿತವಾಗಿರುವ ಪ್ರಕೃತಿ ಪ್ರತ್ಯಯಾತ್ಮಕವಾದ ಪದಗಳ ಪರಸ್ಪರ ಸಂಬಂಧವನ್ನು ಬೇರೆ ಬೇರೆಯಾಗಿ ತೋರಿಸಲು ಸಾಧಕವಾಗುವ ಪ್ರತ್ಯಯವು ವಿಭಕ್ತಿ. ಅದು ಪದದ ಕೊನೆಯಲ್ಲಿ ಬರುವಂಥದು. "**ವಿಭಕ್ತ್ಯಂತಂ ಪದಂ**" ನಾಮವಿಭಕ್ತಿಗಳಾಗಲೀ ಆಖ್ಯಾತವಿಭಕ್ತಿಗಳಾಗಲೀ ಕಡೆಯಾಗುಳ್ಳ ಶಬ್ದಗಳು ಪದಗಳು. ಇದರಿಂದ ವಿಭಕ್ತಿ ಎಂಬುದು ಪದಗಳ ನಂಟು. ಅರ್ಥದ ಮೂಲಕ ಪದಗಳ ಸಂಬಂಧವನ್ನು ಜೋಡಿಸುವ ನಂಟೂ ಆಗಿರುತ್ತದೆ. ಸ್ಪಷ್ಟವಾಗಿಯಾಗಲೀ ಅಧ್ಯಾಹಾರವಾಗಿಯಾಗಲೀ ವಿಭಕ್ತಿಯಿಲ್ಲದ ಶಬ್ದಗಳಿಂದ ವಾಕ್ಯವಾಗುವುದಿಲ್ಲ ; ಯಾವೊಂದು ಪೂರ್ಣಾಭಿಪ್ರಾಯವೂ ವ್ಯಕ್ತವಾಗುವುದಿಲ್ಲ. ವಿಭಕ್ತಿರಹಿತ ಶಬ್ದಗಳ ಪುಂಜ ಪೂರ್ಣಾಭಿಪ್ರಾಯ ಶೂನ್ಯ. ಅದು ಕಂಡರಿಯದ ಕೇಳಿ ತಿಳಿಯದ ಅಪರಿಚಿತ ವ್ಯಕ್ತಿಗಳು ಒಂದೆಡೆ ಸೇರಿದಂತೆ ಉದ್ದೇಶ ರಹಿತ. ಆದುದರಿಂದಲೇ ಭಾಷೆಯಲ್ಲಿ ವಿಭಕ್ತಿಯ ಸ್ಥಾನ ಹಿರಿದು. ನಾಮ ವಿಭಕ್ತಿಗಳು, ಅವುಗಳ ಸಂಖ್ಯೆ–ಸ್ವರೂಪ–ವಿಷಯಗಳಲ್ಲಿ ಬಹಳ ವಿವಾದಗಳು ವಿದ್ವಾಂಸರೊಳಗೆ ನಡೆಯುತ್ತ ಬಂದಿವೆ.

ಸಂಸ್ಕೃತದಲ್ಲಿ ವಿಭಕ್ತಿಗಳು ಏಳು. ಕನ್ನಡದಲ್ಲಿಯೂ ವೈಯಾಕರಣರು ಸಪ್ತ ವಿಭಕ್ತಿಗಳನ್ನು ವಿವರಿಸಿದ್ದಾರೆ. ಜಾತಿ–ರೂಪ ವೈಶಿಷ್ಟ್ಯಗಳಿಂದ ಪರಸ್ಪರ ಭಿನ್ನವಾದ ಭಾಷಾವರ್ಗಕ್ಕೆ ಸೇರುವ ಈ ಎರಡು ಭಾಷೆಗಳೊಳಗೆ ವಿಭಕ್ತಿವಿಷಯದಲ್ಲಿ ದೊಡ್ಡ ವ್ಯತ್ಯಾಸವಿದೆ. ಸಂಸ್ಕೃತದಲ್ಲಿ ವಿಭಕ್ತಿಯು ಪ್ರಕೃತಿಯೊಡನೆ

---

4 ಕೇಶಿರಾಜ-ಶಬ್ದಮಣಿದರ್ಪಣ, ಸೂತ್ರ ೩೫.

5 ನಾಗವರ್ಮ–ಭಾಷಾಭೂಷಣ, ಸೂ. ೧೬.

ಬೆಸೆದು, ಪ್ರತ್ಯಯ ರೂಪವು ಗುರುತಿಸಲು ಸಿಗದೆ ಹೋಗುತ್ತದೆ ಅಲ್ಲಿ ಆಯಾ ಅಂತ್ಯಾಕ್ಷರ-ಲಿಂಗ-ವಚನಗಳಿಗೆ ಅನುಗುಣವಾಗಿ ಬೇರೆ ಬೇರೆ ವಿಭಕ್ತಿಯನ್ನುಳ್ಳ ಪದರೂಪಗಳಿರುತ್ತವೆ. ತುಲನೆಗಾಗಿ ಆಂಗ್ಲಭಾಷೆಯನ್ನು ಈ ಸಂದರ್ಭದಲ್ಲಿ ಲಕ್ಷಿಸುವುದಾದರೆ, ಅದರ ಕ್ರಮ ಇನ್ನೂ ಬೇರೆ. ಅಲ್ಲಿ ನಾವು ವಿಭಕ್ತಿ ಪ್ರತ್ಯಯಗಳು ಪ್ರಾತಿಪದಿಕಗಳ ಮುಂದೆ ಬಂದು ಸೇರುವುದಿಲ್ಲ. ಅವು (ಆ ಪ್ರತ್ಯಯಗಳು) ಪ್ರಾತಿಪದಿಕಗಳ ಹಿಂದೆ ಸ್ವತಂತ್ರ ಶಬ್ದಗಳಂತೆ ನಿಲ್ಲುತ್ತವೆ. ಅವನ್ನು "**ಪೂರ್ವ ಪ್ರತ್ಯಯಗಳು**"(Prepositions) ಎನ್ನುರು.[6]

ಸಪ್ತವಿಭಕ್ತಿಗಳ ರೂಪವನ್ನು ಇಂಗ್ಲಿಷಿನ ಪ್ರಾತಿಪದಿಕವೊಂದಕ್ಕೆ ಹಚ್ಚಿದಾಗ ಈ ಕೆಳಗಿನ ರೂಪಗಳಾಗಬಹುದು.

ಪ್ರಥಮಾ ವಿಭಕ್ತಿ	Tree
ದ್ವಿತೀಯಾ ,,	Tree
ತೃತೀಯಾ ,,	By the tree (with the tree)
ಚತುರ್ಥೀ ,,	To the tree
ಪಂಚಮೀ ,,	From the tree
ಷಷ್ಠೀ ,,	Of the tree
ಸಪ್ತಮೀ ,,	In the tree (On the tree)
ಸಂಬೋಧನಾ ವಿಭಕ್ತಿ	O, tree

ಈ ಉದಾಹರಣಗಳಿಂದ ಪ್ರಥಮೆ (ಸಂಬೋಧನೆ), ದ್ವಿತೀಯೆಗಳಿಗಾಗಿ ಯಾವೊಂದು ಪೂರ್ವ ಪ್ರತ್ಯಯವೂ ಇಂಗ್ಲೀಷಿಗೆ ಆವಶ್ಯಕವಾಗುವುದಿಲ್ಲವೆಂದು ತಿಳಿಯಬಹುದು.

ಭಾರತೀಯ ಪ್ರಮುಖ ಭಾಷೆಗಳಲ್ಲಿ ಒಂದಾಗಿರುವ ಹಿಂದಿಯ ಸರ್ವನಾಮಗಳಲ್ಲಿ ಮಾತ್ರ, ಪ್ರತ್ಯಯಗಳು ಸೇರಿದ ಪದಗಳಾಗುತ್ತವೆ. ಉಳಿದ ನಾಮ

---

[6] Preposition ಎಂಬುದನ್ನು 'ಉಪಸರ್ಗ' ಎನ್ನುವುದುಂಟು. ಉಪಸರ್ಗವು ಪ್ರಾತಿಪದಿಕದ ಹಿಂದೆ ಬಂದು ಸೇರುವಂತೆ ಇದು ಸೇರುವುದಿಲ್ಲ.

ಪ್ರಾತಿಪದಿಕಗಳಿಗೆ ಬರುವ ವಿಭಕ್ತಿಪ್ರತ್ಯಯಗಳು ಪ್ರಕೃತಿಯೊಡನೆ ಸೇರದೆ ಪರಪ್ರತ್ಯಯಗಳಾಗಿ ದೂರ ನಿಲ್ಲುತ್ತವೆ.

ಉದಾಹರಣೆ :—

	ಸರ್ವನಾಮದಲ್ಲಿ	ನಾಮವಾಚಿಯಲ್ಲಿ
ಪ್ರ.	ಮೈ (ಮೈನೇ)	ರಾಮ್
ದ್ವಿ.	ಮುಝ್‌ಕೋ (ಮುಝೇ)	ರಾಮ್ ಕೋ
ತೃ.	ಮುಝ್‌ಸೇ	ರಾಮ್ ಸೇ
ಚ.	ಮುಝ್‌ಕೋ (ಮುಝೇ)	ರಾಮ್ ಕೋ
ಪಂ.	ಮುಝ್‌ಸೇ	ರಾಮ್ ಸೇ
ಷ.	ಮೇರಾ (ಮೇರೀ, ಮೇರೇ)	ರಾಮ್ ಕಾ, ರಾಮ್ ಕೀ, ರಾಮ್‌ಕೇ
ಸ.	ಮುಝ್‌ಪರ್ (ಮೇ)	ರಾಮ್ ಪರ್, ರಾಮ್ ಮೇ

ಕನ್ನಡದಲ್ಲಿ, ಮುಖ್ಯವಾಗಿ ಹಳಗನ್ನಡದಲ್ಲಿ ವಿಭಕ್ತಿಪ್ರತ್ಯಯಗಳು ಪ್ರಕೃತಿಯೊಡನೆ ಸೇರಿಕೊಳ್ಳುತ್ತವೆ. ಹೊಸಗನ್ನಡದ ಪಂಚಮೀ ರೂಪದಲ್ಲಿ ಮಾತ್ರ ಪ್ರತ್ಯಯವು ದೂರ ನಿಲ್ಲುವುದು ಕಾಣುತ್ತದೆ.

	ಹಳಗನ್ನಡ	ಹೊಸಗನ್ನಡ
ಪ್ರ.	ರಾಮಂ	ರಾಮನು
ದ್ವಿ.	ರಾಮನಂ	ರಾಮನನ್ನು
ತೃ.	ರಾಮನಿಂ, (ಇಂದೆ, ಇಂದಂ)	ರಾಮನಿಂದ
ಚ.	ರಾಮಂಗೆ	ರಾಮನಿಗೆ
ಪಂ.	ರಾಮನತ್ತಣಿಂ	ರಾಮನ ದೆಸೆಯಿಂದ
ಷ.	ರಾಮನ	ರಾಮನ
	ರಾಮನೊಳ್	ರಾಮನಲ್ಲಿ

ಮೇಲೆ ಕಾಣಿಸಿದ ವಿವರದಿಂದ ಇಂಗ್ಲಿಷಿನಲ್ಲಿ ಪ್ರತ್ಯಯದ ಹೊಂದಾಣಿಕೆಯ ಕ್ರಮವನ್ನು ಬಿಟ್ಟರೆ, ಸಂಸ್ಕೃತ–ಹಿಂದೀ-ಕನ್ನಡ ಮತ್ತಿತರ ದ್ರಾವಿಡ ಭಾಷೆಗಳಲ್ಲಿ ವಿಭಕ್ತಿಪ್ರತ್ಯಯವು ಪರಪ್ರತ್ಯಯ (post-position) ಎನಿಸಿರುವುದು ಸ್ಪಷ್ಟವಾಗುತ್ತದೆ. ಈ ಪ್ರತ್ಯಯಗಳು ದ್ರಾವಿಡ ಭಾಷೆಗಳಲ್ಲಿ ಪ್ರಾತಿಪದಿಕದೊಡನೆ ಸೇರಿದರೂ ಗುರುತಿಸಲು ಸಿಗುತ್ತವೆ. ಆದರೆ ಸಂಸ್ಕೃತದಲ್ಲಿ ಪ್ರತ್ಯಯವನ್ನು ಗುರುತಿಸಲಿಕ್ಕಾಗುವುದಿಲ್ಲ. ಪ್ರತ್ಯಯಯುಕ್ತ ಶಬ್ದವು ಒಂದು ವಿಶಿಷ್ಟ ರೂಪದ ಸ್ವತಂತ್ರ ಶಬ್ದದಂತೆ ಕಾಣಿಸುವುದು. ಸಂಸ್ಕೃತದಲ್ಲಿ ಏಕ, ದ್ವಿ, ಬಹು–ಎಂದು ಮೂರು ವಚನಗಳೂ ಇವೆ.

ಪ್ರ.	ರಾಮಃ	ರಾಮೌ	ರಾಮಾಃ
ದ್ವಿ.	ರಾಮಂ	ರಾಮೌ	ರಾಮಾನ್
ತೃ.	ರಾಮೇಣ	ರಾಮಾಭ್ಯಾಂ	ರಾಮೈಃ
ಚ.	ರಾಮಾಯ	ರಾಮಾಭ್ಯಾಂ	ರಾಮೇಭ್ಯಃ
ಪಂ.	ರಾಮಾತ್	ರಾಮಾಭ್ಯಾಂ	ರಾಮೇಭ್ಯಃ
ಷ.	ರಾಮಸ್ಯ	ರಾಮಯೋಃ	ರಾಮಾಣಾಂ
ಸ.	ರಾಮೇ	ರಾಮಯೋಃ	ರಾಮೇಷು
ಸಂ.	ಹೇ ರಾಮ	ಹೇ ರಾಮೌ	ಹೇರಾಮಾಃ

ಕನ್ನಡದ ಈ ನಾಮವಿಭಕ್ತಿಗಳು ಹಿಂದೆ ಸ್ವತಂತ್ರ ಶಬ್ದಗಳೇ ಆಗಿದ್ದು, ಕಾಲಕ್ರಮದಲ್ಲಿ ಪ್ರತ್ಯಯಗಳಾಗಿ ಪರಿಣಮಿಸಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಈ ಅಭಿಪ್ರಾಯಕ್ಕೆ ಪಂಚಮಿಯ "ಅತ್ತಣಿಂ" ಸಪ್ತಮಿಯ "ಅಲ್ಲಿ" ಎಂಬೀ ವಿಭಕ್ತಿರೂಪಗಳು ಸ್ವತಂತ್ರ ಶಬ್ದಗಳಾಗಿ ಕಾಣುತ್ತಿರುವುದು ಪುಷ್ಟಿ ಕೊಡುತ್ತದೆ. ಹೊಸಗನ್ನಡದಲ್ಲಿ ಪಂಚಮೀ ವಿಭಕ್ತಿಯೆನ್ನಲಾಗುವ "ದೆಸೆಯಿಂದ" ಎಂಬುದಂತೂ ಸ್ವತಂತ್ರ ಶಬ್ದವಾಗಿರುವುದು ಸ್ಪಷ್ಟವಿದೆ. ಇತರವುಗಳಾದ ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಷಷ್ಠಿ–ರೂಪಗಳು ಅವನು, ಅವನನ್ನು, ಅವನಿಂದ ಅವನಿಗೆ, ಅವನ–ಎಂಬ ಸರ್ವನಾಮಗಳ

ಸಂಕ್ಷಿಪ್ತ ರೂಪಗಳಂತೆ ಭಾಸವಾಗುತ್ತವೆ. ಸಪ್ತಮಿಯ ಒಳ್-ಎಂಬುದು 'ಒಳಗೆ' ಎಂಬುದರ ಸಂಕ್ಷೇಪದಂತಿದೆ.

ಕನ್ನಡದಲ್ಲಿ ಸಂಬೋಧನೆಯ ಹೊರತಾಗಿ ವಿಭಕ್ತಿಗಳು ಏಳು-ಎಂದು ಕವಿರಾಜಮಾರ್ಗ (೧-೧೧೫), ಭಾಷಾಭೂಷಣ, ಶಬ್ದಸ್ಮೃತಿ, ಶಬ್ದಮಣಿ ದರ್ಪಣ, ಶಬ್ದಾನುಶಾಸನ,ಮುಂತಾದ ಶ್ರೇಷ್ಠ ಲಕ್ಷಣ ಗ್ರಂಥಗಳಲ್ಲೆಲ್ಲ ಹೇಳಿದೆ. ಆದರೆ ಕನ್ನಡದ ನಾಮವಿಭಕ್ತಿಗಳ ಕುರಿತು ವಿವೇಚನೆ ಮಾಡಿರುವ ವಿದ್ವಾಂಸರು ಕನ್ನಡದಲ್ಲಿ ವಿಭಕ್ತಿಗಳ ಸಂಖ್ಯೆಯನ್ನೇ ಇಳಿಸಿದ್ದಾರೆ. ಸಂಸ್ಕೃತವನ್ನನುಸರಿಸಿ ದ್ರಾವಿಡಭಾಷೆಗಳಲ್ಲಿ ವಿಭಕ್ತಿಗಳು ಏಳೆಂದುದು ದೊಡ್ಡ ಪ್ರಮಾದವೆಂದು ಕಾಲ್ಡ್‌ವೆಲರು ಹೇಳಿದ್ದಾರೆ :

The imitation of Sanskrit in this particular was certainly an error ; for whilst in Sanskrit there are eight cases only, the number of cases in Tamil,Telugu and C., is almost indefinite.[6]

ಕೆಲವು ವಿದ್ವಾಂಸರ ಅಭಿಮತದಂತೆ ಕನ್ನಡದಲ್ಲಿ ಪ್ರಥಮಾವಿಭಕ್ತಿ ಇಲ್ಲ. "ಪಂಚಮೀ ವಿಭಕ್ತಿ ಕನ್ನಡದಲ್ಲಿ ಸಹಜವಾಗಿ ಇಲ್ಲ." (ಕನ್ನಡ ಕೈಪಿಡಿ) ಎಂದಿದ್ದಾರೆ. "ಸಪ್ತಮೀ ವಿಭಕ್ತಿ ಎಂಬುದು ಒಂದು ಪ್ರತ್ಯಯದಂತಿರದೆ, ಅದೊಂದು ಉಪಪದವಾಗಿದೆ-ಆದುದರಿಂದ ಕನ್ನಡದಲ್ಲಿ ವಿಭಕ್ತಿಗಳು ನಾಲ್ಕೆ"[7], ಕನ್ನಡದಲ್ಲಿ ತೃತೀಯಾ ವಿಭಕ್ತಿ ಪ್ರತ್ಯಯವು ಷಷ್ಠಿಯನಂತರ ಬರುತ್ತದೆ. ಇದಕ್ಕೆ ಉದಾಹರಣಗಳು-ರಾಮನಿಂದ, ಮರದಿಂದ, ಎರಡರಿಂದ, ಕಾಡಿನಿಂದ. ಹೊಳೆಯಿಂದ ಎಂಬಿವು.[8] (ಇದರ ವಿವೇಚನೆಯನ್ನು 'ಪಂಚಮೀ ವಿಭಕ್ತಿ' ಪುಟಗಳಲ್ಲಿ ಕಾಣಬಹುದು.)

---

[6] **Caldwell**—Comparative Grammar, 1956. page 254.

[7] ರಾಷ್ಟ್ರಮತ ವಾರಪತ್ರಿಕೆ (4-11-1962), ಮಂಗಳೂರು-ಇದರಲ್ಲಿ ಡಿ. ಎನ್. ಶಂಕರಭಟ್ಟರ "ಕನ್ನಡದಲ್ಲಿ ವಿಭಕ್ತಿಗಳೆಷ್ಟು" ಎಂಬ ಲೇಖನ.

[8] ಅದರಲ್ಲೇ

ಹೀಗೆ ಹೇಳುತ್ತ ಹೋದರೆ, ರಾಮನನ್ನು, ಕಾಡನ್ನು, ಹೊಳೆಯನ್ನು- ಎಂಬ ದ್ವಿತೀಯಾ ವಿಭಕ್ತಿಯೂ ಷಷ್ಠಿಯನಂತರ ಬಂದಿದೆಯೆನ್ನಬಹುದಲ್ಲವೆ? ಕೆಲವೆಡೆ ವಿಭಕ್ತಿಲೋಪವಿದೆಯೆಂದ ಮಾತ್ರಕ್ಕೆ ಆಯಾ ವಿಭಕ್ತಿಯೇ ಇಲ್ಲವೆನ್ನುವುದು ಸರಿಯಲ್ಲ. ಅಂದು, ಇಂದು ಎಂಬಿತ್ಯಾದಿ ಕಾಲವಾಚಕಗಳಿಗೂ ಅಲ್ಲಿ, ಇಲ್ಲಿ-ಇತ್ಯಾದಿ ಸ್ಥಾನವಾಚಕಗಳಿಗೂ ಮೂಡ, ತೆಂಕ, ಅತ್ತ, ಇತ್ತ ಮುಂತಾದ ದಿಗ್ವಾಚಕಗಳಿಗೂ ಸಪ್ತಮೀವಿಭಕ್ತಿ ಲೋಪವಾಗುವುದಷ್ಟೆ. ಇದರಿಂದ ಕನ್ನಡದಲ್ಲಿ ಸಪ್ತಮೀವಿಭಕ್ತಿ ಇಲ್ಲವೆನ್ನಲಾಗುವುದೆ? ಸಪ್ತಮಿಯಲ್ಲಿ ಬರುವ 'ಅಲ್ಲಿ' ಎಂಬುದು ಉಪಪದದಂತೆ ಇದ್ದರೂ "ಒಳ್" ಎಂಬುದಂತೂ ಪ್ರತ್ಯಯವೆಂಬುದು ನಿರ್ವಿವಾದವೆನಿಸದೆ? ದ್ವಿತೀಯೆ ತೃತೀಯೆಗಳು ಷಷ್ಠಿಯನಂತರ ಬರುತ್ತವೆಯೆಂಬುದು ಪರಿಶೀಲನೆಯ ದೋಷವೆಂದೆನಿಸದೆ? ಎಂಬುದನ್ನು ವಿವೇಚಿಸಬೇಕು. ಕನ್ನಡದಲ್ಲಿ ವಿಭಕ್ತಿಗಳು ಏಳೆಂದುದರಲ್ಲಿ ಔಚಿತ್ಯವಿದೆಯೆ? ಇಲ್ಲವೆ? ಅವುಗಳ ಪ್ರತ್ಯಯ ಸಂಜ್ಞೆಗಳಾವುವು? ಎಂಬುದರ ಒಂದು ಅಧ್ಯಯನ ಆವಶ್ಯಕ.

ಕನ್ನಡದಲ್ಲಿ ಉಜ್ವಲ ವ್ಯಾಕರಣ ಗ್ರಂಥಕರ್ತೃಗಳೆನಿಸಿದ ನಾಗವರ್ಮ, ಕೇಶಿರಾಜ, ಭಟ್ಟಾಕಲಂಕರು ಕನ್ನಡದ ಏಳು ವಿಭಕ್ತಿಪ್ರತ್ಯಯಗಳನ್ನು ಕೆಳಗಿನಂತೆ ತಿಳಿಸುತ್ತಾರೆ.

ಭಾಷಾಭೂಷಣ (ಸೂ. ೪೦)—ಮಮಿಮ್ಕೆಯರದೊಳ್ ಅಂದರೆ,

ಮ್, ಅಮ್, ಇಮ್, ಕೆ, ಅರ್, ಅದ್, ಒಳ್

ಶಬ್ದಸ್ಮೃತಿ (ಸೂ. ೧೫)—ಮಮಿಂಕೆಯದದೊಳ್, ಅಂದರೆ,

ಮ್, ಅಮ್, ಇಮ್, ಕೆ, ಅತ್, ಅತ್, ಒಳ್.

ಶಬ್ದಮಣಿದರ್ಪಣ (ಸೂ. ೧೦೩)—ಮಮಿಂಕೆಯದದೊಳ್ (....ಯದವೊಳ್)

ವಿವರ ಮೇಲಿನಂತೆ.

ಶಬ್ದಾನುಶಾಸನ (ಸೂ. ೧೬)—ಮಮಿಮ್ಗೆದತ್ತಣಿಮದೊಳ್-ಅಂದರೆ

ಮ್, ಅಮ್, ಇಮ್, ಗೆತ್, ಅತ್ತಣಿಂ, ಅದ್, ಒಳ್.

ಈಗ ಈ ವಿಭಕ್ತಿ ಪ್ರತ್ಯಯ ರೂಪಗಳನ್ನು ಪರಿಶೀಲಿಸುವ.

ಪ್ರಥಮಾ ವಿಭಕ್ತಿ

ಪ್ರಥಮಾ ವಿಭಕ್ತಿಯ ಪ್ರತ್ಯಯವು 'ಮ್' ಎಂಬುದಾಗಿ ಹಿಂದೆ ಉದಾಹರಿಸಿದ ವ್ಯಾಕರಣ ಶಾಸ್ತ್ರಗಳಲ್ಲೆಲ್ಲ ಹೇಳಿದೆ. ಈ ಪ್ರಥಮಾ ವಿಭಕ್ತಿಯ ಪ್ರಯೋಗವು ಲಿಂಗ-ಅರ್ಥ-ವಚನ-ಸಂಬೋಧನಗಳಲ್ಲಿ ಬರುವುದೆಂದು ಶಬ್ದಮಣಿದರ್ಪಣದಲ್ಲಿ ಹೇಳಿದೆ. ಈ ಪ್ರತ್ಯಯದ "ಮ್" ಎಂಬುದು ವ್ಯಂಜನವಲ್ಲ, ಇದು ಅನುಸ್ವಾರದ ಉಚ್ಚಾರಣೆ. "ಮೋಽನುಸ್ವಾರಃ" ಎಂಬ ಸೂತ್ರವು ಇದನ್ನು ಸಮರ್ಥಿಸುತ್ತದೆ. ಅಕಾರಾಂತದ ಪ್ರಥಮೈಕ ವಚನದ ರೂಪವು ಅನುಸ್ವಾರದಿಂದ ಕೂಡಿರಬೇಕೆಂದು ಹೇಳಿದೆ.

ಬಿಂದುವದಂತಕ್ಕೆಳಿದೆಡೆ
ಗೆಂದುಂ ಪ್ರಥಮೈಕವಚನದೊಳ್ ಲೋಪಮುದಂ
ತಂ ದೊರೆವಡೆದಿದಿರೊಳ್ ಸ್ವರ
ಮೊಂದಿರೆ ಪುಲ್ಲಿಂಗದಲ್ಲಿ ನಾಗಮುಮಕ್ಕುಂ[9]

ಈ ಸೂತ್ರದಂತೆ, ಈ ಪ್ರಥಮಾವಿಭಕ್ತಿಯ ಬಿಂದುವಿಗೆ ಸ್ವರ ಪರವಾದಾಗ ಪುಲ್ಲಿಂಗ-ಸ್ತ್ರೀಲಿಂಗಗಳಲ್ಲಿ "ನ್" ಎಂಬುದೂ ನಪುಂಸಕಲಿಂಗದಲ್ಲಿ ವಿಕಲ್ಪವಾಗಿ "ಮ್" "ನ್" ಎಂಬಿವೆರಡೂ ಆ ಶಬ್ದ ಸಂಸ್ಕೃತವಾಗಿದ್ದಲ್ಲಿ 'ಮ್' ಮಾತ್ರವೂ ಬರುವುದೆಂಬುದು ವ್ಯಾಕರಣೋಕ್ತವೂ ವ್ಯಾವಹಾರಿಕವೂ ಆಗಿದೆ. ರಾಮಂ, ಜಲಂ, ಕೊಳಂ—ಎಂಬಿವಕ್ಕೆ ಸ್ವರಾದಿಯಾಗಿರುವ ವಿಭಕ್ತಿ ಪ್ರತ್ಯಯಗಳು ಹತ್ತಿದಾಗ ರಾಮನಂ, ಜಲಮಂ, ಕೊಳಮಂ (ಕೊಳನಂ)-ಎಂಬ ರೂಪಗಳಾಗುತ್ತವೆ. ವಿಭಕ್ತಿಯ ಅನುಸ್ವಾರಕ್ಕೆ ಸ್ವರ ಪರವಾದಾಗ ಆ 'ಮ' ಕಾರಕ್ಕೆ ವಕಾರಾದೇಶವಾಗುವುದು.

ಉದಾಹರಣೆ—ಕಾಣ್ಬಂದವೆಂತು, ಶೌಚವಣ್ಮು-ಇತ್ಯಾದಿ.

ಹೊಸಗನ್ನಡದಲ್ಲಿ ವ್ಯಂಜನಾಂತವನ್ನು ಸ್ವರಾಂತಗೊಳಿಸುವ ಪರಿಪಾಠ

---

9 ಶಬ್ದಮಣಿದರ್ಪಣ, ಸೂತ್ರ ೧೧೫.

ವಿರುವುದರಿಂದ ರಾಮನು,ಜಲವು,ಕೊಳವು,ಮರವು-ಎಂಬ ಪ್ರಥಮಾ ವಿಭಕ್ತಿಯ ರೂಪಗಳಿವೆ. ಮರವು, ಮರವನ್ನು-ಎಂಬೀ ರೂಪಗಳ ಮಧ್ಯಸಂಧಿಯನ್ನು ಬೇರ್ಪಡಿಸುವಾಗ ಕೆಲವರು ಮರ+ಉ, ಮರ+ಅನ್ನು—ಹೀಗೆ ತಪ್ಪಾಗಿ, ವಿಂಗಡಿಸಿ, ಈ ಸಂಧಿಕಾರ್ಯಗಳನ್ನು "**ವಕಾರಾಗಮ**" ಎನ್ನುವುದುಂಟು, ಇದು ಸರಿಯಲ್ಲ. ಇಲ್ಲಿ ಮರಂ+ಉ, ಮರಂ+ಅನ್ನು—ಎಂಬಿವೇ ಸರಿಯಾದ ವಿಂಗಡಣೆಗಳು. ಹೀಗೆ ಸಂಧಿಯಾಗಿ ಬಂದ ಮಕಾರಕ್ಕೆ ವಕಾರ, ಆದೇಶವಾಗಿದೆ—ಎನ್ನುವುದೇ ಸಂಧಿಕಾರ್ಯದ ಶುದ್ಧವಾದ ವಿವರಣೆ. ಇದನ್ನೇ ಕಾಲ್ಡ್ವೆಲರು ಹೇಳಿರುವ ಪ್ರಕಾರವಿದು--

Modern Canarese appears to make no use of am (ಅಂ) whatever, either in the singular or the plural, but it is evident that the final vu (ವು) of many Canarese nouns is a softened form of m (ಮ್) [10]

ಈ ಪರಿವೃತ್ತಿ ಹೊಸಗನ್ನಡದಲ್ಲಿ ಮಾತ್ರವಲ್ಲ, ಹಳಗನ್ನಡದಲ್ಲಿಯೂ ಇದೆ. ಪ್ರಥಮಾವಿಭಕ್ತಿಯ ಅನುಸ್ವಾರದ ಮಕಾರವನ್ನು ವಕಾರವಾಗಿ ಪರಿವರ್ತಿಸಿರುವುದಕ್ಕೆ ಕಾವ್ಯೋದಾಹರಣೆಯಿದು :—

ಪದಪಿಂ ಪೇೞ್ವುದಿಕ್ಕೆಡದತ್ಯನೂನ ಪದ**ವ**ತ್ಯಾಶ್ಚರ್ಯವತ್ಯುಜ್ವಲ
ಪ್ರದ**ವ** ತ್ಯೂರ್ಜಿತ ವತ್ಯಸಾಧ್ಯಗುಣ **ವ**ತ್ಯಾನಂದ**ವ**ತ್ಯುನ್ನತಂ. [11]

ತಪವಿಂತಿದು ಮದ್ವಿರಹಾ
ತಪವತ್ಯಧಿಕಂ...[12]

ಹಳಗನ್ನಡದಲ್ಲಿ ಅಕಾರಾಂತ ಪುಲ್ಲಿಂಗದ ವಿಭಕ್ತಿಪ್ರತ್ಯಯವಾಗಿರುವ ಅನುಸ್ವಾರವನ್ನು "**ನ್**" ಎಂದು ಹಲವರು ವಿದ್ವಾಂಸರು ನಿರ್ಣಯಿಸಿದ್ದಾರೆ. ಆ ಪ್ರಥಮಾವಿಭಕ್ತಿಯ ಅನುಸ್ವಾರದ ಧ್ವನಿಗೆ ಸ್ವರ ಪರವಾದಾಗ ನಕಾರವು

---

10 Caldwell—Comparative Grammar, page 256.

11 ಹರಿಹರ–ಗಿರಿಜಾಕಲ್ಯಾಣ ಆ. ೪, ಪದ್ಯ ೧೨.

12 ಅದೇ ಗ್ರಂಥ ಆ. ೫, ಪದ್ಯ ೪೮.

ಬರುವುದೂ ಹೊಸಗನ್ನಡದಲ್ಲಿ ಪ್ರಥಮಾವಿಭಕ್ತಿಯಲ್ಲಿ ರಾಮನು, ಈಶ್ವರನು-ಹೀಗೆ ಉತ್ವಯುಕ್ತ ನಕಾರಾಂತವಾಗಿ ಉಚ್ಚಾರಣೆ ಮಾಡುವುದೂ ಇದಕ್ಕೆ ತಕ್ಕ ಪ್ರಮಾಣಗಳನ್ನೊದಗಿಸುತ್ತದೆ. ಇವಲ್ಲದೆ ಪ್ರಾಕ್ಕಿನ ಕಾರಣಗಳೂ ಇವೆ. ತಮಿಳಿನಲ್ಲಿ ರಾಮನ್, ಕೃಷ್ಣನ್ ಎಂದು ನಕಾರಯುಕ್ತವಾಗಿ ಪ್ರಥಮೆಯಿದೆ. ತಮಿಳಿಗೆ ಸಮೀಪವರ್ತಿಯೆನಿಸುವ **"ಪೂರ್ವದ ಹಳಗನ್ನಡ"**ದಲ್ಲಿ ಬರೆದಿರುವ ಶಾಸನಗಳಲ್ಲಿ (ಕ್ರಿ.ಶ. 700) **ಮುನಿಪ್ರವರನ್**, **ವಿಪರೀತನ್**-ಇತ್ಯಾದಿಯಾಗಿ **"ನ್"** ಎಂಬ ಪ್ರಥಮಾಂತ ಪದಗಳಿವೆ. ಇವನ್ನು ಲೆಕ್ಕಿಸಿದ ಕನ್ನಡ ಭಾಷಾ ಸಂಶೋಧಕರು ಕೆಲವರು ಅಕಾರಾಂತ ಪುಲ್ಲಿಂಗ-ಸ್ತ್ರೀಲಿಂಗಗಳ ಪ್ರಥಮಾ ವಿಭಕ್ತಿ ಪ್ರತ್ಯಯವನ್ನು **"ನ್"** ಎಂಬುದಾಗಿ ಎಣಿಸಿದ್ದಾರೆ. ಅಕಾರಾಂತ ದೇಶೀ ಶಬ್ದಗಳೇ ಇಲ್ಲವೆಂದೂ, ಅವೆಲ್ಲವೂ ವ್ಯಂಜನಾಂತಗಳೆಂದೂ (ಅಮ್ಮನ್, ಮಗನ್-ಎಂಬಂತೆ) ಅಭಿಪ್ರಾಯವನ್ನೂ ಕೊಡುತ್ತಾರೆ.[13] ಈ ಎಣಿಕೆಯುವರಲ್ಲಿ ಹಿರಿಯರೆನಿಸಿದ **"ಶ್ರೀ"**ಯಂಥವರು ತಮ್ಮ ಹಳಗನ್ನಡದ ಸಾಹಿತ್ಯ ಸೃಜನೆಯಲ್ಲಿ **"ನ್"** ಎಂಬುದನ್ನೇ ಪ್ರತ್ಯಯವಾಗಿ ಬಳಸಿಕೊಂಡರು. ಪ್ರಥಮೆಯಲ್ಲಿ ಮಾತ್ರವೇ ಅಲ್ಲ, ದ್ವಿತೀಯೆ-ತೃತೀಯೆಗಳಲ್ಲಿಯೂ ಅನುಸ್ವಾರವನ್ನು ಳಿದು ನಕಾರವ್ಯಂಜನವನ್ನೇ ಪ್ರಯೋಗಿಸಿರುವರು—

...ಕೂಗಿದನ್ ; ತಲೆಯುನ್
ಚಚ್ಚಿದನ್; ಧೊಪ್ಪೆನುತೆ ಕೆಡೆದನ್ ಆ ಕೆಡೆದ ಪೆಣಬಣಬೆಯೊಳ್
ತಳ್ತಿದನ್, ಬಲ್ಪಿಡಿಯುುಗುರ್ಗಳಿನ್ ನವಿರ್ಗಳನ್.
ಒಂದು ಮಾತಾಡದೆಯೆ ಕುಳ್ತನ್.[14]

ತಮಿಳಿನ ಅನುಕರಣದಿಂದ ಮೂಡಿರುವ ಇಂಥ ಕೆಲವೇ ಆದ ಪ್ರಯೋಗಗಳನ್ನು ಬಿಟ್ಟರೆ, ಕನ್ನಡದ ಪ್ರಾಚೀನ ಗ್ರಂಥಗಳಲ್ಲಿ ಇಂತಹ ವಿಭಕ್ತಿ ಪ್ರಯೋಗ ಕಾಣುವುದಿಲ್ಲ. ಕಿ. ಶ. ೯೨೦ ಕಾಲದ 'ವಡ್ಡಾರಾಧನೆ'ಯಲ್ಲಿ ಪ್ರಥಮಾ ವಿಭಕ್ತಿ ಪ್ರತ್ಯಯವು ಅನುಸ್ವಾರೋಚ್ಚಾರಣೆಯೇ ಆಗಿದೆ. ದ್ವಿತೀಯೆ ತೃತೀಯೆಗಳು ಅಂ, ಇಂ-ಎಂದು ಅಂತ್ಯಾನುಸ್ವಾರಗಳೇ ಆಗಿರುತ್ತವೆ.

---

13 ಹಂಪನಾ—ದ್ರಾವಿಡಭಾಷಾ ವಿಜ್ಞಾನ, (1966) ಪುಟ ೨೧೩.

14 ಬಿ. ಎಂ. ಶ್ರೀ—ಅಶ್ವತ್ಥಾಮನ್, ಪುಟ ೧೩.

"ನ್" ಎಂಬುದು ಉಚ್ಚಾರಣಾ ಸೌಲಭ್ಯವೇ ವೈಶಿಷ್ಟ್ಯವಾಗುಳ್ಳ ಕನ್ನಡಕ್ಕೆ ಸಹಜವೂ ಆಗಿಲ್ಲ, ಉಚ್ಚಾರಣೆಗೆ ಕೊಚ್ಚರಟೆಯೆನಿಸುವುದೆಂದು ಮೇಲೆ ಕೊಟ್ಟ ಉದಾಹರಣದಿಂದ ಗೊತ್ತಾಗುವುದು. ಹೀಗೆ ಉಚ್ಚಾರಣೆಗೆ ಚೆನ್ನಲ್ಲವೆಂಬುದನ್ನು ಲಕ್ಷಿಸಿಯೇ ಹಿಂದಣ ಕನ್ನಡ ಕವಿಗಳು ಪ್ರಥಮಾ ವಿಭಕ್ತಿ ಪ್ರತ್ಯಯವನ್ನು ತಮಿಳಿನಂತೆ ನಕಾರ ವ್ಯಂಜನವಾಗಿಟ್ಟುಕೊಳ್ಳದೆ, ಕನ್ನಡಕ್ಕೆ ಸಹಜವೆನಿಸುವಂತೆ ಅನುಸ್ವಾರವನ್ನಾಗಿ ಇಟ್ಟುಕೊಂಡರು-ಎಂಬುದು ಕವಿ ರಾಜಮಾರ್ಗ, ವಡ್ಡಾರಾಧನೆ, ವಿಕ್ರಮಾರ್ಜುನವಿಜಯಾದಿ ಗ್ರಂಥಗಳ ಪ್ರಯೋಗದಿಂದ ತಿಳಿದು ಬರುವುದು; ಕಾವ್ಯ ಗ್ರಂಥಗಳ ಪ್ರಯೋಗಗಳನ್ನೇ ಲಕ್ಷ್ಯವಾಗಿಟ್ಟು ರಚಿಸಲಾದ ವ್ಯಾಕರಣ ಗ್ರಂಥಗಳಿಂದಲೂ ವೇದ್ಯವಾಗುವುದು. 'ನ್' ಎಂಬ ಪ್ರತ್ಯಯವನ್ನು ಅಸಹಜವಾಗಿ ಹಚ್ಚುವುದಕ್ಕಿಂತ ಹೊಸಗನ್ನಡ ರೂಪದಂತೆ ಪ್ರತ್ಯಯ ಲೋಪಮಾಡಿ, 'ರಾಮ ಬಂದ', 'ಅಕ್ಕ ಬಂದಳು' ಎನ್ನುವುದೇ ಚೆನ್ನು.

ಅಕಾರಾಂತ ಪುಲ್ಲಿಂಗದ ಪ್ರಥಮೈಕವಚನದಲ್ಲಿ "ನ್" ಎಂಬುದನ್ನೇ ಪ್ರತ್ಯಯವಾಗಿ ಒಪ್ಪುವ ಆಧುನಿಕರು ಅಕಾರಾಂತ ನಪುಂಸಕೈಕವಚನದಲ್ಲಿ (ಮರಂ-ಎಂಬಂತೆ) ಅನುಸ್ವಾರವನ್ನೇ ಪ್ರತ್ಯಯವಾಗಿ ಗಣಿಸುತ್ತಾರೆ. ಪುಲ್ಲಿಂಗ ದಲ್ಲಿ ಮಾತ್ರ "ಮ್" ಎಂಬುದನ್ನೇಕೋ ಉಪಯೋಗಿಸುವುದಿಲ್ಲ.

ವೈಯಾಕರಣರು ಅಕಾರಾಂತ ನಾಮ ಪ್ರಾತಿಪದಿಕಗಳಿಗೆ ಪ್ರಥಮೆಯಲ್ಲಿ ಅನುಸ್ವಾರವು ನಿತ್ಯವಾಗಿರಬೇಕೆಂದು ಘೋಷಿಸಿದರೂ ನಡುಗನ್ನಡ ಕಾಲದಿಂದ ಈ ನಿಯಮದ ಉಲ್ಲಂಘನೆ ನಡೆದಿದೆ:—

ಅರಸುಗಳಿಗಿದು **ವೀರ** ದ್ವಿಜರಿಗೆ
ಪರಮ ವೇದದ **ಸಾರ** ಯೋಗೀ
ಶ್ವರರ ತತ್ವ**ವಿಚಾರ** ಮಂತ್ರಿಜನಕ್ಕೆ ಬುದ್ಧಿ**ಗುಣ**
ವಿರಹಿಗಳ **ಶೃಂಗಾರ** ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು **ರಚಿಸಿದ ಕುಮಾರವ್ಯಾಸ** ಭಾರತವ ||
(ಗದುಗು **ಭಾರತ**)

ಆಧುನಿಕ ಕವಿಗಳಲ್ಲಿ ಕೆಲವರ ರಚನೆಗಳಲ್ಲಿ ಅಕಾರಾಂತ ಪ್ರಥಮೆಯನ್ನು ಅನುಸ್ವಾರಯುತ ಪ್ರತ್ಯಯಯುಕ್ತವಾಗಿಯೂ ಪ್ರತ್ಯಯರಹಿತವಾಗಿಯೂ ಕಾಣಿಸಿರುವ ಉದಾಹರಣೆಗಳೂ ಸಿಗುತ್ತವೆ. ಇಂತಹ ಪ್ರಯೋಗಗಳು ಯಾವ ನಿಯಮವನ್ನೂ ಅನುಸರಿಸದವೆಂದು ಹೇಳಬೇಕಾಗುತ್ತದೆ.

ಹೀಗೆ ಪ್ರಥಮಾವಿಭಕ್ತಿಯಲ್ಲಿ ಪ್ರತ್ಯಯಲೋಪವು ವ್ಯವಹಾರ್ಯವಾದರೂ ದ್ವಿತೀಯೆ-ತೃತೀಯೆ ಮುಂತಾದ ಮುಂದಿನ ವಿಭಕ್ತಿಗಳು ಬಂದಾಗ ಅವುಗಳ ಹಿಂದೆ ಪ್ರಥಮೆಯ ಪ್ರತ್ಯಯವು ಸೇರಲೇಬೇಕಾಗುತ್ತದೆ. ಅದರೆ, ಅಕಾರಾಂತ ನಪುಂಸಕಲಿಂಗದಲ್ಲಿ ಆ ಪ್ರಥಮಾ ವಿಭಕ್ತಿಯು ದ್ವಿತೀಯೆಯಲ್ಲಿ ಕಾಣಿಸಿ, ಮುಂದಿನ ವಿಭಕ್ತಿಗಳಲ್ಲಿ ಲೋಪವನ್ನೊಂದುವುದು—

ಉದಾ :

ಪುಲ್ಲಿಂಗದಲ್ಲಿ :— ರಾಮ (ಪ್ರಥಮೆಗೆ ಲೋಪ)

ರಾಮನನ್ನು	(ಪ್ರಥಮೆಸೇರಿಕೊಂಡಿದೆ)
ರಾಮನಿಂದ	,,
ರಾಮನಿಗೆ	,,
ರಾಮನತ್ತಣಿಂದ	,,
ರಾಮನ	,,
ರಾಮನಲ್ಲಿ	,,

ಸ್ತ್ರೀಲಿಂಗದಲ್ಲಿ :— ಅಕ್ಕ (ಪ್ರಥಮೆಗೆ ಲೋಪ)
ಅಕ್ಕನನ್ನು........ (ಇತ್ಯಾದಿ-ಪುಲ್ಲಿಂಗದಂತೆಯೇ ಪ್ರಯೋಗ)

ನಪುಂಸಕಲಿಂಗದಲ್ಲಿ :— ಮರ (ಪ್ರಥಮೆಗೆ ಲೋಪ)
ಮರವನ್ನು (ಪ್ರಥಮೆ ಸೇರಿಕೊಂಡಿದೆ. ಆದರೆ, ಆ ಮಕಾರಕ್ಕೆ ವಕಾರವು ಆದೇಶವಾಗಿದೆ.)

ಮರದಿಂದ
ಮರಕ್ಕೆ
ಮರದತ್ತಣಿಂದ
ಮರದ
ಮರದಲ್ಲಿ

ಈ ಉದಾಹರಣೆಗಳಿಂದ ಕನ್ನಡದಲ್ಲಿ ಪ್ರಥಮಾವಿಭಕ್ತಿಯೇ ಇಲ್ಲವೆನ್ನಲಾಗುವುದಿಲ್ಲ. ಪ್ರಥಮಾವಿಭಕ್ತಿಯಲ್ಲಿ ಆ ಪ್ರತ್ಯಯವನ್ನು ಲೋಪಿಸಬಹುದಾದರೂ ದ್ವಿತೀಯೆಯಲ್ಲಿ ಅದು ಇದ್ದೇ ತೀರಬೇಕಾಗುತ್ತದೆ. ಅಕಾರಾಂತ ನಾಮವಾಚಿಗಳಿಗೆ ಪ್ರಥಮೈಕವಚನದ ವಿಭಕ್ತಿಪ್ರತ್ಯಯವು "**ಮ್-ನ್**" ಎಂಬಿವಲ್ಲ-ಅನುಸ್ವಾರವೇ ಪ್ರತ್ಯಯವಾಗಿದೆ. ಆ ಪ್ರತ್ಯಯಕ್ಕೆ ಇತರ ವಿಭಕ್ತಿಸ್ವರಗಳು ಪರವಾದಾಗ ಪುಲ್ಲಿಂಗ-ಸ್ತ್ರೀಲಿಂಗಗಳಲ್ಲಿ "**ನ**" ಕಾರವೂ ನಪುಂಸಕದಲ್ಲಿ '**ಮ**' ಕಾರವೂ ಆದೇಶವಾಗುವುದೆಂಬುದೇ ಸರಿಯಾದ ಭಾಷ್ಯ. 'ಮ್' ಎಂಬುದಕ್ಕೆ ಪುನಃ 'ವ' ಕಾರಾದೇಶವಿದೆ.

ಕನ್ನಡದಲ್ಲಿ ಭಾಷಾವಿಜ್ಞಾನಿಗಳು ಪ್ರಥಮಾವಿಭಕ್ತಿಯಿಲ್ಲವೆನ್ನಲು ಕೊಡುವ ಕಾರಣಗಳನ್ನು ಕೆಳಗಿನಂತೆ ಸಂಕ್ಷೇಪಿಸಬಹುದು—

೧ "**ಮ್**" ಎಂಬುದು ಪ್ರಥಮಾವಿಭಕ್ತಿ ಪ್ರತ್ಯಯವಾದರೆ, ಅದು ಎಲ್ಲಾ ಶಬ್ದಗಳಿಗೂ (ಅಕಾರಾಂತವಲ್ಲದವಕ್ಕೂ) ಸೇರಬೇಕಾಗಿತ್ತು.

೨ ಅಕಾರಾಂತ ಬಹುವಚನ ಪ್ರತ್ಯಯಕ್ಕೆ ಮೊದಲು ಈ ಪ್ರಥಮಾವಿಭಕ್ತಿ ಪ್ರತ್ಯಯ ಬರುತ್ತಿದೆ (ಉದಾ: ಮರಂಗಳ್, ಜನಂಗಳ್, ಮಾವಂದಿರ್) ಹೀಗೆ ಪ್ರತ್ಯಯ ಮೊದಲು ಬರಬಾರದಿತ್ತು.

೩ ಶಬ್ದಗಳಿಗೆ ಆಯಾ ಲಿಂಗ-ವಚನ-ಅಂತ್ಯಾಕ್ಷರಾನುಸಾರ ಪ್ರತ್ಯಯವು ಸೇರುವುದು ಅಥವಾ ಸೇರದಿರುವುದು-ಎಂಬ ವಿವರಣೆ ನಿಶ್ಚಿತ ನಿಯಮ ನಿರೂಪಣವೆನಿಸುವುದಿಲ್ಲ.

೪ ಈ ಪ್ರತ್ಯಯವು ಕೆಲವೆಡೆ "ವ್", ಇನ್ನು ಕೆಲವೆಡೆ " ನ್" ಎಂದಾಗುವುದು–ನಿರ್ದಿಷ್ಟನಿಯಮವೆನಿಸುವುದಿಲ್ಲ. ಈ " **ವ್** " " **ನ್** " ಎಂಬಿವು ಲಿಂಗಾರ್ಥಸೂಚಕ ಪ್ರತ್ಯಯಗಳಲ್ಲದೆ, ವಿಭಕ್ತಿ ಪ್ರತ್ಯಯಗಳಲ್ಲ.

ಮೇಲಿನ ಆಕ್ಷೇಪಗಳಿಗೆ ಸಮಾಧಾನವನ್ನು ಹಿಂದಿನ ವಿವರಣಗಳೊಡನೆ ಹೀಗೆ ಸ್ಪಷ್ಟೀಕರಿಸಬಹುದು—

೧, ೪, :—ವ್, ನ್,–ಎಂಬಿವು ಪ್ರಥಮಾವಿಭಕ್ತಿಯ ಪ್ರತ್ಯಯಕ್ಕೆ ಆದೇಶವಾಗಿ ಬರುವ ಲಿಂಗಾರ್ಥಸೂಚಕಗಳು; ಅವು ಪ್ರಥಮಾ ವಿಭಕ್ತಿಯ ಪ್ರತ್ಯಯಗಳಲ್ಲ. ಅನುಸ್ವಾರ ಮಾತ್ರವೇ ವಿಭಕ್ತಿ ಪ್ರತ್ಯಯ. ಅದರ ಉಚ್ಚಾರಣೆ "ವ್" ಎಂದು. ಈ ಅನುಸ್ವಾರಕ್ಕೆ ಕೆಲವೆಡೆ ಲೋಪವಿದೆ–ಎಂದು ದಕ್ಕೆ ಆ ವಿಭಕ್ತಿಯೇ ಇಲ್ಲವೆಂದು ಅರ್ಥವಾಗದು.

೨:—ಒಂದು ವಿಭಕ್ತಿಯನಂತರ ಇನ್ನೊಂದು ಪ್ರತ್ಯಯ ಬರುವುದು (ಅದು ಲಿಂಗಾರ್ಥ ಸೂಚಕವಿರಬಹುದು, ವಚನ ಸೂಚಕವಿರಬಹುದು ಅಥವಾ ವಿಭಕ್ತಿ ಪ್ರತ್ಯಯವಿರಬಹುದು) ಕನ್ನಡದಲ್ಲಿ ಸಹಜವಾಗಿಯೇ ಇದೆ. ಮರಂಗಳ್, ಅಣ್ಣಂದಿರ್–ಎಂಬಲ್ಲಿ ಪ್ರಥಮಾ ವಿಭಕ್ತಿಯ ಮುಂದೆ ಬಹುವಚನ ಪ್ರತ್ಯಯವಿದೆ. ರಾಮನನ್ನು, ರಾಮನಿಂದ–ಎಂಬಲ್ಲೆಲ್ಲ ಪ್ರಥಮೆಯನಂತರವೇ ಮುಂದಿನ ವಿಭಕ್ತಿಪ್ರತ್ಯಯಗಳಿವೆ. ರಾಮನದು, ನನ್ನದು-ಎಂಬಲ್ಲಿ ಷಷ್ಠೀ ವಿಭಕ್ತಿಯನ್ನಿಟ್ಟುಕೊಂಡೇ ಮುಂದಿನ ನಿರ್ದೇಶಕಸರ್ವನಾಮವು ಪ್ರಥಮಾ ವಿಭಕ್ತಿಯಲ್ಲಿ ಬಂದಿದೆ. ಇದರಂತೆ ಪ್ರತ್ಯಯವಿದ್ದು ಅಥವಾ ಇಲ್ಲದೆ–ಹೀಗೆ ಎರಡು ವಿಧಗಳಿಂದಲೂ ಪ್ರಥಮಾವಿಭಕ್ತಿಯಾಗಬಲ್ಲ ಕನ್ನಡದಲ್ಲಿ ಬಹುವಚನ ಪ್ರತ್ಯಯವು ಪ್ರಥಮೆಯ ಮುಂದೆ ಬರುವುದು ವಿಚಿತ್ರವೂ ಅಲ್ಲ, ಅಸಹಜವೂ ಅಲ್ಲ.

೩ :—ಕನ್ನಡದಲ್ಲಿ ವಿಭಕ್ತಿವಿಷಯದಲ್ಲಿ ಪ್ರತ್ಯಯಯುಕ್ತತೆ, ಪ್ರತ್ಯಯ ಲೋಪ, ಪ್ರತ್ಯಯಪಲ್ಲಟ ಎಂಬ ಮೂರು ವಿಧಗಳೂ ವ್ಯವಹಾರದಲ್ಲಿವೆ. ಅವನ್ನು ವ್ಯಾಕರಣವೂ ಮಾನ್ಯ ಮಾಡುತ್ತದೆ. ಪ್ರಥಮೆ, ದ್ವಿತೀಯೆ, ಷಷ್ಠಿ, ಸಪ್ತಮಿಗಳಲ್ಲಿ ವಿಭಕ್ತಿ ಲೋಪವಿದೆ :—

ಉದಾ :—ಉಂಗುರವಿಟ್ಟನು, ಮನೆಕಟ್ಟಿಸಿದನು, ಪುಸ್ತಕ ಓದಿದೆನು (ಇಲ್ಲಿ ದ್ವಿತೀಯೆಗೆ ಲೋಪ).

ಕೈಬೆರಲಿಗೆ ನೋವು (ಇಲ್ಲಿ ಷಷ್ಠಿಗೆ ಲೋಪ)

ಕಿವಿ ಕೇಳುವುದಿಲ್ಲ_____(ಚತುರ್ಥಿಗೆ ಅಥವಾ ಸಪ್ತಮಿಗೆ ಲೋಪ)

ಒಂದುದಿನ ಮನೆಗೆ ಬಂದನು (ಇಲ್ಲಿ ಸಪ್ತಮಿಗೆ ಲೋಪ)

ಇವುಗಳಂತೆ 'ಪ್ರಥಮಾವಿಭಕ್ತಿಗೆ ಲೋಪ' ಎಂದಾಗ ಆ ವಿಭಕ್ತಿಯೇ ಇಲ್ಲವೆನ್ನಲಾಗುವುದಿಲ್ಲ.

ಅಕಾರಾಂತವಲ್ಲದ ನಾಮವಾಚಿಗಳಿಗೆ ಪ್ರಥಮಾ ವಿಭಕ್ತಿಪ್ರತ್ಯಯವು ಲೋಪವಾಗುವುದಾದರೂ ಹೊಸಗನ್ನಡದಲ್ಲಿ ಅವಕ್ಕೆ ಯಕಾರಾಗಮ-ವಕಾರಾಗಮಗಳೊಡನೆ 'ಉ' ಎಂಬ ಸ್ವರವನ್ನು ಪ್ರತ್ಯಯವಾಗಿ ಸೇರಿಸುವುದುಂಟು. ಇದರಿಂದ ಗುರು, ಹರಿ, ನದಿ, ಸೀತೆ-ಇತ್ಯಾದಿಗಳು ಗುರುವು, ಹರಿಯು, ನದಿಯು, ಸೀತೆಯು-ಎಂಬ ರೂಪಗಳಾಗುವವು. ವ್ಯಂಜನಾಂತಗಳಾದ ಅರಲ್, ಪುರುಳ್-ಎಂಬಂಥವು ಅರಲು (ಅರಳು), ಹುರುಳು-ಎಂದು ಸ್ವರಾಂತಗಳಾಗಿ ಪ್ರಥಮಾ ವಿಭಕ್ತಿ ರೂಪಗಳೇ ಆಗುತ್ತವೆ. ಈ "ಉ" ಎಂಬುದನ್ನು ಹೊಸಗನ್ನಡದಲ್ಲಿ ಅಕಾರಾಂತಗಳ ಪ್ರಥಮಾವಿಭಕ್ತಿಯ ಅನುಸ್ವಾರದ ಮುಂದೆ ಸೇರಿಸುವರು. ಆಗ ಪುಲ್ಲಿಂಗ-ಸ್ತ್ರೀಲಿಂಗಗಳ ಅನುಸ್ವಾರಕ್ಕೆ 'ನ್' ಎಂಬುದೂ, ನಪುಂಸಕಲಿಂಗದ ಅನುಸ್ವಾರಕ್ಕೆ "ವ್" ಎಂಬುದಕ್ಕಾದೇಶವಾಗುವ "ವ್" ಎಂಬುದೂ ಬರುತ್ತವೆ.

ಉದಾಹರಣೆ : ರಾಮನು, ಅಕ್ಕನು, ವೃಕ್ಷವು.

ಹೆಚ್ಚಿನ ಕಡೆ ಈ 'ಉ' ಪ್ರತ್ಯಯವು ಅನುಚಿತವಾಗಿಯೇ ಕಂಡುಬರುವುದು. ಮನೆಯು, ಕವಿಯು, ಗಣಪತಿಯು-ಇಂತಹ ಕಡೆ 'ಉ' ಪ್ರತ್ಯಯ ಬೇಕಾಗಿಲ್ಲ. ರೂಢನಾಮ, ಕೃತ್ತು, ಸಂಖ್ಯೆ, ಸರ್ವನಾಮ, ಗುಣವಚನಗಳಾಗಿರುವ ಉಕಾರಾಂತ ಶಬ್ದಗಳಿಗೆ ಹೊಸಗನ್ನಡದಲ್ಲಿಯೂ ಉಕಾರವನ್ನು (ಪ್ರಥಮಾ ವಿಭಕ್ತಿಯಲ್ಲಿ) ಸೇರಿಸುವುದಿಲ್ಲ.

ಉದಾಹರಣೆ :

ರೂಢನಾಮ—ನಾಡು, ಬೀಡು, ಪೊಳಲು, ಅರಳು, ಆಳು, ಕಲ್ಲು.

ಕೃತ್ತು—ಬರೆದುದು, ಬರೆವುದು, ಹೇಳಿದುದು (ಹೇಳಿದ್ದು).

ಸಂಖ್ಯೆ—ಒಂದು, ಎರಡು, ಮೂರು, ನಾಲ್ಕು-ಇತ್ಯಾದಿ.

ಸರ್ವನಾಮ—ಅದು, ಇದು, ಅವು, ಇವು.

ಗುಣವಚನ—ಒಳಿತು, (ಒಳ್ಳಿತು) ಒಳ್ಳೆಯುದು, ಹಿರಿದು, ಹೊಸತು, ಹಳತು-ಇತ್ಯಾದಿ.

ವಿಭಕ್ತಿಯ ಅರ್ಥಾಭಿವ್ಯಕ್ತಿ

ಅಭಿರೂಪದಿನಾ ಪ್ರಥಮಾ
ವಿಭಕ್ತಿ ಲಿಂಗಾರ್ಥವಚನ ಸಂಬೋಧನದೊಳ್
ಪ್ರಭವಿಪ್ಪುದು....[15]

ಇಂದ್ರ, ಕಾಮಿನಿ, ಆನೆ, ಮರ, ಪಕ್ಷಿ–ಇತ್ಯಾದಿ ಪುಲ್ಲಿಂಗ-ಸ್ತ್ರೀಲಿಂಗ, ನಪುಂಸಕಲಿಂಗಗಳಾಗಿರುವ ಶಬ್ದಗಳಲ್ಲಿ ಪ್ರಥಮಾವಿಭಕ್ತಿಯಿರುತ್ತದೆ. ನಿಡಿಯುನು, ಕೆಂಚನು, ಇನಿಯನು-ಇತ್ಯಾದಿ ಅರ್ಥದ್ಯೋತಕ ಶಬ್ದಗಳಲ್ಲಿಯೂ, ಒಂದು ಎರಡು-ಎಂಬಿತ್ಯಾದಿ ಏಕವಚನ ಬಹುವಚನಗಳ ರೂಪದಲ್ಲಿಯೂ "ಎಲೆ ದೇವ" ಎಂಬ ಸಂಬೋಧನೆಯಲ್ಲಿಯೂ "ಅವಂ ಮಾಡಿದಂ" ಎಂಬಲ್ಲಿ ಕಾಣುವ ತೃತೀಯಾರ್ಥದ ಕರ್ತೃವಿನಲ್ಲಿಯೂ ಪ್ರಥಮಾ ವಿಭಕ್ತಿಯೇ ಪ್ರವರ್ತಿಸಿರುತ್ತದೆ ಎಂದು ಕೇಶಿರಾಜನು ಸಾರಿದ್ದಾನೆ. ಈ ಉದಾಹರಣಗಳಲ್ಲಿ ಕೆಲವೆಡೆ ಪ್ರಥಮಾ ವಿಭಕ್ತಿಯ ಪ್ರತ್ಯಯಕ್ಕೆ ಲೋಪವಿದೆ. ಅಲ್ಲಿ ಆ ಪ್ರತ್ಯಯವು ಅಧ್ಯಾಹೃತವಾಗಿ ಅರ್ಥದ್ಯೋತಕವಾಗುತ್ತದೆ.

ಪ್ರತ್ಯಯರಹಿತವಾಗಿರುವ ಅಂದರೆ ಲುಪ್ತವಾಗಿರುವ ಪದಗಳು ವಾಕ್ಯದಲ್ಲಿ ಬಂದಾಗ, ಪ್ರತ್ಯಯಾರ್ಥದ್ಯೋತಕವಾಗಿ ಅವುಗಳ ಕೊನೆಯ ಅಕ್ಷರಕ್ಕೆ

---

[15] ಶಬ್ದಮಣಿದರ್ಪಣ, ಸೂತ್ರ ೧೨೭.

ಉಚ್ಚಾರಣೆಯಲ್ಲಿ ಒಂದಿಷ್ಟು "ಆಘಾತ" (accent) ಬರುವುದನ್ನು ಸೂಕ್ಷ್ಮ ನಿರೀಕ್ಷೆಯಿಂದ ತಿಳಿದುಕೊಳ್ಳಬಹುದು. ವ್ಯಂಜನಾಂತವಾಗಿದ್ದರೆ, ಆ ಆಘಾತವು ವ್ಯಂಜನದ ಪೂರ್ವಸ್ವರಕ್ಕೆ ಬರುತ್ತದೆ.

> **ರಾಮು** ಬಂದ
> **ನದಿ** ಹರಿಯುತ್ತದೆ
> **ನಾಡು** ಚೇತರಿಸಿತು
> **ಕೈ** ಮುಂದುವರಿಯಿತು
> **ಕಣ್** ಕಂಡಿತು
> **ಕಣ್ಣು** ಕಂಡಿತು
> **ಅಲರ್ಗಣ್** ಶೋಭಿಸಿತು.

ಈ ಸೂಕ್ಷ್ಮವಾದ ಆಘಾತವು ಪ್ರಥಮಾವಿಭಕ್ತಿಯ ಅರ್ಥವನ್ನು ಒದಗಿಸುವುದು. ಇದೂ ಅಲ್ಲದೆ ವಾಕ್ಯದಲ್ಲಿ ಬರುವ ಕ್ರಿಯಾಪದ-ಕರ್ಮಪದ ಗಳಿಂದಾಗಿ ಆಯಾ ಪ್ರಥಮಾ ವಿಭಕ್ತಿಯ ಅರ್ಥವು-ಪ್ರತ್ಯಯರಹಿತವಾಗಿದ್ದರೂ ದ್ಯೋತಕವಾಗುವುದು.

ಇವರಿಂದ ಕನ್ನಡದಲ್ಲಿ ಪ್ರಥಮಾ ವಿಭಕ್ತಿಪ್ರತ್ಯಯವು ಅನುಸ್ವಾರವೆಂದೂ ಅದು ಲುಪ್ತವಾಗಿರುವಲ್ಲಿ ಅದೇ ವಿಭಕ್ತ್ಯರ್ಥವನ್ನು ಅದರ ಕೊನೆಯ ಸ್ವರವು ದ್ಯೋತಿಸುವುದೆಂದೂ ನಿರ್ಣಯವಾಗಿ ಹೇಳಬಹುದು ವಿಭಕ್ತಿಪ್ರತ್ಯಯ ಲೋಪ ವೆಂದಾಗ ಅಲ್ಲಿ ವಿಭಕ್ತಿಯೇ ಇಲ್ಲವೆನ್ನುವುದು ಸರಿಯಾಗದು. ವಿಭಕ್ತ್ಯರ್ಥವು ಬೇರೆ ರೀತಿಯಿಂದ ಪ್ರಕಟವಾಗುವುದೆನ್ನುವುದೇ ಸೂಕ್ತ.

ಹಳಗನ್ನಡದಲ್ಲಿ ಕಾಣುವ ರಾಮಂ, ಮರಂ-ಎಂಬ ರೂಪಗಳನ್ನು ಹೊಸ ಗನ್ನಡದಲ್ಲಿ ಸ್ವರಾಂತಗೊಳಿಸುವ ನೀತಿಗೆ ಅನುಗುಣವಾಗಿ 'ಉ'ಕಾರವನ್ನು ಸೇರಿಸಿದಾಗ ರಾಮನು, ಮರವು-ಎಂಬ ರೂಪಗಳಾದುವೆಂದು ತಿಳಿಯಬೇಕು. ಹೊಸಗನ್ನಡದ ವೈಯಾಕರಣರು ಕೂಡ, ಅನುಸ್ವಾರವನ್ನೇ ಪ್ರಥಮಾ ವಿಭಕ್ತಿಯ ಪ್ರತ್ಯಯವಾಗಿ ತಿಳಿವುದು ಲೇಸು, ಹಾಗೂ ಅಸಂದಿಗ್ಧ. ಅಕಾರಾಂತ ವಲ್ಲದ ಕಡೆಗಳಲ್ಲಿ-ನದಿಯು, ಕೈಯು, ಮನೆಯು-ಎಂಬೆಡೆಗಳಲ್ಲಿ ಕೆಲವರು

ಅನಾವಶ್ಯಕವಾಗಿ 'ಉ' ಪ್ರತ್ಯಯವನ್ನು ಸೇರಿಸುವರಾದರೂ, ಕೆಲವೆಡೆ ಅದನ್ನು ಸೇರಿಸುವುದರಿಂದಲೇ ಅರ್ಥಸ್ಫುಟವಾಗುವುದರಿಂದ ಉಚಿತವೆನಿಸುವುದು. "ಸ್ವಾಮಿ ಆಜ್ಞೆಯಂತೆ ವರ್ತಿಸಿದನು, ಮಾಧವನ ಕೈ ಹೊತ್ತಗೆ ತೆರೆಯಿತು," ಇಂತಹ ವಾಕ್ಯಗಳಲ್ಲಿ ಸ್ವಾಮಿಯು, ಕೈಯು-ಎಂದು ಇಲ್ಲದಿದ್ದರೆ ಅವು ಕರ್ತೃ ಪದಗಳೆಂಬ ಕಲ್ಪನೆ ತಟ್ಟನೆ ಬರುವುದಿಲ್ಲ. ಅವು ಸ್ವಾಮಿಯ, ಕೈಯ-ಎಂದು ಷಷ್ಠೀ ವಿಭಕ್ತಿಯಾಗಿ ಪ್ರತೀತವಾಗಿ ಅರ್ಥವು ನೇರವಾಗಿ ಮೂಡದೆ ಹೋಗುವುದು. ಇಂತಹ ಕಡೆಗಳಲ್ಲಿ ಮಾತ್ರ ಸ್ಫುಟೀಕರಣಕ್ಕಾಗಿ 'ಉ' ಪ್ರತ್ಯಯವನ್ನು ಸೇರಿಸುವುದು ಉಚಿತ. ಇದು ಹೊಸಗನ್ನಡದ ಪ್ರಥಮಾ ವಿಭಕ್ತಿಯ ಒಂದು ಆನುಷಂಗಿಕ ಪ್ರತ್ಯಯ.

ದ್ವಿತೀಯಾ ವಿಭಕ್ತಿ

ಕರ್ಮಾರ್ಥಕವಾಗಿ ವರ್ತಿಸುವ ದ್ವಿತೀಯಾ ವಿಭಕ್ತಿಯ ಪ್ರತ್ಯಯವು 'ಅಂ' ಎಂಬುದು. ಇದು ಹೊಸಗನ್ನಡದಲ್ಲಿ "ಅನ್ನು" ಎಂದಾಗುವುದು. ಇದು ಅಕಾರಾಂತ ಶಬ್ದಗಳಲ್ಲಿ ಪ್ರಥಮಾವಿಭಕ್ತಿ ಪ್ರತ್ಯಯದ ಮುಂದೆ ಬರುತ್ತದೆ.

ಉದಾಹರಣೆ :

ಹಳಗನ್ನಡದಲ್ಲಿ	ಹೊಸಗನ್ನಡದಲ್ಲಿ
ರಾಮಂ + ಅಂ — ರಾಮನಂ	ರಾಮನು + ಅನ್ನು — ರಾಮನನ್ನು
ಅಕ್ಕಂ + ಅಂ — ಅಕ್ಕನಂ	ಅಕ್ಕನು + ಅನ್ನು — ಅಕ್ಕನನ್ನು
ಮರಂ + ಅಂ — ಮರನಂ, ಮರಮಂ	ಮರವು + ಅನ್ನು — ಮರವನ್ನು
ವೃಕ್ಷಂ + ಅಂ — ವೃಕ್ಷಮಂ	ವೃಕ್ಷವು + ಅನ್ನು — ವೃಕ್ಷವನ್ನು

ಅಕಾರಾಂತ ನಪುಂಸಕಲಿಂಗದಲ್ಲಿ ಬರುವ ದೇಶೀಶಬ್ದದಲ್ಲಿ ಮಾತ್ರ ಹಳಗನ್ನಡದಲ್ಲಿ ಈ ಪ್ರತ್ಯಯಕ್ಕೆ ವಿಕಲ್ಪವಾಗಿ ಮಕಾರ ನಕಾರಗಳೆರಡೂ ಆದೇಶವಾಗುತ್ತವೆ.

ನೆಲಂ + ಅಂ — ನೆಲಮಂ, ನೆಲನಂ
ಕೊಳಂ + ಅಂ — ಕೊಳಮಂ, ಕೊಳನಂ

ಹೊಸಗನ್ನಡದಲ್ಲಿ ಈ ನಕಾರಾದೇಶವಿಲ್ಲ. ಆದರೆ ಮಕಾರಕ್ಕೆ ವಕಾರಾದೇಶವಿದೆ-ನೆಲವನ್ನು, ಕೊಳವನ್ನು–ಎಂಬಂತೆ.

ವಿಭಕ್ತಿಪಲ್ಲಟದ ನಿಯಮದಂತೆ, ದ್ವಿತೀಯಾರ್ಥದಲ್ಲಿ ಷಷ್ಠಿಯ ಪ್ರಯೋಗವಿದೆ. ಅವನ ಬರಹೇಳು, ಕೈಯ ನೀಡು, ಮನೆಯ ಸೇರು-ಎಂಬಲ್ಲೆಲ್ಲ ದ್ವಿತೀಯಾರ್ಥದಲ್ಲಿ ಷಷ್ಠಿ ಎಂದು ತಿಳಿದುಕೊಳ್ಳಬಹುದು.

ಹತ್ತನೆಯ ಶತಮಾನಕ್ಕೂ ಹಿಂದಿನ ಶಾಸನಗಳಲ್ಲಿ 'ಆನ್' ಎಂಬುದನ್ನು ದ್ವಿತೀಯಾ ವಿಭಕ್ತಿ ಪ್ರತ್ಯಯವಾಗಿ ಉಪಯೋಗಿಸಿದ್ದಾರೆ. ಉದಾಹರಣೆ: ಪ್ರಾಸಾದಾಂತರಮಾನ್, ಮಿಕ್ಕುದಾನ್–[16] ಇತ್ಯಾದಿ.

ತೃತೀಯಾ ವಿಭಕ್ತಿ

" ತೃತೀಯೆ ಪೇೞ
ಲ್ಪಡೆಗುಂ ಸಲೆ ಕರ್ತೃ-ಕರಣ-ಹೇತು ಸ್ಥಿತಿಯೊಳ್ " 17

ತೃತೀಯಾ ವಿಭಕ್ತಿಯ ಪ್ರತ್ಯಯವು ಹೊಸಗನ್ನಡದಲ್ಲಿ "**ಇಂದ**" ಎಂಬುದು. ಹಳಗನ್ನಡದಲ್ಲಿ **ಇಂ, ಇಂದೆ, ಇಂದಂ**–ಈ ಮೂರೂ ತೃತೀಯಾ ವಿಭಕ್ತಿಪ್ರತ್ಯಯಗಳು. ಇವು ಕರ್ತ್ರರ್ಥದಲ್ಲಿಯೂ (ಉದಾ: ಕಾವ್ಯಂ ಎನ್ನಿಂ ಪೇೞಿಸಲ್ಪಟ್ಟುದು), ಕರಣಾರ್ಥದಲ್ಲಿಯೂ (ಉದಾ: ಕಣ್ಣಿಂ ನೋಡಿದಂ), ಕಾರಣಾರ್ಥದಲ್ಲಿಯೂ (ಉದಾ: ದೈವದಿಂ ಬದುಕಿದಂ) ಸಂಯೋಗಾರ್ಥದಲ್ಲಿಯೂ (ಉದಾ: ಜೊತೆಯಿಂದ ಬಂದನು) ಪ್ರಯೋಗಗೊಳ್ಳುತ್ತವೆ. ಇವೇ ಪ್ರತ್ಯಯಗಳು ಪಂಚಮ್ಯರ್ಥವಾಗಿರುವ ಅಪಾದಾನದಲ್ಲಿಯೂ ಬಳಕೆಯಾಗುತ್ತವೆ.

ಪಂಚಮಿಯಲ್ಲಿ ಬಳಸದೆ ಕೇವಲ ತೃತೀಯೆಯ ಅರ್ಥದಲ್ಲಿಯೇ ಪ್ರಯೋಗಿಸುವ ಪ್ರತ್ಯಯಗಳು ಕೆಲವಿವೆ. ಅವು ರೂಪದಲ್ಲಿ ಸಪ್ತಮಿ ಪ್ರತ್ಯಯಗಳು.

---

16 ಶಾಸನಪದ್ಯಮಂಜರಿ, ಪುಟ 1, ಕ್ರಿ.ಶ. 700ರ ಶ್ರವಣಬೆಳ್ಗೊಳದ ಶಾಸನ 27.

17 ಶಬ್ದಮಣಿದರ್ಪಣ ಸೂತ್ರ ೧೪೯.

ಆದರೆ ಕರಣಾರ್ಥಕವಾಗಿವೆ. ಆದುದರಿಂದ ಅವನ್ನು ತೃತೀಯೆಗಳೆನ್ನಬೇಕಾಗುತ್ತದೆ. ಆ ಪ್ರತ್ಯಯಗಳು ಎ, ಅಲ್ಲಿ, ಒಳ್-ಎಂಬಿವು. ಪ್ರಯೋಗಕ್ಕೆ ಉದಾ : "**ಅಟ್ಟಿಯೆ**" ಎಂದರೆ "**ಅಟ್ಟಿಯಿಂದೆ**" ಎಂದರ್ಥ. ಕೈಯಲ್ಲಿ ಬರೆದೆನು, ಗದೆಯಲ್ಲಿ ಹೊಡೆದನು, ಕೋಲೊಳ್ ಬಡಿದಂ-ಎಂಬಲ್ಲೆಲ್ಲ ಸಪ್ತಮೀ ವಿಭಕ್ತಿ ಪ್ರತ್ಯಯಗಳು ಕರಣಾರ್ಥಕವಾಗಿ ತೃತೀಯೆಗಳೇ ಆಗಿರುವುದು ಸ್ಪಷ್ಟವಿದೆ. ಈ ಪರಿಪಾಠವನ್ನು ವ್ಯಾಕರಣಕಾರರು "**ವಿಭಕ್ತಿಪಲ್ಲಟ**" ಎಂದಿರುವರು. ಉದಾ : ಪಂಚಮ್ಯರ್ಥದಲ್ಲಿ :—ಮರದಿಂದೆ ಎಲೆಯುದಿರ್ದುದು. ಶಾಲೆಯಿಂದ ಬಂದನು, ಕಾವ್ಯದಿಂದ ಆಯ್ದನು–ಇತ್ಯಾದಿ.

ಉಕಾರಾಂತ, ಋಕಾರಾಂತ, ಓ-ಔಕಾರಾಂತ ಶಬ್ದಗಳಿಗೆ ತೃತೀಯೆಯಲ್ಲಿ ವಿಕಲ್ಪವಾಗಿ "ಇನ" ಆಗಮವಿದೆ. ಅದು ವಕಾರಾಗಮದೊಡನೆಯೂ ಬರುತ್ತದೆ. ಉದಾ : ನಾಡಿಂದ, ನಾಡಿನಿಂದ; ಗುರುವಿಂ, ಗುರುವಿನಿಂ; ಪಿತೃವಿಂ, ಪಿತೃವಿನಿಂ ; ಗೋವಿಂ, ಗೋವಿನಿಂ ; ಕಲ್ಲಿಂದ, ಕಲ್ಲಿನಿಂದ–ಇತ್ಯಾದಿ.

ಅಕಾರಾಂತ ನಪುಂಸಕಲಿಂಗ ಶಬ್ದಗಳಿಗೆ "ದ್" (ವ್ಯಂಜನ ದಕಾರ) ಆಗಮವಿದೆ–ಮರದಿಂ, ಜಲದಿಂದ-ಇತ್ಯಾದಿ.

ಯಕಾರಾಗಮವಾಗುವಲ್ಲಿ ಇನಾಗಮವಿಲ್ಲ.

ಉದಾ :—ಕೈಯಿಂದ, ಮುಂಬಯಿಯಿಂದ, ಶಾಲೆಯಿಂದ, ಮನೆಯಿಂದ ಇತ್ಯಾದಿಗಳು. ಹಲವರು ಇಂತಹ ಶಬ್ದಗಳನ್ನು ಕೈನಿಂದ, ಮುಂಬಯಿನಿಂದ-ಎಂದು ಇನಾಗಮವಾಗಿ ಗಣಿಸುವುದು ಅಸಾಧು.

ತೃತೀಯೆಗೆ ತನ್ನದೇ ಆದ ಪ್ರತ್ಯಯವಿಲ್ಲವೆಂದೂ, ಇಂ, ಇಂದೆ, ಇಂದಂ–ಎಂಬಿವು ಪಂಚಮಿಯ ಪ್ರತ್ಯಯಗಳೆಂದೂ, ತೃತೀಯೆಯು ತನ್ನ ಅರ್ಥದ್ಯೋತನೆಗಾಗಿ ಪಂಚಮಿಯನ್ನು ಮತ್ತು ಸಪ್ತಮಿಯನ್ನು ಆಶ್ರಯಿಸುವುದೆಂದೂ ನಿರ್ಣಯಿಸಲು ಎಡೆಯಿದೆ. [18]

---

18 ಸೇಡಿಯಾಪು ಕೃಷ್ಣಭಟ್ಟ—'ಪಂಚಮೀ ವಿಭಕ್ತಿ' ಎಂಬ ಲೇಖನ. ಪ್ರಬುದ್ಧ ಕರ್ಣಾಟಕ ಸಂಪುಟ ೨೬–ಸಂ. ೨ (1944)

ಚತುರ್ಥೀ ವಿಭಕ್ತಿ

ಹಿಂದಿನ ವೈಯಾಕರಣರಲ್ಲಿ ನಾಗವರ್ಮ-ಕೇಶಿರಾಜರಿಬ್ಬರು "ಮಮಿಂಕೆ ಯದದೊಳ್" ಎಂಬ ಸೂತ್ರವನ್ನು ಹೇಳಿ, "ಕೆ" ಎಂಬುದು ಚತುರ್ಥೀವಿಭಕ್ತಿ ಪ್ರತ್ಯಯವೆಂದು ತಿಳಿಸಿದ್ದಾರೆ. ಅಕಾರಾಂತ ಪುಲ್ಲಿಂಗದಲ್ಲಿ ಅದು 'ಗೆ' ಎಂಬ ರೂಪ ತಾಳುವುದೆಂದೂ ಆಗ 'ಗೆ' ಪ್ರತ್ಯಯದ ಹಿಂದೆ ಪ್ರಥಮಾ ವಿಭಕ್ತಿಯ ಅನುಸ್ವಾರವು ಉಳಿಯುವುದೆಂದೂ ಹೇಳಿದ್ದಾರೆ. ಇಂದ್ರಂಗೆ, ಆತಂಗೆ, ಪುರುಷಂಗೆ-ಇವು ಉದಾಹರಣಗಳು. ಅಕಾರಾಂತ ನಪುಂಸಕಲಿಂಗದ ಏಕ ವಚನದಲ್ಲಿ ಬರುವ 'ಕೆ' ಕಾರಕ್ಕೆ ವಿಕಲ್ಪವಾಗಿ ದ್ವಿರ್ಭಾವವೂ ಇದೆ-'ಮರಕ್ಕೆ' ಎಂಬಂತೆ. ಅಕಾರಾಂತವಲ್ಲದ ಸ್ವರಾಂತಗಳಿಗೂ ವ್ಯಂಜನಾಂತಗಳಿಗೂ ಪರ ವಾದ ಚತುರ್ಥಿಗೆ ಲಿಂಗ-ವಚನ ವ್ಯವಸ್ಥೆಯಿಲ್ಲದೆ "ಗೆ" ಎಂಬುದೇ ಪ್ರತ್ಯಯ ವಾಗುವುದು- ಕವಿಗೆ, ನದಿಗೆ, ಸೀತೆಗೆ, ಕಡೆಗೆ, ಕುರುಳ್ಗೆ, ಕಣ್ಗೆ, ಕವಿಗಳ್ಗೆ, ಇತ್ಯಾದಿ. ಸಮಾಸಪದ್ಭಾವವಾದಲ್ಲಿ ತೃತೀಯತ್ವವಿಲ್ಲ, ಅಂದರೆ ಅಲ್ಲಿ 'ಕೆ' ಎಂಬುದೇ ಪ್ರತ್ಯಯವೆನಿಸುವುದು—ಕಾಟ್ಕೆ, ನಾಟ್ಕೆ, ಪತರ್ಕೆ, ಅದರ್ಕೆ, ಅನಿತರ್ಕೆ, ಇತ್ಯಾದಿಗಳಂತೆ. ಚತುರ್ಥಿಯ 'ಗೆ' ಕಾರಕ್ಕೆ ದ್ವಿತ್ವವಿಕಲ್ಪವೂ ಇದೆ—ಬುಧರ್ಗೆ, ಬುಧಗ್ಗೆ, ಬಾಂಧವರ್ಗೆ, ಬಾಂಧವಗ್ಗೆ-ಇತ್ಯಾದಿ. (ಶ. ದ. ಸೂ. ೧೨೩, ೧೨೪, ೧೨೫.)

ನಾಗವರ್ಮ-ಕೇಶಿರಾಜರ ಮತದಂತೆ ಚತುರ್ಥೀವಿಭಕ್ತಿ ಪ್ರತ್ಯಯ 'ಕೆ' ಎಂಬುದು ಕೆಲವೆಡೆ ಗಕಾರದೇಶದಿಂದ 'ಗೆ' ಎಂದಾಗಿದೆ. ಆದರೆ ಶಬ್ದಾನು ಶಾಸನಕಾರನು 'ಮಮಿಮ್ಗೆ ಪತ್ತಣಿಮದೊಳ್ ಸುಪ್' (ಸೂತ್ರ ೧೬) ಎಂದು ಸೂತ್ರಹೇಳಿ 'ಗೆ' ಎಂಬುದೇ ಪ್ರತ್ಯಯವೆಂದು ತಿಳಿಸಿ "ಗೆತಃ ಕ ಆದೇಃ" (ಸೂ. ೨೭೪) ಎಂಬ ಸೂತ್ರನಿರೂಪಣದಿಂದ ಗೆತ್ ಪ್ರತ್ಯಯದ ಆದಿಯ ವರ್ಣಕ್ಕೆ ಕಕಾರಾದೇಶವನ್ನು ಹೇಳಿದ್ದಾನೆ. ಈ ಕಕಾರಕ್ಕೆ ದ್ವಿತ್ವವಿಕಲ್ಪ ವನ್ನೂ ಹೇಳಿದ್ದಾನೆ. ಹಿಂದಿನ ವೈಯಾಕರಣರು ಹೇಳಿರುವ ಕೆ, ಗೆ, ಎಂಬಿ ವೆರಡು ಹೊಸಗನ್ನಡದಲ್ಲಿಯೂ ಚತುರ್ಥೀವಿಭಕ್ತಿಯಲ್ಲಿ ಕಾಣಿಸುವುದರಿಂದ ಈ ಪ್ರತ್ಯಯವಿಷಯದಲ್ಲಿ ಏನೂ ಬದಲಾವಣೆಯಾಗಿಲ್ಲವೆಂದು ವಿದ್ವಾಂಸರು ಹೇಳಿರುವರು (ಕನ್ನಡ ಕೈಪಿಡಿ ನೋಡಿ). ಆದರೂ ಈ ಪ್ರತ್ಯಯವಿಷಯ

ವಲ್ಲಿಯೂ ಈ ಪ್ರತ್ಯಯಗಳಿಗೆ ಬರುವ ಉಪಸರ್ಗಾಕ್ಷರಗಳ ವಿಷಯದಲ್ಲಿಯೂ ಒಂದಿಷ್ಟು ಮಾರ್ಪಾಡೋ ನವೀನ ವಿಷಯವೋ ಈವರೆಗೆ ಸಂಶೋಧಿತವಾಗದ ಪ್ರಾಗ್ವಿಷಯವೋ ಇದ್ದೇ ಇದೆಯೆಂದು ಅವಲೋಕನಕ್ಕೆ ಹೊಳೆಯುವುದು. ಅಕಾರಾಂತ ನಪುಂಸಕಲಿಂಗದ ಏಕವಚನದಲ್ಲಿ ದ್ವಿತ್ವದ ನಿತ್ಯತ್ವಕ್ಕೆ ಹೆಚ್ಚಿನ ಒಲವು ಹೊಸಗನ್ನಡದಲ್ಲಿದೆ. ಇದರಿಂದ 'ಮರಕ್ಕ' ಎನ್ನುವರಲ್ಲದೆ 'ಮರಕೆ' ಎನ್ನುವ ವ್ಯವಹಾರವಿಲ್ಲ; ಇದ್ದರೆ ಕವಿತೆಗಳಲ್ಲಿ ಮಾತ್ರ. ಇಂದ್ರಂಗೆ, ಚಂದ್ರಂಗೆ ಎಂಬ ರೂಪಗಳು ಇಂದ್ರನಿಗೆ, ಚಂದ್ರನಿಗೆ–ಎಂದಾಗಿವೆ. ಬಾಂಧವರ್ಗೆ, ಬಾಂದವರ್ಗ್ಗೆ–ಎಂಬ ದ್ವಿತ್ವವಿಕಲ್ಪದ ಪ್ರಯೋಗಗಳು, ಶಿಥಿಲೋಚ್ಚಾರಣೆ-ಇವೆಲ್ಲ ಹೋಗಿ, "ಬಾಂಧವರಿಗೆ" ಎಂದಾಗಿರುವುದು ಲಕ್ಷ್ಯಾರ್ಹ. ಅಂತೂ ಹೊಸಗನ್ನಡದಲ್ಲಿ ವಿವರಣವು ಬೇಕೆನಿಸುವ ಕೆಲವು ಚತುರ್ಥೀಪ್ರಯೋಗಗಳನ್ನು ಕಾಣಬಹುದು. **'ಆತನಿಗೆ'** ಎಂಬಲ್ಲಿ 'ಇಗೆ' ಪ್ರತ್ಯಯವೆ? ಹೋಗುವುದಕ್ಕೆ, ಒಂದಕ್ಕೆ, ಇದಕ್ಕೆ-ಎಂಬಲ್ಲೆಲ್ಲ **"ಅಕ್ಕೆ"** ಎಂಬುದು ಪ್ರತ್ಯಯವೆ? ನನಗೆ, ನಿನಗೆ, ತನಗೆ (ಬಹುವಚನದಲ್ಲಿ ನಮಗೆ, ನಿಮಗೆ, ತಮಗೆ)-ಎಂಬ ಕಡೆ **"ಅಗೆ"** ಎಂಬುದು ಪ್ರತ್ಯಯವೆ? ಎಂಬುದನ್ನು ಪರಿಶೀಲಿಸುವುದು ಆವಶ್ಯಕ.

ಹೊಸಗನ್ನಡದ ವ್ಯಾಕರಣವನ್ನು ಬರೆದವರು ಮತ್ತು ಬೋಧಿಸುವವರು 'ಇಗೆ' ಎಂಬುದನ್ನೇ ಚತುರ್ಥೀವಿಭಕ್ತಿ ಪ್ರತ್ಯಯವೆನ್ನುವುದಿದೆ. ಈ ಪ್ರತ್ಯಯವು 'ಇಗೆ' ಎಂದು ಕಾಣಲು ಮುಖ್ಯಕಾರಣ ಪ್ರಥಮಾ ವಿಭಕ್ತ್ಯಂತವನ್ನು ಉಕಾರಾಂತವಾಗಿ ಎಣಿಸುವುದೇ ಆಗಿದೆ. ರಾಮನು, ಆತನು, ಅವಳು—ಇತ್ಯಾದಿಗಳಿಗೆ 'ಇಗೆ' ಪರವಾದ ಹಾಗೆಯೇ ಇಲ್ಲಿ ಕಾಣುತ್ತದೆ. ಇದಲ್ಲವೆಂದು ನಿರ್ಧಾರವಾಗಬೇಕಾದರೆ ಅಥವಾ ಇದರ ಒಗಟನ್ನು ಬಿಡಿಸಬೇಕಾದರೆ, ಇವುಗಳ ಹಳಗನ್ನಡರೂಪಕ್ಕೆ ಶರಣು ಹೋಗುವುದು ಆವಶ್ಯಕ. ಹಳಗನ್ನಡದ ನಿಯಮದಂತೆ ರಾಮಂಗೆ, ಆತಂಗೆ, ಅವಳ್ಗೆ-ಎಂದಾಗುವುದಷ್ಟೆ. ಅಕಾರಾಂತ ಪುಲ್ಲಿಂಗ-ಸ್ತ್ರೀಲಿಂಗಗಳ ಪ್ರಥಮಾ ವಿಭಕ್ತಿಯ ಅನುಸ್ವಾರಕ್ಕೆ ಇತರ ಪ್ರತ್ಯಯಗಳು ಬಂದಾಗಲೆಲ್ಲ ನಕಾರದ ಉಚ್ಚಾರಣೆ ಇರುವುದರಿಂದ ರಾಮನ್ಗೆ, ಆತನ್ಗೆ, ಎಂದಾಗುವುದು.

ಈ ರೂಪವು ಹೊಸಗನ್ನಡದ ಉಚ್ಚಾರಣೆಯ ವ್ಯವಹಾರಕ್ಕೆ ಸುಭಗವಾಗಿಲ್ಲ. ವ್ಯಂಜನಾಂತವೇನಿದ್ದರೂ ಸ್ವರಾಂತವಾಗಿ ಮಾಡುವ ಸೌಕರ್ಯ ದೃಷ್ಟಿಗೊಳಗಾಗಿ ಅಲ್ಲಿ 'ಇ' ಎಂಬ ಸ್ವರವು ಆಗಮವಾಗುವುದು. ಭಾಷಾಶಾಸ್ತ್ರದಲ್ಲಿ ಇದನ್ನು "ಸ್ವರಾಗಮ" (Anaptyxis) ಎಂದು ಕರೆವರು. ಈ ನಿಯಮದಂತೆ ಅವಳ್ಗೆ–ಅವಳಿಗೆ, ಅವರ್ಗೆ–ಅವರಿಗೆ, ಪಗಲ್ಗೆ-ಹಗಲ್ಗೆ, ಹಗಲಿಗೆ-ಇತ್ಯಾದಿ ವಿಭಕ್ತಿ ಪದಗಳಾಗಿವೆ. ಸಂಸ್ಕೃತ ಶಬ್ದಗಳು ತದ್ಭವವಾಗುವಲ್ಲಿಯೂ ಈ ಲಕ್ಷಣಾನುಸಾರ ಸ್ವರಾಗಮವಾದುದುಂಟು–ಭಕ್ತ-ಬಕುತ, ಬಕತ; ಕಾರ್ಯ-ಕಾರಿಯ (ಕಜ್ಜ), ವರ್ಷ-ವರುಷ, ಬರಿಸ; ಖಡ್ಗ–ಕಡುಗ; ಮುಕ್ತಿ-ಮುಕುತಿ, ಮುಕತಿ-ಇತ್ಯಾದಿ. ಸ್ವತಃ ಸಂಸ್ಕೃತ ಭಾಷೆಯಲ್ಲಿಯೂ ಉಚ್ಚಾರಣೆಯ ಕಟುತೆಯನ್ನು ನೀಗಲೆಂಬಂತೆ ಕೆಲವು ಶಬ್ದಗಳಿಗೆ ಸ್ವರಾಗಮವುಳ್ಳ ಎರಡನೆಯ ರೂಪವೂ ಇದೆ.— ಸ್ವರ್ಣ–ಸುವರ್ಣ, ಪೃಥ್ವಿ-ಪೃಥಿವೀ.

ಕೈಪಿಡಿಕಾರರು ಚತುರ್ಥಿಯ 'ಇಗೆ' ಎಂಬಲ್ಲಿ ಇಕಾರಾಗಮವು ಬಂದಿದೆ ಎಂದು ತಿಳಿಸಿದ್ದಾರೆ (ಪುಟ 341). ಕನ್ನಡ ವ್ಯಾಕರಣಶಾಸ್ತ್ರಗಳಲ್ಲಿ ಸಂಧಿ ಪ್ರಕರಣಾಂತರ್ಗತವಾಗಿ 'ಆಗಮ' ಎಂಬ ಸಂಧಿ ಕಾರ್ಯವಿದೆ. ಯ್,ವ್,ದ್, ಇನ್,ಅೞ್-ಇತ್ಯಾದಿ, ಅಂತಹ ಆಗಮಾಕ್ಷರಗಳು. ಮನೆಯಲ್ಲಿ, ವಧುವೀಕೆ, ಮರದಿಂದ, ಹಗಲಿನ, ಅದೞಿಂದೆ-ಇವುಗಳಲ್ಲಿ ಅಂತಹ ಆಗಮಗಳನ್ನು ಕಾಣಬಹುದು. ಕೇವಲ ಒಂದು ಸ್ವರಾಕ್ಷರವು ಆಗಮವಾಗುವ ಲಕ್ಷಣವು ವ್ಯಾಕರಣೋಕ್ತವಲ್ಲ. ಅದು ಭಾಷಾಶಾಸ್ತ್ರದ ವಿಷಯ. 'ಇ' ಎಂಬ ಸ್ವರಾಗಮವು ಅಕಾರಾಂತ ಪುಲ್ಲಿಂಗ-ಸ್ತ್ರೀಲಿಂಗಗಳಲ್ಲಿ ನಿತ್ಯವಾಗಿಯೂ ಉಕಾರಾಂತ ಋಕಾರಾಂತಗಳಲ್ಲಿ ವಿಕಲ್ಪವಾಗಿಯೂ ಬರುವುದು. ಉದಾ :—ಅಣ್ಣನಿಗೆ ಅಮ್ಮನಿಗೆ, ಗುರುವಿಗೆ (ಗುರುಗೆ), ಮಾತೃವಿಗೆ (ಮಾತೃಗೆ), ಕರ್ತೃವಿಗೆ (ಕರ್ತೃಗೆ). ಉಕಾರಾಂತ ಶಬ್ದಗಳಿಗೆ "ಗೆ" ಪ್ರತ್ಯಯವು 'ಇಂ' ಎಂಬ ತೃತೀಯೆಯನಂತರ ಬರುವುದೂ ಲಕ್ಷ್ಯಾರ್ಹವಾಗಿದೆ-ಗುರುವಿಂಗೆ,ವಧುವಿಂಗೆ, ನಾಡಿಂಗೆ, ಇತ್ಯಾದಿಯಂತೆ.

ನಪುಂಸಕಲಿಂಗದ ಕೆಳಗಿನ ಶಬ್ದಗಳಿಗೆ ಚತುರ್ಥಿಯಲ್ಲಿ ಅಕ್ಕೆ, ಅಕೆ-ಎಂಬ ರೂಪಗಳು ಕಾಣಿಸುತ್ತಿವೆ :

ನೋಡಿದುದಕ್ಕೆ (ಹೊ.ಗ. ನೋಡಿದ್ದಕ್ಕೆ)	ನೋಡಿದುದಕೆ
ಒಂದಕ್ಕೆ, ಹತ್ತಕ್ಕೆ	ಒಂದಕೆ, ಹತ್ತಕೆ
ಅಷ್ಟಕ್ಕೆ, ಇಷ್ಟಕ್ಕೆ	ಅಷ್ಟಕೆ, ಇಷ್ಟಕೆ
ಅದಕ್ಕೆ, ಇದಕ್ಕೆ, ಎಲ್ಲದಕ್ಕೆ (ಅವಕ್ಕೆ)	ಅದಕೆ, ಇದಕೆ, ಎಲ್ಲದಕೆ, (ಅವಕೆ)
ಒಳ್ಳಿದಕ್ಕೆ, ದೊಡ್ಡದಕ್ಕೆ	ಒಳ್ಳಿದಕೆ, ದೊಡ್ಡದಕೆ

ಮೇಲಿನವು ಉಕಾರಾಂತ ಶಬ್ದಗಳಲ್ಲವೆ? ನಾಡು, ಕಾಡು-ಮುಂತಾದ ಉಕಾರಾಂತಗಳಿಗೆ ಚತುರ್ಥಿಯಲ್ಲಿ ‘ಇಗೆ’ ಎಂದಾಗುವಾಗ ಮೇಲಿನವುಗಳಿಗೆ ‘ಅಕ್ಕೆ’ಅಥವಾ‘ಅಕೆ’ ಎಂಬವು ಬರುವುದೇಕೆ? ಅವುಗಳಲ್ಲೊಂದನ್ನಾಯ್ದು ಸಪ್ತ ವಿಭಕ್ತಿಗಳನ್ನು ಹಚ್ಚಿ ಹಳಗನ್ನಡ ಹೊಸಗನ್ನಡಗಳಲ್ಲಿ ಇಲ್ಲಿ ನೋಡಲಾಗಿದೆ:-

ಹ. ಗ.	**ಹೊ. ಗ.**
ಅದು	ಅದು
ಅದಂ (ಅದಱಂ)	ಅದನ್ನು (ಅದರನ್ನು)
ಅದಱಿಂ	ಅದರಿಂದ
ಅದರ್ಕೆ	ಅದಕ್ಕೆ
ಅದಱತ್ತಣಿಂ	ಅದರತ್ತಲಿಂದ (ಅದರಿಂದ)
ಅದಱ	ಅದರ
ಅದಱೊಳ್,	ಅದರಲ್ಲಿ

ನಪುಂಸಕಲಿಂಗದಲ್ಲಿರುವ, ಕೃತ್ತು, ಸಂಖ್ಯೆ, ಪರಿಮಾಣ, ಸರ್ವನಾಮ, ಗುಣವಚನ ಎನಿಸುವ ಶಬ್ದಗಳಿಗೆಲ್ಲ ದ್ವಿತೀಯಾ ವಿಭಕ್ತಿಯ ಆದಿಯಾಗಿ ಆಯಾ ಪ್ರತ್ಯಯದ ಉಪಸರ್ಗವಾಗಿ “ಅಱ್” ಎಂಬುದು ಆಗಮವಾಗುವುದು. ಆಗ ‘ಅದು’ ಎಂಬುದು ಚತುರ್ಥಿಯಲ್ಲಿ ‘ಅದಱ್ಕೆ’ ಎಂದಾಗುವುದಷ್ಟೆ. ವಿಜಾತೀಯ ದ್ವಿತ್ವವು ಸಜಾತೀಯವಾಗಿ ಮಾರ್ಪಡುವ ಹೊಸಗನ್ನಡಕ್ಕೆ ಸರಿಯಾಗಿ ಅದು ‘ಅದಕ್ಕೆ’ ಎಂಬ ರೂಪ ತಾಳಿದೆ. ವ್ಯಾಕರಣದ ದೃಷ್ಟಿಯಿಂದ ಇದನ್ನು ಅದ್ವಿತ್ವವಾಗಿ ‘ಅದಕೆ’ ಎನ್ನುವುದು ಸರಿಯಲ್ಲವಾದಗೂ ‘ಮರಕ್ಕೆ’

ಎಂಬುದನ್ನು 'ಮರಕೆ' ಎಂದು ಉಚ್ಚರಿಸುವ ಸಾಮ್ಯಕ್ಕನುಗುಣವಾಗಿ 'ಅದಕ್ಕೆ' ಎಂಬುದು 'ಅದಕೆ' ಎಂದೂ ಉಚ್ಚಾರಣೆಗೆ ಒಗ್ಗಿಕೊಂಡಿತು. ಸ್ಥೂಲದೃಷ್ಟಿಗೆ 'ಅದಕ್ಕೆ' ಎಂಬಲ್ಲಿ 'ಅಕ್ಕೆ' ಎಂಬುದು ಪ್ರತ್ಯಯದಂತೆ ತೋರಿದರೂ ಸೂಕ್ಷ್ಮ ನಿರೀಕ್ಷೆಯಿಂದ ಅಲ್ಲಿ 'ಕೆ' ಎಂಬುದು ಮಾತ್ರ ಪ್ರತ್ಯಯವೆಂದೂ ಮೂಲತಃ 'ಅಜ್' ಎಂಬುದು ಆಗಮವೆಂದೂ ವೇದ್ಯವಾಗುವುದು.

ಪುರುಷವಾಚಕ ಸರ್ವನಾಮಗಳಾದ ನೀನು, ನಾನು, ತಾನು (ಹಳಗನ್ನಡದಲ್ಲಿ ನೀಂ, ಆಂ, ತಾಂ) ಎಂಬಿವರ ಚತುರ್ಥೀ ವಿಭಕ್ತಿ ರೂಪ ವಿಷಯದಲ್ಲಿ ಅಡಗಿದ ಬೆಡಗನ್ನು ಇಲ್ಲಿ ಬಿಡಿಸಲು ಯತ್ನಿಸಿದೆ. ಕೇಶಿರಾಜನು ಅವುಗಳ ವಿಭಕ್ತಿ ವಿಷಯವಾಗಿ ಹೀಗೆ ಹೇಳಿರುವನು:

ಪೀನಂ ಪ್ರಥಮೆಗೆ ನೀನಾಂ
ತಾನೆಂದಱಿ ನಿನಗೆಯೆನಗೆ ತನಗೆಂದು ಚತು
ರ್ಥೀನಿರ್ದೇಶಕ್ಕಿತರ
ಸ್ಥಾನಕ್ಕಸ್ವರದಿನಿರ್ಪ ನಿನ್ನೆನ್ತಂಗಳ್ (ಸೂ. ೧೫೭)

ಕಾವ್ಯಾವಲೋಕನದ ೩೬ನೆಯ ಸೂತ್ರದಲ್ಲಿಯೂ ಭಾಷಾಭೂಷಣದ ೯೯,೧೦೦,೧೦೧ನೆಯ ಸೂತ್ರಗಳಲ್ಲಿಯೂ ಈ ವಿಚಾರವೆ ಬಂದಿದೆ. ಇವುಗಳ ಪ್ರಕಾರ ಪ್ರಥಮೆಯ ಮತ್ತು ಚತುರ್ಥಿಯ ರೂಪಸಿದ್ಧಿಗೆ ಕಾರಣಗಳನ್ನೇನೂ ತಿಳಿಸಿದಂತಾಗುವುದಿಲ್ಲ. ಪ್ರಥಮೆ, ಚತುರ್ಥಿ-ಎಂಬ ಎರಡನ್ನು ಬಿಟ್ಟರೆ ಉಳಿದವುಗಳಿಗೆ ನಿನ್, ಎನ್, ತನ್ ಎಂಬವೇ ಪ್ರಕೃತಿಗಳಂತೆ. ಪ್ರಥಮೆಗೆ ನೀಂ (ನೀನು), ಆಂ (ನಾನು), ತಾಂ (ತಾನು) ಎಂದು. (ಬಹುವಚನದಲ್ಲಿ ನೀವು, ನಾವು, ತಾವು.) ಇಲ್ಲಿ ಆದಿಗೆ ದೀರ್ಘವು ಬರುವುದೇಕೆ? ಚತುರ್ಥಿಯಲ್ಲಿ ಈ ಮೂರು ಸರ್ವನಾಮಗಳಿಗೆ ಮಾತ್ರ ಹಳಗನ್ನಡ ಹೊಸಗನ್ನಡಗಳೆರಡರಲ್ಲಿಯೂ ನಿನಗೆ, ಎನಗೆ (ನನಗೆ), ತನಗೆ (ಬಹುವಚನದಲ್ಲಿ ಇವುಗಳ ನಡುವಣ ನತ್ವಕ್ಕೆ ಮತ್ವವಿದೆ.) ಎಂಬ ರೂಪಗಳಾಗುವುದೇಕೆ? ಎಂಬುದು ವಿಚಾರಣೀಯ.

ಪ್ರಥಮಾ ವಿಭಕ್ತ್ಯರ್ಥವನ್ನು ಮೂಡಿಸಲು ಪ್ರತ್ಯಯವಿಲ್ಲದ ಕಡೆಗಳಲ್ಲಿ ಕೊನೆಯ ಅಕ್ಷರಕ್ಕೆ ಸ್ವರಾಘಾತವನ್ನು ಕೊಡುವುದು ಕ್ರಮ. ಪ್ರತ್ಯಯವಿದ್ದರೂ

ಉಚ್ಚಾರಣೆಯಸ್ಪಷ್ಟತೆಗಾಗಿ ಕೊನೆಯ ಅಕ್ಷರವನ್ನು ಆಘಾತದೊಡನೆ (accent) ಉಚ್ಚರಿಸುವರು. ಈ ಸರ್ವನಾಮಗಳ ಪ್ರಕೃತಿ ರೂಪಗಳಾದ ನಿನ್, ಎನ್, ತನ್ ಎಂಬಿವು ಏಕಾಕ್ಷರಿಗಳಾಗಿರುವುದರಿಂದ ಇಲ್ಲಿ 'ನ್' ಎಂಬ ಅರೆಯಕ್ಕರಕ್ಕೆ ಆಘಾತ ಬರುವುದಿಲ್ಲ. 'ನಿನ್' ಎಂಬಲ್ಲಿ 'ನಿ' ಎಂಬುದಕ್ಕೆ ಕೊಟ್ಟ ಆಘಾತವೇ ಉಚ್ಚಾರಣೆಯ ಸೌಲಭ್ಯವನ್ನು ಆಶ್ರಯಿಸಿ 'ನೀಂ' ಎಂಬ ದೀರ್ಘವನ್ನು ಒಂದಿದೆಯೆಂದು ತೋರುತ್ತದೆ. ಕನ್ನಡದಲ್ಲಿ ಏಕಾಕ್ಷರೀ ಧಾತುಗಳಾದ ತರ್, ಬರ್-ಎಂಬಿವನ್ನು ವಿಧಿರೂಪದಲ್ಲಿ ತಾ, ಬಾ ಎಂದು ಪ್ರಯೋಗಿಸುವುದನ್ನೂ ಲಕ್ಷಿಸಿಕೊಳ್ಳಬಹುದು. ಧಾತುಗಳು ಇದ್ದಂತೆಯೇ ವಿಧಿರೂಪವಾಗುವಾಗ ಮೇಲಿನವಕ್ಕೆ ಆದಿ ದೀರ್ಘ ಬರಲು ಕಾರಣವು ಉಚ್ಚಾರಣೆಯ ಸೌಲಭ್ಯವೇ ಸರಿ. ಸರ್ವನಾಮಗಳಲ್ಲಿ ಪುರುಷವಾಚಕಗಳು (ಮೇಲಿನವು) ಭಾಷಾಭಾಷಿಗಳಲ್ಲಿ ಅತ್ಯಧಿಕ ವ್ಯವಹಾರವನ್ನು ತಾಳಿರುವುದರಿಂದ ಅವು ಸುಖಮುಖೋಚ್ಚಾರಣೆ ತಾಳಿರುವುದು ಸಹಜ. ತಮಿಳು, ತೆಲುಗು, ತುಳು-ಮುಂತಾದ ಇತರ ದ್ರಾವಿಡ ಭಾಷೆಗಳಲ್ಲಿಯೂ ಪ್ರಥಮಾ ವಿಭಕ್ತಿಯಲ್ಲಿ ನಿನ್, ಎನ್, ತನ್‌ಗಳು ದೀರ್ಘರೂಪ ತಾಳಿವೆ. ಕನ್ನಡದಲ್ಲಿ ಅವನು, ಇವನು, ಅವಳು, ಇವಳು-ಎಂಬ ನಿರ್ದೇಶಕ ಸರ್ವನಾಮಗಳು (Demonstrative pronouns) ಆತನು, ಈತನು, ಆಕೆ, ಈಕೆ ಎಂಬ ಆದಿದೀರ್ಘವುಳ್ಳ ಇನ್ನೊಂದು ರೂಪವನ್ನು ತಾಳಿರುವುದು ಇದೇ ಕಾರಣದಿಂದಿರಬೇಕು. 'ಅವನು' ಎನ್ನುವುದಕ್ಕಿಂತ ಅಧಿಕವಾಗಿ 'ಆತ' ಎಂಬಲ್ಲಿ ನಿರ್ದೇಶಾರ್ಥಕ ರೂಪದಲ್ಲಿ ಭಾವವು ಪ್ರವಹಿಸುವುದೆಂಬುದು ಕಂಡುಕೊಳ್ಳಬಹುದಾದ ಸೂಕ್ಷ್ಮ ವಿಷಯ. ನಡುಗನ್ನಡ-ಹೊಸಗನ್ನಡ ಕವಿತೆಗಳಲ್ಲಿ ಮತ್ತು ಆಡುನುಡಿಯಲ್ಲಿ ನೀನು, ನಾನು, ತಾನು ಎಂಬಿವಕ್ಕೆ ನೀ, ನಾ, ತಾ ಎಂಬಿವೂ ಸ್ಥಾನಿಗಳಾಗುತ್ತವೆ. ಇನ್ನು ನಿನಗೆ, ಎನಗೆ, ತನಗೆ ಎಂಬ ಚತುರ್ಥೀ ರೂಪನಿಷ್ಪತ್ತಿ ವಿಚಾರ :—

ನಿನಗೆ, ಎನಗೆ (ನನಗೆ), ತನಗೆ-ಎಂಬ ಚತುರ್ಥೀ ರೂಪಗಳು ತಮಿಳಿನಲ್ಲಿ ನಿನಕ್ಕು (ಉನಕ್ಕು), ಎನಕ್ಕು, ತನಕ್ಕು-ಎಂದೂ ಕಾಣಿಸುತ್ತವೆ. ತೆಲುಗಿನಲ್ಲಿ ನೀಕು, ನಾಕು, ತನಕು-ಎಂದಿವೆ. ತುಳುವಿನಲ್ಲಿ ನಿಕ್, ಎಂಕ್, ತಂಕ್

ಎಂದಿದೆ. ಕನ್ನಡದಲ್ಲಿ 'ಗೆ' ಪ್ರತ್ಯಯವು ಸೇರಿದಾಗ ಸ್ವರಾಗಮವಾಗುವುದಾದರೆ ಇಕಾರವೇ ಆಗುವುದೆಂದು 'ಆತನಿಗೆ' ಮುಂತಾದ ರೂಪೋದಾಹರಣಗಳಿಂದ ತಿಳಿದಿದ್ದೇವೆ. ಮತ್ತು, ಈ ತೆರದ ಇಕಾರಾಗಮವು ಹೊಸಗನ್ನಡದಲ್ಲಿ ಮಾತ್ರವೆಂದೂ ಕಂಡಿದ್ದೇವೆ. ಗ್ರಾಮ್ಯರು ಈಗಲೂ ನಿನಿಗೆ, ನನಿಗೆ, ತನಿಗೆ ಎಂದು ಇಕಾರಾಗಮದಿಂದಲೇ ಪ್ರವರ್ತಿಸುವುದನ್ನೂ ಕಾಣುತ್ತೇವೆ. ಆದರೆ ಶುದ್ಧಭಾಷೆಯಲ್ಲಿ ನಿನಿಗೆ, ನನಿಗೆ, ತನಿಗೆ ಎಂಬವಿಲ್ಲ. ಕವಿಗಳು ವೈಯಾಕರಣರು ನಿನಗೆ, ನನಗೆ, ತನಗೆ-ಎಂಬ ರೂಪಗಳನ್ನೇ ಸಾಧುವೆಂದು ಗಣಿಸಿದ್ದಾರೆ. ಈ ರೂಪಗಳು ಹೊಸ ಗನ್ನಡದಲ್ಲಿ ಮಾತ್ರ (ಆತನಿಗೆ ಎಂಬಂತೆ) ಕಾಣಿಸಿಕೊಂಡವೂ ಅಲ್ಲ. ಪ್ರಾಕ್ಕಾಲದಿಂದಲೇ ಇವು ಹೀಗೆ ಪ್ರಯೋಗಗೊಂಡಿವೆ.

ನಾಗವರ್ಮನು "ಭಾಷಾಭೂಷಣ"ದಲ್ಲಿ ಮೇಲಿನ ಮೂರು ಸರ್ವನಾಮಗಳಿಗೆ ಚತುರ್ಥೀ ರೂಪವನ್ನು ನಿರ್ದೇಶಿಸಿದ ಕ್ರಮ ಸಾರಸ್ಯವಾಗಿದೆ. ಮೇಲಿನ ಮೂರು ಸರ್ವನಾಮಗಳಿಗೆ ಷಷ್ಠೀ ರೂಪವು ನಿನ್ನ, ಎನ್ನ, ತನ್ನ ಎಂಬುದಾಗಿ ಹೇಳಿ, ಚತುರ್ಥಿಯ "ಗೆ" ಎಂಬ ಪ್ರತ್ಯಯವು ಬಂದಾಗ ಅವುಗಳಿಗೆ ನಿನ, ಎನ, ತನ ಎಂಬ ರೂಪಗಳು ಆದೇಶವಾಗುತ್ತವೆ—ಎಂದಿದ್ದಾನೆ. (ಸೂತ್ರ ೧೦೦ ನೋಡಿ). ಈ ನಿರೂಪಣೆ ಹೇಗೆ ಸಮಂಜಸ? 'ನಿನ್ನ' ಎಂಬುದು 'ನಿನ' ಎಂದಾಗುವಾಗ "ನ್" ಎಂಬೊಂದು ವ್ಯಂಜನ ಲೋಪವಾದುದು ಮಾತ್ರವಾದುದರಿಂದ ಇದನ್ನು ಲೋಪವೆನ್ನಬಹುದಿತ್ತಲ್ಲವೆ? ಎಂಬುದು ಮೊದಲನೆಯ ವಿಷಯ. ಚತುರ್ಥೀ ಪ್ರತ್ಯಯವನ್ನು ಷಷ್ಠೀ ಪ್ರತ್ಯಯದ ಪರದಲ್ಲಿ ಹಚ್ಚಬೇಕೆನ್ನುವುದು ವಿಚಿತ್ರತರ ನಿಯಮವೆನಿಸದೆ? ಎಂಬುದು ಎರಡನೆಯ ವಿಷಯ. ಈ ಒಗಟನ್ನು ಬಿಡಿಸಲು ಭಾಷಾಶಾಸ್ತ್ರದ ನೆಲೆ ಆವಶ್ಯಕ.

ನಿನ್, ಎನ್, ತನ್-ಎಂಬ ಪ್ರಕೃತಿರೂಪಗಳಿಗೆ (Oblique bases) ಚತುರ್ಥಿಯ "ಗೆ" ಪರವಾದಾಗ ನಿನ್ಗೆ, ಎನ್ಗೆ, ತನ್ಗೆ ಎಂದಾಗುವುದಷ್ಟೆ. ಗ್ರಾಮ್ಯರು ನಿಂಗೆ, ಎಂಗೆ, ತಂಗೆ ಎನ್ನುತ್ತಾರೆ. ವ್ಯಾಕರಣಬದ್ಧವಾಗಿ ಏಕರೀತಿಯ ಭಾಷಾಸ್ವರೂಪವು ಕಾಣಿಸಿಕೊಳ್ಳುವ ಮೊದಲು ರೂಢಿಯಾಗಿ ನಿನ್ಗೆ, ಎನ್ಗೆ, ತನ್ಗೆ ಎಂಬ ಉಚ್ಚಾರಣೆ ಇದ್ದಿರಬಹುದು. ತುಳುವಿನಲ್ಲಿ ಅದರ ಸೂಚಕ

ಪಿಂಬಂತೆ ನಿನ್‌ಕ್ಕ್,ಇನ್‌ಕ್ಕ್ (ನಿಕ್ಕ್), ಎನ್‌ಕ್ಕ್(ಎಂಕ್), ತನ್‌ಕ್ಕ್(ತಂಕ್) ಎಂಬ ಚತುರ್ಥೀ ವಿಭಕ್ತಿ ರೂಪಗಳಿವೆ. ಇವುಗಳ ಉಚ್ಚಾರಣೆ ಹೀಗೆ ಇದ್ದರೂ ಕನ್ನಡದಲ್ಲಿ ಬರೆವ ರೂಢಿ ನಿನಗೆ, ಎನಗೆ, ತನಗೆ ಎಂದೇ ಮೊದಲಾಗಿರ ಬಹುದು. ಹಿಂದೀ ಭಾಷೆಯಲ್ಲಿ ಕಪ್ಡಾ, ಲಡ್ಕಾ-ಎಂಬ ಉಚ್ಚಾರಣೆಯನ್ನು ಬರೆಯುವುದು ಕಪಡಾ, ಲಡಕಾ-ಎಂದೇ ಆಗಿರುತ್ತದೆ. ನಿನ್ಗೆ, ಎನ್ಗೆ, ತನ್ಗೆ-ಎಂಬಿವಕ್ಕೆ ಉಚ್ಚಾರಣೆಯ ಸುಕರತೆಗಾಗಿ ಸ್ವರಾಗಮ (Anaptyxis) ಮಾಡುವಾಗ ಅಕಾರವನ್ನೇ ಮಾಡಿಕೊಂಡರೆಂದು ಊಹಿಸಬೇಕಾಗುವುದು. ಈ ಅಕಾರದ ಆಗಮದಿಂದ ಉಚ್ಚಾರಣೆಯ ಕೊಚ್ಚರಟೆ ಪರಿಹಾರವಾಗಿದೆ. ತಮಿಳಿನಲ್ಲಿ 'ಅವನ್' ಎಂಬುದು ಚತುರ್ಥಿಯಲ್ಲಿ 'ಅವನುಕ್ಕು' ಎಂದಾಗು ವುದು. ಆದರೆ "ಎನ್" ಎಂಬುದು "ಎನುಕ್ಕು" ಎಂದಾಗದೆ "ಎನಕ್ಕು" ಎಂತಲೇ ರೂಪ ತಾಳಿದೆ. ಈ ನಡುವಣ ಸ್ವರವನ್ನು (ಉ, ಅ-ಇವನ್ನು) **"ಸುಸ್ವರಾಗಮ"** (Euphonic vowel) ಎಂದು ಕರೆದಿದ್ದಾರೆ. ಸಂಸ್ಕೃತ ದಲ್ಲಿಯೂ ಉಚ್ಚಾರಣೆಯ ಸೌಲಭ್ಯಕ್ಕಾಗಿ ಸ್ವರಾಗಮವಾದುದುಂಟು. ಈ ಲಕ್ಷಣದಂತೆ ಅವಂಗೆ-ಅವನಿಗೆ,ಅವಳ್ಗೆ-ಅವಳಿಗೆ, ಅವರ್ಗೆ-ಅವರಿಗೆ, ಗುರುಗಳ್ಗೆ-ಗುರುಗಳಿಗೆ, ಹೀಗೆ ಹೊಸಗನ್ನಡದ ರೂಪಗಳಲ್ಲಿ ಇಕಾರಾಗಮವಾಗಿದೆ. ರಾಮುಂಗೆ, ಕಣ್ಗೆ, ಪುಲ್ಗೆ-ಎಂಬವು ರಾಮುನಿಗೆ, ಕಣ್ಣಿಗೆ, ಹುಲ್ಲಿಗೆ ಎಂಬ ರೂಪ ತಳೆವುದೂ ಇಕಾರಾಗಮದಿಂದ.

ಒಟ್ಟಿನಲ್ಲಿ ಚತುರ್ಥೀ ವಿಭಕ್ತಿ ಸಂಪ್ರದಾನದ ಅರ್ಥವುಳ್ಳುದಾಗಿದ್ದು ಅದರ ಪ್ರತ್ಯಯವು "ಗೆ" ಅಥವಾ "ಕೆ" ಎಂಬುದೇ ಆಗಿದೆಯಲ್ಲದೆ "ಇಗೆ" "ಅಕ್ಕೆ" (ಅಕೆ), "ಅಗೆ" ಎಂಬವಲ್ಲ. ಈ ಪ್ರತ್ಯಯಗಳ ಹಿಂದೆ ಬರುವ ಸ್ವರಗಳು **ಸುಖಮುಖೋಚ್ಚಾರಣೆ**ಗಾಗಿ ಮಾತ್ರ ಇರುತ್ತವೆ. ಇವನ್ನು **"ಸ್ವರಾಗಮ"** ವೆಂದು **"ಪ್ರತ್ಯಯೋಪಸರ್ಗ"**ವೆಂದು ಹೆಸರಿಸಬಹುದು.

ಪಂಚಮೀ ವಿಭಕ್ತಿ

ಕನ್ನಡದಲ್ಲಿ ಸಹಜವಾಗಿ ಪಂಚಮೀ ವಿಭಕ್ತಿಯಾಗಲೀ ವಿಭಕ್ತಿ ಪ್ರತ್ಯಯ ವಾಗಲೀ ಇಲ್ಲವೆನ್ನುತ್ತಾರೆ.[19] ಆಡುಮಾತಿನಲ್ಲಿ ಮತ್ತು ಸಾಹಿತ್ಯದಲ್ಲಿ

19 ಕನ್ನಡ ಕೈಪಿಡಿ—ಪುಟ ೩೩೮, ಮತ್ತು
Grammar of old Kannada Inscriptions Page 10

ತೃತೀಯೆ ಪಂಚಮ್ಯರ್ಥದಲ್ಲಿ ಬರುವುದು ಇದಕ್ಕೊಂದು ಕಾರಣ. ಪಂಚಮೀ ವಿಭಕ್ತಿಯೆಂಬುದು ಸಂಸ್ಕೃತ ವ್ಯಾಕರಣ ಮಾರ್ಗಾನುಸರಣೆಯಿಂದ ಕಲ್ಪಿತ ವಾದುದು ಎಂದು ಅಭಿಪ್ರಾಯ. ಇಂತಹ ಅಭಿಪ್ರಾಯಗಳಿದ್ದರೂ ಪಂಚಮೀ ವಿಭಕ್ತಿಯಿಂದ ಉದ್ಯೋತಿತವಾಗುವ ಅಪಾದಾನಾರ್ಥಕ್ಕೆ ಭಾಷಾಪ್ರಯೋಗ ದಲ್ಲಿಯೂ ವ್ಯಾಕರಣದಲ್ಲಿಯೂ ವಿಶಿಷ್ಟಸ್ಥಾನ ಇದ್ದೇ ಇರುತ್ತದೆ.

ಆದಂ ಪಂಚಮಿಯಪ್ಪುದ
ಪಾದಾನ ಸ್ಥಲದೊಳ್........[20]

"ಅಪಾದಾನ" ಎಂದರೆ "ತೊಲಗುವುದು".

ಹೊಸಗನ್ನಡದಲ್ಲಿ ಪಂಚಮಿಯಾಗಿ 'ಮರದ ದೆಸೆಯಿಂದ' ಎಂದು ಪ್ರಯೋಗಿಸುವುದು ಪದ್ಧತಿ. ಇಲ್ಲಿ 'ದೆಸೆಯಿಂದ' ಎಂಬುದನ್ನೊಂದು ಪ್ರತ್ಯಯವಾಗಿ ಎಣಿಸಬಹುದೆ? ಎಂಬಲ್ಲೇ ಸಂದೇಹವಿದೆ. ಅದು ಇತರ ಪ್ರತ್ಯಯಗಳಂತೆ ಪ್ರಕೃತಿಗೆ ಸೇರಿಕೊಳ್ಳುವುದಿಲ್ಲ. 'ಮರದ' ಎಂಬುದು ಷಷ್ಠೀ ಯುಕ್ತ ಪೂರ್ವ ಪದವಾಗಿಯೂ 'ದೆಸೆಯಿಂದ' ಎಂಬುದು ತೃತೀಯೆಯನ್ನುಳ್ಳ ಒಂದು ಸ್ವತಂತ್ರ ಪರಪದವಾಗಿಯೂ ಕಾಣಿಸುವುದು. ಆದರೆ ಅಪಾದಾನದ ಅರ್ಥವಿಲ್ಲಿದೆ. ಅಪಾದಾನವಾಗಬೇಕಾದರೆ ಸ್ಥಾನವಾಚಕ ಮತ್ತು ತೃತೀಯೆ ಎಂಬಿವೆರಡು ಇರಬೇಕಾಗುತ್ತದೆ- 'ದೆಸೆಯಿಂದ' ಎಂಬಲ್ಲಿ 'ದೆಸೆ' ಎಂಬುದು ಸ್ಥಾನ (ದಿಗ್) ವಾಚಕವಾಗಿದ್ದು ಅದಕ್ಕೆ ಸೇರಿರುವ 'ಇಂದ' ಎಂಬುದು ತೃತೀಯೆಯಾಗಿ ಅಪಾದಾನಾರ್ಥವನ್ನು ಕೊಡುತ್ತಿದೆ. ಆದರೆ ವ್ಯವಹಾರದಲ್ಲಾಗಲೀ ಸಾಹಿತ್ಯದಲ್ಲಾಗಲೀ ಕನ್ನಡಕ್ಕೆ ಸಹಜವಾಗಿ 'ಮರದ ದೆಸೆಯಿಂದ ಎಲೆ ಯುದುರಿತು' 'ವೈರಿಯ ದೆಸೆಯಿಂದ ಬಂಧನವಾಯಿತು'-ಎಂದು ಪ್ರಯೋಗಿಸು ವುದಿಲ್ಲ. ಸಂಸ್ಕೃತದ ಪಂಚಮೀ ವಿಭಕ್ತಿಯ ಪದಗಳಿಗೆ ಕನ್ನಡದಲ್ಲಿ ಅರ್ಥವನ್ನು ಕೊಡುವಾಗ ಮಾತ್ರ ಈ 'ದೆಸೆಯಿಂದ' ಎಂಬುದನ್ನು ಪ್ರಯೋಗಿಸುತ್ತಾರೆ. 'ಗೃಹಾದಾಗತೋಽಸ್ಮಿ' ಎಂಬುದನ್ನು 'ಮನೆಯ ದೆಸೆಯಿಂದ ಬಂದವನಾಗಿರು ತ್ತೇನೆ' ಎಂದು ಭಾಷಾಂತರ ಮಾಡುವರು. ಇದು ಕನ್ನಡದಲ್ಲಿ ಸಂಸ್ಕೃತ

---

20 ಶ. ದ. ಸೂತ್ರ ೧೩೨.

ಪಂಡಿತರ 'ದೆಸೆ'ಯಿಂದ ವ್ಯವಹಾರಕ್ಕೆ ಬಂದುದಾಗಿ ಕಾಣುತ್ತದೆ. ಸ್ವತಃ ಕವಿ ಕೇಶಿರಾಜನು ಸಂಸ್ಕೃತದಲ್ಲಿ ಬಂದ ಪಂಚಮಿಯ ಅರ್ಥದಲ್ಲಿ ತೃತೀಯೆಯನ್ನೇ ಬಳಸಿದ್ದಾನೆ:

ವ್ಯಾಕರಣಾತ್ ಪದಸಿದ್ಧಿಃ ಪದಸಿದ್ಧೇರರ್ಥನಿರ್ಣಯೋ ಭವತಿ
ಅರ್ಥಾತ್ ತತ್ವಜ್ಞಾನಂ ತತ್ವಜ್ಞಾನಾತ್ ಪರಂ ಶ್ರೇಯಃ ||

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ [21]

ಹೀಗೆ ಹೊಸಗನ್ನಡದಲ್ಲಾಗಲೀ ಹಳಗನ್ನಡದಲ್ಲಾಗಲೀ ಪಂಚಮೀ ವಿಭಕ್ತಿಯ ಕಾರ್ಯವನ್ನು ತೃತೀಯೆಯೇ ಸಾರೋದ್ಧಾರವಾಗಿ ಮಾಡುತ್ತ ಬಂದಿದೆ. ಆದರೆ ಇದರಿಂದ ಕನ್ನಡದಲ್ಲಿ ಪಂಚಮೀ ವಿಭಕ್ತಿಯೇ ಇಲ್ಲವೆನ್ನಲಾಗುವುದಿಲ್ಲ. ಇಂ, ಇಂದೆ, ಇಂದಂ-ಎಂಬ ತೃತೀಯಾ ವಿಭಕ್ತಿ ಪ್ರತ್ಯಯಗಳು ಪಂಚಮಿಯುವೆಂದೂ, ಅಲ್ಲಿ, ಒಳ್, ಎ-ಎಂಬಿತ್ಯಾದಿ ಸಪ್ತಮೀ ಪ್ರತ್ಯಯಗಳು (ಕೊಡಲಿಯೊಳ್ ಕಡಿದಂ, ಪೆನ್ನಿನಲ್ಲಿ ಬರೆದನು-ಎಂಬಂತೆ) ತೃತೀಯೆಯಲ್ಲಿ ಬಳಕೆಯಾಗುತ್ತವೆಂದೂ ಶ್ರೀ ಸೇಡಿಯಾಪು-ಅವರು ವಿಶದೀಕರಿಸಿದ್ದಾರೆ.[22]

ಭಾಷಾ ಭೂಷಣದಲ್ಲಿ (ಸೂತ್ರ ೪೦) 'ಅರ್' ಎಂಬುದನ್ನು ಪಂಚಮಿಯ ಪ್ರತ್ಯಯವೆಂದು ಹೇಳಿದೆ. ಉದಾಹರಣೆಗೆ 'ನೆಲದತ್ತಣಿಂ' ಎಂಬುದನ್ನು ಕೊಟ್ಟಿದೆ. ಇಲ್ಲಿ 'ಅರ್' ಎಲ್ಲಿದೆ? ಈ ಸೂತ್ರವನ್ನು ರಚಿಸುವಾಗ ಕವಿಯ ಲಕ್ಷ್ಯದಲ್ಲಿ ನಪುಂಸಕಲಿಂಗದ ಸಂಖ್ಯೆ-ಸರ್ವನಾಮ-ಕೃದಂತ

21 ಶ. ದ. ಪೀಠಿಕೆ ಪದ್ಯ ೧೦.

22 ಪ್ರ ಕ. ಸಂಪುಟ ೨೪—ಸಂ. ೨. (೧೯೪೪) ದೀಪಾವಳಿ ಸಂಚಿಕೆಯಲ್ಲಿ "ಪಂಚಮೀ ವಿಭಕ್ತಿ" ಎಂಬ ಲೇಖನ.

ರೂಪಗಳೇ ಇದ್ದವೇನೊ !- ನಾಲ್ಕಜತ್ತಣಿಂ, ಆದಜತ್ತಣಿಂ, ನುಡಿದುದೆ ಜತ್ತಣಿಂ-ಎಂಬಂತೆ; ಅಥವಾ '**ಅತ್**' ಎಂದು ಆಗಿರಬೇಕಾದುದು ಮುದ್ರಣ ದೋಷದಿಂದ '**ಅರ್**' ಆಗಿರಬಹುದು. ಇದೇ ಕವಿ (ನಾಗವರ್ಮ) ಬರೆದ ಶಬ್ದ ಸ್ಮೃತಿಯಲ್ಲಿಯೂ ಕೇಶಿರಾಜನ ಶಬ್ದಮಣಿದರ್ಪಣದಲ್ಲಿಯೂ ಪಂಚಮೀ ವಿಭಕ್ತಿ ಪ್ರತ್ಯಯವನ್ನು '**ಅತ್**' ಎಂಬುದಾಗಿಯೇ ತಿಳಿಸಲಾಗಿದೆ.

ಕಾಲ್ಡ್‌ವೆಲ್ಲರು ಪಂಚಮೀ ವಿಭಕ್ತಿಯು ಸಪ್ತಮಿ ಮತ್ತು ತೃತೀಯೆಗಳ ಸಂಯೋಗದಿಂದ ಆಗುವುದೆಂದು ವಿವರಿಸಿ ತಿಳಿಸಿದ್ದಾರೆ. ಅಲ್ಲದೆ, ಆ ಪಂಚಮಿಯು "**ಎಲ್ಲಿಂದ ?**" ಎಂಬ ಪ್ರಶ್ನೆಯ ಉತ್ತರವೇ ಆಗುವುದೆಂದೂ ಹೇಳಿದ್ದಾರೆ.

The object of the ablative of motion is to furnish an answer to the question whence? and this answer is obtained in the Dravidian tongues by suffixing to a noun of place the sign of the locative, and annexing to that sign a verb of motion.[23]

ತುಳು ಭಾಷೆಯಲ್ಲಿ 'ಅಲ್ಲಿಂದ' ಎಂಬ ಅರ್ಥವನ್ನುಳ್ಳ 'ಅಳ್ತ್' ಎಂಬುದೇ ಪಂಚಮೀ ವಿಭಕ್ತಿಯ ಪ್ರತ್ಯಯವಾಗಿದೆ. ಉದಾ : 'ಇಲ್ಲಳ್ತ್ ಬತ್ತೆ' (ಮನೆಯಿಂದ (ಯತ್ತಣಿಂದ) ಬಂದೆ). ಕೆಲವೆಡೆ ಇದು ಅಡ್ತ್, ಅಟ್ತ್-ಎಂಬ ರೂಪದಲ್ಲಿಯೂ ಬರುತ್ತದೆ-ಮರಡ್ತ್(ಮರಟ್ತ್)ಜತ್ತೆ (ಮರದಿಂದ ಇಳಿದನು.)

ಕನ್ನಡದಲ್ಲಿ ಪಂಚಮೀವಿಭಕ್ತಿಯ ಪ್ರತ್ಯಯವಾಗಿರುವ ಈ "**ಅತ್**" ಎಂಬುದು ಬರುತ್ತ ತನ್ನ ಅರ್ಥವನ್ನು ಕಳೆದುಕೊಂಡಿರುವಂತೆ ತೋರುತ್ತದೆ. ಅದು "**ಅತ್ತಣಿಂ**" ಎಂಬ ರೂಪ ತಾಳಿತು. ಇದರಲ್ಲಿ '**ಅತ್ತ**' ಎಂಬುದು ದಿಗ್ವಾಚಕವಾಗಿದೆ. ಈ ದಿಗ್ವಾಚಕ ಶಬ್ದಕ್ಕೆ ಅಲ್, ಅಣ್-ಎಂಬ ಪ್ರತ್ಯಯಗಳು ಸೇರಿ ಅತ್ತಲ್, ಅತ್ತಣ್-ಎಂಬ ರೂಪಗಳಾಗುತ್ತವೆ. ಇದರಂತೆ

23 Caldwell—A Comparative Grammar of the Dravidian Languages (1956), P. 284,

ಮೂಡಲ್, ಮೂಡಣ್; ತೆಂಕಲ್, ತೆಂಕಣ್; ಇತ್ತಲ್, ಇತ್ತಣ್- ಮುಂತಾದ ಪದಗಳೂ ನೆಲೆವಡೆದಿವೆ.

'**ಅತ್**' ಎಂಬುದೇ ಸ್ವತಃ ಸಪ್ತಮೀ–ತೃತೀಯೆಗಳ ಸಂಯುಕ್ತ ರೂಪ ವಾಗಿದ್ದು ತನ್ನ ವ್ಯುತ್ಪತ್ತಿ ಗೋಚರಿಸದಷ್ಟು ಪರಿವರ್ತಿತವಾದ ರೂಪವಾಗಿ ರಬೇಕು. "ಅಲ್ಲಿ+ಇಂದ" ಎಂಬುದರ ತ್ವರಿತೋಚ್ಚಾರಣವೇ 'ಅತ್' ಆಗಿರ ಬಹುದೇನೋ! ಅಲ್ಲಿಂದ, ಅಲ್ಲಿಂದ್, ಅಲ್ಲಿದ್, ಅಲ್ದ್, ಅಲ್ತ್ (ತುಳುವಿನ ಅಳ್ತ್, ಅಲ್ತ್-ಎಂಬುದಕ್ಕೆ ಇದು ಸರಿಯಾಗಿ ಕಾಣುತ್ತದೆ.), ಅತ್–ಹೀಗೆ ಇದರ ಪರಿವರ್ತನೆಗಳಾಗಿದ್ದು '**ಅತ್**' ಎಂಬುದು ಪಂಚಮೀ ವಿಭಕ್ತಿ ಪ್ರತ್ಯಯ ವಾಗಿ ಗಣಿಸಲ್ಪಟ್ಟಿದು ಸಿದ್ಧವಾಗುತ್ತದೆ.

ಸಂಸ್ಕೃತದಲ್ಲಿ ಅಕಾರಾಂತ ಪುಲ್ಲಿಂಗ-ನಪುಂಸಕಲಿಂಗ ಶಬ್ದಗಳಿಗೆ ಬರುವ ಪಂಚಮೀವಿಭಕ್ತಿಯ ಏಕವಚನ ರೂಪವನ್ನು ನೋಡಿದರೆ (ರಾಮಾತ್, ಫಲಾತ್–ಎಂಬಂತೆ) ಅಲ್ಲಿಯೂ 'ಅತ್' ಎಂಬುದು ಅಪಾದಾನಾರ್ಥಕವಾಗಿ ರುವ ಪಂಚಮೀ ಪ್ರತ್ಯಯವಾಗಿ ಕಾಣುತ್ತದೆ. ಸಂಸ್ಕೃತದಲ್ಲಿ ಅನ್ಯತ್ರ ಪಂಚಮಿ ಯಲ್ಲಿ 'ಅತ್' ಬರುವುದಿಲ್ಲ. ಕನ್ನಡವು ಈ 'ಅತ್' ಪ್ರತ್ಯಯವನ್ನು ಸಂಸ್ಕೃತ ದಿಂದ ಸ್ವೀಕರಿಸಿತೆಂದು ಭಾವಿಸುವುದು ಸರಿಯಲ್ಲ. ಕನ್ನಡದಲ್ಲಿ ಅರ್ಥಯುಕ್ತ ವಾಗಿ ಅದು "ಅಲ್ಲಿಂದ" ಎಂಬುದರ ಸಂಕ್ಷಿಪ್ತ ರೂಪವೆಂದೇ ನಿರ್ಣಯಿಸುವುದು ಸಕಾರಣವಾಗುತ್ತದೆ.

ಕನ್ನಡಿಗರು ಈ 'ಅತ್' ಎಂಬುದನ್ನು ಪಂಚಮೀವಿಭಕ್ತಿ ಪ್ರತ್ಯಯವಾಗಿ ತಿಳಿದುಕೊಂಡರೂ ಅರ್ಥಸ್ಫುಟತೆಗಾಗಿ, ದಿಗ್ವಾಚಿಗಳಿಗೆ ಸಹಜವಾದ "ಅಣ್" ಪ್ರತ್ಯಯವನ್ನು ಸೇರಿಸಿ ಅದಕ್ಕೆ ತೃತೀಯಾ ವಿಭಕ್ತಿ ಪ್ರತ್ಯಯವನ್ನು ಪುನಃ ಯೋಜಿಸಿಕೊಂಡರು-ಎಂದು ತಿಳಿಯಬೇಕಾಗುತ್ತದೆ. ಇದರಿಂದ "ಅತ್ತಣಿಂ, ಅತ್ತಣಿಂದೆ, ಅತ್ತಣಿಂದಂ" ಎಂಬಿವು ಪಂಚಮೀ ವಿಭಕ್ತಿ ಪ್ರತ್ಯಯಗಳೆನಿಸಿದವು. ಕನ್ನಡದಲ್ಲಿ ದಿಗ್ವಾಚಕ ಪದವಿಲ್ಲದೆ, ಕೇವಲ ತೃತೀಯಾವಿಭಕ್ತಿಯನ್ನು ಬಳ

ಸಿದ ಮಾತ್ರಕ್ಕೇ ಪಂಚಮ್ಯರ್ಥವು ಬರುವುದರಿಂದ ತೃತೀಯೆಯೇ ಇಲ್ಲಿ ರೂಢ ವಾಯಿತು. ಈ ವಿಷಯವನ್ನು ಕೇಶಿರಾಜನು ಸ್ಪಷ್ಟೀಕರಿಸಿದ್ದಾನೆ.

> ಅತ್ತಣಿನೆಂದು ನಿಮಿರ್ಚುವ
> ರತ್ತೆಂದಾಗಿರ್ದ ಪಂಚಮಿಯನಲ್ಲಿ ಕೆಲರ್
> ಪತ್ತಿಸುವರ್ ಮೂದಲ್ಜನಂ
> ಪೆತ್ತ ತೃತೀಯೆಯ ನೆಕಾರಮಂ ಪರಿಹರಿಪರ್, 24

ಈ ಸೂತ್ರದ ವೃತ್ತಿಯಲ್ಲಿ **"ಅತ್ತೆಂಬ ಪಂಚಮಿಯನತ್ತಣಿನೆಂದು ಪೇೞಲಕ್ಕುಂ"** ಎಂದಿದೆ. ಹೀಗೆ **'ಅತ್'** ಎಂಬುದನ್ನು **'ಅತ್ತಣಿಂ'** ಎಂದು ನಿಮಿರ್ಚುವುದಾಗಿ (ನಿಮಿರ್ಚು-ಪ್ರಸಾರಣೇ) ಕೇಶಿರಾಜನು ಹೇಳಿದರೆ, ಶಬ್ದಾನುಶಾಸನಕಾರನು **"ಅತ್ತಣಿಂ"** ಎಂಬುದನ್ನೇ ಪ್ರತ್ಯಯವಾಗಿ ತಿಳಿಸಿದ್ದಾನೆ. ಇದರಿಂದ ಈ ವಿಭಕ್ತಿಯಲ್ಲಿ **"ಅತ್ತಣ್"** ಎಂಬ **"ದಿಗ್ವಾಚಿ"**ಗೆ ಅಥವಾ **"ಸ್ಥಾನವಾಚಿ"**ಗೆ (Locative) **"ಇಂ"** ಎಂಬ ತೃತೀಯೆ ಸೇರಿರುವುದು (ಸೇರಬೇಕಾಗಿರುವುದು) ಸ್ಪಷ್ಟವಾಯಿತು.

ಪಂಚಮೀವಿಭಕ್ತಿಯನ್ನು ಮತ್ತು ವಿಭಕ್ತಿಪ್ರತ್ಯಯವನ್ನು ಅಲ್ಲಗಳೆಯಲು ಅದು ಷಷ್ಠಿಯನಂತರ ಬರುತ್ತದೆಂಬುದು ಒಳ್ಳೆಯ ಕಾರಣವಾಗುತ್ತದೆ. ಆರಾದ ಮೇಲೆ ಐದೆನ್ನುವುದು ಅಥವಾ ಆರಾದ ಮೇಲೆ 'ಮೂರು' ಎನ್ನುವುದು ಯುಕ್ತಿಸಂಗತವಲ್ಲ. ಇದಕ್ಕೆ ಹೊಸಗನ್ನಡದಲ್ಲಿ ಸಂಸ್ಕೃತದ ಅನುವಾದಕರ ಶೈಲಿಯ ದೆಸೆಯಿಂದ ಬಂದಿರುವ "ದೆಸೆಯಿಂದ" ಎಂಬ ಪ್ರತ್ಯಯವು ಆಧಾರ.

ರಾಮನ ದೆಸೆಯಿಂದ, ಮನೆಯ ದೆಸೆಯಿಂದ, ಮರದ ದೆಸೆಯಿಂದ— ಇತ್ಯಾದಿ ವಿಭಕ್ತಿರೂಪಗಳು ಷಷ್ಠಿಯನಂತರವೇ ಬಂದಿರುವುದು ಸ್ಪಷ್ಟವಿವೆ. ಇಲ್ಲಿ 'ದೆಸೆಯಿಂದ' ಎಂಬುದೊಂದು ಪ್ರತ್ಯಯವೇ ಅಲ್ಲ, ಅದೊಂದು ಪೂರ್ಣಪದ. ಇದರಿಂದ ಈ ಉದಾಹರಣಗಳನ್ನು ಅಲಕ್ಷಿಸಬಹುದು. ಆದರೆ ನೆಲದತ್ತಣಿಂ

---

24 ಶ.ದ. ಸೂತ್ರ ೧೨೬.

ನೆಲದಿಂ; ರಾಮನತ್ತಣಿಂ, ರಾಮನಿಂ; ಮನೆಯತ್ತಣಿಂ, ಮನೆಯಿಂ; ಇರುಳಿನತ್ತಣಿಂ (ಇರುಳತ್ತಣಿಂ), ಇರುಳಿನಿಂ (ಇರುಳಿಂ)–ಇಂತಹ ಪಂಚಮಿಯ ಮತ್ತು ತೃತೀಯೆಯ ಪ್ರಯೋಗಗಳಲ್ಲಿ ಷಷ್ಠಿಯಿದೆಯೆ? ಷಷ್ಠಿಯ ಮುಂದೆ ಈ ಪಂಚಮೀ ತೃತೀಯೆಗಳು ಬಂದಿವೆಯೆ? ಬಂದಿವೆಯೆನ್ನುವುದು ಭ್ರಮೆ. ಅಕಾರಾಂತ ನಪುಂಸಕಲಿಂಗ ಶಬ್ದಗಳಿಗೆ ತೃತೀಯೆ, ಪಂಚಮಿ, ಷಷ್ಠಿ, ಸಪ್ತಮಿ ವಿಭಕ್ತಿಪ್ರತ್ಯಯಗಳು ಸೇರುವಾಗ ಅವುಗಳ ಮೊದಲಿಗೆ ದಾಗಮ ('ದ್' ಎಂಬ ವ್ಯಂಜನದ ಆಗಮ) ವಾಗುವುದೆಂದು ವ್ಯಾಕರಣಶಾಸ್ತ್ರದಲ್ಲಿ ಹೇಳಿದೆ. ಆದರಿಂದ ನೆಲದಿಂ, ನೆಲದತ್ತಣಿಂ, ನೆಲದ, ನೆಲದಲ್ಲಿ-ಎಂಬ ರೂಪಗಳಾಗುತ್ತವೆ. ಹಾಗೆಯೇ ಕೆಲವೆಡೆ ಇನಾಗಮ ('ಇನ್' ಎಂಬುದರ ಆಗಮ) ಅರಾಗಮಗಳಿರುತ್ತವೆ. ಅವು ಬಂದಾಗ ಷಷ್ಠೀ ಭ್ರಮೆಯುಂಟಾಗುತ್ತದೆ. ಅವುಗಳ ವಿಭಕ್ತಿಯ ವಿಂಗಡಣೆಯನ್ನು ಹೀಗೆ ತೋರಿಸಬಹುದು.

ನೆಲಂ + ಇಂ—ನೆಲ + ದ್ + ಇಂ—ನೆಲದಿಂ
ನೆಲಂ + ಅತ್ತಣಿಂ—ನೆಲ + ದ್ + ಅತ್ತಣಿಂ—ನೆಲದತ್ತಣಿಂ
ರಾಮಂ + ಅತ್ತಣಿಂ—ರಾಮನತ್ತಣಿಂ
ಮನೆ + ಇಂ— ಮನೆಯಿಂ
ಮನೆ + ಅತ್ತಣಿಂ— ಮನೆಯತ್ತಣಿಂ
ಇರುಳ್ + ಇಂ— ಇರುಳಿಂ
ಇರುಳ್ + ಇಂ— ಇರುಳ್ + ಇನ್ + ಇಂ—ಇರುಳಿನಿಂ
ಹತ್ತು + ಇಂ— ಹತ್ತು + ಅರ್ + ಇಂ—ಹತ್ತರಿಂ

ಷಷ್ಠೀವಿಭಕ್ತಿ

ಸಂಬಂಧಾರ್ಥವನ್ನುಳ್ಳ ಷಷ್ಠೀವಿಭಕ್ತಿಪ್ರತ್ಯಯದ ವಿಷಯದಲ್ಲಿ ಪ್ರಾಚೀನ ಕಾಲದಿಂದ ಇಂದಿನ ವರೆಗೆ ಮಾರ್ಪಾಡು ಆದಂತೆ ಕಾಣುವುದಿಲ್ಲ. "ಅ" ಎಂಬುದೇ ಇದರ ಪ್ರತ್ಯಯ. ಯ್, ವ್, ಅರ್, ಇನ್, ದ್-ಮುಂತಾದ ಆಗಮಾಕ್ಷರಗಳ ಮುಂದೆ ಈ ಪ್ರತ್ಯಯವು ಬರುತ್ತದೆ. ಉದಾ:

ಮನೆಯ, ಗುರುವ (ಗುರುವಿನ), ನಾಲ್ಕರ, ಹಗಲಿನ, ಮರದ-ಇತ್ಯಾದಿ. ಕಾವ್ಯಪ್ರಯೋಗಗಳಲ್ಲಿ ಷಷ್ಠಿಗೆ ದೀರ್ಘಾದೇಶವನ್ನು ಹೇಳಿದ್ದಾರೆ.

"ಮೃಡನಾ" ಎಂಬಂತೆ. ಕೆಲವರು ನಿನ್ನ, ನನ್ನ-ಎಂಬ ಷಷ್ಠ್ಯಂತ ಸರ್ವನಾಮಗಳಿಗೆ ಇನ್ನೊಂದು ಪ್ರತ್ಯಯ ಹಚ್ಚಿ-ನನ್ನಯ, ನಿನ್ನಯ-ಎಂದು ಪ್ರಯೋಗಿಸುವುದುಂಟು. ಇಂತಹ ಪ್ರಯೋಗವು ಹಿಂದೆಯೂ ಇತ್ತು. (ಆದಿಪುರಾಣ ೧೪-೧೭ನೆಯ ಪದ್ಯದಲ್ಲಿ 'ನಿನ್ನಯ' ಎಂಬ ಪ್ರಯೋಗ ಬಂದಿದೆ.)

ಸಪ್ತಮೀ ವಿಭಕ್ತಿ

ಅಲ್ಲಿಯೊಳೆಂಬಿವು ಮಿಕ್ಕೆಡೆ
ಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ ಮು
ತ್ತಲ್ಲಿಯುದಂತಕ್ಕೆತ್ವಂ
ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್ [25]

ಅಲ್ಲಿ, ಒಳ್-ಎಂಬಿವೆರಡು ಸಪ್ತಮೀ ವಿಭಕ್ತಿಯ ಪ್ರತ್ಯಯಗಳು. ದಿಗ್ವಾಚಿಗಳಾಗಿರುವ ಅಕಾರಾಂತಗಳಿಗೆ 'ಅಲ್' ಎಂಬುದು ಪ್ರತ್ಯಯವಾಗುವುದು-ಮೂಡಲ್, ತೆಂಕಲ್, ಅತ್ತಲ್, ಇತ್ತಲ್-ಎಂದು. ಹೊಸಗನ್ನಡದಲ್ಲಿ ಈ ವ್ಯಂಜನಾಂತಗಳನ್ನು ಉಕಾರಾಂತವಾಗಿ ಮಾಡುವರು-ಮೂಡಲು, ತೆಂಕಲು, ಅತ್ತಲು, ಇತ್ತಲು-ಎಂದು. ಹಳಗನ್ನಡದಲ್ಲಿ ಹೆಚ್ಚಾಗಿ ಬರುವ 'ಒಳ್' ಎಂಬ ಪ್ರತ್ಯಯವು ಪೂರ್ವದ ಹಳಗನ್ನಡದಲ್ಲಿ '**ಉಳ್**' ಎಂದಾಗಿತ್ತು. 'ವೆಟ್ಟದುಳ್' ಎಂಬ ಪ್ರಯೋಗವು ಪ್ರಾಚೀನ ಶಾಸನದಲ್ಲಿದೆ.[26] ತಮಿಳಿನಲ್ಲಿ ಇಂದಿಗೂ ಸಪ್ತಮಿಯಲ್ಲಿ 'ಉಳ್' ಪ್ರತ್ಯಯವಿದೆ. ಈ ಉಳ್, ಒಳ್-ಎಂಬವು "ಒಳ" ಎಂಬುದರ ಮಾರ್ಪಾಡಾಗಿ ಕಾಣುತ್ತವೆ. 'ಉಳ್' ಎಂಬುದರ ಪ್ರಾಚೀನ ರೂಪ 'ಉಲ್' ಎಂದು ಇದ್ದಿರಬೇಕೆಂದು ವಿದ್ವಾಂಸರು ಭಾವಿಸುತ್ತಾರೆ.[27]

---

25 ಕೇಶಿರಾಜ—ಶ.ದ. ಸೂ ೧೨೯.

26 ಶಾಸನ ಪದ್ಯಮಂಜರಿ ಪುಟ 1. ಶ್ರವಣಬೆಳ್ಗೊಳದ 27ನೆಯ ಶಾಸನ (ಕಾಲ ಕ್ರಿ. ಶ. 700).

27 ಪ್ರೊ. ಎಂ. ಮರಿಯಪ್ಪ ಭಟ್ಟ–ಕನ್ನಡ ಸಂಸ್ಕೃತಿ ಎಂಬ ಗ್ರಂಥದಲ್ಲಿ ಸಪ್ತಮೀ ವಿಭಕ್ತಿ' ಎಂಬ ಲೇಖನ, ಪುಟ ೩೧೮.

ಈ ಪ್ರತ್ಯಯಗಳಲ್ಲದೆ ಪದ್ಯರಚನೆಯಲ್ಲಿ ಒಳು, ಒಳಗೆ, ಅಲಿ, ಇ, ಎ-ಎಂಬಿವನ್ನೂ ಪ್ರಯೋಗಿಸುವರು.

ಉದಾಹರಣೆ—

ದೇಶ**ದೊ**ಳು, ಧರಣಿಮಂಡಲ ಮಧ್ಯ**ದೊಳ**ಗೆ,
ಆತನ**ಲಿ**, ದೇಶ**ದಿ**, ಮನ**ದೆ**–ಇತ್ಯಾದಿ.

ಹಳ್ಳಿಗರ ಆಡುಮಾತಿನಲ್ಲಿ ಆಗ, ಆಗೆ (ಅಗ, ಅಗೆ) (ನೆಲದಾಗೆ, ಮನೆಯಾಗ) ಎಂಬವೂ ಸಪ್ತಮೀವಿಭಕ್ತಿ ಪ್ರತ್ಯಯಗಳಾಗಿ ಬರುತ್ತವೆ. ಜನಪದ ಗೀತಗಳಲ್ಲಿ ಇಂತಹ ಪ್ರಯೋಗಗಳನ್ನು ನಾವು ಕಾಣುತ್ತೇವೆ.

ಕೆಲವರು "ಅಲ್ಲಿ" ಎಂಬೊಂದು ಪ್ರತ್ಯಯವನ್ನು ಮಾತ್ರ ಲಕ್ಷ್ಯದಲ್ಲಿಟ್ಟು 'ಸಪ್ತಮೀವಿಭಕ್ತಿ' ಎಂಬುದೊಂದು ಪ್ರತ್ಯಯವಲ್ಲವೆಂದೂ ಅದು ಹೊಸಗನ್ನಡದ ಪಂಚಮೀವಿಭಕ್ತಿಯಂತೆ ಒಂದು ಬೇರೆಯಾಗಿರುವ ಉಪಪದವೆಂದೂ ಅಭಿಪ್ರಾಯ ಪಡುತ್ತಾರೆ. ಅಲ್ಲಿ, ಒಳಗೆ-ಎಂಬವು ಉಪಪದಗಳಂತೆ ಇರುವುದು ನಿಜ. ಹಿಂದೆ ವಿಭಕ್ತಿಪ್ರತ್ಯಯಗಳೆಲ್ಲವೂ ಸ್ವತಂತ್ರ ಮತ್ತು ಪೂರ್ಣ ಅರ್ಥದಿಂದ ಕೂಡಿದ ಶಬ್ದಗಳೇ ಆಗಿದ್ದುವೆಂದು ವಿದ್ವಾಂಸರ ಅಭಿಪ್ರಾಯವಿದೆ. ಆದರೆ ಇಲ್ಲಿ ಬಂದಿರುವ ಅಲ್, ಒಳ್, ಎ, ಇ-ಮುಂತಾದವಕ್ಕೆ ಪ್ರತ್ಯಯತ್ವವನ್ನು ಅಲ್ಲಗಳೆಯಲಾಗುವುದಿಲ್ಲ.

ಸಪ್ತಮೀವಿಭಕ್ತಿ ಅಧಿಕರಣದ (ಆಧಾರದ) ಅರ್ಥದಲ್ಲಿ ಬರುತ್ತದೆ.

ಕನ್ನಡದ ವಿಭಕ್ತಿ ಪ್ರತ್ಯಯಗಳನ್ನೂ ಅವುಗಳ ಪ್ರಯೋಗಗಳನ್ನೂ ವಿವೇಚಿಸುತ್ತ ಕನ್ನಡದಲ್ಲಿ ಕೆಲವು ವಿಭಕ್ತಿಗಳಿಲ್ಲ-ಏಳು ವಿಭಕ್ತಿಗಳಿಲ್ಲ–ಎಂಬುದು ಇನ್ನೂ ಸಿದ್ಧಾಂತವಾದ ವಿಷಯವೇನೂ ಅಲ್ಲ. ಇದೊಂದು ವಾದದ ವಿಷಯ. ಕನ್ನಡದ ಎಷ್ಟೋ ವ್ಯಾಕರಣತತ್ವಗಳು.ಸಂಸ್ಕೃತದ ಅನುಕರಣವಾಗಿ ತೋರುತ್ತವೆಂದು ಅವನ್ನೆಲ್ಲ ಅಲ್ಲಗಳೆಯ ಹೋದರೆ, ಅಕ್ಷರಮಾಲೆಯನ್ನೇ ಅಲ್ಲಗಳೆವ ಪರಿಸ್ಥಿತಿ ಬರುವುದು. ಸಂಸ್ಕೃತದ ಅನುಕರಣವಾದರೂ ಕನ್ನಡಕ್ಕೆ ಒಪ್ಪುವಂತೆ ಇರುವುದನ್ನೆಲ್ಲ ಸ್ವೀಕರಿಸುವುದು ತಪ್ಪಲ್ಲ.

ಭಾಷಾಶುದ್ಧತೆಯ ರಹಸ್ಯ

[ಶುದ್ಧತೆಯ ಆವಶ್ಯಕತೆ–ವ್ಯಾಕರಣದ ಉಪಯೋಗ–ವ್ಯಾಕರಣ ನಿಯಮೋಲ್ಲಂಘನೆ–ಸದೋಷ ನಿರ್ದೋಷಗಳ ವಿವೇಚನೆ–ಭಾಷಾಶಾಸ್ತ್ರದ ಉಪಯೋಗ].

ಮಾನವನಿಗೆ ತನ್ನ ಸಮಾಜದಲ್ಲಿ ಪರಸ್ಪರ ವ್ಯವಹಾರಕ್ಕೆ ಅತ್ಯುಪಯುಕ್ತವಾದುದು ಭಾಷೆ. ಭಾಷೆಯು ಸಾರ್ಥಕ ಶಬ್ದ-ವಾಕ್ಯಗಳ ಮೂಲಕ ಒಬ್ಬನ ಮನೋಭಾವವನ್ನು ಇತರರಿಗೆ ಮುಟ್ಟಿಸುವ ದೌತ್ಯವನ್ನು ವಹಿಸುವುದು. ಈ ದೌತ್ಯವು ಪ್ರತ್ಯಕ್ಷದಲ್ಲಿ ಮಾತಿನ ಮೂಲಕವೂ ಪರೋಕ್ಷದಲ್ಲಿ ಬರೆಹದ ಮೂಲಕವೂ ಈಡೇರುವುದು. ಮಾತು ಸಂದರ್ಭಕ್ಕೆ ಅನುಗುಣವಾಗಿ ಭಾಷಣ, ಸಂಭಾಷಣ, ಪ್ರವಚನ, ಕಥನ, ಉಪದೇಶ, ಉಪನ್ಯಾಸ, ಆಜ್ಞಾಪನ, ವಿಜ್ಞಾಪನ–ಮುಂತಾದ ಬಹಿರಂಗಗಳನ್ನು ತಾಳುವುದು. ಬರೆಹವು ಆ ಮಾತಿನ ಲಿಖಿತ ರೂಪ. ಅದು ಪತ್ರ, ಕಥೆ, ಕಾದಂಬರಿ, ಕಾವ್ಯ, ನಾಟಕ, ಸಂಶೋಧನ, ವಿಮರ್ಶನ—ಮುಂತಾದ ಸ್ವರೂಪಗಳನ್ನು ತಾಳುವುದು. ಹೀಗೆ ಮಾತು ಮತ್ತು ಬರೆಹ ಎಂಬಿವು ಭಾಷೆಯೆಂಬ ನಾಣ್ಯದ ಎರಡು ಮುಖಗಳು. ನಾಣ್ಯವು ನಿಶ್ಚಿತ ಲೋಹದಿಂದ, ಆಕೃತಿಯಿಂದ, ಮುದ್ರೆಯಿಂದ, ಉಲ್ಲೇಖದಿಂದ ಮತ್ತು ಬೆಲೆಯಿಂದ ಕೂಡಿರುವಂತೆ ಭಾಷೆಯೂ ನಿರ್ದಿಷ್ಟವಾದ ಶಬ್ದರೂಪದಿಂದ, ವಾಕ್ಸರಣಿಯಿಂದ, ಉಚ್ಚಾರಣದಿಂದ ಮತ್ತು ಅರ್ಥವಾಹಕತೆಯಿಂದ ಒಪ್ಪುವುದು. ಭಾಷೆಗೆ ಶುದ್ಧತೆ ಮುಖ್ಯ. ಮಾನವನ ಆಚಾರ ವಿಚಾರಗಳು, ಉಡುಗೆ–ತೊಡುಗೆಗಳು, ದೇಹ–ಮನಸ್ಸು–ವ್ಯವಹಾರಗಳು ಪರಿಶುದ್ಧವಾಗಿ ಪವಿತ್ರವಾಗಿ ಇರಬೇಕೆಂಬುದನ್ನು ಒಪ್ಪದವರಿಲ್ಲ. ದೇಹ ಶುದ್ಧವಾಗಿಲ್ಲದಿದ್ದರೆ ವ್ಯಾಧಿಯೂ ಮನವು ನಿರ್ಮಲವಾಗಿಲ್ಲದಿದ್ದರೆ ಆಧಿಯೂ ತಲೆತೋರುವುದು. ದೇಹ–ಮನಸ್ಸುಗಳು ಪರಿಶುದ್ಧವಾಗಿರಬೇಕೆನ್ನುವಾಗ ತ್ರಿಕರಣಗಳಲ್ಲಿ ಇನ್ನು ಮೂರನೆಯದಾದ ವಾಕ್ಕಿನ ಶುದ್ಧತೆ ಅನಪೇಕ್ಷಣೀಯವೆ?

ನ್ಯೂಮನ್ (Newman) ಎಂಬ ಆಂಗ್ಲ ವಿದ್ವಾಂಸನು ಈ ವಿಚಾರವಾಗಿ ಹೇಳಿದ ಮಾತಿದು —

"As certain unaffected neatness and propriety and grace of diction may be required of any author, for the same reason that a certain attention to dress is expected of every gentleman."

ಉಚ್ಚಾರಣೆಯ ದೋಷದಿಂದ, ಬರೆವಾಗ ಆಗುವ ಅಕ್ಷರಗಳ ಅಸ್ಪಷ್ಟತೆಯ ಅಥವಾ ಸ್ಖಾಲಿತ್ಯದ ದೋಷದಿಂದ ಶಬ್ದಗಳು ರೂಪುಗೆಟ್ಟು ಅರ್ಥವ್ಯತ್ಯಾಸವಾಗುವುದು ಎಲ್ಲ ಭಾಷೆಗಳಲ್ಲಿಯೂ ನಿಜವಾದ ಸಂಗತಿ. ಸಂಸ್ಕೃತದಲ್ಲಿ "ಲಳಯೋರಭೇದಃ"—ಲಕಾರ ಳಕಾರಗಳಿಗೆ ಅರ್ಥ ಭೇದವಿಲ್ಲ. ಜಲ-ಜಳ, ಕುಲ–ಕುಳ, ಪುಲಿನ–ಪುಳಿನ ಎಂಬಲ್ಲೆಲ್ಲ ಲಕಾರವಿರಲಿ, ಳಕಾರವಿರಲಿ–ಅರ್ಥ ಒಂದೇ. ಆದರೆ ಈ ಸೂತ್ರ ಕನ್ನಡಕ್ಕೆ ಅನ್ವಯಿಸದು. ಕನ್ನಡದಲ್ಲಿ ಕಾಲು–ಕಾಳು, ಬೆಲೆ–ಬೆಳೆ, ಹಾಲು-ಹಾಳು, ಬಲೆ–ಬಳೆ, ಹೊಲೆ-ಹೊಳೆ, ತಲೆ-ತಳೆ, ಹಳ್ಳಿ-ಹಲ್ಲಿ, ಕಳ್ಳು-ಕಲ್ಲು—ಎಂಬಲ್ಲೆಲ್ಲ ಅರ್ಥಭೇದ ಸ್ಪಷ್ಟವಾಗಿದೆ. ಹೀಗೆಯೇ ಅಲ್ಪಪ್ರಾಣ ಮಹಾಪ್ರಾಣ ಅಕ್ಷರಗಳನ್ನು ಪಲ್ಲಟಗೊಳಿಸಿದಾಗಲೂ ಹಲವೆಡೆ ಅರ್ಥಭೇದವಿದೆ:–ಧನ-ದನ, ಅಘ-ಅಗ, ಗದಾ-ಗಧಾ, ಬಾರ-ಭಾರ–ಉದಾಹರಣಗಳಿವು. ಭಾಷೆ ಪರಿಶುದ್ಧವಾಗಿರಬೇಕೆನ್ನುವವರು ಹೀಗೆ ಅಕ್ಷರವ್ಯತ್ಯಾಸಗಳಿಂದ ಆಗುವ ಅರ್ಥವ್ಯತ್ಯಾಸವನ್ನು ತಿಳಿದಿರುವುದು ಆವಶ್ಯಕ. ಶಬ್ದಶುದ್ಧಿಯನ್ನು ದೃಷ್ಟಿಯಲ್ಲಿಟ್ಟು ಆಂಗ್ಲ ವಿದ್ವಾಂಸನೊಬ್ಬನು ಹೇಳಿದ ಮಾತುಗಳಿವು :

Words are, in fine, the only currency in which we can exchange thought with ourselves. Does it not follow, then, that the more accurately we use words, the closer definition we shall give to our thoughts ? [1]

---

1. Sir Arthur Quiller Coutch--On the Art of Writing

ಹಾಗಾದರೆ ಭಾಷಾಶುದ್ಧತೆಯನ್ನು ನಿರ್ಣಯಿಸುವ ಸಾಧನವಾ ವುದು? ಅದು ವ್ಯಾಕರಣವೆಂದು ವೈಯಾಕರಣರು ಹೇಳುವರು. ಶಬ್ದಾನು ಶಾಸನ ಪ್ರಕಾಶಿಕೆಯಲ್ಲಿ ಬಂದಿರುವ ಶ್ಲೋಕವಿದು–

"ಸರ್ವೇಷಾಂ ವ್ಯವಹಾರಾಣಾಂ ಮೂಲಂ ಶಬ್ದಾರ್ಥನಿರ್ಣಯಃ
ಸ ಚ ವ್ಯಾಕರಣಾದೇವ ಮುನಿಭಿಸ್ತೇನ ತತ್ಕೃತಂ॥"

[ಎಲ್ಲ ತರದ ವ್ಯವಹಾರಗಳಿಗೂ ಶಬ್ದಗಳ ಮತ್ತು ಅರ್ಥಗಳ ನಿರ್ಣಯವೇ ಆದಿ. ಅದು ವ್ಯಾಕರಣದಿಂದಲೇ ಸಾಧ್ಯ. ಆದುದರಿಂದ ಮುನಿಗಳು ವ್ಯಾಕರಣರಚನೆಯನ್ನು ಮಾಡಿದ್ದಾರೆ]. "ವ್ಯಾಕರಣ" ಎಂಬ ಶಬ್ದದ ವ್ಯುತ್ಪತ್ತಿಯೂ ಈ ವಿಚಾರವನ್ನು ಸ್ಪಷ್ಟಪಡಿಸುವುದು. "ವ್ಯಾಕ್ರಿಯಂತೇ–ವ್ಯುತ್ಪಾದ್ಯಂತೇ, ಅಸಾಧುಭ್ಯೋ ವಿವಿಚ್ಯ ಬೋಧ್ಯಂತೇ ಯತ್ರ"–ಇದರಂತೆ ಶಬ್ದಗಳ ಸಾಧುತ್ವವನ್ನು ಅಥವಾ ಪ್ರಯೋಗಾರ್ಹತೆಯನ್ನು ಬೋಧಿಸುವ ವಿಷಯವು 'ವ್ಯಾಕರಣ'ವೆಂದು ವಿಶದವಾಗುವುದು. ಸಕಲ ವಿದ್ಯೆಗಳಿಗೆ ಚಿಕಿತ್ಸಕ ರೂಪವಾಗಿಯೂ ಇರುವುದು ವ್ಯಾಕರಣವೇ ಆಗಿದೆಯೆಂದು ಶಬ್ದಾನುಶಾಸನಕಾರನು ದೃಢಪಡಿಸಿದ್ದಾನೆ.

ಕವಿ ಕೇಶಿರಾಜನು ವ್ಯಾಕರಣದ ಮಹತಿಯನ್ನು ಕೊಂಡಾಡಿದ ಪದ್ಯವಿದು:

"ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ
ಲೋಕಂ ತತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ॥"[2]

ವ್ಯಾಕರಣವು ಪದಸಿದ್ಧಿ ಅರ್ಥನಿರ್ಣಯಾದಿಗಳ ಮೂಲಕ ಭಾಷಾಶುದ್ಧತೆಯನ್ನು ಮಾತ್ರವೇ ಅಲ್ಲ, ಆಯಾ ಭಾಷೆಯ ವೈಶಿಷ್ಟ್ಯವನ್ನೂ ತಿಳಿಯಲು ಸಾಧನವಾಗಿದೆ.

---

2 ಶಬ್ದಮಣಿದರ್ಪಣ ಪದ್ಯ ೧೦.

The life and soul of a language, that which constitutes its substantial individuality, and distinguishes it from all others, is its grammar.[3]

ಜನರಾಡುವ ಭಾಷೆ ಗ್ರಂಥಸ್ಥವೂ ಆಗಿದ್ದರೆ, ಅದಕ್ಕೆ ಎರಡು ರೂಪಗಳಿರುವುದು ಸಹಜ. ಆ ರೂಪಗಳನ್ನು ವ್ಯಾವಹಾರಿಕವೆಂದೂ (colloquial), ಗ್ರಾಂಥಿಕ (Literary)ವೆಂದೂ ಕರೆವರು. ವ್ಯಾವಹಾರಿಕ ಭಾಷೆ ಸ್ಥೂಲನಿರೀಕ್ಷೆಗೆ ಒಂದೇ ಆಗಿ ತೋರಿದರೂ ಅದರ ಶಬ್ದ-ವಾಕ್ಯ-ಉಚ್ಚಾರಣೆ-ಅರ್ಥಗಳಲ್ಲಿ ಹಲವೆಡೆ ವ್ಯತ್ಯಾಸಗಳು ಕಾಣಿಸುತ್ತವೆ. ಈ ವ್ಯತ್ಯಾಸಗಳಿಗೆ ಆಯಾ ಪ್ರದೇಶ–ಜನತೆ–ಕಾಲ ಮುಂತಾದವನ್ನೇ ಕಾರಣಗಳೆನ್ನಬಹುದು. ವ್ಯಾವಹಾರಿಕ ಭಾಷೆಯಲ್ಲಿ ಗ್ರಾಮ್ಯತೆ–ಶಬ್ದಸಂಸ್ಕಾರರಾಹಿತ್ಯವೇ ಹೆಚ್ಚು. ಆದರೆ ಗ್ರಾಂಥಿಕ ಭಾಷೆ ವ್ಯಾಕರಣಸಿದ್ಧವಾಗಿ, ಶುದ್ಧವಾಗಿ ಏಕರೂಪವಾಗಿರುವುದು. ಅದರಲ್ಲಿಯೂ ಪ್ರದೇಶಾನುಗುಣವಾಗಿ ಜನಾನುಗುಣವಾಗಿ ಭಿನ್ನತೆ ತೋರಿ ಬಂದರೂ, ಆ ಭಿನ್ನತೆಯು ಏಕರೂಪಕ್ಕೆ ಅತಿ ಸಮೀಪವಿರುವುದು. ವಿಶಾಲವಾದ ನಾಡ ಜನರು ಪರಸ್ಪರರ ಹೃದಯವನ್ನರಿಯಲು ಏಕರೂಪಭಾಷೆಯು ಆವಶ್ಯಕತೆಯಿದೆ. ಭಾಷೈಕತೆ ನಾಡ ಏಕತೆಗೆ ಸಹಕಾರಿ. ಆದುದರಿಂದ ಪ್ರದೇಶಾನುಗುಣವಾದ ದೇಶೀರೂಪಗಳು ಸಂಸ್ಕಾರಾರ್ಹವಾಗಿ ಗ್ರಾಂಥಿಕ ಭಾಷೆಯೆನಿಸಿ ಪ್ರಯೋಗಾರ್ಹವಾಗುವವು. ಇಂತಹ ಪದ-ವಾಕ್ಯ ಸಂಸ್ಕಾರವನ್ನು ವ್ಯಾಕರಣವು ಈಡೇರಿಸುವುದು.

ವ್ಯಾಕರಣಕ್ಕೆ ಆಧಾರವಾಗಿ ಕನ್ನಡದಲ್ಲಿ ಉಪಲಬ್ದವಾಗುವ ಗ್ರಂಥಗಳೆಂದರೆ, ನಾಗವರ್ಮನ (ಕ್ರಿ.ಶ. ೧೨ನೆಯ ಶತಮಾನ) "ಭಾಷಾಭೂಷಣ" ಮತ್ತು ಕಾವ್ಯಾವಲೋಕನದಲ್ಲಿ "ಶಬ್ದಸ್ಮೃತಿ" ಎಂಬ ಭಾಗ, ಕವಿ ಕೇಶಿರಾಜನ (೧೩ ನೆಯ ಶತಮಾನ) ಶಬ್ದಮಣಿದರ್ಪಣ, ಭಟ್ಟಾಕಲಂಕನ (೧೬೦೪) ಶಬ್ದಾನುಶಾಸನ– ಇವೇ ಮುಖ್ಯವೆನ್ನಬಹುದು. ಮೈಸೂರು ವಿಶ್ವವಿದ್ಯಾಲಯದ "ಕನ್ನಡ ಕೈಪಿಡಿ" ಗ್ರಂಥದ ಒಂದು ಭಾಗವೂ ವ್ಯಾಕರಣ ವಿಷಯಕವಾ

---

[3] Rao Bahadur R. Narasimhacharya, M.A.,M.R.A.S. History of Kannada Language--Page 3.

ಗಿದೆ. ಇವಲ್ಲದೆ ಕ್ರಿ ಶ. ೯ನೆಯ ಶತಮಾನದ "ಕವಿರಾಜಮಾರ್ಗ" ಗ್ರಂಥದ ಪ್ರಥಮಪರಿಚ್ಛೇದದಲ್ಲಿ ಭಾಷೆಯ ಶುದ್ಧಾಶುದ್ಧತೆಯ ವಿವೇಚನೆಯಿದೆ. ಕಾವ್ಯಾವಲೋಕನದ "ಕಾವ್ಯಮಲವ್ಯಾವೃತ್ಯಧಿಕರಣಂ" ಎಂಬ ಅಧ್ಯಾಯದಲ್ಲಿ ಪದ-ಪದಾರ್ಥ-ಸಂಧಿಗಳ ದೋಷವಿಚಾರಣೆಯಿದೆ. ಇವೂ ಅಲ್ಲದೆ, ಈಚೆಗಿನ ಹಲವು ವಿದ್ವಾಂಸರು ಶಾಲಾ ವಿದ್ಯಾರ್ಥಿಗಳಿಗಾಗಿ ಬರೆದಿರುವ ಹಲವು ವ್ಯಾಕರಣ ಪುಸ್ತಕಗಳೂ ಇವೆ. ಹೀಗೆ ಭಾಷೆಯನ್ನು ಸಂಸ್ಕರಿಸುವ ವ್ಯಾಕರಣ ಗ್ರಂಥಗಳಿದ್ದರೂ ಕನ್ನಡದಲ್ಲಿ ಇಂದು ಬಳಕೆಯಾಗಿರುವ ಮತ್ತು ಆಗುತ್ತಿರುವ ಪ್ರಯೋಗಗಳು ವ್ಯಾಕರಣಬದ್ಧವಾಗಿಯೇ ಇವೆಯೆ ? ವ್ಯಾಕರಣಕ್ಕೆ ಸರಿಯಲ್ಲದ ಪ್ರಯೋಗವಲ್ಲಿ ನೆಲೆವಡೆದಿರುವ ರೂಪಗಳಿಗೆ ಸ್ಥಾನ ಯಾವುದು ? ಎಂಬುದರ ಪರ್ಯಾಲೋಚನೆ ಆವಶ್ಯಕ. ಅಂತಹ ಕೆಲವು ವಿಷಯಗಳಿವು :

೧. ಸಂಸ್ಕೃತದ ಹಲವು ಸಮಾಸಪದಗಳು ಕನ್ನಡದಲ್ಲಿ ಹಲವು ಕಡೆ ತಪ್ಪಾಗಿಯೇ ಪ್ರಯೋಗಗೊಂಡಿವೆ. ಮನರಂಜನೆ, ಮನವೇಗ, ಜಗಭರಿತ— ಇಂಥವು ಸರಿಯೆಂದು ಸಂಸ್ಕೃತ ವ್ಯಾಕರಣವಾಗಲೀ ಕನ್ನಡ ವ್ಯಾಕರಣವಾಗಲೀ ಹೇಳುವುದಿಲ್ಲ. ಸಂಸ್ಕೃತದ ಸಮಾಸಪದದಲ್ಲಿ ಪೂರ್ವಪದಾಂತ್ಯಕ್ಕೆ ಮಾರ್ಪಾಟು ಬರಲಾರದು—ಎಂಬುದನ್ನು ಶ.ಶಾ. ಸೂತ್ರ ೧೩೨, ೧೩೫— ಇವುಗಳಲ್ಲಿ ನೋಡಬಹುದು. ಈ ನಿಯಮಕ್ಕೆ ವ್ಯತಿರಿಕ್ತವಾಗಿ ಕುಮಾರವ್ಯಾಸ ಭಾರತದಲ್ಲಿ ಮನವೇಗ (ಅರಣ್ಯಪರ್ವ ಸಂಧಿ ೩—೨೨) ಜಗಭರಿತ (ಪೀಠಿಕಾ ಸಂಧಿ–೮) ಎಂಬ ರೂಪಗಳನ್ನು ಕಾಣಬಹುದು. ನಡುಗನ್ನಡ ಹೊಸಗನ್ನಡಗಳಲ್ಲಿ ಇಂತಹ ದೋಷಯುಕ್ತ ಸಮಾಸಪದಗಳಿವೆ.

೨. ಸಂಸ್ಕೃತವನ್ನೂ ಕನ್ನಡವನ್ನೂ ಬೆರಸಿ ಸಮಾಸ ಮಾಡಬಾರದೆಂದು ಕವಿರಾಜ ಮಾರ್ಗವು ಘಂಟಾಘೋಷ ಮಾಡಿದೆ—

"ತಜ್ಜ್ಞರಿಸಂದಾ ಸಕ್ಕದಮುಮ
ನಜ್ಜರಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್
ಕುಜ್ಜ್ಞರಿತು ಬೆರಸಿದೊಡೆ ವಿರಸಂ
ಮಜ್ಜುಗುವ ಪಾಲ್ಗಳೆಯ ಪಸಿಗಳಂ ಬೆರಸಿದವೊಲ್"[4]

---

4 ಕವಿರಾಜಮಾರ್ಗ ೧–೫೮.

ಇಂತಹ ಸಂಸ್ಕೃತ-ಕನ್ನಡ ಮಿಶ್ರ ಸಮಾಸವನ್ನು "ಅರಿಸಮಾಸ" ಎನ್ನುವರು. ತಮಿಳು, ತೆಲುಗು, ಮಲಯಾಳ–ಮುಂತಾದ ಇತರ ದ್ರಾವಿಡ ಭಾಷೆಗಳಲ್ಲಾಗಲೀ ಮರಾಠಿ, ಹಿಂದಿ ಮುಂತಾದ ಸಂಸ್ಕೃತ ಜನ್ಯ ಭಾಷೆಗಳಲ್ಲಾಗಲೀ ಅರಿಸಮಾಸವು ದೋಷಕರವಲ್ಲ ; ಕನ್ನಡದಲ್ಲಿ ವೈಯಾಕರಣರ ಮತದಂತೆ ಅದು ಹೇಯ. ಕವಿರಾಜಮಾರ್ಗಕಾಲದ ಮೂರು ಶತಮಾನಾನಂತರ ಬಂದಾಗ ಈ ನಿಯಮವು ಸ್ವಲ್ಪ ಶಿಥಿಲವಾದುದು ಕಾಣುತ್ತದೆ—"ಸಮಸಂಸ್ಕೃತಂ ದೇಶೀಯ ಪದೇನ ಸಮಸ್ಯತೇ" ಪ್ರಯೋಗ :—ನಾರದದಂಡಿಗೆ, ಪರಕೊತ್ತಳಂ, ಅರಸುವಳಂ, ಮಾಜನಂ, ಮಾಪಾತಕಂ, ತುರಗದಳಂ"[5]

ಇದಕ್ಕೂ ಒಂದು ಶತಮಾನ ಈಚೆಗೆ ಬಂದ ಕವಿ ಕೇಶಿರಾಜನು ಈ ಸಮಾಸದ ವಿಷಯದಲ್ಲಿ ಇನ್ನಷ್ಟು ವಿವರಣೆ ಮಾಡಿರುವನು—

ಪದವಿಧಿ ಕನ್ನಡಕಂ ಸ
ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಱಿದಿ
ರ್ಪುದು ಬಿರುದಾವಳಿಯೊಳ್ ಪೇ
ೞ್ವುದು ಪೆೞ್ವವಱೊಳಾಗದಿದು ವಿರುದ್ಧ ಸಮಾಸಂ[6]

ಈತನು ಅರಿಸಮಾಸವನ್ನು ನಿಷೇಧಿಸಿ, ಹಿಂದಿನವರು ಮಾಡಿದ ಪ್ರಯೋಗಗಳನ್ನು ಮಾತ್ರ ಒಪ್ಪಿಕೊಂಡಿದ್ದಾನೆ. ಬಿರುದುಗಳಲ್ಲಿ ಅರಿಸಮಾಸವು ದೋಷಕರವಲ್ಲವೆಂದು ಹೇಳಿ, ಬೇರೆ ಕಡೆ ಅದು ಅಸಾಧುವೆಂದು ಕಟ್ಟಾಣತಿ ಮಾಡಿ, ಉದಾಹರಣಗಳನ್ನೂ ಕೊಟ್ಟಿದ್ದಾನೆ. ಭಟ್ಟಾಕಲಂಕನು ಇವನ್ನೇ "ತಚ್ಚ ಬಿರುದಾವಲ್ಯಾಂ, ಕಡುರಾಗಾದಯಃ"[7] ಎಂಬೆರಡು ಸೂತ್ರಗಳಲ್ಲಿಯೂ ಅವಕ್ಕೆ ಕೊಟ್ಟ ಉದಾಹರಣಗಳಲ್ಲಿಯೂ ವಿವರಿಸಿದ್ದಾನೆ. ಇಷ್ಟೆ ಅಲ್ಲದೆ, ಅವನು ಸಂಸ್ಕೃತ-ಕನ್ನಡ ಮಿಶ್ರ ಸಮಾಸರಚನೆಯಲ್ಲಿ ಇನ್ನೂ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಟ್ಟುದು ಕಾಣುತ್ತದೆ. "ಶಶಿಶೇಖರ" ಎಂಬ ಸಮಸ್ತ ಪದವನ್ನು ಸಸಿ

---

5 ಭಾಷಾಭೂಷಣ, ಸೂತ್ರ ೧೪೯.
6 ಶಬ್ದಮಣಿದರ್ಪಣ, ಸೂತ್ರ ೧೭೫.
7 ಶಬ್ದಾನುಶಾಸನ, ಸೂತ್ರ ೩೯೫, ೩೯೬.

ಸೇಖರ, ಶಶಿಸೇಖರ, ಸಶಿಸೇಖರ-ಮುಂತಾಗಿ "ಏಕದೇಶವಿಕೃತ"ವಾಗಿ ಮಾಡಿದ ಮಾತ್ರಕ್ಕೆ ಆ ಪದವು ಪೂರ್ಣವಾಗಿ ತದ್ಭವವೇ ಆಗುವುದೆಂದು ಸೂಚಿಸಿದ್ದಾನೆ[8]. ಹೀಗೆ ನಿಯಮದ ನಿಟ್ಟು ಕಡಮೆಯಾಗಿ, ಇಂದಿಗೆ ಸ್ವಚ್ಛಂದವಾಗಿ ಸಾಹಿತ್ಯರಥ ಸಾಗುತ್ತಿರುವ ಹೊಸಗನ್ನಡದಲ್ಲಿ, ಈ ಸಮಾಸನಿಯಮದ ಕಡಿವಾಣ ಕಡಿದು ಹೋಗಿರುವುದು ಸ್ಪಷ್ಟವಾಗಿರುವ ವಿಷಯ.

೩. ಇಂದಿನ ಹೆಚ್ಚಿನ ಕಥೆ ಕಾದಂಬರಿಗಳಲ್ಲಿ, ಕವನಗಳಲ್ಲಿ, ವಿಮರ್ಶನಗಳಲ್ಲಿ ಮತ್ತು ಹಲವರ (ವಿದ್ವಾಂಸರ) ಭಾಷಣಗಳಲ್ಲಿ ಅಬದ್ಧ ಪ್ರಯೋಗಗಳು ಹಲವು ಕಾಣಸಿಗುತ್ತವೆ. ನೋಡಲೆತ್ನಿಸು, ಬೆಗ್ಗಾಡು, ಕಗ್ಗಾಳು, ಶಾಲೆನಲ್ಲಿ, ಕೈನಲ್ಲಿ, ನೆಹರುರವರು ಕುವೆಂಪುರವರು—ಇತ್ಯಾದಿ ಪದಪ್ರಯೋಗಗಳು ಸರಿಯೆ ? ನೋಡಲು + ಯತ್ನಿಸು ಎಂಬಲ್ಲಿ ಸಂಧಿಯಾಗದು. "ಎತ್ನಿಸು" ಎಂದು ಶಬ್ದವೇ ಇಲ್ಲದುದರಿಂದ ನೋಡಲೆತ್ನಿಸು, ಹೇಳಲೆತ್ನಿಸು ಎಂಬ ರೂಪಗಳು ಸರಿಯಲ್ಲ. ಬಿಸಿದು (ಬೆಚ್ಚನೆ) + ಕಾಡು – ಎಂಬುದು ಬಿಸುಗಾಡು, ಬೆಂಗಾಡು- ಆಗಬಲ್ಲುದು ; ಆದುದರಿಂದ ಆ ಅರ್ಥದಲ್ಲಿ 'ಬೆಗ್ಗಾಡು' ಅಶುದ್ಧ. ಕರಿದು + ಆಳು-"ಕಾರಾಳು" ಆಗುವುದು ; ಕಗ್ಗಾಳು ಎಂದಾಗಲಾರದು. ಕೈಯಲ್ಲಿ, ಶಾಲೆಯಲ್ಲಿ, ಮನೆಯಲ್ಲಿ-ಎಂಬ ಯಕಾರಾಗಮ ಸ್ಥಾನಗಳಲ್ಲೆಲ್ಲಾ ಹಲವರು–ವಿದ್ವಾಂಸರೆನಿಸಿದವರು ಕೂಡ–ಕೈನಲ್ಲಿ, ಶಾಲೆನಲ್ಲಿ, ಮನೆನಲ್ಲಿ-ಎನ್ನುತ್ತಾರೆ. "ಎಂ.ಎ. ನಲ್ಲಿ ನಾನು ಉತ್ತೀರ್ಣನಾದಾಗ......" ಹೀಗೆಂದು ಕನ್ನಡದಲ್ಲಿ ಎಂ.ಎ. ಪದವೀಧರರು ವಾಕ್ಯಾರಂಭ ಮಾಡುವುದುಂಟು. (ಈ ಕಾಲದಲ್ಲಿ ಮನೆ ಮನೆಗೂ 'ನಲ್ಲಿ' ಬಂದಿರುವುದರ ಪ್ರಭಾವವೋ ಏನೋ !). ನೆಹರು + ಅವರು 'ನೆಹರುವವರು' ಎಂದಾಗುವುದು, 'ನೆಹರುಗಳವರು' ಎನ್ನಬಹುದು. ಆದರೆ 'ನೆಹರುರವರು' ಹೇಗಾಗುವುದೆಂಬದಕ್ಕೆ ನಿಯಮಾಧಾರವಿಲ್ಲ. ಅಲ್ಲದೆ ಇಂಥವನ್ನು ರೂಢಿಗತವಾಗಿ ಆದ ಮಾರ್ಪಾಡುಗಳೆನ್ನಲು ಸಾಧ್ಯವಿಲ್ಲದುದರಿಂದ, ಭಾಷಾದೋಷಗಳೆಂದೇ ಹೇಳಬೇಕಾಗುತ್ತದೆ. ಮಾರ್ಪಾಡುಗಳ ಒಂದೆರಡು ಉದಾಹರಣಗಳನ್ನಿಲ್ಲಿ ಕೊಡಬಹುದು.

---

8 ಅದರಲ್ಲೇ, ಸೂತ್ರ ೧೩೮.

೪. 'ಜನ' ಎಂಬ ಶಬ್ದವು ನಪುಂಸಕಲಿಂಗೈಕ ವಚನವೆಂದು ಕೇಶಿರಾಜನ ಮತ (ಶ. ದ. ಸೂ. ೧೦೨). ನಮ್ಮ ಪ್ರಾಂತದ ಕೆಲವು ಕಡೆಗಳಲ್ಲಿ ಇದನ್ನು ಈಗಲೂ ನಪುಂಸಕಲಿಂಗದ ಏಕವಚನವಾಗಿಯೇ ಬಳಸುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಪುಲ್ಲಿಂಗ-ಸ್ತ್ರೀಲಿಂಗಗಳ ಬಹುವಚನ ರೂಪವಾಗಿ ಪ್ರಯೋಗಿಸುತ್ತಾರೆ—"ಜನ ಹೀಗೆ ಹೇಳುತ್ತಾರೆ" ಎನ್ನುತ್ತಾರೆ. ಇಂತಹ ಸಂದರ್ಭಗಳಲ್ಲಿ ಶಾಸ್ತ್ರಾಧಾರವೂ ಲೋಕಪ್ರಯೋಗವೂ ಕೂಡಿ ಬಂದುದನ್ನೇ ಸಾಧುವೆಂದು ಪರಿಗಣಿಸುವುದೇ ಉಚಿತವೆನಿಸುವುದು.

ಶಬ್ದಮಣಿ ದರ್ಪಣದಲ್ಲಿ ಹೇಳಿರುವಂತೆ (ಸೂತ್ರ ೨೪೯) "ಬೆಳೆ" ಎಂಬ ಧಾತುವನ್ನು ಸಸ್ಯಾಳಿಯಲ್ಲಿ ಮಾತ್ರ ಪ್ರಯೋಗಿಸಬೇಕು. ಇತರ ಕಡೆಯಲ್ಲೆಲ್ಲ 'ಬಳೆ' ಎಂಬುದನ್ನು ಪ್ರಯೋಗಿಸಬೇಕು. ಆದರೆ ಇಂದು 'ಬೆಳೆ' ಎಂಬುದನ್ನೇ ಎಲ್ಲಾ ಕಡೆಯೂ ಪ್ರಯೋಗಿಸುತ್ತಾರೆ. 'ಬೆಳೆ' ಭಾವನಾಮವಾಗಿ 'ಬೆಳೆ'-'ಬೆಳಸು' ಎಂದಾಗಿದೆ. ಇಂದಿಗೆ ಪ್ರಚುರವಾಗಿ 'ಬೆಳವಣಿಗೆ' 'ಬೆಳವಳಿಗೆ' ಎಂಬಿವೂ ಭಾವನಾಮುಗಳಾಗಿವೆ.

ಹಳಗನ್ನಡದ ಎಷ್ಟೋ ಶಬ್ದರೂಪಗಳು ಹೊಸಗನ್ನಡದಲ್ಲಿ ಬೇರೆ ರೂಪಗಳನ್ನು ತಾಳಿವೆ. ಹಿಂದಿನ ಱಕಾರ ೞಟಿಗಳು ಇಂದಿಗೆ ಪ್ರಯೋಗದಲ್ಲಿಲ್ಲ. ವ್ಯಂಜನಾಂತ ಶಬ್ದಗಳು ಸ್ವರಾಂತವಾಗಿವೆ-ಕಾಲ್-ಕಾಲು, ಕಣ್-ಕಣ್ಣು, ಪುಲ್—ಹುಲ್ಲು ಇತ್ಯಾದಿ. ವರ್ತಮಾನ ಕಾಲದ ತಿಙ್ ಪ್ರತ್ಯಯವಾಗಿರುವ 'ದಪಂ' ಎಂಬುದು 'ಉತ್ತ+ಆನೆ' ಎಂದಾಗಿದೆ: ಬಂದಪಂ-ಬರುತ್ತಾನೆ. ಹೊಸಗನ್ನಡದಲ್ಲಿ ಕಾಣುವ ಈ ರೂಪಗಳನ್ನು ದೋಷವೆನ್ನಲಾಗದು. ಇದು ಕಾಲಾನುಗುಣ ಪರಿವರ್ತನೆಯಾದುದರಿಂದ ಹೊಸಗನ್ನಡದ ವ್ಯಾಕರಣದಲ್ಲಿ ಇಂಥವಕ್ಕೆ ಸಾಧುತ್ವವನ್ನು ಕಲ್ಪಿಸಬಹುದು.

೫. ಕನ್ನಡದಲ್ಲಿ ಹಿಂದೆ ಅಕಾರಾಂತ ಸ್ತ್ರೀಲಿಂಗವೆನಿಸುವ ಸ್ವತಂತ್ರ ಶಬ್ದಗಳು ಮೂರು ಇದ್ದವು:—ಅಕ್ಕ, ಅಮ್ಮ, ಅವ್ವ ಎಂಬಿವು. ಇವಕ್ಕೆ ಹತ್ತುವ ನಾಮವಿಭಕ್ತಿ ಪ್ರತ್ಯಯಗಳು ಅಕಾರಾಂತ ಪುಲ್ಲಿಂಗದಂತೆಯೇ ಇರುತ್ತವೆ.

ಉದಾ : ಅಕ್ಕ(ನು), ಅಕ್ಕನನ್ನು, ಅಕ್ಕನಿಂದ-ಇತ್ಯಾದಿಯಾಗಿ. ವೃವ

ಹಾರವಲ್ಲಿಯೂ ವ್ಯಾಕರಣಶಾಸ್ತ್ರದಲ್ಲಿಯೂ ಈ ಶಬ್ದಗಳಿಗೆ ಪ್ರತ್ಯಯಕ್ರಮ ಇದೇ ರೀತಿಯಾಗಿದೆ–

ಪುದಿಗುಮುದಂತಕೆ ಪುಲ್ಲಿಂ
ಗದವೋಲ್ ಕಿರಿದೆಡೆಗಳಲ್ಲಿಯುಮ್ಲಿಂ ಸ್ತ್ರೀಲಿಂ
ಗದೊಳಂ.......[9]

ಒಂದೆ ಅಕಾರಾಂತ ಸ್ತ್ರೀಲಿಂಗದಲ್ಲಿ ಅಂಕಿತನಾಮಗಳಿದ್ದಿಲ್ಲ. ಆಕಾರಾಂತಗಳಿದ್ದವು ಕನ್ನಡದಲ್ಲಿ ಲಿಂಗವಾಗುವಾಗ (ವಿಭಕ್ತಿ ಹಚ್ಚಲು ಅರ್ಹವಾಗುವಾಗ) ಅವು ಎಕಾರಾಂತಗಳಾಗುತ್ತಿದ್ದವು. ಉದಾ:–ಸೀತಾ–ಸೀತೆ, ಕಮಲಾ–ಕಮಲೆ, ರಮಾ–ರಮೆ ಇತ್ಯಾದಿ. ಆದರೆ ಇಂದಿನ ವ್ಯವಹಾರದಲ್ಲಿ ಅಕಾರಾಂತ ಸ್ತ್ರೀಲಿಂಗಶಬ್ದಗಳು ನೂರಾರಿವೆ. ಕಮಲ, ಮಧುರ, ಸುಮ, ಕುಸುಮ, ಅನಂತ–ಇತ್ಯಾದಿ ಶಬ್ದಗಳು ಅಕಾರಾಂತವಾಗಿಯೇ ಇದ್ದು, ಸ್ತ್ರೀಲಿಂಗದಲ್ಲಿವೆ. ಇವುಗಳಿಗೆ ವಿಭಕ್ತಿಗಳು ಪುಲ್ಲಿಂಗದಂತಿರಬೇಕೆ? ಸ್ತ್ರೀಲಿಂಗದಂತೆ 'ಳುಗಾಗಮ' ದಿಂದ ಕೂಡಿರಬೇಕೆ ? ಕಮಲನು, ಕಮಲನನ್ನು, ಕಮಲನಿಂದ ಎಂದಿರಬೇಕೆ? ಕಮಲಳು, ಕಮಲಳನ್ನು, ಕಮಲಳಿಂದ ಎಂದಿರಬೇಕೆ? –ಎಂಬುದಿಲ್ಲಿ ಸಮಸ್ಯೆ. ಕಥೆ ಕಾದಂಬರಿಗಳಲ್ಲಿ 'ಳು' ಪ್ರತ್ಯಯ ಹಚ್ಚುತ್ತಾರೆ. ಕನ್ನಡನಾಡಿನಲ್ಲಿ ಮನೆ ಮಾತು ಕನ್ನಡವೇ ಆಗಿರುವ ಹಲವು ವರ್ಗದವರು ಪುಲ್ಲಿಂಗದ ಪ್ರತ್ಯಯಗಳನ್ನೇ ಇಂತಹ ಶಬ್ದಗಳಿಗೆ ಹಚ್ಚುವವರಿದ್ದಾರೆ. ವ್ಯಾಕರಣದ ಆಧಾರ ಮತ್ತು ಪ್ರಯೋಗಪದ್ಧತಿ ಎಂಬ ಎರಡನ್ನೂ ಯೋಜಿಸಿ ತೀರ್ಮಾನಿಸುವುದಾದರೆ, ಅಕಾರಾಂತ ಸ್ತ್ರೀಲಿಂಗದಲ್ಲಿ 'ಅಕ್ಕ' ಶಬ್ದದಂತೆ ಪುಲ್ಲಿಂಗದ ವಿಭಕ್ತಿಪ್ರತ್ಯಯ ಹಚ್ಚುವುದೇ ಸಾಧುವೆನಿಸುವುದು.[10]

೬. ಕೇಶಿರಾಜನು ಬೆರಲ್, ಎರಲ್, ಒರಲ್, ಕೊರಲ್, ಸರಲ್,

---

[9] ಶಬ್ದಮಣಿ ದರ್ಪಣ ಸೂತ್ರ, ೧೩೩

[10] ಈ ವಿಚಾರವಾಗಿ "ಅಕಾರಾಂತ ಸ್ತ್ರೀಲಿಂಗ ನಾಮಪದಗಳು" ಎಂಬ ನನ್ನ ಲೇಖನ ನೋಡಿ... ಕನ್ನಡನುಡಿ. ಆಗಸ್ಟ್, ೧೯೬೦. ಇದನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅರಲ್, ಪರಲ್, ಮರಲ್, ನರಲ್ ಎಂಬಿವನ್ನು ಲಕಾರಾಂತಗಳೆಂದೂ ಳಕಾರಾಂತಗಳಲ್ಲವೆಂದೂ ಸ್ಪಷ್ಟಪಡಿಸಿದ್ದಾನೆ. (ಶ. ದ. ಸೂ. ೩೮). ಕೇಶಿರಾಜನ ಕಾಲದಲ್ಲಿ ಗ್ರಾಮ್ಯರು ಅವನ್ನೆಲ್ಲ ಳಕಾರಾಂತವಾಗಿ ತಿಳಿಯುತ್ತಿದ್ದಂತೆ ಇಂದಿಗೆ ಗ್ರಾಮ್ಯರಲ್ಲದವರೂ ಬೆರಳು, ಕೊರಳು-ಇತ್ಯಾದಿಯಾಗಿ ಳಕಾರಾಂತವಾಗಿಯೇ ಪ್ರಯೋಗಿಸುವುದನ್ನು ಕಾಣುತ್ತೇವೆ. ಇವು ಲಕಾರಾಂತವಾಗಿದ್ದರೇ ಶುದ್ಧರೂಪಗಳೆಂಬುದಕ್ಕೆ ಶಬ್ದಮಣಿದರ್ಪಣದ ಮುಂದಿನ ಸೂತ್ರ ಸಮರ್ಥಕವಾಗುತ್ತದೆ. ಅಲ್ಲಿ ಮರಲ್, ಅರಲ್, ಎರಲ್-ಎಂಬೀ ಮೂರು ಶಬ್ದಗಳ ಅಂತರಾಳದ ರೇಫಕ್ಕೆ ಲಕಾರವು ಬಂದು ವಿಕಲ್ಪವಾಗಿ ಮಲರ್, ಅಲರ್, ಎಲರ್ ಎಂಬ ರೂಪಗಳಾಗುವುದನ್ನು ಹೇಳಿದೆ. ಇಲ್ಲಿ ನಡುವೆ ಬಂದ ಲಕಾರವು ಪರಕೀಯಾಕ್ಷರವಲ್ಲ. ಅದು ಆಯಾ ಶಬ್ದದ ಕೊನೆಯದು ; ಮತ್ತು ಕೊನೆಗೆ ಬಂದ ರೇಫ ವ್ಯಂಜನವು ಶಬ್ದದ ನಡುವಿನದು. ಈ 'ವರ್ಣವಿಪರ್ಯಯ'ವು (Metathesis) ಭಾಷಾಶಾಸ್ತ್ರಾಂತರ್ಗತವಾದ ಒಂದು ಲಕ್ಷಣ. ಶಾಸ್ತ್ರವಿವೇಚನೆಯ ದೃಷ್ಟಿಯಿಂದ ಲಕಾರಾಂತವಾಗಿರುವುದೇ ಶುದ್ಧವೆನಿಸಿದರೂ ಇಂದು ವ್ಯವಹಾರದಲ್ಲಿ ಳಕಾರಾಂತವಾಗಿರುವುದನ್ನು ತಪ್ಪೆಂದು ಹೊಡೆದು ಹಾಕುವಂತಿಲ್ಲವಾಗಿದೆ.

ವ್ಯಾಕರಣದ ಎಲ್ಲೆಯನ್ನು ಕೆಲವೆಡೆ ಮೀರಿದ ಮಾತ್ರದಿಂದ ಭಾಷೆ ಕೆಟ್ಟಿತೆನ್ನಲಾಗುವುದಿಲ್ಲ- ಭಾಷೆಗೂ ವ್ಯಾಕರಣಕ್ಕೂ ಇರುವ ಸಂಬಂಧವನ್ನು ಇಲ್ಲಿ ಅರ್ಥ ಮಾಡಿಕೊಳ್ಳುವುದು ಆವಶ್ಯಕ. ಭಾಷೆ ಹರಿಯುವ ನದಿಯಾದರೆ ವ್ಯಾಕರಣವೇ ಅದರ ದಡ. ಕೆಲವೊಮ್ಮೆ ಪ್ರವಾಹ ಹೆಚ್ಚಿ ದಡವನ್ನು ಕೊರೆಯುವುದೂ ಮೇಲೆ ಮಗುಚಿ ಹರಿಯುವುದೂ ಸಹಜ. ಆದರೆ ದಡವೇ ಇಲ್ಲವಾದರೆ ಪ್ರವಾಹದ ಹಾನಿ ಹೆಚ್ಚು. ಭಾಷೆಯಂತೂ ಮೊದಲು, ವ್ಯಾಕರಣ ಮತ್ತಿನದು. ಭಾಷೆಗನುಸರಿಸಿ ವ್ಯಾಕರಣವಲ್ಲದೆ ವ್ಯಾಕರಣವನ್ನನುಸರಿಸಿ ಭಾಷೆಯಿರಬೇಕಾದುದಲ್ಲ. ವ್ಯಾಕರಣಕ್ಕೆ ಪ್ರಯೋಗವೇ ಶರಣು. ಅಲ್ಲಿ ಯೋಗಕ್ಕಿಂತ ರೂಢಿಗೆ ಬಲ ಹೆಚ್ಚು. ವ್ಯಾಕರಣವು ನಿರಂಕುಶ ಪ್ರಭುವಿನ ಶಾಸನವಲ್ಲ. ಅದು ಧರ್ಮನಿಷ್ಠ ಪ್ರಜಾತಂತ್ರ ಜನತೆಯ ರಾಜ್ಯಸಂವಿಧಾನ. ಜನತೆಯ ಪ್ರಗತಿಗೂ ವಿಕಾಸಕ್ಕೂ ಅದು ಪ್ರೋತ್ಸಾಹಕ. ಹಾಗೆ ಅದಿಲ್ಲವೆಂದು ತೋರಿದಲ್ಲಿ ಅಂತಹ ಶಾಸನದ ಪರಿಚ್ಛೇದಗಳನ್ನು ಮಾರ್ಪಡಿಸುವಂತೆ, ಭಾಷೆಗನುಗುಣವಾಗಿ ವ್ಯಾಕರಣವನ್ನೂ

ಮಾರ್ಪಡಿಸಬೇಕಾಗುವುದು ಸಹಜ. ಜನಜೀವನವು ಕಾಲಾನುಗುಣವಾಗಿ ಮಾರ್ಪಾಡು ಹೊಂದುವಂತೆ ಭಾಷೆಯೂ, ಭಾಷೆಯ ಸಾಹಿತ್ಯಸ್ವರೂಪವೂ ಮಾರ್ಪಡುವುದು ಸಹಜವಾದುದರಿಂದ,ಒಂದು ಕಾಲದ ವ್ಯಾಕರಣದ ಎಲ್ಲ ನಿಬಂಧನೆಗಳು ಎಲ್ಲ ಕಾಲಕ್ಕೂ ಸರಿಯೆನ್ನಲಾಗುವುದಿಲ್ಲ. ಆದುದರಿಂದ ಸಮಕಾಲಿಕ ಭಾಷೆಗೆ ಪೂರ್ವವ್ಯಾಕರಣವನ್ನು ಅನ್ವಯಿಸುವವರು ಅಥವಾ ಹೊಸತಾಗಿ ವ್ಯಾಕರಣರಚನೆ ಮಾಡುವವರು ಭಾಷಾಧರ್ಮವನ್ನು ತಿಳಿದಿರಲೇಬೇಕು-ಭಾಷಾಶಾಸ್ತ್ರವನ್ನು (Philology)ಅಭ್ಯಾಸ ಮಾಡಿರಬೇಕು.

ವ್ಯಾಕರಣವು ತಾನು ರಚಿತವಾದ ಕಾಲದ ಮತ್ತು ಆ ಕಾಲಕ್ಕೆ ಹಿಂದಿನ ಗ್ರಂಥಸ್ಥ ಭಾಷೆಯ ಶುದ್ಧತೆಯನ್ನು ನಿಷ್ಕರ್ಷಿಸುವುದು. ಭಾಷಾಶಾಸ್ತ್ರವು ವ್ಯಾವಹಾರಿಕ ರೂಪವನ್ನು ವಿಶೇಷವಾಗಿ ದೃಷ್ಟಿಯಲ್ಲಿಟ್ಟು ಕಾರ್ಯಕಾರಣ ಸಂಬಂಧದಿಂದ ಭಾಷೆಯ ಸ್ವರೂಪ-ಅರ್ಥಗಳಲ್ಲಿ ಕಾಲಕಾಲಕ್ಕೆ ಆಗುವ ಮಾರ್ಪಾಡುಗಳನ್ನು ವಿವರಿಸುವುದು. ಆದುದರಿಂದ ಭಾಷಾಶುದ್ಧತೆಯ ಮರ್ಮವನ್ನರಿಯಲು ಭಾಷಾಶಾಸ್ತ್ರದ ಅಭ್ಯಾಸ ಅನಿವಾರ್ಯ. ವೈಯಾಕರಣರ ದೃಷ್ಟಿಯಿಂದ ಸರಿಯೆನಿಸಲಾರದ ಹಾಗೂ ನಿರ್ಣಯಿಸಲು ಸಾಧ್ಯವಾಗದ ಎಷ್ಟೋ ಪದಪ್ರಯೋಗಗಳು ಭಾಷಾಶಾಸ್ತ್ರ ಪ್ರಯೋಗದಿಂದ ಪಳಗಿ ಸಾಧುವೆನಿಸಬಲ್ಲವು. ಅದನ್ನಿಲ್ಲಿ ಪರಿಶೀಲಿಸಲಾಗಿದೆ :

ಭಾಷಾಶಾಸ್ತ್ರದ ಉಪಯೋಗ

೧. ಹಿಂದೆ ತಿಳಿಸಿದಂತೆ ಕೇಶಿರಾಜನು ಮರಲ್, ಆರಲ್, ಎರಲ್ ಎಂಬಿವು ಏಕೆ ಮಲರ್, ಅಲರ್, ಎಲರ್ ಆಗಿವೆಯೆನ್ನದಿದ್ದರೂ ಅವನ ಆ ಹೇಳಿಕೆಯಲ್ಲಿ ಭಾಷಾಶಾಸ್ತ್ರದ ವರ್ಣವ್ಯತ್ಯಯ ತತ್ವವು ಅಡಕವಾಗಿರುವುದು ಕಾಣುತ್ತಿದೆ. ಇದೇ ರೀತಿ ಪಲ್ಲಟವಾಗುವ ಹಲವಾರು ಶಬ್ದಗಳಿವೆ:-ಅಸಗ-ಅಗಸ, ಎಹಗೆ-ಹೇಗೆ, ಅಹಗೆ-ಹಾಗೆ, ಅಹುದು-ಹೌದು, ಒಸರು-ಸೋರು, ಅಪುಚು-ಅಮುಚ (=ಕಡಕಲು), ನಾರಿಕೇಲ-ನಾಲಿಕೇರ ಇತ್ಯಾದಿ.

೨. ಸರ್ವನಾಮಗಳ ವಿಭಕ್ತಿ ರೂಪವಿಷಯಕವಾದ ಒಗಟನ್ನು ಬಿಡಿಸಲು ಭಾಷಾಶಾಸ್ತ್ರವು ಹೇಗೆ ಸಹಕಾರಿಯಾಗಿದೆ ಎಂಬುದನ್ನು ನಾವು ವಿಭಕ್ತಿ

ಗಳು ಎಂಬ ಪ್ರಬಂಧದಲ್ಲಿ ಚತುರ್ಥೀವಿಭಕ್ತಿಯ ವಿವರಣೆಯಲ್ಲಿ ತಿಳಿಸಿರುವುದನ್ನು ಇಲ್ಲಿ ನೆನಿಸಿಕೊಳ್ಳಬಹುದು.

ಶಬ್ದಗಳು ಮಾರ್ಪಾಟು ಹೊಂದುವ ಕೆಲವು ಲಕ್ಷಣಗಳನ್ನಿಲ್ಲಿ ಅವಲೋಕಿಸಬಹುದು. ಭಾಷಾಶಾಸ್ತ್ರಾಧ್ಯಯನದ ಅಂಶಗಳಿವು :

೩. **ಧ್ವನಿವಿಕಾರ** (Phonetic Decay) : ಇದರಲ್ಲಿ ಅಕ್ಷರಗಳ ಲೋಪ-ಆಗಮ-ಆದೇಶಗಳು ಇರುತ್ತವೆ. ಚಮ್ಮಟಿಗೆ-ಚಾಟಿ; ಬರೆಹ-ಬರಹ; ಬರೆವಣಿಗೆ-ಬರವಣಿಗೆ; ಗಂಡು + ಕೂಸು-ಗಂಡುಸು, ಗಂಡಸು; ಹೆಣ್ಣು + ಕೂಸು-ಹೆಂಗುಸು, ಹೆಂಗಸು; ತಣ್ + ಕೂಳ್-ತಂಗೂಳು, ತಂಗುಳು, ತಂಗಳು; ಕರುಳು-ಕರಳು; ನಾರಾಯಣ-ನಾಣ, ನಾಣಿ; ಪದ್ಮಾವತಿ-ಪದ್ದು; ಲೀಲಾವತಿ-ಲೀಲ....ಇತ್ಯಾದಿ.

ಕರ್ನಾಟಕದ ಬೇರೆ ಕಡೆಗಳಲ್ಲಿ '**ಸೀಮೆಣ್ಣೆ**' (Kerosene Oil) ಎಂಬುದು ದಕ್ಷಿಣಕನ್ನಡ ಜಿಲ್ಲೆಯಲ್ಲಿ "ಚಿಮಿಣಿ ಎಣ್ಣೆ" ಆಗಿರುವುದು ಸಾರಸ್ಯ ಸಂಗತಿ. ಈ ಪರಿವರ್ತನೆಯಲ್ಲಿ ಸಕಾರಕ್ಕೆ ಚಕಾರ, ದೀರ್ಘಕ್ಕೆ ಹ್ರಸ್ವ ಬಂದಿದೆ. ಎತ್ವಕ್ಕೆ ಇತ್ವ, ದ್ವಿತ್ವಕ್ಕೆ ಲೋಪ-ಎಂಬೀ ಧ್ವನಿವಿಕಾರಗಳು ಸೇರಿವೆ-ಸೀಮೆ ಎಣ್ಣೆ, ಸೀಮೆಣ್ಣೆ, ಚೀಮೆಣ್ಣೆ, ಚೀಮಿಣಿ, ಚಿಮಿಣಿ "ಚಿಮಿಣಿ" ಎಂದಾಗ ಅದರ ನಿಜಾರ್ಥದ ಮರೆವು ಉಂಟಾಗಿ ಅದಕ್ಕೆ ಮತ್ತೊಂದು ಪದದ ಜೋಡಣೆಯ ಕಾರ್ಯವೂ ನಡೆದಿದೆ. ಇದರಿಂದ "ಚಿಮಿಣಿ ಎಣ್ಣೆ" ಎಂಬ ಉಚ್ಚಾರಣೆ ರೂಢವಾಯಿತೆಂದು ತೋರುತ್ತದೆ. ಭಾಷಾಶಾಸ್ತ್ರವನ್ನು ಅಧ್ಯಯನ ಮಾಡಿದಂತೆಲ್ಲ ಇಂತಹ ರಹಸ್ಯಗಳು ಹೊರ ಬೀಳುತ್ತವೆ.

೪. **ಏಕವರ್ಣಲೋಪ** (Haplology) : ತಮ್ಮ + ತಮ್ಮ-ತಂತಮ್ಮ; ನಡೆದು + ನಡೆದು-ನಡೆನಡೆದು; ನುಡಿದು + ನುಡಿದು-ನುಡಿನುಡಿದು; ಮಗ + ಮಗ-(ಮಮ್ಮಗ) ಮೊಮ್ಮಗ.

೫. **ರೂಪಸಾಮ್ಯ** (Analogy): ಈ ಲಕ್ಷಣದಲ್ಲಿ ಅನುಕರಣೆ, ಸೌಲಭ್ಯಾಕಾಂಕ್ಷೆ ಎಂಬೆರಡೂ ಅಂತರ್ಗತವಾಗಿರುತ್ತವೆ. ಉದಾ: 'ದಾಕ್ಷಿಣಾತ್ಯ' ಎಂಬುದನ್ನು ಅನುಕರಿಸಿ, '**ಪೌರ್ವಾತ್ಯ**' '**ಪಾಶ್ಚಿಮಾತ್ಯ**' ಎಂಬ ಶಬ್ದಗಳು

ರೂಢಿಗೆ ಬಂದಿವೆ. ವ್ಯಾಕರಣದ ಪ್ರಕಾರ 'ಪೌರಸ್ತ್ಯ' 'ಪಾಶ್ಚಾತ್ಯ' ಎಂದಾಗ ಬೇಕು. 'ನಿಂತು' ಎಂಬುದರಂತೆ 'ಕುಂತು' ಶಬ್ದವಾಗಿದೆ. ನಿರ್ಣಯಿಸು, ನಿಶ್ಚಯಿಸು-ಎಂಬ ನಿಷ್ಪತ್ತಿಸಾಮ್ಯದಿಂದ ಪರಿಚಯಿಸು, ವಿಶ್ರಾಂತಿಸು, ಪ್ರಯಾಣಿಸು, ಕವನಿಸು-ಇತ್ಯಾದಿ ಪ್ರಯೋಗಗಳಾಗುತ್ತವೆ. 'ಬೆಳೆಯುತ್ತದೆ' ಎಂಬ ರೂಪವಿರುವಂತೆ 'ಮಳೆ ಬರುತ್ತಿದೆ' ಎಂಬ ಅರ್ಥದಲ್ಲಿ 'ಮಳೆಯುತ್ತದೆ' ಎಂತಲೂ ಪ್ರಯೋಗಿಸ ತೊಡಗಿದ್ದಾರೆ.

ಮೇಲಿನವು ಶಬ್ದಗಳ ಸ್ವರೂಪ ವ್ಯತ್ಯಾಸಕ್ಕೆ ಉದಾಹರಣೆಗಳು. ಶಬ್ದ ರೂಪ ವ್ಯತ್ಯಾಸವಾಗುವಂತೆ ಕಾಲಾನುಗುಣವಾಗಿ ಮತ್ತು ಪ್ರದೇಶಾನುಗುಣ ವಾಗಿ ಶಬ್ದಗಳಿಗೆ ಅರ್ಥವ್ಯತ್ಯಾಸವಾಗುವುದೂ ಉಂಟು. ಭಾಷಾ ಶಾಸ್ತ್ರಜ್ಞರು ಹೀಗೆ ಆಗುವುದನ್ನು ಪರಿಗಣಿಸಿ ಇದನ್ನು 'ಶಬ್ದಾರ್ಥಶಾಸ್ತ್ರ'(Semantics) ಎಂದು ಕರೆದಿದ್ದಾರೆ. ಈ ಲಕ್ಷಣದಂತೆ ಶಬ್ದಗಳ ಅರ್ಥವು ವಿಶಾಲವಾಗುವುದೂ ಸಂಕುಚಿತವಾಗುವುದೂ ಪರಿವರ್ತಿತವಾಗುವುದೂ ಉಂಟು. ಅವಕ್ಕೆ ಉದಾಹ ರಣೆಗಳಿವು:

೧. **ಅರ್ಥವೈಶಾಲ್ಯ** (Extension in meaning). ಎಲ್ಲೆಡೆ ಇಂದು ಪ್ರಚಲಿತವಾಗಿರುವ 'ಎಣ್ಣೆ' ಎಂಬ ಶಬ್ದವು ಎಳ್ + ನೆಯ್ ಎಂಬ ವಿಂಗಡಣದ ಅರ್ಥಕ್ಕೆ ಅನುಗುಣವಾಗಿ ಎಳ್ಳಿನಿಂದ ತೆಗೆದ ತೈಲವನ್ನು ಮಾತ್ರ ಸೂಚಿಸುವುದು. (ತಿಲದಿಂದ ಬಂದುದಾಗಿ 'ತೈಲ' ಎಂಬ ಸಂಸ್ಕೃತ ಶಬ್ದವೂ ಇದೇ ಅರ್ಥವನ್ನು ಸೂಚಿಸುವಂತಿದೆ). ಆದರೆ ಇಂದು 'ಎಣ್ಣೆ' ಎಲ್ಲಾ ತರದ ತೈಲಕ್ಕೂ ಅನ್ವಯಿಸುತ್ತದೆ. ಎಳ್ಳೆಣ್ಣೆ, ತೆಂಗಿನೆಣ್ಣೆ, ಹರಳೆಣ್ಣೆ-ಇತ್ಯಾದಿ ಪ್ರಯೋಗಗಳಿವೆ. 'ಚೆಂಬು'ಅಂದರೆ ತಾಮ್ರ ಮತ್ತು ತಾಮ್ರದ ಪಾತ್ರೆ. ಇಂದು ಅದು ಎಲ್ಲ ತರದ ವಿಶಿಷ್ಟ ಆಕೃತಿಯ ಪಾತ್ರೆಗೆ ಸಂಬಂಧಿಸಿದ್ದು ಬೆಳ್ಳಿಚೆಂಬು, ಚಿನ್ನ ಚೆಂಬು, ಮಣ್ಣಚೆಂಬು, ಚೆಂಬಿನ ಚೆಂಬು (ತಾಮ್ರದ ಚೆಂಬು)-ಇತ್ಯಾದಿ ಯಾಗಿ ಅರ್ಥವ್ಯಾಪಕತೆಯನ್ನು ಪಡೆದಿದೆ, 'ಪತ್ರ' ಎಂದರೆ ಎಲೆ. ಈಗ ಅದಕ್ಕೆ ಕಾಗದ ಅಥವಾ ಯಾರಿಗಾದರೂ ಬರೆದಿರುವ ಓಲೆ ಎಂದು ಅರ್ಥ.

೨. **ಅರ್ಥಸಂಕೋಚ** (Contraction) 'ನೆಯ್' ಎಂಬುದಕ್ಕೆ

'ತೈಲ' ಎಂಬ ಅರ್ಥವಿತ್ತು. ಈಗ ಅದಕ್ಕೆ ಆಕಳ ಅಥವಾ ಎಮ್ಮೆಯ 'ತುಪ್ಪ' ಎಂಬ ಅರ್ಥವಾಗಿದೆ. 'ಅಗ್ಗ' ಎಂದರೆ ಬಹಳ ಬೆಲೆಯುಳ್ಳುದು. ಈಗ ಅದಕ್ಕೆ 'ಬೆಲೆ ಕಡಮೆಯುದು' ಎಂಬ ಅರ್ಥ ಬಂದಿದೆ. 'ಸಂಸ್ಥೆ'ಎಂಬ ಶಬ್ದದ ಅಪಭ್ರಂಶ ವಾಗಿರುವ 'ಸಂತೆ' ಮೂಲಕ್ಕಿಂತ ಹೀನವಾದ ಅರ್ಥದಲ್ಲಿ ಪ್ರಯೋಗಿಸಲ್ಪಡು ತ್ತದೆ.

೩. **ಪರಿವರ್ತನೆ** (Change in meaning). 'ಅಮ್ಮ' ಎಂಬ ಶಬ್ದಕ್ಕೆ 'ತಂದೆ' ಎಂಬ ಅರ್ಥವಿದ್ದುದು ಇಂದು 'ತಾಯಿ' ಎಂಬ ಅರ್ಥವಾಗಿ ಪರಿವರ್ತಿತ ವಾಗಿದೆ. 'ವಸ್ತ್ರ' ಎಂಬರ್ಥದಲ್ಲಿರುವ 'ಚೀರ' ಎಂಬ ಸಂಸ್ಕೃತ ಶಬ್ದವು 'ಸೀರೆ' ಎಂದು ತದ್ಭವವಾಗಿ ಹೆಂಗುಸರು ಮಾತ್ರ ಉಡುವ ವಸ್ತ್ರವೆನಿಸಿದೆ. 'ವೇಗವಾಗಿ' ಎಂಬರ್ಥದಲ್ಲಿ ಮೈಸೂರು ಕಡೆ ಬಳಕೆಯಾಗುವ 'ಜಾಗ್ರತೆಯಾಗಿ' ಎಂಬುದೂ ಅದೇ ಅರ್ಥದಲ್ಲಿ ಧಾರವಾಡದ ಕಡೆ ಪ್ರಯೋಗಿಸುವ ಲಘುವಾಗಿ (ಲಗೂನೆ) ಎಂಬುದೂ ದಕ್ಷಿಣ ಕನ್ನಡದಲ್ಲಿ 'ಮೆಲ್ಲನೆ' (ಜಾಗರೂಕತೆಯಿಂದ) ಎಂಬ ವಿರು ದ್ಧಾರ್ಥವನ್ನು ತಳೆದಿದೆ. ಇದನ್ನು ಪ್ರಾದೇಶಿಕ ಅರ್ಥ ವ್ಯತ್ಯಾಸವೆನ್ನ ಬಹುದು.

ಕನ್ನಡದಲ್ಲಿ ಭಾಷಾ ಶುದ್ಧತೆಯನ್ನು ನಿರ್ಣಯಿಸುವವರು ವ್ಯಾಕರಣ ವನ್ನು ಸರಿಯಾಗಿ ಅರ್ಥಮಾಡಿ ತಿಳಿದುಕೊಳ್ಳುವಂತೆ, ವ್ಯಾಕರಣಕ್ಕೆ ಆಧಾರ ಭೂತವಾದ ಭಾಷಾ ಪ್ರಯೋಗಗಳನ್ನೂ ಲಕ್ಷ್ಯದಲ್ಲಿಡಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅದಕ್ಕಾಗಿ ಭಾಷಾ ಶಾಸ್ತ್ರದ ಅನುಭವ ಅನಿವಾರ್ಯ.

ನಮ್ಮ ನಾಡು ಇಂದು ರಾಜಕೀಯವಾಗಿ ಕೆಲಮಟ್ಟಿಗೆ ಒಂದುಗೂಡಿದೆ ಯಾದರೂ ಅದಿನ್ನೂ ಪರಿಪೂರ್ಣವಾಗಿಲ್ಲ. ಇದಕ್ಕಿಂತಲೂ ಮೇಲಾಗಿ, ನಮ್ಮ ನುಡಿಯನ್ನು ಒಂದುಗೂಡಿಸಬೇಕಾಗಿದೆ. ನಮ್ಮ ತಾಯಿನುಡಿ ಅಥವಾ ನಾಡನುಡಿ ಕನ್ನಡವೇ ಆದರೂ ಅದು ಹಲವಾರು ಪ್ರಾದೇಶಿಕ ಭೇದಗಳಿಂದ ಬೇರೆ ಬೇರೆಯಾಗಿ ಕಾಣುತ್ತದೆ. ಸಾಹಿತ್ಯಭಾಷೆಯಲ್ಲಾದರೂ ಅದು ಒಂದುಗೂಡಿರುವುದು ಆವಶ್ಯಕ. ಹಾಗೆ ಒಂದುಗೂಡುವುದರೊಂದಿಗೆ ಶಬ್ದ ಸಂಪತ್ತು, ಅರ್ಥಸಂಪತ್ತು, ಅಭಿವ್ಯಕ್ತಿ ಸಾಮರ್ಥ್ಯಗಳೂ ಹೆಚ್ಚಬೇಕು. ಅದ ಕ್ಕಾಗಿ ನಮ್ಮ ನಾಡಿನ ಬೇರೆಬೇರೆ ಕಡೆಗಳಲ್ಲಿರುವ ದೇಶೀ ಶಬ್ದಗಳನ್ನು ಭಾಷಾ

ಧರ್ಮಕ್ಕೆ ತಕ್ಕಂತೆ ಗ್ರಾಮ್ಯತೆ ತಲೆದೋರದಂತೆ ಸರಿಗೊಳಿಸಿ ಶಬ್ದ ಭಂಡಾರಕ್ಕೆ ಸೇರಿಸಿ, ಎಲ್ಲ ಕನ್ನಡಿಗರಿಗೆ ಅವುಗಳ ಪರಿಚಯ ಮಾಡಿಕೊಡಬೇಕು. ಭಾಷಾ ಶಾಸ್ತ್ರಕ್ಕೂ ವ್ಯಾಕರಣಕ್ಕೂ ಅನುಗುಣವಾಗುವ ಮಾರ್ಪಾಡುಗಳೊಡನೆ ಅವನ್ನು ಒಪ್ಪಿ ಸ್ವೀಕರಿಸಬೇಕು. ಹಳಗನ್ನಡದ ವ್ಯಾಕರಣ ಪಂಚಾಂಗದಲ್ಲಿ (ತಳಹದಿಯಲ್ಲಿ) ಹೊಸಗನ್ನಡದ ವಿವೇಚನಾಪೂರ್ವಕ ಹೊಸ ವ್ಯಾಕರಣದ ಉತ್ತಮ ರಚನೆಯೂ ಆಗಬೇಕು. ಈ ನಿರ್ಮಾಣಕಾರ್ಯದಲ್ಲಿ ಹಿಂದಿನ ಮತ್ತು ಇಂದಿನ ಶಬ್ದರೂಪಗಳ ಶುದ್ಧತೆಯನ್ನು ವ್ಯಾಕರಣಶಾಸ್ತ್ರ ಭಾಷಾಶಾಸ್ತ್ರಗಳೆ ರಡರ ನಿಕಷದಲ್ಲಿಟ್ಟು ನಿಶ್ಚಯಿಸಿಕೊಳ್ಳಬೇಕೆಂಬುದನ್ನು ದಿಗ್ದರ್ಶಿಸಿ, ಅಂತಹ ವಿಚಾರವನ್ನು ಈ ಲೇಖನವು ಪ್ರಚೋದಿಸುವುದೆಂದು ಭಾವಿಸಲಾಗಿದೆ.†

[† ಈ ಲೇಖನವು ಭಾಷಾಶಾಸ್ತ್ರ ವಿಷಯದಲ್ಲಿ ಕೆಲಮಟ್ಟಿಗೆ ದಿ. ಆರ್. ನರಸಿಂಹಾಚಾರ್ಯರ 'History of Kannada Lauguage' ಎಂಬ ಗ್ರಂಥದ ಾನೆಯ ಭಾಗಕ್ಕೆ ಋಣಿಯಾಗಿದೆ.]

ಛಂದಸ್ಸು ಮತ್ತು ಗುರು ಲಘುಗಳ ರಹಸ್ಯ

[ಪ್ರಸ್ತಾವನೆ—ಛಂದೋವಿಷಯಕ ಸಮಸ್ಯೆಗಳು-ಛಂದಸ್ಸು ಮತ್ತು ಸಂಗೀತ ಮಹತ್ವ–ಗುರು ಲಘು ಚಿಹ್ನೆಗಳು–ಗುರುಲಘು ಅಕ್ಷರ ಪರಿಚಯ–'ವ್ಯಂಜನವೊಂದಿದ ದಡ್ಡಕ್ಕರಂ' ಅಂತರಾರ್ಥ–ಗುರುಲಘು ಪಲ್ಲಟ–ಶ್ರವ್ಯತೆಯಿಂದ ಗುರುಲಘು ನಿರ್ಣಯ–ಲಯಾವಲಯ ವಿಚಾರ.]

ಪ್ರಸ್ತಾವನೆ

ಕನ್ನಡದಲ್ಲಿ ಪ್ರಸಿದ್ಧವಾದ, ಪ್ರಾಮಾಣಿಕವಾದ, ಮತ್ತು ಪ್ರೌಢ ಪರೀಕ್ಷೆಗಳಿಗೆ ಪಠ್ಯವಾದ ಛಂದೋಗ್ರಂಥಗಳನ್ನೋದಿದ ಅನುಭವದಿಂದಲೂ ಆಧುನಿಕ ವಿದ್ವಾಂಸರನೇಕರು ವಿದ್ಯಾರ್ಥಿಗಳಿಗಾಗಿ ರಚಿಸಿರುವ ಏತದ್ವಿಷಯಕ ಪುಸ್ತಕಗಳ ಪರಿಶೀಲನೆಯಿಂದಲೂ ಸುಮಾರು ೧೫ ವರ್ಷದಿಂದಲೇ ನನಗೆ ನನ್ನ ವಿದ್ಯಾರ್ಥಿಗಳಿಗೆ ಛಂದಸ್ಸಿನ ಅನುಭವಮಾಡಿಕೊಡುವಲ್ಲಿ ಕೆಲವು ಅನಿರ್ದಿಷ್ಟತೆಗಳೂ ತೊಡಕುಗಳೂ ಗೋಚರಿಸಿವೆ. ಅವುಗಳಲ್ಲಿ ಗುರು-ಲಘು ಚಿಹ್ನೆಯ ವಿಚಾರ ಒಂದು. ಕನ್ನಡದಲ್ಲಿ ಛಂದೋಂಬುಧಿಕಾರನಾದ ನಾಗವರ್ಮನು (ಕ್ರಿ.ಶ. ೯೯೦) ಹೇಳಿರುವುದು ಒಂದಾದರೆ, ಅದೇ ಗ್ರಂಥವನ್ನು ಸಂಪಾದಿಸಿದ ಕಿಟ್ಟೆಲರು, ತಾವೇ ಹೇಳಿರುವಂತೆ, ಪ್ರಯೋಗಿಸಿದ ಚಿಹ್ನೆಗಳ ಬಗೆ ಇನ್ನೊಂದು ; ಈ ಚಿಹ್ನೆಗಳನ್ನೇ ಕನ್ನಡ ಕೈಪಿಡಿಕಾರರೂ ಇತರ ಆಧುನಿಕರೂ ಸ್ವೀಕರಿಸಿದ್ದಾರೆ. ಸಂಸ್ಕೃತದ ಹಾಗೂ ಹಿಂದೀ ಭಾಷೆಯ ಛಂದೋಗ್ರಂಥಗಳನ್ನು ನೋಡಿದರೆ, ಅಲ್ಲಿ ಪ್ರಯುಕ್ತವಾಗಿರುವ ಚಿಹ್ನೆ (ಮುಖ್ಯವಾಗಿ ಗುರು ಚಿಹ್ನೆ) ಬೇರೆ. ಈ ವಿಷಯದಲ್ಲಿ ಹಲವರು, ಚಿಹ್ನೆ ಯಾವುದಾದರೇನು ?–ಅದು ನಿರೂಪಿಸುವ ವಿಷಯ ಸರಿಯಾದರೆ ಸಾಕೆಂದು ವಾದಿಸಬಹುದು. ಈ ವಾದಕ್ಕೆ ತಲೆಬಾಗುವುದಾದರೆ, ಈಗಲೂ ಇನ್ನು ಮುಂದೆಯೂ ಒಬ್ಬೊಬ್ಬರು ಅಧ್ಯಾಪಕರು ತಮ್ಮವೇ ಸ್ವಚ್ಛಂದ ಚಿಹ್ನೆಗಳನ್ನು ಕಲ್ಪಿಸಿ ತಮ್ಮ ಶಿಷ್ಯರಿಗೆ ಕಲಿಸಿದಾಗ ಅವನ್ನೂ ಸರಿಯೆಂದು ಒಪ್ಪಿಕೊಳ್ಳಬೇಕಾದೀತು. ಪೂರ್ವಿಕರು ಈ ವಿಚಾರದಲ್ಲಿ ಏನಾದರೂ ಸ್ಪಷ್ಟೀಕರಣವನ್ನು ಮಾಡಿರುವರೆ ? ಆ ಸ್ಪಷ್ಟೀಕರಣದಲ್ಲಿ ಯಾವ ಔಚಿತ್ಯವಿದೆ ? ಎಂದು ತಿಳಿಯುವುದು ಆವಶ್ಯಕವೆನಿಸಿತು.

ಛಂದಸ್ಸಿಗೆ ಅನನ್ಯ ಆಧಾರಭೂತವಾದ ಗುರು-ಲಘು ಅಕ್ಷರಗಳಾವುವೆಂದು ವಿವರಿಸುವಲ್ಲಿ ಹುಟ್ಟಿದ ತೊಡಕು ಎರಡನೆಯದು. ಯಾವುದಾದರೊಂದು ಅಕ್ಷರವು ಗುರುವೆನಿಸುವ ಕೆಲವು ಲಕ್ಷಣಗಳನ್ನು ಕನ್ನಡದ ಮುಖ್ಯ ಗ್ರಂಥಗಳು ತಿಳಿಸುತ್ತವೆ. ಅವುಗಳಲ್ಲಿ ವ್ಯಂಜನ ಸೇರಿದ ಅಕ್ಷರ ಗುರುವೆನಿಸುವುದೆಂದು ಹೇಳಿದುದು ಕಾಣಿಸದಿದ್ದರೂ ಮಕ್ಕಳಿಗೆ ಕಲಿಸುವಲ್ಲಿ ಅದನ್ನೂ ಸೇರಿಸಿ ಹೇಳಬೇಕಾಯಿತು. ಉದಾ:—

ಬಲವದ್ವೈರಿ ತಮೋಹರಾತಿ ಪಟುಗಳ್ ಪದ್ಮಾಸನಸ್ಪರ್ಶಸ
ಲ್ಲಲಿತಂಗಳ್ ಜಿತಚಕ್ರವಾಕನಿವಹ ಪ್ರೇಮಾವಹಂಗಳ್....॥(ರನ್ನ-ಗದಾಯುದ್ಧ)

ಎಂಬ ವೃತ್ತದ ಅಕ್ಷರಗಳಲ್ಲಿ '**ಗಳ್**' ಎಂಬೆಡೆ ವ್ಯಂಜನ ಸೇರಿದ ಹ್ರಸ್ವ 'ಗ' ಕಾರವು ಗುರುವೆನಿಸಿತೆಂದು ಹೇಳಬೇಕಾಗಿ ಬಂತು. ಈ ಸ್ವಾನುಭವದಿಂದ ೧೯೫೭ ರಲ್ಲಿ ನಾನು ರಚಿಸಿದ "**ಭಾಷಾದೀಪಿಕೆ**" ಎಂಬ ವ್ಯಾಕರಣಚ್ಛಂದೋಲಂಕಾರ ವಿಷಯಕವಾದ ಹೊತ್ತಗೆಯಲ್ಲಿ "ವ್ಯಂಜನ ಸೇರಿದ ಹ್ರಸ್ವಾಕ್ಷರವು ಗುರುವೆನಿಸುವುದು" ಎಂದು ವಿವರಿಸಿ ಸೂತ್ರ ಹೇಳಿದೆ. ನನ್ನ ಕೆಲವರು ವಿದ್ವನ್ಮಿತ್ರರು ಇದಕ್ಕೆ ಆಕ್ಷೇಪಿಸಿ, ಅಂತಹ ಕಡೆ ಪದಗಳನ್ನು ವಿಂಗಡಿಸದೆ ಸಂಯುಕ್ತಾಕ್ಷರವಾಗಿ ಗಣಿಸಿಕೊಳ್ಳಬೇಕೆಂದೂ ಆಗ ಸಂಯುಕ್ತಾಕ್ಷರದ ಹಿಂದಿನ ಲಘು ಗುರುವಾಗುವುದೆಂಬ ಲಕ್ಷಣ ಇಲ್ಲಿಗೂ ಹೊಂದಿಕೆಯಾಗುವುದೆಂದೂ ಆದುದರಿಂದಲೇ 'ವ್ಯಂಜನ ಸೇರಿದ ಅಕ್ಷರ ಗುರುವಾಗುವುದು' ಎಂಬ ಸೂತ್ರವು (Definition) ಸಂಬದ್ಧವಲ್ಲವೆಂದೂ ತಿಳಿಸಿದರು. ಈ ವಿಚಾರವನ್ನು ನಾನು ಕೆಲವು ಶ್ರೇಷ್ಠ ವಿದ್ವಾಂಸರ ಮುಂದೆಯೂ ಚರ್ಚೆಗೆ ತಂದಾಗ, ಅವರೂ ನಾನೆನ್ನುವ ವ್ಯಂಜನದ ಹಿಂದಿನ ಹ್ರಸ್ವವು ಸಂಯುಕ್ತಾಕ್ಷರದ ಹಿಂದಿನದೇ ಆಗುತ್ತದೆಂದು ಹೇಳಿದರು. ಈ ಉತ್ತರ ನನಗೆ ಸರಿಯೆನಿಸಲಿಲ್ಲ. ಉದಾಹರಣಕ್ಕಾಗಿ —

ಮಾತಜ್ಞರ್ ಕೆಲಬರ್ ಜಗ
ತೀತಳಗತ ಮನುಜರೊಳಗೆ ಮಾತಜ್ಞರವಜ್ಞರೊಳ್ (ಕವಿರಾಜಮಾರ್ಗ)

ಎಂಬ ಪದ್ಯವು ಮುದ್ರಿತವಾಗಿರುವುದನ್ನು ಕಾಣಬಹುದು. ಇಲ್ಲಿ ಮಾತಜ್ಞರ್,

ಕೆಲಬರ್-ಹೀಗೆ ಪದಗಳು ಬೇರೆ ಬೇರೆಯಾಗಿಯೇ ಇವೆ. ಅಲ್ಲದೆ, ಹಾಗಿರುವುದು ತಪ್ಪೇನೂ ಅಲ್ಲ. ಅವನ್ನು ಅಸಹಜವಾಗಿ ಕೂಡಿಸಿ ಸಂಯುಕ್ತಾಕ್ಷರವಾಗಿ ಬರೆವ ಕ್ರಮವು ಅವಶ್ಯವೂ ಅಲ್ಲದಿರುವಾಗ,ವ್ಯಂಜನಯುಕ್ತ ಲಘುವು ಗುರುವಾಗುವುದೆಂದು ತಿಳಿಸದಿರುವ ಗುರ್ವಕ್ಷರನಿರೂಪಣೆ ಅಸಮಗ್ರವೆಂದು ನನಗನಿಸಿತು. ಆದುದರಿಂವಲೇ ನಾಗವರ್ಮನ ಛಂದೋಂಬುಧಿಯನ್ನು ಏತದ್ವಿಷಯಕ ಸಂಶೋಧದೃಷ್ಟಿಯಿಂದ ನೋಡಿದೆ- ಅಲ್ಲಿ ಕೊಟ್ಟ ಸೂತ್ರಾರ್ಥದ ಟಿಪಲುಗಳನ್ನು ಇನ್ನಷ್ಟು ಗುರುತುಹಚ್ಚಿದೆ. ಸಂಸ್ಕೃತದಲ್ಲಿರುವ ಹಲವು ಛಂದೋಗ್ರಂಥಗಳ ಪಾಠಗಳನ್ನೂ ಹುಡುಕಿ ಹಿಡಿದೆ. ಹಾಗೆ ಕಂಡು ಹಿಡಿದ ಅಂಶಗಳನ್ನು ಹಿಂದಿನಿಂದ ಇಂದಿನ ವರೆಗಣ ಪ್ರಾತಿನಿಧಿಕ ಪ್ರಯೋಗಗಳೊಡನೆ ಹೊಂದಿಸಿಕೊಂಡಾಗ ಈ ಕ್ಷೇತ್ರದಲ್ಲಿ ಇಂದಿಗೆ ನೂತನವೆನಿಸುವ ಹಲವು ಛಂದೋವಿಚಾರಗಳು ಮನೋಭೂಮಿಯಲ್ಲಿ ಮೊಳೆತು ಬಂದವು. ಛಂದಸ್ಸಿನ ವೈಶಾಲ್ಯವೂ ಹೃದ್ಗೋಚರವಾಯಿತು. ಆದುದರಿಂದ ಆ ಕುರಿತು ನನ್ನ ವಿಚಾರಗಳನ್ನು ಓದುಗರ ಮುಂದಿಡುತ್ತಿದ್ದೇನೆ.

ಛಂದಸ್ಸು-ಗುರು ಮಹತ್ವ

'ಛಂದ' ಅಥವಾ ಛಂದಸ್ಸು ಎಂಬುದು ಪ್ರಚಲಿತವಾಗಿ ಪದ್ಯರಚನಾವಿಜ್ಞಾನವಾದರೂ ಅದು ಇನ್ನೂ ಎಷ್ಟೋ ವ್ಯಾಪಕಾರ್ಥವುಳ್ಳುದು. 'ಚಂದಯತಿ-ಹ್ಲಾದಂ ಕರೋತಿ ದೀಪ್ಯತೇ ವಾ ಶ್ರವ್ಯತಯಾ (ಸ್ರವ್ಯತಯಾ) ಇತಿ ಛಂದಃ' ಕಿವಿಗೆ ಇಂಪಾಗಿ ರಸನಿಷ್ಯಂದಿಯಾಗಿ ಸಂತೋಷಗೊಳಿಸುವಂಥದು. ಅಥವಾ ಶೋಭೆಯನ್ನು ಬೀರುವಂಥದು-ಎಂಬ ವ್ಯುತ್ಪನ್ನಾರ್ಥ ಅದಕ್ಕಿದೆ. 'ಚಂದಯತಿ ಆಹ್ಲಾದಯತಿ' ಎಂಬಂತೆ, ಅದು ಆಹ್ಲಾದಗೊಳಿಸುವಂಥದು-ನಿಘಂಟುಗಳಲ್ಲಿ 'ಛಂದ' ಎಂಬ ಶಬ್ದಕ್ಕೆ ಅಭಿಲಾಷೆ, ಆಶಯ, ರಹಸ್ಯ, ನಿಷ್ಪ್ರತಿಬಂಧಕತ್ವ-ಇತ್ಯಾದಿ ಅರ್ಥಗಳಿವೆ. ಕಾವ್ಯಕ್ಕೆ ಮೂಲಪ್ರವಾಹವು ಕವಿಹೃದಯದ ಆಶಯುವೇ ಆಗಿದ್ದು, ಅಂತಹ ಕಾವ್ಯವು ರಸದ ಒರತೆಗಳಿಂದ ಕೂಡಿದ್ದು ಕಿವಿಗೂ ಮನಸ್ಸಿಗೂ ಇಂಪನ್ನು ಬೀರುವುದರಿಂದ ಛಂದಸ್ಸು ಕೂಡ ಕಾವ್ಯಲಕ್ಷಣವೇ ಆಗಿದೆಯೆನ್ನಬಹುದು. ಅದು ನಿಷ್ಪ್ರತಿಬಂಧಕವಾಗಿರುವ ಕವಿಭಾವ ;-ಕವಿಭಾವದಿಂದಲೇ ಕಾವ್ಯರಚನೆ—

ಕವಿಭಾವ ಕೃತಾನೇಕ
ಪ್ರವಿಭಾಗ ವಿವಿಕ್ತ ಸೂಕ್ತ ಮಾರ್ಗಂ ಕಾವ್ಯಂ
ಸವಿಶೇಷ ಶಬ್ದರಚನಂ
ವಿವಿಧಾರ್ಥವ್ಯಕ್ತಿ ವರ್ತಿತಾಲಂಕಾರಂ[1]

'ಛಂದಸ್ಸು' ಎಂದರೇನೆಂಬುದಾಗಿ ಒಬ್ಬ ಆಂಗ್ಲವಿದ್ವಾಂಸನೂ ಹೀಗೆ ತಿಳಿಸಿರುವನು—

> Prosody is called ಛಂದಃ (Chchandah) that is, 'fancy, will, pleasure'[2]

ಇದರಿಂದ 'ಛಂದಸ್ಸು' ಕಾವ್ಯಕ್ಕೆ ಪ್ರತಿಬಂಧಕವಾಗುವ ವಿಷಯವಲ್ಲ, ಅದು ಸಾಹಿತ್ಯದ ಮುನ್ನಡೆಗೆ ಕಾಲುಗಳಂತೆ ಸಹಕಾರಿ. (ಛಂದಃ ಪಾದೌತು ವಿಜ್ಞೇಯೌ.) ಅದು ಕೃತಿಗೆ ಮೂಲವೆನಿಸುವ ಪ್ರೇರಕಶಕ್ತಿ ಎಂದು ತಿಳಿಯಬೇಕಾಗುವುದು. ಅದನ್ನು ಒಂದು ಶಾಸ್ತ್ರವಾಗಿ ಗಣಿಸಿ ಅದರ ಹಿರಿಮೆಯನ್ನು ಕಂಡ ಲಾಕ್ಷಣಿಕರು ಹೀಗೆ ಹೇಳಿರುವರು :—

ಛಂದಶ್ಶಾಸ್ತ್ರಂ ಪವಿತ್ರಂ ತದ್ವಿಪಿಕ್ಷೋಃ ಕಾವ್ಯಸಾಗರಂ
ಛಂದೋಭಾಗ್ ವಾಙ್ಮಯಂ ಸರ್ವಂ ನ ಕಿಂಚಿಚ್ಛಂದಸಾ ವಿನಾ[3]

[ಕಾವ್ಯವೆಂಬ ಸಾಗರವನ್ನು ಪ್ರವೇಶಿಸುವಾತನಿಗೆ ಛಂದಶ್ಶಾಸ್ತ್ರವು ಹಡಗು. ಎಲ್ಲ ವಾಙ್ಮಯವೂ ಛಂದಸ್ಸನ್ನು ಆಶ್ರಯಿಸಿದೆ. ಛಂದಸ್ಸಿಗೆ ಹೊರತಾದುದು ಯಾವುದೂ ಇಲ್ಲ.] ಇದರಿಂದ ಉತ್ತಮ ಗದ್ಯ ಕೂಡ, ಕವಿಹೃದಯದಿಂದ ತಡೆಯಿಲ್ಲದೆ ಹೊರಹೊಮ್ಮಿ ಅದರಲ್ಲಿಯೂ ಶೈಲಿಗೆ ಅನುಗುಣವಾಗಿ ಗುರು-ಲಘು ಅಕ್ಷರಸಂಯೋಗದಿಂದುಂಟಾಗುವ ಲಯ, ಲಾಲಿತ್ಯ, ಮಾಧುರ್ಯ,

---

1 ಕವಿರಾಜಮಾರ್ಗ, ಪ್ರಥಮ ಪರಿಚ್ಛೇದ, ಪ. ೨೨.

2 Charles Philip Brown, M.R.A.S., Sanskrit prosody—Introductory remarks.

3 ಜಯಕೀರ್ತಿ, ಛಂದೋನುಶಾಸನ, ಶ್ಲೋಕ, ೨.

ಶ್ರಾವ್ಯತೆ-ಮುಂತಾದುವಿದ್ದು ಕಾವ್ಯವೆನಿಸುವುದರಿಂದ ಅದಕ್ಕೂ ಛಂದಸ್ಸೇ ಮೂಲಾಧಾರವೆಂದು ವಿಶಾಲಾರ್ಥದಲ್ಲಿ ಭಾವಿಸುವುದು ತಪ್ಪೆನಿಸಲಾರದು.

ಪಿಂಗಳಾಚಾರ್ಯನ ಛಂದಸ್ಸೂತ್ರಗಳಿಗೆ ವೃತ್ತಿಯನ್ನು ಬರೆದ ಹಲಾಯುಧನ ಹೇಳಿಕೆ ಛಂದಸ್ಸಿನ ಮೇಲ್ಮೆಯನ್ನು ಹೀಗೆ ಸಾರುತ್ತಿದೆ—

ವೇದಾನಾಂ ಪ್ರಥಮಾಂಗಸ್ಯ ಕವೀನಾಂ ನಯನಸ್ಯ ಚ
ಪಿಂಗಲಾಚಾರ್ಯ ಸೂತ್ರಸ್ಯ ಮಯಾ ವೃತ್ತಿರ್ವಿಧಾಸ್ಯತೇ ||4

ವೇದದ ಆರು ಅಂಗಗಳಲ್ಲಿ (ಛಂದಸ್ಸು, ವ್ಯಾಕರಣ, ಶಿಕ್ಷಾ, ಕಲ್ಪ, ನಿರುಕ್ತ, ಜ್ಯೋತಿಷ್ಯ) ಮೊದಲನೆಯದು ಛಂದಸ್ಸೆಂದೂ ಅದು ಕವಿಗಳಿಗೆ ಕಣ್ಣೆಂದೂ ಹಲಾಯುಧನ ಅಭಿಪ್ರಾಯ. ಕನ್ನಡ ಕವಿ ನಾಗವರ್ಮನೂ ಛಂದಸ್ಸನ್ನು ಕವಿಗಳಿಗೆ ಕಣ್ಣೆಂದೊಪ್ಪಿ, ಅದನ್ನರಿಯದ ಕವಿ ಕುಕವಿಯೆಂದೂ ಕುರುಡನೆಂದೂ ಉದ್ಗಾರವೆತ್ತಿದ್ದಾನೆ—

ಛಂದಮುನಱಿಯದೆ ಕವಿತೆಯ
ದಂದುಗದೊಳ್ ತೊಳಲಿ ಸುಳಿವ ಕುಕವಿಯೆ ಕುರುಡಂ ||5

ಛಂದಸ್ಸಿಗೆ ಅರ್ಥಪರಿಮಿತಿಯನ್ನು ಕಲ್ಪಿಸಿ, ಅದನ್ನು ಪದ್ಯರಚನಾ ವಿಷಯಕ್ಕೆ ಮಾತ್ರ ಅನ್ವಯಿಸಿಕೊಂಡವರು ಅದನ್ನು ಅಕ್ಷರಪರಿಮಿತಿಯೆಂತಲೂ (ಯದಕ್ಷರಪರಿಮಾಣಂ ತಚ್ಛಂದಃ) ಮಾತ್ರೆಗಳ ಅಕ್ಷರಗಳ ನಿಯಮದಿಂದ ಕೂಡಿದ ಮಾತೆಂತಲೂ (ಮಾತ್ರಾಕ್ಷರ ಸಂಖ್ಯಾನಿಯತಾ ವಾಕ್ ಛಂದಃ) ಗಾಯತ್ರಿ ಮುಂತಾದುವೆಂತಲೂ (ಗಾಯತ್ರೀ ಪ್ರಮುಖಂ ಛಂದಃ) ಹೇಳಿರುವರು. ಛಂದಸ್ಸನ್ನು ತಿಳಿಯಲು ಗುರು-ಲಘು ಪರಿಚಯವೇ ಸಾಧನವಾಗಿರುವುದರಿಂದ ಛಂದೋಗ್ರಂಥಗಳು ಗುರು ಲಘು ಅಕ್ಷರಲಕ್ಷಣವನ್ನೂ ತಿಳಿಸುತ್ತವೆ.

---

4 ಪಿಂಗಲಾಚಾರ್ಯ ಛಂದಶ್ಶಾಸ್ತ್ರಮ್, ಹಲಾಯುಧ ಪ್ರಣೀತ ಮೃತಸಂಜೀವಿನ್ಯಾಖ್ಯವೃತ್ತಿ ಸಮೇತಂ, ಪ್ರಥಮಾಧ್ಯಾಯ.

5 ನಾಗವರ್ಮ, ಛಂದೋಂಬುಧಿ (ಕಿಟೆಲ್ ಮುದ್ರಣ), ಪದ್ಯ ೧೭.

ವ್ಯಾಸಂಗಿಗಳಿಗಂತೂ ಗುರು-ಲಘುಗಳಲ್ಲಿ ಗುರುವನ್ನರಿಯುವುದು ಸುಲಭವಾಗಿಲ್ಲ. ಗುರುವನ್ನರಿತರೆ ಛಂದೋವಿಚಾರವನ್ನೆಲ್ಲ ತಿಳಿದ ಹಾಗೆ.

'ಛಂದಸ್ಸು' ವೇದದ ಪರ್ಯಾಯವಾಚಿಯೂ ಆಗಿದೆ. ವಾಙ್ಮಯ ರೂಪವಾಗಿದ್ದು, ಜ್ಞಾನರೂಪವಾಗಿದ್ದು, ಸಮಸ್ತ ವಿಶ್ವವನ್ನೂ ಪರಬ್ರಹ್ಮನನ್ನೂ ಛಾದಿಸಿರುವುದರಿಂದ–ವ್ಯಾಪಿಸಿರುವುದರಿಂದ, ವೇದವು ಛಂದಸ್ಸೆನಿಸಿದೆ. ಈ ಛಂದಸ್ಸು (ವೇದಗಳು) ಮೇಲುಗಡೆ ಬೇರುಳ್ಳ, ಕೆಳಗಡೆ ಗೆಲ್ಲುಗಳುಳ್ಳ ನಾಶರಹಿತ ಅಶ್ವತ್ಥವೃಕ್ಷದ ಎಲೆಗಳೆಂದು ಹೇಳಲಾಗಿದೆಯಲ್ಲದೆ ಆ ಅವಿನಾಶಿ ತತ್ವವನ್ನರಿತವನೇ ವೇದಜ್ಞನಾದ ಜ್ಞಾನಿಯೆಂದು ತಿಳಿಸಲಾಗಿದೆ.[6]

ಗೀತೆಯಲ್ಲಿ ಹೇಳಿದ ಇದೇ ವೃಕ್ಷವನ್ನು ಕಠೋಪನಿಷತ್ತಿನಲ್ಲಿ ಶುಕ್ರ, ಬ್ರಹ್ಮ, ಅಮೃತ-ಎಂದು ಹೇಳಿದೆ. ಅಂತಹ ಬ್ರಹ್ಮಚೇತನ ವೃಕ್ಷದ ಎಲೆಗಳೇ ಛಂದಸ್ಸುಗಳೆಂದಾಗ ಜ್ಞಾನ ತತ್ವವಾದ ಛಂದಸ್ಸಿನ ವ್ಯಾಪಕತೆ ಎಷ್ಟರದೆಂದು ಭಾಸವಾಗದಿರದು. 'ನ ಕಿಂಚಿತ್ ಛಂದಸಾ ವಿನಾ' ಎಂದ ಮಾತು ಅವರ ವ್ಯಾಪಕತೆಯನ್ನು ದೃಢಗೊಳಿಸಿದೆ. ಜ್ಞಾನಪ್ರಾಪ್ತಿಗಂತೂ ಗುರೂಪದೇಶ, ಗುರುಕರುಣಗಳೇ ಮಾರ್ಗವಷ್ಟೆ. ಜ್ಞಾನಸಾಧನೆಯ ಮಾರ್ಗದಲ್ಲಿ ಹಿತವಾದುವನ್ನು ಉಪದೇಶಿಸುವಾತನೇ ಗುರು (ಗೃಣಾತಿ-ಹಿತಮುಪದಿಶತೀತಿ ಗುರುಃ). 'ಗುರು' ಎಂಬ ಶಬ್ದವು ಭಾರವಾದುದು, ದೊಡ್ಡದಾದುದು-ಎಂಬ ಅರ್ಥ ಕೊಡುತ್ತಿದೆ. ಗ್ರಹಗಳಲ್ಲಂತೂ ಗುರುವೇ (ದ್ಯು + ಪಿತಾ) ದೊಡ್ಡದೆನ್ನುವರು. ಗುರುವಿಗೆ ಘನತೆಯಿದೆ, ಪೂರ್ಣತೆಯಿದೆ. ಜ್ಞಾನ ಪ್ರಾಪ್ತಿಗೆ ಗುರುವೇ ಮಾರ್ಗದರ್ಶಿಯಾಗಿರುವಂತೆ ವೃತ್ತವಿಷಯಕವೆನಿಸುವ ಛಂದಸ್ಸಿನ ಸಿದ್ಧಿಗೂ ಗುರ್ವಕ್ಷರ ಪರಿಚಯವೇ ಆದಿ; ಹಾದಿ. ಲಘುವಿನ ಪರಿಚಯ ಅಷ್ಟು ಕಠಿನವಲ್ಲ. 'ಲಘು' ಎಂದರೆ ಹಗುರವಾದುದು. ಆದರೆ, ಗುರುವಿನೊಂದಿಗೆ ಸೇರಿಕೊಂಡಾಗ, ಗುರುಕರುಣೆಯನ್ನು ಹೊಂದಿ ತಾನೂ ಗುರುವೆನಿಸಿದಾಗ, ಆ ಲಘುವಿಗೂ ಮಹತ್ವ ಬರುವುದಿದೆ. ಆಗ ಅದು ಗುರು ತಾನೆ? ಗುರುವನ್ನೊಲಿಸುವುದು ಕಠಿನ. ಗುರುವಿನೊಲವಾಯಿತೆಂದರೆ ಛಂದಸ್ಸು ಕರಗತವಾದಂತೆ.

---

[6] ಭಗವದ್ಗೀತೆ, ಅ. xv, ಶ್ಲೋ. ೧.

ಗುರು-ಲಘು ಮಿಶ್ರವಾದ ಅಕ್ಷರಗಳ ಗುಂಪು (ಗಣ) ಛಂದಸ್ಸಿಗೆ ಆಶ್ರಯ ವಾಗಿರುತ್ತದೆ.

> ಗುರುವಂ ಲಘು ಸಂಧಾನದೆ
> ನರನಿಸೆ ಗುರುಲಘುವಿಮಿಶ್ರಿತಂ ದೊರೆಕೊಳೆ ತ
> ದ್ಗುರು ತಚ್ಛಂದೋವೃತ್ತಿಗೆ
> ದೊರೆಯೆನಿಸಿರ್ದುದು ಮನಕ್ಕೆ ದುರ್ಯೋಧನನಾ [7]

ಗುರು ಎಂದರೆ ಎರಡು ಮಾತ್ರೆಗಳುಳ್ಳುದೆಂದು ಪರಿಗಣಿಸಲ್ಪಡುವ ಅಕ್ಷರ, ಲಘುವೆಂದರೆ ಒಂದು ಮಾತ್ರೆಯುಳ್ಳುದು—ಎಂದು ಇವೆರಡರ ಸ್ಥೂಲ ಪರಿಚಯ. ಮಾತ್ರೆ ಎಂದರೆ ಒಂದು ಹ್ರಸ್ವವನ್ನು ಉಚ್ಚಾರಣೆ ಮಾಡಲು ತಗಲುವ ಸಮಯ.

ಗುರು-ಲಘು ಚಿಹ್ನೆಗಳು

ಛಂದಸ್ಸನ್ನು ಕುರಿತು ಬರೆದಿರುವ ಗ್ರಂಥಗಳಲ್ಲಿ ಗುರು-ಲಘು ಅಕ್ಷರಗಳ ಲಕ್ಷಣಗಳನ್ನು ಹೇಳಿರುವುದಲ್ಲದೆ, ಪದ್ಯಪಾದಗಳಲ್ಲಿ ಅವನ್ನು ಗುರುತಿಸಿ, ಇಡ ಬಹುದಾದ ಚಿಹ್ನೆಗಳನ್ನೂ ಹೇಳಿರುವುದುಂಟು. ಹಾಗೆ ಹೇಳಿರುವ ಅಂಶಗಳನ್ನು ಆಧರಿಸಿ ಇಂದು ಕನ್ನಡದಲ್ಲಾಗಲೀ ಸಂಸ್ಕೃತ-ಹಿಂದೀ ಭಾಷೆಗಳಲ್ಲಾಗಲೀ ಗುರು-ಲಘು ಚಿಹ್ನೆಗಳಿಗೆ ನಿರ್ದಿಷ್ಟ ರೂಪಾನುಸರಣೆ ಕಂಡುಬರುವುದಿಲ್ಲ. ಸಂಸ್ಕೃತದ ಮತ್ತು ಹಿಂದಿಯ ಕೆಲವು ಛಂದೋಗ್ರಂಥಗಳನ್ನು ನೋಡಿದರೆ, ಅವುಗಳಲ್ಲಿ ಗುರುವನ್ನು 'S' ಈ ಚಿಹ್ನೆಯೂ, ಲಘುವನ್ನು ' | ' ಈ ಚಿಹ್ನೆಯೂ ಸೂಚಿಸುವುದನ್ನು ಕಾಣಬಹುದು. ಛಂದೋಂಬುಧಿ ಮುಂತಾದ ಕನ್ನಡದ ಮುದ್ರಿತ ಗ್ರಂಥಗಳಲ್ಲಿ ಗುರುವಾಗಿ (—) ಈ ಅಡ್ಡಗೆರೆಯನ್ನೂ ಲಘುವಾಗಿ (⏑) ಈ ವಕ್ರರೇಖೆಯನ್ನೂ ಕಾಣಬಹುದು. ಛಂದೋಂಬುಧಿಯಲ್ಲಿ ಗುರು ಲಘು ಚಿಹ್ನೆಗಳನ್ನು ನಿರೂಪಿಸುವ ಸೂತ್ರವೂ ಅದಕ್ಕೆ ಗ್ರಂಥಸಂಪಾದಕ ರಾದ ರೆ. ಕಿಟ್ಟೆಲರು ಕೊಟ್ಟಿರುವ ವಿವರಣೆಯೂ ಅವರು ಕಾರಣ ಕೊಟ್ಟು ಉಪಯೋಗಿಸಿದ ಚಿಹ್ನೆಗಳ ವಿಚಾರವೂ ಇಲ್ಲಿ ವಿವೇಚನೀಯಗಳಾಗಿವೆ.

---

[7] ರನ್ನ, ಗದಾಯುದ್ಧ, ಆ. IV, ಪ. ೪೯.

ಬರೆದೆಯ್ದ ರ ಲೆಕ್ಕವನಾ
ದರದಿಂ ಗುರುಲಘುವಿಭೇದವಮಂ ಭಾವಿಸು ನೀಂ
ಗುರು ಪಿಂತೆ ಕೊಂಕಿ ತೋಟ್ರುವ
ಗೆರೆ ಮುಂತಣ ಸೃತುಮಪ್ಪ ಗೆರೆ ಲಘು ಕೆಳದೀ ||[8]

The sign for a metrically long (guru) syllable is a crooked perpendicular line; that for metrically short (laghu) syllable is a straight perpendicular line. (The forms appear in A Weber p-203-215-416.) Instead of the first mentioned sign, Europeans use a horizontal line (—), and instead of the other a turned up half bindu (◡). The European signs have been adopted for this Edition. (Kittel)

ಕಿಟ್ಟೆಲರ ಈ ವಿವರಣೆಯ ಪ್ರಕಾರ ನಾಗವರ್ಮನು ಹೇಳಿದ ಗುರು ಚಿಹ್ನೆ ಮೇಲಿಂದ ಕೆಳಗಾಗಿ ಎಳೆದ ವಕ್ರರೇಖೆ (S) ಮತ್ತು ಲಘು ಚಿಹ್ನೆ ಹೀಗೆಯೇ ಮೇಲಿಂದ ಕೆಳಗಾಗಿ ನೇರವಾಗಿ ಎಳೆದ ಗೆರೆ (|). ಈ ಚಿಹ್ನೆಗಳನ್ನು ಎ ವೇಬರ್-ಅವರ ಗ್ರಂಥದಲ್ಲಿ ಕಾಣಬಹುದೆಂದೂ ಕಿಟ್ಟೆಲರು ತಿಳಿಸಿದ್ದಾರೆ. [ಜರ್ಮನ್ ಭಾಷೆಯಲ್ಲಿರಬಹುದಾದ ಈ ಗ್ರಂಥ ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಾಗಲೀ ಯೂನಿವರ್ಸಿಟಿ ಲೈಬ್ರೆರಿಯಲ್ಲಾಗಲೀ ದೊರೆಯುವು. ದಿಲ್ಲ.† ಆದರೆ ಎ. ವೇಬರ್ (ಬರ್ಲಿನ್-೧೮೮೮)—ಅವರ ಅಥರ್ವಸಂಹಿತೆ ಯಲ್ಲಿ (ಪುಟ ೨೦೧, ೨೦೩, ೨೨೦) ದೀರ್ಘ ಚಿಹ್ನೆಯಾಗಿ ∧ ಈ ಗುರುತು ಕಾಣುತ್ತದೆ. ಉದಾ—RÂJASÛYA, GRÂMANI, MÂGHA, ಇತ್ಯಾದಿ. ಇತ್ತೀಚಿನ ಯುರೋಪಿಯನರು ದೀರ್ಘಚಿಹ್ನೆಯಾಗಿ (—) ಇದನ್ನು ಮಾಡಿಕೊಂಡುದೂ ಕಾಣುತ್ತಿದೆ.] ಯುರೋಪಿಯನರು ಗುರುಚಿಹ್ನೆ ಯಾಗಿ ಅಡ್ಡ ಗೆರೆಯನ್ನೂ (—) ಲಘುಚಿಹ್ನೆಯಾಗಿ ಮೇಲಕ್ಕೆ ತಿರುಗಿದ ಅರ್ಧ ಬಿಂದುವನ್ನೂ (◡) ಉಪಯೋಗಿಸುವರೆಂದೂ ಈ ಸಂಸ್ಕರಣದಲ್ಲಿ ಯುರೋ

---

[8] ನಾಗವರ್ಮ-ಛಂದೋಂಬುಧಿ, ಪ್ರಥಮಾಶ್ವಾಸಂ.

† ಈ ಲೇಖನ ಬರೆದ ಕಾಲ ೧೯೬೨ನೆಯ ಇಸವಿ.

ಪಿಯನರ ಚಿಹ್ನೆಗಳನ್ನು ಬಳಸಲಾಗಿದೆಯೆಂದೂ ಮೇಲೆ ಕಾಣಿಸಿದ ವಾಕ್ಯಗಳಲ್ಲಿ ತಿಳಿಸಿದ್ದಾರೆ. ವೇಬರ್–ಅವರ ಅಥರ್ವಸಂಹಿತೆಯಲ್ಲಿ ಮೇಲ್ಗಡೆ ಮೂಲೆ ಬರುವ ಕೋನ ಚಿಹ್ನೆ (Λ) ಗುರುವಾಗಿರುವುದೂ ಈಚಿನ ಯುರೋಪಿಯನರು ಅಡ್ಡಗೆರೆಯನ್ನು (—) ಗುರುಚಿಹ್ನೆಯಾಗಿ ಉಪಯೋಗಿಸುತ್ತಿರುವುದೂ ಕಂಡು ಬರುವುದರಿಂದ ಯುರೋಪಿಯನರಲ್ಲಿಯೂ ದೀರ್ಘಚಿಹ್ನೆಯ ವಿಷಯದಲ್ಲಿ ಒಮ್ಮತವಿಲ್ಲವೆಂದು ಕಂಡುಬರುತ್ತದೆ. ಇದಲ್ಲದೆ ಇನ್ನೊಬ್ಬ ಆಂಗ್ಲ ವಿದ್ವಾಂಸನು ಸಂಸ್ಕೃತ ಛಂದಸ್ಸನ್ನು ಕುರಿತು ಬರೆವಲ್ಲಿ ಹೇಳಿದುದೂ ಲಕ್ಷಿಸತಕ್ಕ ವಿಷಯ—

A breve is marked with an upright line 'l' thus; a tribrach, which we write ᴗ ᴗ ᴗ is marked lll. The long mark is ᴗ which we use for a breve. In Devanagari the character resembles the Persian hamza (ء), In Bengali is similar to the number for six in that alphabet.[9]

ಈ ಹೇಳಿಕೆಯ ಪ್ರಕಾರ ಸಂಸ್ಕೃತದಲ್ಲಿ ಗುರುಚಿಹ್ನೆ ವಕ್ರರೇಖೆ (ᴗ) ಎಂದು ಮೊದಲು ಹೇಳಿ, ಚಿಹ್ನೆಯನ್ನು ಕೂಡ ತೋರಿಸಿ, ಆ ಮೇಲೆ ಪರ್ಷಿಯನ್ ಭಾಷೆಯ ಅದೊಂದು ಅಕ್ಷರದಂತೆ (ء) ಎಂದು ವಿವರಿಸಿದುದು ಕಾಣುತ್ತದೆ. ಅದನ್ನೇ ಬಂಗಾಳಿಯಲ್ಲಿ ಆರು ಎಂಬ ಅಂಕೆಯಂತೆ ಎಂದು ಆತನು ಹೇಳಿದ್ದಾನೆ. ಆದರೆ ಆಗ ಗುರುಚಿಹ್ನೆ (S) ಹೀಗೆಂದು ಮೊದಲು ತೋರಿಸಿಕೊಟ್ಟುದರಲ್ಲಿ ಔಚಿತ್ಯ ಕಾಣುವುದಿಲ್ಲ.

ಸಂಸ್ಕೃತ–ಕನ್ನಡ ಛಂದೋಗ್ರಂಥಗಳಲ್ಲಿ ಗುರುಲಘು ಚಿಹ್ನೆಗಳ ರೂಪ ನಿರೂಪಣೆ ಮಾಡಿದಲ್ಲೆಲ್ಲ ವಕ್ರರೇಖೆ ಗುರುವೆಂದೂ ಋಜುಚಿಹ್ನೆ ಲಘುವೆಂದೂ ಹೇಳಿದುದು ಕಾಣುತ್ತದೆ. (ಗ್ವಕ್ರಃ, ಮಾತ್ರಿಕೋ ಲೃಜುಃ) ಪ್ರಾಕೃತ ಪೈಂಗಳ ಸೂತ್ರಗಳಲ್ಲಿ ಗುರು–ಲಘುಗಳಿಗೆ ಕೆಲವು ಹೆಸರುಗಳನ್ನು

---

9 Charles Philip Brown, Sanskrit Prosody–Introductory Remarks.

ಹೇಳಿದೆ. ಆ ಹೆಸರುಗಳಲ್ಲಿ ಗುರುಲಘು ರೇಖೆಗಳ ಸ್ವರೂಪ ನಿರೂಪಣೆಯೂ ಅಡಗಿದೆ—

ತಾಲಂಕ ಹಾರ ಣೇವುರ
ಕೇಊರ ಓ ಹೋಂತಿ ಗುರು ಭೇಅ
ಸರ ಮೇರು ದಂಡ ಕಾಹಲ
ಲಹು ಭೇಅ ಹೋಂತಿ ಏತ್ತಾ ಈ ॥10

ಗುರುವಿಗೆ ತಾಟಂಕ, ಹಾರ, ನೂಪುರ, ಕೇಯೂರ—ಎಂಬ ಹೆಸರುಗಳೂ ಲಘುವಿಗೆ ಶರ, ಮೇರು, ದಂಡ, ಕಾಹಲ-ಎಂಬ ಹೆಸರುಗಳೂ ಸಲ್ಲುತ್ತಿವೆ. ಗುರುವಿಗೆ ಆ ಹೆಸರುಗಳು ಅದರ ವಕ್ರಚಿಹ್ನೆಯನ್ನೂ ಲಘುವಿನ ಹೆಸರುಗಳು ಅದರ ನೇರವಾದ ಚಿಹ್ನೆಯನ್ನೂ ಸೂಚಿಸುತ್ತವೆಂದು ನಿರ್ಧರಿಸಿಕೊಳ್ಳಬಹುದು.

ಲಘುಚಿಹ್ನೆಯಂತೂ ನೇರವಾದ ಗೆರೆಯೆಂಬುದು ಮತ್ತೈಕ್ಯವುಳ್ಳ ವಿಚಾರವಾಗಿದ್ದು ಅದರ ಸ್ವರೂಪನಿರ್ಣಯದಲ್ಲಿ ತೊಡಕಿಲ್ಲ. ಆದರೆ, ಗುರು ವಕ್ರಚಿಹ್ನೆಯಾದುದರಿಂದ ಆ ವಕ್ರತೆ ಯಾವ ಕಡೆಗೆ ತಿರುಗಿರಬೇಕು ?-ಎಂಬುದು ಸಂಶೋಧಿಸತಕ್ಕ ವಿಷಯ. ಸಂಸ್ಕೃತ, ಪ್ರಾಕೃತ, ಹಿಂದೀ ಭಾಷೆಗಳ ಛಂದೋಗ್ರಂಥಗಳಲ್ಲಿ ದ್ವಿವಕ್ರವಾಗಿರುವ (S) ಅಂದರೆ ಎರಡು ಕೊಂಕುಗಳುಳ್ಳ ರೇಖೆಯನ್ನು ಗುರುಚಿಹ್ನೆಯಾಗಿ ಪ್ರಯೋಗಿಸಿದುದು ಕಾಣುತ್ತಿದೆ. ಈ ದ್ವಿವಕ್ರತೆ ಯಾವ ಸೂತ್ರಾನುಸಾರವೆಂದು ಸ್ಪಷ್ಟವಿಲ್ಲ.

ಹಿಂದೆ ಉದಾಹರಿಸಿರುವ ಛಂದೋಂಬುಧಿಯ ಸೂತ್ರವನ್ನು ಗುರು-ಲಘು ಚಿಹ್ನೆಯ ಸ್ವರೂಪನಿರ್ಣಯಕ್ಕಾಗಿ ಅವಲೋಕಿಸಿದರೆ, ಕಿಟ್ಟೆಲರು ಕೂಡ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದಂತೆ ಕಂಡುಬರುವುದು. ಆ ಸೂತ್ರದಲ್ಲಿ ಗುರುವಿನ ವಕ್ರರೇಖೆ ಮೇಲಿಂದ ಕೆಳಗಾಗಿರುವಂಥದು (Perpendicular) ಎಂದು ಹೇಳಿಲ್ಲ. ಅಲ್ಲಿ ಹೇಳಿದಂತೆ ಕನ್ನಡದಲ್ಲಿ ಐದು

---

10 ಪ್ರಾಕೃತ ಪೈಂಗಲ, ಸೂ. ೩೧.

(೫) ಎಂಬ ಸಂಖ್ಯೆಯನ್ನು ಬರೆದು ಗುರು ಲಘು ವಿಭೇದವನ್ನು ನಿರ್ಣಯಿಸಿ ಕೊಳ್ಳಬಹುದು. ಈ ೫ ಎಂಬ ಸಂಖ್ಯೆಯಲ್ಲಿ ಸ್ವಲ್ಪ ಎಡಕ್ಕೆ ತಿರುಗಿದ ವಕ್ರ ಚಿಹ್ನೆಯೊಂದು, ಮೇಲಿಂದ ಕೆಳಗೆ ನೇರವಾದುದೊಂದು. ಇವುಗಳಲ್ಲಿ ಮೊದಲಿನ ಕೊಂಕುಗೆರೆಯೇ ಗುರುಚಿಹ್ನೆ, ಮತ್ತಿನ ನೇರವಾದ (ಸೈತುಮುಪ್ಪ) ಗೆರೆ ಲಘು ಚಿಹ್ನೆ—ಎಂದು ಇಲ್ಲಿ ಸ್ಪಷ್ಟವಾದ ವಿವರಣೆ ಕಾಣಬಹುದು. ನಾಗವರ್ಮನ ಕಾಲದಲ್ಲಿ (೧೦ನೆಯ ಶತಮಾನ) ಐದು ಎಂಬ ಅಂಕೆಯನ್ನು ಸ್ವಲ್ಪ ಎಡಕ್ಕೆ ತಿರುಗಿದ ಕೊಂಕುಗೆರೆ ಮತ್ತು ಅದರ ಬಲಗಡೆ ಮೇಲಿಂದ ಕೆಳಗೆ ನೇರ ವಾದ ಗೆರೆ-ಈ ಎರಡು ಚಿಹ್ನೆಗಳಿಂದ ಬರೆಯುತ್ತಿದ್ದರೆಂದು ಶಾಸನದಿಂದ ತಿಳಿದು ಬಂದಿದೆ. ಕಿಟ್ಟೆಲರು ಮೇಲಿನ ಸೂತ್ರಾರ್ಥವನ್ನು ತಿಳಿಸುವಲ್ಲಿ ಕನ್ನಡದ ೫ ಎಂಬುದರ ಸುದ್ದಿಯೆತ್ತದೆ, ಇಂಗ್ಲಿಷ್ 5 ಎಂಬ ಅಂಕೆಯನ್ನು ഗ ಹೀಗೆ ಇಟ್ಟು ಗುರು ಲಘು ಚಿಹ್ನೆಗಳಾಗಿ ಅರ್ಥಮಾಡಿಕೊಂಡಂತೆ ಭಾಸವಾಗುತ್ತದೆ.

ಗುರು ಲಘು ಚಿಹ್ನೆಯ ಸ್ಪಷ್ಟವಾದ ರೂಪವನ್ನು ತಿಳಿಸುವ ಈ ಕೆಳಗಿನ ಸೂತ್ರವನ್ನು ಪರಿಶೀಲಿಸುವ:—

ನಾಗರ ಖುಕಾರ ವಕ್ರೋ
ಗುರುರ್ದ್ವಿಮಾತ್ರೋ ಗಸಂಜ್ಞಕೋ ಜ್ಞೇಯಃ
ಲಘುರೇಕ ಮಾತ್ರಿಕಸ್ಯಾ
ದೃಜುರೂರ್ಧ್ವಾಂಗುಲನಿಭೋ ಲಸಂಜ್ಞಕಃ 11

ಜಯಕೀರ್ತಿಯ ಛಂದೋನುಶಾಸನದ ಸೂತ್ರದಂತೆ 'ನಾಗರ ಖುಕಾರ' ದಲ್ಲಿ ಬರುವ ವಕ್ರವು ಗುರುಚಿಹ್ನೆ. ಈ ನಾಗರ ಖುಕಾರವಾವುದು ? 'ನಾಗರಿ' ಎಂದು ಕರೆಯಲಾಗುವ ಲಿಪಿಯ ಖುಕಾರವೆ? ಆ ಖುಕಾರವು ಋ ಹೀಗಿದೆಯಷ್ಟೆ. ಇಲ್ಲಿ ವಕ್ರ ಚಿಹ್ನವೆ ಇಲ್ಲ. ಆದರೆ 'ನಾಗರ ಖುಕಾರ'ಎಂಬೆರಡು ಶಬ್ದಗಳು ಸಂಧಿ ಯಾದಾಗ 'ನಾಗರರ್ಕಾರ' ಎಂದಾಗುವುದು. ಈ ಅರ್ಕಾರದ ಒತ್ತು ನಾಗರಿ ಲಿಪಿಯಲ್ಲಿದೆ. ಉದಾ:—ಋಗ್ ಇತ್ಯಾದಿ. ಈ ಅರ್ಕಾರ ಚಿಹ್ನವನ್ನೇ ಗುರು ಚಿಹ್ನವೆಂದು ಜಯಕೀರ್ತಿ ಹೇಳಿರಬಹುದು ಎಂದು ನನಗನಿಸಿತು. ಆದರೆ,

11 ಜಯಕೀರ್ತಿ, ಛಂದೋನುಶಾಸನ, ಪ್ರಥಮೋಽಧಿಕಾರಃ, ಸೂ. ೩.

ಇತ್ತೀಚೆಗೆ 'ನಾಗರ' ಎಂಬೊಂದು ಲಿಪಿಯಿರುವುದು ನನಗೆ ತಿಳಿಯಿತು. (ಇಂದು ಬರೆವಣಿಗೆಯ ರೂಢಿಯಲ್ಲಿಲ್ಲದ 'ನವನಾಯಕರ ಲಿಪಿ', 'ಮಿತಾಕ್ಷರೀ ಲಿಪಿ' 'ತಿಗಳಾರಿ' ಅಥವಾ 'ತುಳು' ಲಿಪಿ ಇವೂ ದೊರೆತಿವೆ.) ಈ ನಾಗರ ಲಿಪಿಗಳಲ್ಲಿ ಕೆಲವು ಅಕ್ಷರಗಳು 'ನಾಗರಿ'ಯನ್ನು ಹೋಲುತ್ತಿವೆ. ನಾಗರ ಲಿಪಿಯ ಋ ಎಂಬ ಸ್ವರಾಕ್ಷರವು ೩ ಹೀಗಿದೆ. ಈ ಋಕಾರದಲ್ಲಿ ಸ್ಪಷ್ಟವಾಗಿ 'ಗಿ' ಈ ರೀತಿಯ ವಕ್ರಚಿಹ್ನವಿದೆ. ಇದರಿಂದ ಮೇಲೆ ಸೂತ್ರದಲ್ಲಿ ಹೇಳಿದ "ನಾಗರ ಋಕಾರವಕ್ರ" ಎಂದುದು ಇದೇ ಚಿಹ್ನೆಯನ್ನು–ಎಂದು ಸಿದ್ಧವಾಗುತ್ತದೆ. ಗುರುವು 'ಗ' ಎಂಬ ಸಂಜ್ಞೆಯುಳ್ಳುದು ಮತ್ತು ಲಘು 'ಲ' ಸಂಜ್ಞೆಯುಳ್ಳುದಾಗಿ ಮೇಲಕ್ಕೆತ್ತಿದ ಬೆರಲಿನಂತೆ ನೇರವಾದ ಗೆರೆಯೆಂಬುದೂ ಇಲ್ಲಿ ಸ್ಪಷ್ಟವಿದೆ.

ವೇಮುಲವಾಡ ಭೀಮಕವಿ ವಿರಚಿತವಾಗಿದ್ದು ತೆಲುಗಿನಲ್ಲಿ ಆದಿಯ ಛಂದೋಗ್ರಂಥವೆನಿಸಿದ "ಕವಿಜನಾಶ್ರಯಮು" ಎಂಬುದರ ಹಳೆಯ ಮುದ್ರಿತ ಪ್ರತಿಯಲ್ಲಿ ಗುರುವಾಗಿ ಗಿ ಈ ವಕ್ರ ರೇಖೆಯನ್ನೂ ಲಘುವಾಗಿ | ಈ ನೇರ ಗೆರೆಯನ್ನೂ ಉಪಯೋಗಿಸಿದ್ದಾರೆ. ಇದರಿಂದ ತೆಲುಗರು ಸರಿಯಾದ ಗುರು–ಲಘು ಚಿಹ್ನೆಗಳನ್ನು ಉಪಯೋಗಿಸಿರುವರೆನ್ನಬಹುದು.

ಈ ವಿವರಣೆಗಳಿಂದ, ಹಿಂದಿನ ಛಂದೋಗ್ರಂಥಗಳನ್ನು ನೋಡಿ ಸರಿಯಾಗಿ ಅರ್ಥಮಾಡಿಕೊಂಡು ಗುರು-ಲಘು ಚಿಹ್ನೆಗಳನ್ನು ಬಳಸುವುದರಲ್ಲಿ ಏಕರೂಪವಾದ ಕ್ರಮವನ್ನು ಅನುಸರಿಸುವುದಾದರೆ, ಗುರುವನ್ನು ಕನ್ನಡದ 'ಗಿ' ಎಂಬ ಅಂಕೆಯಿಂದಲೂ ಲಘುವನ್ನು ಎಲ್ಲರೂ ಒಪ್ಪಿರುವಂತೆ ಮೇಲಿಂದ ಕೆಳಗೆ ಉದ್ದಕ್ಕೆಳೆದ ಗೆರೆಯಿಂದಲೂ ಗುರುತಿಸಿಕೊಳ್ಳುವುದು ಸೂಕ್ತವೆನಿಸದಿರಲಾರದು.

ಗುರು-ಲಘು ಅಕ್ಷರಗಳು

ಗುರು-ಲಘು ಪರಿಚಯವೇ ಛಂದಸ್ಸಿನ ಮೂಲಪಾಠವೆಂದು ಹಿಂದೆಯೇ ಸ್ಪಷ್ಟಪಡಿಸಿದೆ. ಗುರು ಅಥವಾ ಲಘು ಎನಿಸುವ ಅಕ್ಷರಗಳು ನಾಲ್ಕು ವಿಧ—

ಏಕಮಾತ್ರೋ ಭವೇದ್ಧ್ರಸ್ವೋ ದ್ವಿಮಾತ್ರೋ ದೀರ್ಘ ಉಚ್ಯತೇ
ತ್ರಿಮಾತ್ರಸ್ತು ಪ್ಲುತೋ ಜ್ಞೇಯೋ ವ್ಯಂಜನಂ ಚಾರ್ಧಮಾತ್ರಕಂ [12]

[12] ಕಾಳಿದಾಸ, ಶ್ರುತಬೋಧ, ಸೂ. ೩.

'ಹ್ರಸ್ಯತೇ–ಸ್ವಲ್ಪಕಾಲಮುಚ್ಚಾರ್ಯತ–ಇತಿ ಹ್ರಸ್ವಃ' ಅಂದರೆ, ಕಡಮೆ ಸಮಯದಲ್ಲಿ ಉಚ್ಚಾರಣೆ ಮಾಡಲು ಸಾಧ್ಯವಾಗುವುದು ಹ್ರಸ್ವದ ಲಕ್ಷಣ. ಕಡಮೆ ಕಾಲವೆಂದರೆ, ಒಂದು ಮಾತ್ರೆಯ ಕಾಲ ; ಒಂದು ಮಾತ್ರೆಯ ಕಾಲಕ್ಕಿಂತ ಕಡಮೆ ಮಾತ್ರೆಯನ್ನು ಗಣನೆಗೆ ತೆಗೆದುಕೊಳ್ಳುವ ಕ್ರಮವಿಲ್ಲ. ಉಚ್ಚಾರಣೆಯಲ್ಲಿ ಎರಡು ಮಾತ್ರಾಕಾಲ ತಗಲುವಂಥದು ದೀರ್ಘ; ದೀರ್ಘವು ಗುರು. ಪ್ಲುತಕ್ಕೆ ಮಾತ್ರೆ ಮೂರು. ಆದರೆ ಛಂದೋದೃಷ್ಟಿಯಲ್ಲಿ ಗುರುವಿಗಿಂತ ದೊಡ್ಡದಿಲ್ಲ; ಆದುದರಿಂದ ಪ್ಲುತವನ್ನೂ ಗುರುವಾಗಿಯೇ ಗಣಿಸಿದ್ದಾರೆ. ನಾಗವರ್ಮನ ಕಾವ್ಯಾವಲೋಕನದಲ್ಲಿ ಪ್ಲುತಕ್ಕೆ ಉದಾಹರಣೆ ನೋಡಿ:—

ಮೊಕ್ಕಳಮೆಸೆದಿರ್ಪಿನವೊಳ
ಪೊಕ್ಕುಚಿತಂ ಹ್ರಸ್ವದೀರ್ಘ ಸಹಿತಂ ಪ್ಲುತಮೆ
ಕ್ಕೆಕ್ಕೆಯೆ ನೆಗೞ³ದ್ದ ಮೋರ್ಡಲೊಳೆ
ಕುಕ್ಕೂಕೂ ಎಂದು ಕೋೞಿ ಕೂಗಿದುವಾಗಳ್

ಇಲ್ಲಿ ಕು ಕ್ಕೂ ಕೂ–ಎಂಬ ಮೂರಕ್ಷರಗಳಲ್ಲಿ ಮೊದಲನೆಯದು ಹ್ರಸ್ವವೆಂತಲೂ ಎರಡನೆಯದು ದೀರ್ಘವೆಂತಲೂ ಮೂರನೆಯದು ಪ್ಲುತವೆಂತಲೂ ಪರಿಗಣಿಸುವುದಕ್ಕೆ ಉದಾಹರಣವಾಗಿ ಮೇಲಿನ ಪದ್ಯವಿದೆ. ಆದರೆ ಛಂದೋದೃಷ್ಟಿಯಿಂದ, ಗುರುಲಘು ಲಕ್ಷಣಗಳಿಂದ, ಉಚ್ಚಾರಣೆಯಿಂದ, ಈ ಮೂರೂ ಗುರ್ವಕ್ಷರಗಳೇ ಆಗಿವೆ. ಆದಿಯದು ಒತ್ತಕ್ಕರದ ಹಿಂದಿನದಾಗಿ ಗುರು; ಎರಡನೆಯದೂ ಮೂರನೆಯದೂ ದೀರ್ಘವುಳ್ಳದಾಗಿ ಗುರು. ವರ್ಣಗಣಚ್ಛಂದಸ್ಸಿನಿಂದ ರಚಿತವಾಗುವ ವೃತ್ತಗಳಲ್ಲಾಗಲೀ ಗಣಚ್ಛಂದಸ್ಸಿನಿಂದ ರಚಿಸಲ್ಪಡುವ ಕಂದ-ಆರ್ಯೆ-ಮುಂತಾದ ಜಾತಿಯಲ್ಲಾಗಲೀ ಪ್ಲುತ ಪ್ರಯೋಗವು ಕನ್ನಡದಲ್ಲಿ ಕಾಣುವುದಿಲ್ಲ. ಅಕ್ಷರ ನಿಯಮಕ್ಕೊಳಗಾದ ವೈದಿಕ ಛಂದಸ್ಸಿನಲ್ಲಿ ಪ್ಲುತಕ್ಕೆ ಮೂರು ಮಾತ್ರೆಯ ಲೆಕ್ಕಾಚಾರವಿದೆ—

'Pluta' denoting 'extension' is the name given to a quaver or protracted sound, used in chanting the Vedas. In prosody it is merely a long syllable.[13]

---

13 Charles Brown, Sanskrit Prosody–Introductory Remarks.

ಪಿಂಗಳ, ಹೇಮಚಂದ್ರ, ಜಯಕೀರ್ತಿ, ಮುಂತಾದವರೆಲ್ಲರೂ ಪ್ಲುತವನ್ನು ಎರಡು ಮಾತ್ರೆಯುಳ್ಳ ಅಕ್ಷರವೆಂದೇ ತಿಳಿಸಿರುತ್ತಾರೆ. ವ್ಯಂಜನವು ಅರ್ಧಾಕ್ಷರವಾಗಿರುವುದರಿಂದ ಅರ್ಧ ಮಾತ್ರೆಯುಳ್ಳದೆಂದು ಹೇಳಿದ್ದಾರೆ. ಆದರೆ ಈ ಅರ್ಧವನ್ನು ಬೇರೆಯಾಗಿ ಲೆಕ್ಕಿಸುವ ಕ್ರಮವಿಲ್ಲ. ಈ ಅರ್ಧಾಕ್ಷರದ ಉಚ್ಚಾರಣೆ ಅದರ ಹಿಂದಿನ ಹ್ರಸ್ವದೊಂದಿಗೆ ಅಥವಾ ದೀರ್ಘದೊಂದಿಗೆ ಸೇರಿಯೇ ನಡೆಯುವುದು; ಆ ವ್ಯಂಜನಕ್ಕೆ ಸ್ವಂತವಾದ ಅಸ್ತಿತ್ವವಲ್ಲ. ಅದು ಆದರ ಹಿಂದಿನ ಅಕ್ಷರದ ಒತ್ತಾಗಿ ನಿಲ್ಲುವುದು, ಅಥವಾ ಮುಂದಿನ ವ್ಯಂಜನಾಕ್ಷರದೊಡನೆ ಸೇರಿ ಸ್ವತಃ ಒತ್ತಕ್ಕರವಾಗುವುದು; ಉದಾ: ಅವರ್ ನುಡಿದುದು, ಅವರ್ನುಡಿದುದು. ಹೀಗೆ ಆದ ಒತ್ತಕ್ಕರದ ಹಿಂದೆ ಲಘುವಿದ್ದರೆ ಆ ಲಘುವು ಗುರುವೆನಿಸುವುದು. ಆ ಅರ್ಧಾಕ್ಷರವು ಮುಂದಿನ ವ್ಯಂಜನಾಕ್ಷರದೊಡನೆ ಸೇರದೆ ಉಳಿದಾಗ ಅದರ ಉಚ್ಚಾರಣೆ ಅದರ ಹಿಂದಿನದರೊಂದಿಗೆ ಸೇರುವುದಷ್ಟೆ. ಆ ಹಿಂದಿನದು ಹ್ರಸ್ವವಾಗಿದ್ದರೆ, ಆಗ ಈ ಅರ್ಧಾಕ್ಷರದ ಒತ್ತಿನಿಂದ ಅದು ಗುರುವೆನಿಸುವುದು. ನಾಗವರ್ಮನು ಛಂದೋಂಬುಧಿಯಲ್ಲಿ ಈ ವಿಚಾರವನ್ನು ಸ್ಪಷ್ಟಪಡಿಸಿರುವುದು ಮುಂದಿನ ವಿವರಣೆಯಿಂದ ಖಚಿತವಾಗುವುದು.

ಗುರು—ಲಘು ಚಿಹ್ನೆಗಳನ್ನು ತಿಳಿಸಿದನಂತರ ಗುರುವಾಗುವ ಅಕ್ಷರಗಳ ವಿವರಣೆಯನ್ನು ನಾಗವರ್ಮನು ಕೊಟ್ಟಿದನ್ನು ನೋಡೋಣ :—

ಗುರುವಕ್ಕುಂ ಮುಂತೊತ್ತ
ಕ್ಕರಮಾಗಿರೆ ಪಿಂತೆ ನಿಂದ ಸೈಯಕ್ಕರಮುಂ
ಗುರುವೊತ್ತುಗಳಿಂದಪ್ಪುದು
ನಿರಂತರಂ ಚಾರುರೂಪಭಾಸಕ ಸಕಿಯೇ ||
ಬಿಂದು ವಿಸರ್ಗಂ ವ್ಯಂಜನ
ವೊಂದಿದ ದಡ್ಡಕ್ಕರಂ ಪದಾಂತ್ಯಂ ದೀರ್ಘಂ
ಬಂದೊಡಜಿ ವನಜಮುಖಿ ಗುರು
ವೆಂದಂ ಸೈಯಡಿಯ ನಾಗವರ್ಮ ಕವೀಂದ್ರಂ ||[14]

---

[14] ನಾಗವರ್ಮ, ಛಂದೋಂಬುಧಿ (ಕಿಟೆಲ್ ಮುದ್ರಣ), ಪ. ೨೬, ೨೭.

ಮೇಲಿನ ಎರಡು ಸೂತ್ರಗಳಿಗೆ ಕಿಟ್ಟೆಲರು ಕೊಟ್ಟ ವಿವರಣೆ ಹೀಗಿದೆ—A syllable, though short by itself (ಸ್ವಯಕ್ಕರ) within a verse becomes metrically long when followed by a double conso nant (ಒತ್ತಕ್ಕರ) counting as much as a syllable followed by a double consonant in a word.

Besides a double consonant (ದಡ್ಡಕ್ಕರ) formed by a con sonant being followed,either by the Bindu or the Visarga; then the end of a Hemistich (ಪದಾಂತ್ಯ the length of which however ought to be always clearlv expressed in practice); and a long vowel (ದೀರ್ಘ) are metrically long (guru). ಈ ವಿವರಣೆಯ ಪ್ರಕಾರ ಬಿಂದು, ವಿಸರ್ಗ, ವ್ಯಂಜನ ಯುಕ್ತವಾದ ದಡ್ಡಕ್ಕರ, ಪಾದಾಂತ್ಯ, ದೀರ್ಘ—ಈ ಐದರಲ್ಲಿ ಯಾವುದು ಬಂದರೂ ಗುರುವಾಗುವು ದೆಂದು ತಿಳಿಸಿದಂತಾಗಿದೆ. ಕನ್ನಡಕೈಪಿಡಿಯ ಛಂದಶ್ಶಾಸ್ತ್ರ ವಿಭಾಗದ ಲ್ಲಿಯೂ ಗುರ್ವಕ್ಷರದ ಈ ಐದು ಲಕ್ಷಣಗಳು ನಿರೂಪಿತವಾಗಿವೆ.

ನಾಗವರ್ಮನು ಛಂದೋಂಬುಧಿಯಲ್ಲಿ, ವ್ಯಂಜನಾಂತವಾಗಿರುವ ಲಘುವು ಗುರುವಾಗುವುದೆಂದು ಹೇಳಲಿಲ್ಲವೆ? ಎಂಬುದು ವಿಚಾರಾರ್ಹವಾದ ಸಂಗತಿ. ಹಾಗೆ ಹೇಳಲೇ ಇಲ್ಲವಾದರೆ, ವ್ಯಂಜನವು ಅದರ ಮುಂದಿನ ವ್ಯಂಜನದೊಡನೆ ಸೇರಿ ಸಂಯುಕ್ತವಾಗುವುದರಿಂದ ಹೇಳಲಿಲ್ಲವೆಂದು ಸಮರ್ಥಿಸಬಹುದು. ಆದರೆ, ಪಾದಾಂತ್ಯದಲ್ಲಿ ಬರುವ ವ್ಯಂಜನಾಂತ ಲಘುವು ಏನಾಗುವುದೆಂದು ವಿವರಿಸುವ ಸಂದರ್ಭದಲ್ಲಿ ಈ ಸಮರ್ಥನೆಯಲ್ಲಿಯೂ ಒಡಕು ಉಳಿಯುವುದು. ಆದುದ ರಿಂದ ಇಲ್ಲಿ ಇತರ ಛಂದೋಗ್ರಂಥಕಾರರು ವ್ಯಂಜನಾಂತ ಲಘುವಿನ ವಿಚಾರವೆ ತ್ತಿರುವರೆ? ನೋಡಬೇಕು. ನಾಗವರ್ಮನು ಛಂದೋಂಬುಧಿಯನ್ನು ಪಿಂಗಳನ ಛಂದಸ್ಸನ್ನು ಅನುಸರಿಸಿ ಬರೆದಂತೆ ಹೇಳುವುದರಿಂದ ಪಿಂಗಳನು ಗುರ್ವಕ್ಷರದ ಲಕ್ಷಣಗಳ ಕುರಿತು ಹೇಳಿರುವುದನ್ನು ಮೊದಲು ಪರಿಶೀಲಿಸುವುದು ಅವಶ್ಯ.

'ಧ್ರಾದಿಪರಃ'[15] ಎಂಬ ಸೂತ್ರಕ್ಕೆ ವ್ಯಾಖ್ಯಾನಮಾಡುತ್ತ ವೃತ್ತಿಕಾರ ನಾದ ಹಲಾಯುಧನು (ಧ್ರ=ಸಂಯುಕ್ತಾಕ್ಷರ) ಸಂಯುಕ್ತಾಕ್ಷರವೇ

15 ಪಿಂಗಲ ಛಂದಶ್ಶಾಸ್ತ್ರ, ಸೂ. ೧೧,

ಮುಂತಾದವು ಪರದಲ್ಲಿರುವ ಹ್ರಸ್ವವು ಗುರುವಾಗುವುದೆಂದು ತಿಳಿಸಿ, ವ್ಯಂಜನ, ಸಂಯೋಗ-ಇವುಗಳ ಪೂರ್ವದಲ್ಲಿರುವ ಹ್ರಸ್ವವೂ; ಅನುಸ್ವಾರ, ವಿಸರ್ಜನೀಯ, ಜಿಹ್ವಾಮೂಲೀಯ, ಉಪಧ್ಮಾನೀಯ-ಇವುಗಳ ಪೂರ್ವದ ಹ್ರಸ್ವವೂ ಗುರುವೆನಿಸುವುದೆಂದು ಸ್ಪಷ್ಟೀಕರಿಸಿದ್ದಾನೆ. ಈ ಸ್ಪಷ್ಟೀಕರಣಕ್ಕಾಗಿ ಹಲಾಯುಧನು ಈ ಕೆಳಗಿನ ಸೂತ್ರವನ್ನು ಹೇಳಿದ್ದಾನೆ-

> ದೀರ್ಘಂ ಸಂಯೋಗಪರಂ
> ತಥಾ ಪ್ಲುತಂ ವ್ಯಂಜನಾಂತಮೂಷ್ಮಾಂತಂ
> ಸಾನುಸ್ವಾರಂ ಚ ಗುರುಃ
> ಕ್ವಚಿದವಸಾನೇಽ ಲಘ್ವಂತಂ[16]

ಇಲ್ಲಿ 'ಸಂಯೋಗಪರಂ' ಎಂದರೆ ಮುಂದಿನದು ಒತ್ತಕ್ಕರವಾಗಿರುವ ಅಕ್ಷರ (ಹ್ರಸ್ವ); 'ವ್ಯಂಜನಾಂತಂ' ಎಂದರೆ, ವ್ಯಂಜನದ (ಅರ್ಧಾಕ್ಷರದ) ಹಿಂದಿನ ಹ್ರಸ್ವ. ಹೀಗೆ ಈ ಗ್ರಂಥದಲ್ಲಿ ಸ್ಪಷ್ಟವಾದ ವಿವರಣೆಯಿದೆ.

ಕಾಳಿದಾಸಕೃತ 'ಶ್ರುತಬೋಧ', ಕೇದಾರಭಟ್ಟ ವಿರಚಿತ 'ವೃತ್ತರತ್ನಾಕರ', ಮೈಸೂರು ವಿಶ್ವವಿದ್ಯಾಲಯದ ಕನ್ನಡ ಕೈಪಿಡಿ-ಇವುಗಳಲ್ಲಿ ವ್ಯಂಜನ ಸೇರಿದ ಹ್ರಸ್ವವು ಗುರುವಾಗುವುದೆಂದು ಹೇಳಲು ಬಿಟ್ಟುಹೋಗಿದೆ.

ಪಂಡಿತ ಜೆ. ರಘುಪತ್ಯಾಚಾರ್ಯರ ಗ್ರಂಥದಲ್ಲಿ ಕೊಟ್ಟಿರುವ ವೃತ್ತಿಯಲ್ಲಿ ಗುರ್ವಕ್ಷರ ವಿವರಣೆ ಹೀಗಿದೆ: —

"ದೀರ್ಘಾಕ್ಷರ ; ಒತ್ತಕ್ಷರದ ಹಿಂದಿನ ಹ್ರಸ್ವ-ದೀರ್ಘಾಕ್ಷರ ; ಬಿಂದು ವಿಸರ್ಗ ಕೂಡಿದ ಹ್ರಸ್ವ-ದೀರ್ಘಾಕ್ಷರ ; ಅರ್ಧಾಕ್ಷರದ ಹಿಂದಣ ಲಘುವೂ ಗುರ್ವಕ್ಷರವೆಂದು ತಿಳಿಯಬೇಕು. ಅಲ್ಲದೆ, ಪಾದಾಂತ್ಯದಲ್ಲಿ ಇರುವ ಲಘುವೂ ವಿಕಲ್ಪವಾಗಿ ಗುರುವಾಗುವುದು."[17] ಈ ಗ್ರಂಥಕಾರರು ಉದಾಹರಿಸಿದ

---

16 ಪಿಂಗಲ ಛಂದಶ್ಶಾಸ್ತ್ರ, ಹಲಾಯುಧ ಪ್ರಣೀತವೃತ್ತಿ.

17 ಪಂಡಿತ ಜೆ. ರಘುಪತ್ಯಾಚಾರ್ಯ, ಶ್ರೀ ನರಸಿಂಹರಾಜ ಕರ್ಣಾಟಕ ಛಂದೋರಾಜಂ, ಪು. ೬, (೧೯೨೬).

ಛಂದೋಂಬುಧಿಯ ಸೂತ್ರಗಳಲ್ಲಾಗಲೀ ಶ್ಲೋಕ ಸೂತ್ರದಲ್ಲಾಗಲೀ ಅರ್ಧಾಕ್ಷರದ ಹಿಂದಣ ಲಘುವು ಗುರುವಾಗುವುದೆಂಬ ವಾಸ್ತವಾಂಶವನ್ನು ತೋರಿಸಿಕೊಡದಿದ್ದರೂ ತಮ್ಮ ಅನುಭವದಿಂದ ಕಂಡು ವೃತ್ತಿಯಲ್ಲಾದರೂ ಸೇರಿಸಿ ವಿವರಿಸಿದುದು ಸ್ತುತ್ಯ.

ಶ್ರೀನಿವಾಸರಾಘವಾಚಾರ್ಯಕೃತ **"ಛಂದೋಮಾಲಿಕೆ"** ಎಂಬ ಗ್ರಂಥದ ಸಂಜ್ಞಾಧಿಕಾರದಲ್ಲಿ ಗುರ್ವಕ್ಷರ ವಿವರಣೆ ಹೀಗಿದೆ–

"ದೀರ್ಘವುಂ; ಅನುಸ್ವಾರದ–ವಿಸರ್ಗದ–ಸಂಯುಕ್ತಾಕ್ಷರದ–ಪದ್ಯಾರ್ಧದ ತುದಿಯ ವ್ಯಂಜನದ–ಪಿಂದಣ ಲಘು ಗುರುಸಂಜ್ಞೆಯಂ ಪಡೆವುವು"[18] ಇಲ್ಲಿ ಸಾಧಾರಣೀಕರಿಸಿ 'ವ್ಯಂಜನದ ಪಿಂದಣ ಲಘು' ಎಂದು ಹೇಳದೆ, "ಪದ್ಯಾರ್ಧದ ತುದಿಯ ವ್ಯಂಜನದ ಪಿಂದಣ ಲಘು" ಗುರುವಾಗುವುದೆಂದು ಹೇಳಿದೆ. ಇಂದಿನ ಹಲವು ಪ್ರಮುಖ ವಿದ್ವಾಂಸರು ಭಾವಿಸಿರುವಂತೆ ಅರ್ಧಾಕ್ಷರವು ಅದರ ಮುಂದಿನ ವ್ಯಂಜನದೊಂದಿಗೆ ಸೇರಿ ಸಂಯುಕ್ತಾಕ್ಷರವೆನಿಸುವುದೆಂದು ಈ ಗ್ರಂಥಕರ್ತರೂ ತಿಳಿದಿದ್ದುದರಿಂದ, ನಿರುಪಾಯತೆಯಿಂದ ಪದ್ಯಾರ್ಧದ ಕೊನೆಯ ವ್ಯಂಜನದ ಹಿಂದಿನ ಲಘುವು ಗುರುವಾಗುತ್ತದೆಂದು ಮಾತ್ರ ಹೇಳಿದುದು ಕಾಣುತ್ತದೆ.

ಜಯದೇವಚ್ಛಂದಸ್ಸಿನಲ್ಲಿ "ಸಂಯೋಗಾದಿ ಪರಃ" ಎಂಬ ಸೂತ್ರದಲ್ಲಿ 'ಆದಿ' ಎಂಬ ಪದವಿರುವುದರಿಂದ ಕವಿ ಇಲ್ಲಿ ವ್ಯಂಜನವನ್ನೂ ಕಲ್ಪಿಸಿಕೊಂಡಿರುವನೆಂದು ಹೇಳಲೆಡೆಯಿದೆ.

ವ್ಯಂಜನ ಸೇರಿದ ಲಘುವು ಗುರುವಾಗುವುದೆಂದು ಸ್ಪಷ್ಟವಾಗಿ ತಿಳಿಸುವ ಛಂದೋಗ್ರಂಥಗಳಿವೆ. ಕೆಳಗಿನವುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬಹುದು. ಹೇಮಚಂದ್ರನ ಸೂತ್ರಗಳಿವು—

'ವಾಂತೇ ಗ್ವಕ್ರಃ' (ಪಾದಾಂತ್ಯದ ಲಘು ವಿಕಲ್ಪವಾಗಿ ಗುಗುವಾಗುವುದು. ಗುರುಚಿಹ್ನೆ ವಕ್ರರೇಖೆ)

---

18 ಶ್ರೀನಿವಾಸರಾಘವಾಚಾರ್ಯ, ಛಂದೋಮಾಲಿಕೆ.

‘ಃಕ ಃಪ ವಿಸರ್ಗಾನುಸ್ವಾರ ವ್ಯಂಜನಾಹ್ರಾದಿ ಸಂಯೋಗೇ” (ಜಿಹ್ವಾಮೂಲೀಯ, ಉಪಧ್ಮಾನೀಯ, ವಿಸರ್ಗ, ಅನುಸ್ವಾರ, ವ್ಯಂಜನ, ಹ್ರಾದಿವರ್ಜಿತ ಸಂಯುಕ್ತಾಕ್ಷರ ಪರವಾಗಿರುವ ಹ್ರಸ್ವವು ಗುರುವಾಗುವುದು.) ‘ಹ್ರ’ ಮುಂತಾದವು ಬಂದರೆ ಶಿಥಿಲದ್ವಿತ್ವವಾಗುವುದರಿಂದ ಅವರ ಹಿಂದಣ ಲಘುವು ಗುರುವೆನಿಸುವುದಿಲ್ಲವೆಂದು ಇಲ್ಲಿ ಸೂಚನೆಯಾಗಿದೆ. ಉದಾ:— ‘ಪರಿಹ್ರಸತಿ ಚಿತ್ತಧೈರ್ಯಂ’ ಎಂಬಲ್ಲಿ ‘ಹ್ರ’ ಎಂಬುದರ ಹಿಂದಣ ಲಘುವು ಗುರುವಾಗುವುದಿಲ್ಲ. ‘ದೀರ್ಘಪ್ಲುತೌ’ (ದೀರ್ಘಪ್ಲುತಗಳು ಗುರುವೆನಿಸುವವು)[19]

ಜಯಕೀರ್ತಿಯ ಸೂತ್ರೋಲ್ಲೇಖ ಈ ಕೆಳಗಿನದು—

ದೀರ್ಘೋ ಗುರುಃ ಪ್ಲುತೋಪಿ
ಹ್ರಸ್ವೋ ಲಘುರೇಷ ವಾ ಗುರುಃ ಪಾದಾಂತೇ
ಸಂಯೋಗ ವಿಸರ್ಗಾನು
ಸ್ವಾರ ವ್ಯಂಜನಪರೋ ಗುರುಃ ಸ್ಯಾತ್ ಹ್ರಸ್ವಃ[20]

ಈ ನಿರೂಪಣೆಯ ಪ್ರಕಾರ ದೀರ್ಘವೂ ಪ್ಲುತವೂ ಗುರು; ಪಾದಾಂತ್ಯದ ಹ್ರಸ್ವವು ಲಘು ಅಥವಾ ಗುರು; ಸಂಯೋಗ, ವಿಸರ್ಗ, ಅನುಸ್ವಾರ, ವ್ಯಂಜನ, —ಇವುಗಳಲ್ಲಿ ಯಾವುದಾದರೂ ಪರವಾಗಿ ಬಂದ ಹ್ರಸ್ವವು ಗುರು.

ಅಭಿನವ ಮಂಗರಾಜಕವಿ ತನ್ನ ನಿಘಂಟುವಿನಲ್ಲಿ ಗುರ್ವಕ್ಷರವನ್ನು ತಿಳಿಸಿದುದುಂಟು. ಅದು ಹೀಗೆ.

ಮುಂದೆ ವೊತ್ತಕ್ಕರವಿರಲ್ ಪಿಂದೆ ಗುರುವಕ್ಕು
ಬಿಂದು ದೀರ್ಘಂ ವಿಸರ್ಗಂ ವ್ಯಂಜನಂ ಗುರುವು........[21]

ಈ ಉದಾಹರಣಗಳಿಂದ ವ್ಯಂಜನ ಸೇರಿದ ಹ್ರಸ್ವವು ಗುರುವಾಗುವುದೆಂದು ಪೂರ್ವಿಕರು ಹೇಳಿರುವುದು ಸ್ಪಷ್ಟವಾಗುವುದು. ಹೇಳದಿದ್ದುದೇ ಸರಿಯೆಂಬುದು

19 ಹೇಮಚಂದ್ರ–ಛಂದೋನುಶಾಸನಂ, ಸೂ. ೫, ೬, ೭, ೮.

20 ಜಯಕೀರ್ತಿ–ಛಂದೋನುಶಾಸನಂ, ಸೂ. ೪.

21 ಮಂಗರಾಜ–ಅಭಿನವಾಭಿಧಾನಂ, ಪು. ೧೦೭, ಪ. ೧೯.

ಸರಿಯೆನಲು ಸಾಧ್ಯವಿಲ್ಲ. ಇನ್ನು ಛಂದೋಂಬುಧಿಯಲ್ಲಿ ನಿರೂಪಿತವಾಗಿರುವ ವಿಚಾರ :—

ಹಿಂದೆ ಉದಾಹರಿಸಿರುವ ಛಂದೋಂಬುಧಿಯ ಮೊದಲನೆಯ ಸೂತ್ರಾರ್ಥವನ್ನು (ಗುರುವಕ್ಕುಂ........) ಇಲ್ಲಿ ಪರಿಭಾವಿಸಿಕೊಳ್ಳೋಣ—"ಮುಂದೆ ಒತ್ತಕ್ಕರವಿದ್ದರೆ ಅದರ ಹಿಂದೆ ನಿಂತಿರುವ ಸ್ವೈಯಕ್ಕರವೂ (ಹ್ರಸ್ವ) ಗುರುವಾಗುವುದು. ಒತ್ತುಗಳಿಂದ ಗುರ್ವಕ್ಷರಗಳಾಗುತ್ತವೆ". ಇಲ್ಲಿ ಈ ಎರಡನೆಯ ಹೇಳಿಕೆಯ ಅರ್ಥವೇನು? ಮೊದಲನೆಯ ಹೇಳಿಕೆಯ ಪುನರುಕ್ತಿಯೇ? ಮೊದಲನೆಯ ವಾಕ್ಯದಲ್ಲಿ 'ಒತ್ತಕ್ಕರ' ಎಂಬುದಿದೆ. ಮತ್ತಿನ ವಾಕ್ಯದಲ್ಲಿ 'ಒತ್ತು' ಎಂಬುದಿದೆ. ಮೊದಲನೆಯ ವಾಕ್ಯದಲ್ಲಿ ಒತ್ತಕ್ಕರದ ಹಿಂದಿನ ಹ್ರಸ್ವವು ಗುರುವಾಗುವುದೆಂದು ಹೇಳಿದರೆ, ಎರಡನೆಯದರಲ್ಲಿ ಒತ್ತಿನಿಂದ (ಒತ್ತು ಸೇರಿದ ಹ್ರಸ್ವ ?) ಗುರುವಾಗುತ್ತದೆಂದು ಹೇಳಿದೆ. ಹಾಗಿದ್ದರೆ ಒತ್ತಕ್ಕರಕ್ಕೂ ಒತ್ತಿಗೂ ಭೇದವೇನು? ನೋಡಬೇಕು. 'ಒತ್ತು' ಎಂದರೆ ಸಮೀಪ, ತಗಲಿಸಿದುದು, ಎತ್ತರಿಸುವ ಸಾಧನ (ಒತ್ತು-ಆಕ್ರಮಣೇ, To Press, ನದೀತೀರೇ ಚ). 'ಕಲ್ಲು' ಎಂಬ ಶಬ್ದದಲ್ಲಿ 'ಲ್ಲು' ಎಂಬುದು ಒತ್ತಕ್ಕರ. 'ಲು' ಎಂಬುದರ ಅಡಿಯಲ್ಲಿ ಕೊಟ್ಟ ಚಿಹ್ನೆ 'ಒತ್ತು'. ಆ ಶಬ್ದವನ್ನು ವಿಂಗಡಿಸಿ ಬರೆದಾಗ 'ಕಲ್‌ಲು' ಎಂದಾಗುವುದಷ್ಟೆ. ಇಲ್ಲಿ ನಡುವೆ ಕಾಣಿಸುವ 'ಲ್' ಎಂಬ ಅರ್ಧಾಕ್ಷರವು 'ಒತ್ತು'; ಅದು ಅದರ ಹಿಂದಿನ ಲಘುವನ್ನು ಎತ್ತರಿಸುವ ಸಾಧನ. 'ಕಲ್' ಎಂಬಲ್ಲಿ 'ಲ್' ಎಂಬುದು ಬರೆವಣಿಗೆಯಲ್ಲಿ ಒತ್ತಿನಂತೆ ತೋರದಿದ್ದರೂ ಉಚ್ಚಾರಣೆಯಲ್ಲಿ 'ಕ' ಎಂಬುದರೊಂದಿಗೆ ಸೇರಿ, ಅದರ ಒತ್ತು ಎನಿಸುವುದು. ಹೀಗೆ ಒತ್ತೆಂಬುದು ಹಿಂದಿನ ಅಕ್ಷರದೊಂದಿಗೆ ಸೇರಿರುವ ಅರ್ಧಾಕ್ಷರ. ಈ ಒತ್ತು ಸೇರಿದ ಅಕ್ಷರವು ಗುರುವೆನಿಸುವುದೆಂಬುದರಲ್ಲಿ ಸಂದೇಹವಿರದು. ಇದನ್ನೇ ನಾಗವರ್ಮನು 'ಗುರುವೊತ್ತುಗಳಿಂದಪ್ಪುದು ನಿರಂತರಂ' ಎಂದು ಹೇಳಿದ್ದಾನೆ. ಒತ್ತಕ್ಕರ ಮತ್ತು ಒತ್ತು—ಎಂಬಿವುಗಳ ಪರಿಣಾಮದಿಂದ ಮಾತ್ರಾಗಣನೆಯಲ್ಲಿ ತೋರುವ ವೈಚಿತ್ರ್ಯ ವಿಶೇಷವನ್ನು ನಿರೂಪಿಸುವ ಉದ್ದೇಶದಿಂದಲೇ 'ಗುರುವಕ್ಕುಂ........' ಎಂಬ ಸೂತ್ರವನ್ನು ನಾಗವರ್ಮನು ಹೇಳಿರುವಂತೆ ತೋರುತ್ತದೆ. ಆ ಮೇಲೆ ಎರಡನೆಯ ಸೂತ್ರ

ದಲ್ಲಿ ಗುರ್ವಕ್ಷರದ ಎಲ್ಲಾ ಲಕ್ಷಣಗಳನ್ನು ಕುರಿತು ಸೂತ್ರಮಾಡಿ ತಿಳಿಸಿದುದು ಕಾಣುತ್ತದೆ. ಎರಡನೆಯ ಸೂತ್ರದ ಅರ್ಥವನ್ನು ತಿಳಿಯೋಣ :—

ಈ ಸೂತ್ರದಲ್ಲಿ ಆರು ಲಕ್ಷಣಗಳಿಂದ ಗುರುವೆನಿಸುವ ಅಕ್ಷರಗಳನ್ನು ನಾಗವರ್ಮನು ತಿಳಿಸಿದ್ದಾನೆ—ಬಿಂದು, ವಿಸರ್ಗಂ, ವ್ಯಂಜನಂ, ಒಂದಿದ ದಡ್ಡಕ್ಕರಂ, ಪದಾಂತ್ಯಂ, ದೀರ್ಘಂ—ಬಂದೊಡೆ ಗುರು. ಈ ಸೂತ್ರಕ್ಕೆ ಅರ್ಥಮಾಡಿದ ವಿದ್ವಾಂಸರು 'ವ್ಯಂಜನವೊಂದಿದ ದಡ್ಡಕ್ಕರಂ' ಎಂದು ಕೂಡಿಸಿ ಓದಿಕೊಂಡರು. ವಿವೇಚಿಸಿದರೆ ದಡ್ಡಕ್ಕರ (ಒತ್ತಕ್ಕರ-Double Consonant) ಎಂಬುದು ವ್ಯಂಜನಕ್ಕೆ ವ್ಯಂಜನ ಮತ್ತು ಸ್ವರ ಸೇರಿಯೇ ಆಗುವಾಗ 'ವ್ಯಂಜನ ಸೇರಿದ ದಡ್ಡಕ್ಕರ' ಎಂದು ಹೇಳುವ ಆವಶ್ಯಕತೆಯಿರಲಿಲ್ಲವೆಂದು ತೋರದಿರದು. ಆದುದರಿಂದ ಇಲ್ಲಿ ಬಿಂದು, ವಿಸರ್ಗಂ-ಎಂದು ಒಂದೊಂದಾಗಿ ಬೇರ್ಪಡಿಸಿ ತಿಳಿದುಕೊಳ್ಳುವಂತೆ 'ವ್ಯಂಜನಂ' ಎಂಬುದನ್ನೂ ಬೇರೆಯಾಗಿ ತಿಳಿದುಕೊಳ್ಳ ಬೇಕಾಗಿತ್ತು. 'ಒಂದಿದ ದಡ್ಡಕ್ಕರಂ' ಎಂದುದರಲ್ಲಿಯೂ ಔಚಿತ್ಯವಿದೆ. ಒಂದದೆ, ಬೇರೆ ಬೇರೆಯಾಗಿ ಬರೆದ ವಡ್ಡಕ್ಕರವಾದರೆ ಅದು ವ್ಯಂಜನ ಸೇರಿದ ಅಕ್ಷರವೆಂದೆನಿಸಬಹುದಾದುದರಿಂದ ಒಟ್ಟಿಗೆ ಕೂಡಿಸಿರುವ 'ಒತ್ತಕ್ಕರ' ಎಂಬುದು ಔಚಿತ್ಯಪೂರ್ಣವೇ ಆಗಿದೆ. ಹೀಗೆ ನಾಗವರ್ಮನು ಕೂಡ, ಗುರ್ವ ಕ್ಷರವಾಗುವ ಮುಖ್ಯ ಆರು ಲಕ್ಷಣಗಳನ್ನು ಸ್ಪಷ್ಟವಾಗಿ ತಿಳಿಸಿಯೇ ಇರುತ್ತಾ ನೆಂಬುದನ್ನು ಇಲ್ಲಿ ವಿವರಿಸಿದಂತಾಯಿತು.

ಛಂದೋಗ್ರಂಥಗಳಲ್ಲಿ ಹೇಳಿದ ದೃಷ್ಟಿಯಿಂದಲ್ಲದೆ ಶುದ್ಧ ವ್ಯಾವಹಾರಿಕ ದೃಷ್ಟಿಯಿಂದಲೇ ನೋಡಿದರೂ ಗಳ್, ವರ್-ಇತ್ಯಾದಿ ವ್ಯಂಜನಯುಕ್ತ ಹ್ರಸ್ವಾಕ್ಷರಗಳನ್ನು ಉಚ್ಚಾರಣೆ ಮಾಡಲು ಎರಡು ಮಾತ್ರಾಕಾಲವೇ ಹಿಡಿ ಯುತ್ತದೆಂಬುದನ್ನು ಲಕ್ಷ್ಯದಲ್ಲಿಟ್ಟು, ಅವನ್ನು ಗುರುವಾಗಿ ಎಣಿಸುವುದೇ ಸರಿಯೆನ್ನಬಹುದು; ಅಲ್ಲದೆ ಹಾಗೆನ್ನುವುದು ಯೋಗ್ಯವೂ ಅನಿವಾರ್ಯವೂ ಆಗಿದೆ.

ಗುರು-ಲಘು ಪಲ್ಲಟ

ಮಾತ್ರಾಲಯಕ್ಕೆ ಹೊಂದಿ ತಾಳದ ಗತಿಗೆ ಒಡಂಬಡುವ ಕೀರ್ತನೆ ಗಳಲ್ಲಿಯೂ ಯಕ್ಷಗಾನ ಪದಗಳಲ್ಲಿಯೂ ಶೋಭಾನೆಗಳ ಸೊಲ್ಲುಗಳಲ್ಲಿಯೂ

ಅಂಶಲಯಾನುಸಾರಿಯಾಗಿರುವ ತ್ರಿಪದಿ–ಸಾಂಗತ್ಯಾದಿ ಜಾನಪದ ಗೀತಗಳಲ್ಲಿಯೂ ಹೊಸ ಮಟ್ಟಿನ ಛಂದಸ್ಸುಗಳ ಕವಿತಾರಚನೆಯಲ್ಲಿಯೂ ಗುರು–ಲಘು ಅಕ್ಷರನಿಯಮಕ್ಕೆ ತುಂಬ ಅಪವಾದಗಳು ಕಾಣಿಸುತ್ತಿವೆ. ಅಲ್ಲಿ ಹಿಂದೆ ವಿವರಿಸಿದ ಲಕ್ಷಣಗಳಂತೆ ಗುರುವಾಗಬೇಕಾದ ಅಕ್ಷರವು ಲಘುವಾಗಿಯೂ ಲಘುವಾಗಿರಬೇಕಾದುದು ಗುರುವಾಗಿಯೂ ಕಾಣಿಸುವುದಿದೆ. ಇದನ್ನು 'ಗುರು–ಲಘು ಪಲ್ಲಟ' ಎನ್ನಬಹುದು. ಕೆಳಗಿನ ಉದಾಹರಣೆ ನೋಡಿ—

ಬರ್ದಿಲಂ ಸಗ್ಗಕ್ಕೆ ಪೆಸರ್
ಗರ್ದುಃಗೆಸೆವಮರ್ದಮುರ್ದುಃವಳ್ಳಿ ಕಂಪಲರ್ದುದೆನ
ಲ್ಕೆರ್ದೇವಾಯುರ್ದಿಮುರ್ತ್ತೆ ಪೊದ
ಟ್ಠಿರ್ದೇಯೆಂಬಿವು ಸಹಜ ಶಿಥಿಲವೃತ್ತಿಯನಾಳ್ಗುಂ[22]
"ಪಿಂಜುಂಗುತ್ತಿರ್ಪ ತ್ರಿಶೂಲದಿಂ"
"ಪ್ರಣಯುದೆ ತ್ರಿಪಥಗೆ"[23]

(ಒತ್ತಕ್ಕರದ ಹಿಂದಿನ ಲಘುವು ಗುರುವಾಗದಿರುವ ಮೇಲಿನ ಉದಾಹರಣ ಪದ್ಯದಲ್ಲಿ ಅಂತಹ ಲಘುವಿಗೆ ಲಘುಚಿಹ್ನೆಯನ್ನಿಟ್ಟಿದೆ.)

ಶಿಥಿಲದ್ವಿತ್ವದ ಹಿಂದಣ ಲಘುವಿಗೆ ಉಚ್ಚಾರಣೆಯಲ್ಲಿ ಎರಡು ಮಾತ್ರಾಕಾಲ ತಗಲದಿರುವುದರಿಂದ ಅದು ಲಘುವಾಗಿಯೇ ಉಳಿಯುವುದು. ಶಿಥಿಲವೃತ್ತಿಯು ಸಂಯುಕ್ತಾಕ್ಷರವನ್ನು ತೇಲಿಸಿ ಉಚ್ಚರಿಸುವುದೇ ಇದಕ್ಕೆ ಕಾರಣ. ಇಂತಹ ಪ್ರಯೋಗಗಳನ್ನು ಮಾರ್ಗಕಾವ್ಯಗಳಾದ (Classical) ಚಂಪೂ ಗ್ರಂಥಗಳಲ್ಲಿ ಹೆಚ್ಚಾಗಿ ಕಾಣಬಹುದು.

---

22 ಕೇಶಿರಾಜ, ಶಬ್ದಮಣಿ ದರ್ಪಣ ಸೂತ್ರ, ೫೫.

23 ಅದೇ, ಸೂ. ೬೯ರ, ಪ್ರಯೋಗ.

ಕೆಲವೆಡೆ ಲಾಕ್ಷಣಿಕವಾಗಿ ಶಿಥಿಲವೃತ್ತಿಯಿಲ್ಲದ ಸಂಯುಕ್ತಾಕ್ಷರದ ಹಿಂದಿನ ಲಘುವು ಗುರುವಾಗದೆ ಇರುವುದೂ ಪ್ರಯೋಗದಲ್ಲಿದೆ. ಅಂತಹ ಕಡೆ ಆ ಸಂಯುಕ್ತಾಕ್ಷರವನ್ನು ಶಿಥಿಲದ್ವಿತ್ವವೆಂದೇ ಪರಿಗಣಿಸಿ, ಅದನ್ನು ತೇಲಿಸಿ ಉಚ್ಚರಿಸಬೇಕಾಗುತ್ತದೆ. ಷಟ್ಪದಿ ಕಾವ್ಯಗಳಲ್ಲಿ, ಕೀರ್ತನೆಗಳಲ್ಲಿ, ಹಾಗೂ ಹಳ್ಳಿಯ ಹಾಡುಗಳಲ್ಲಿ ಇವಕ್ಕೆ ಉದಾಹರಣೆಗಳಿವೆ—

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ................[24]

ಚೋರ ನಿಂದಿಸಿ ಶಶಿಯ ಬೈದಡೆ

ಕ್ಷೀರವನು ಕ್ಷಯರೋಗಿ ಹಳಿದಡೆ............[25]

ನಾಗವರ್ಮನ ಛಂದೋಂಬುಧಿಯಲ್ಲಿಯೂ ಅದೊಂದು ಕಂದಪದ್ಯದಲ್ಲಿ ಇಂತಹ ಉದಾಹರಣೆ ಸಿಗುತ್ತದೆ—

ನಿಜದಿಂ ಬಂದೊಡೆ ಸಿಂಗಂ

ಗಜ ದೀರ್ಘಂ ಜಿಂದು ವೃಷಭ ವ್ಯಂಜನ ಶರಭಂ [26]

ಸಂಸ್ಕೃತದ ಛಂದಸ್ಸಿನಲ್ಲಿ ಸಂಯುಕ್ತಾಕ್ಷರದ ಹಿಂದಿನ ಲಘುವಿಗೆ ವಿಕಲ್ಪವಾಗಿ ಲಘುಭಾವವನ್ನು ಹೇಳುವ ಸೂತ್ರವಿದೆ. ಆದರೆ, ಆ ಸಂಯುಕ್ತಾಕ್ಷರವು ಪಾದದ ಆದಿಯಲ್ಲಿ ಇರಬೇಕು:-

ಪಾದಾದಾವಿಹ ವರ್ಣಸ್ಯ ಸಂಯೋಗಃ ಕ್ರಮಸಂಜ್ಞಕಃ
ಪುರಃಸ್ಥಿತೇನ ತೇನ ಸ್ಯಾಲ್ಲಘುತಾಪಿ ಕ್ವಚಿದ್ಗುರೋಃ[27]

ಅಂದರೆ, ಪಾದದ ಆದಿಯಲ್ಲಿ ಸಂಯುಕ್ತಾಕ್ಷರವಿದ್ದರೆ ಅದಕ್ಕೆ 'ಕ್ರಮ' ಎಂಬ

---

24 ಕುಮಾರವ್ಯಾಸ ಭಾರತ, ಪೀಠಿಕಾ ಸಂಧಿ, ಪ. ೧೯.
25 ಅದೇ ,, ಪ. ೨೨.
26 ನಾಗವರ್ಮ, ಛಂದೋಂಬುಧಿ.
27 ಕೇದಾರಭಟ್ಟ, ವೃತ್ತರತ್ನಾಕರ, ಶ್ಲೋ. ೧೦.

ಸಂಜ್ಞೆಯಿದೆ. ಕೆಲವು ಬಾರಿ ಈ ಕ್ರಮಾಕ್ಷರದ ಹಿಂದಿನ ಲಘುವು ಗುರುವಾಗದೆ ಇರುತ್ತದೆ. ಇದಕ್ಕೆ ಉದಾಹರಣವಾಗಿ ಅದೇ ಗ್ರಂಥದಲ್ಲಿ ಅಲ್ಲೇ ಈ ಶ್ಲೋಕವಿದೆ—

ತರುಣಂ ಸರ್ಷಪ ಶಾಕಂ
ನವೋದನಂ ಪಿಚ್ಛಿಲಾನಿ ಚ ದಧೀನಿ।
ಅಲ್ಪವ್ಯಯೇನ ಸುಂದರಿ
ಗ್ರಾಮ್ಯಜನೋ ಮಿಷ್ಟಮಶ್ನಾತಿ

ಇಲ್ಲಿ ನಾಲ್ಕನೆಯ ಪಾದದ ಆದ್ಯಕ್ಷರವಾದ 'ಗ್ರಾ' ಎಂಬುದು ಸಂಯುಕ್ತಾಕ್ಷರವಾಗಿದ್ದರೂ ಅದರ ಹಿಂದಿನ 'ರಿ' ಎಂಬುದು ಗುರ್ವಕ್ಷರವಾಗಿಲ್ಲ. 'ಗ್ರಾ' ಎಂಬುದಕ್ಕೆ ಇಲ್ಲಿ ಶೈಥಿಲ್ಯ ಬಂದಿದೆ. ಸಂಸ್ಕೃತಕ್ಕೆ ಅನ್ವಯಿಸಿ ಹೇಳಿರುವ ಈ ಕ್ರಮ ಸಂಜ್ಞೆಯನ್ನು ಕನ್ನಡಕ್ಕೂ ಹೊಂದಿಸಿದರೆ, ಆಗ ಹಿಂದೆ ಉದಾಹರಿಸಿದ ಕೆಲವು ಪ್ರಯೋಗಗಳು ನಿರ್ದುಷ್ಟಗಳೆಂದು ಭಾವಿಸಬಹುದು.

ಪ್ರಾಕೃತದ ಛಂದಸ್ಸನ್ನು ವಿವರಿಸುವ 'ಪ್ರಾಕೃತ ಪೈಂಗಳ'ದಲ್ಲಿ ಹಾಗೂ ಜಯಕೀರ್ತಿಯ ಛಂದೋನುಶಾಸನದಲ್ಲಿ ಗುರ್ವಕ್ಷರವು ಲಘುವಾಗುವುದನ್ನು ಹೇಳಿದೆ:—

ಸಂಯೋಗಪರೋಽಪಿ ಜಾತು ವರ್ಣಃ
ಶೈಥಿಲ್ಯಾಲ್ಲಘುತಾಮುಪೈತಿ ತಸ್ಮಾತ್
ಭಾಷಾವಿಷಯೇಽನ್ಯಥಾ ಜಗದ್ವಾ
ಙ್ಯೋದೋದೌ ತು ಗುರೂ ಲಘೂ ಚ ದೃಷ್ಟೌ[28]

ಇದರ ಪ್ರಕಾರ ಶಿಥಿಲದ್ವಿತ್ವದ ಹಿಂದಿನ ಲಘುವು (ಹಿಂದೆ ವಿವರಿಸಿದಂತೆ) ಲಘುವೆನಿಸುವುದಲ್ಲದೆ ಏಕಾರ ಓಕಾರಗಳು ಇತರ ಭಾಷೆಗಳಲ್ಲಿ ಮಾತ್ರವಲ್ಲ, ಸಂಸ್ಕೃತದಲ್ಲಿಯೂ ವಿಕಲ್ಪವಾಗಿ ಲಘುಗಳೆನಿಸುವವು.

---

28 ಜಯಕೀರ್ತಿ, ಛಂದೋನುಶಾಸನಂ, ಶ್ಲೋ. ೫.

ಪ್ರಾಕೃತದಲ್ಲಿ ಸಂಯುಕ್ತ ರೇಫ-ಹಕಾರಗಳ ಪೂರ್ವವರ್ತಿಯೆನಿಸುವ ಲಘುವೂ ಬಿಂದುಯುಕ್ತ ಇಕಾರ ಹಿಕಾರಗಳೂ ಕೆಲವೆಡೆ ಲಘುಗಳಾಗುತ್ತವೆ. ಏಕಾರ ಓಕಾರಗಳು ಶುದ್ಧವಾಗಿರಲಿ, ವರ್ಣಮಿಶ್ರವಾಗಿರಲಿ, ಕೆಲವೆಡೆ ಲಘುವಾಗಿರುತ್ತವೆ.[29] ಇವಕ್ಕೆ ಅದೇ ಗ್ರಂಥದಲ್ಲಿ ಕೊಟ್ಟಿರುವ ಉದಾಹರಣೆ :—

"ಮಾಣಿಣಿ ಮಾಣಹಿ ಕಾಇ
ಫಲ ಏ ಓ ಜೇ ಚರಣೇ ಪಡುಕಂ ತ . ."
'ಪರಿಪ್ರಸತಿ ಚಿತ್ತಧೈರ್ಯಂ"

ಸಂಸ್ಕೃತದಲ್ಲಿಯೂ ಓಕಾರಕ್ಕೆ ಲಘುತ್ವವಿದೆಯೆಂದು ಹೇಳಿ, ಅಲ್ಲಿ ಈ ಕೆಳಗಿನ ಉದಾಹರಣೆ ಕೊಟ್ಟಿವೆ—

'ತಂ ಪ್ರಣಮಾಮಿ ಚ ಬಾಲ ಗೋಪಾಲಂ' (ಇಲ್ಲಿ ಓಕಾರ ಲಘು)
'ರೌದ್ರ್ಯಾಯೈ ನಮೋ ನಿತ್ಯಾಯೈ' (ಇಲ್ಲಿಯೂ ಓಕಾರ ಲಘು)
'ಸುಂದರಿ ಪ್ರದಯಿ' (ಇಲ್ಲಿ 'ಪ್ರ' ಎಂಬುದರ ಹಿಂದಿನ ಹ್ರದಸ್ವ ಲಘು.)

ಪ್ರಾಕೃತದಲ್ಲಿ ಇಷ್ಟೇ ಅಲ್ಲ, ತ್ವರಿತಪಠನದಿಂದ ಎರಡು ಗುರುಗಳನ್ನು ಒಂದೇ ಗುರುವಾಗಿಯೂ ಮೂರು ಲಘುಗಳನ್ನು ಒಂದೇ ಲಘುವಾಗಿಯೂ ಎಣಿಸುವ ಸಂದರ್ಭಗಳೂ ಇವೆ. ಉದಾ—

ಅರೇರೇ ಬಾಹಹಿ ಕಾಹ್ಣ ಣಾಬ
ಛೋಡಿ ಡಗಮಗಕುಗತಿಣ ದೇಹಿ

ಇಲ್ಲಿ 'ರೇರೇ' ಎಂಬಿವನ್ನು ತ್ವರಿತ ಪಠನದಿಂದ ಒಂದೇ ಗುರುವಾಗಿ ಎಣಿಸಬೇಕೆಂದೂ ದ್ವಿತೀಯ ಪಾದದಲ್ಲಿ ಬರುವ 'ಡಗಮ' ಎಂಬ ಮೂರಕ್ಷರಗಳಿಗೆ

---

[29] ಪ್ರಾಕೃತ ಪೈಂಗಲ, ಸೂ. ೫, ವಿವರಣೆ.

ಒಂದೇ ಲಘುವಿನ ಮೌಲ್ಯಗಣನೆಯೆಂದೂ 'ದೇಹಿ' ಎಂಬಲ್ಲಿ ಒಂದು ದೀರ್ಘ ಮಾತ್ರವೆಂದೆಣಿಸಬೇಕೆಂದೂ 'ಪ್ರಾಕೃತ ಪೈಂಗಳ'ದಲ್ಲಿ ತಿಳಿಸಿದೆ. ಪ್ರಾಕೃತ ಪೈಂಗಳದಲ್ಲಿ ಹೇಳಿದ ಮೇಲಿನ ವಿಚಾರಗಳು ಹಿಂದೀ ಛಂದಸ್ಸಿನಲ್ಲಿ ಪೂರ್ಣ ಮಟ್ಟಿಗೂ ಕನ್ನಡದ ಛಂದಸ್ಸಿನಲ್ಲಿ ಕೆಲವುಮಟ್ಟಿಗೂ ಅನ್ವಯವಾಗುತ್ತವೆ.

ಕನ್ನಡದ ಹಾಡುಗಬ್ಬಗಳಲ್ಲಿಯೂ ಕೆಲವೆಡೆ ದೀರ್ಘಕ್ಕೆ ಹ್ರಸ್ವದ ಬೆಲೆಯೂ ಹ್ರಸ್ವಕ್ಕೆ ದೀರ್ಘದ ಅಥವಾ ಪ್ಲುತದ ಬೆಲೆಯೂ ಕೆಲವೆಡೆ ಒಂದು ಅಕ್ಷರಕ್ಕೆ ನಾಲ್ಕು ಅಥವಾ ಐದು ಮಾತ್ರೆಯ ಬೆಲೆಯೂ ಗೋಚರಿಸುತ್ತದೆ. ಅಂತಹ ಕೆಳಗಿನ ಕೆಲವು ಉದಾಹರಣೆಗಳು ಗುರು-ಲಘು ಗಣನೆಯ ತತ್ತ್ವವನ್ನರಿಯಲು ಸಹಾಯಕವಾಗಬಲ್ಲವು.

೧. ಕುಮಾರವ್ಯಾಸಭಾರತದಲ್ಲಿ ಅಲ್ಲಲ್ಲಿ ಬರುವ 'ಗದುಗಿನ ವೀರ ನಾರಾಯಣ' ಎಂಬ ಪಾದಾಂಶವನ್ನು ಪರಿಶೀಲಿಸಿ. 'ನಾರಾಯಣ' ಎಂಬುದೇ ಅಲ್ಲಿ ಉದ್ದಿಷ್ಟಪದ. ಆದರೆ 'ರಾ' ಎಂದು ದೀರ್ಘವಾಗಿ ತೆಗೆದುಕೊಂಡಾಗ ಅದು ಎರಡು ಮಾತ್ರೆಯದಾಗಿ ಛಂದಸ್ಸು ಕೆಡುವುದರಿಂದ ಅಲ್ಲಿನ ದೀರ್ಘವನ್ನು ಹ್ರಸ್ವವಾಗಿ ಪರಿಗಣಿಸಲಾಗಿದೆ. ಈ ಹ್ರಸ್ವವು ದೀರ್ಘಕ್ಕೆ ಬಂದಿರುವ ಹ್ರಸ್ವವೆಂದು ಅಥವಾ ಒಂದು ಮಾತ್ರೆಯ ಮೌಲ್ಯವುಳ್ಳ ದೀರ್ಘಾಕ್ಷರವೆಂದು ತಿಳಿಯುವುದು ಉಚಿತ. ಈ ಗುರು ಲಘು ವಿಕಲ್ಪವು ಷಟ್ಪದಿ ಕಾವ್ಯಗಳಲ್ಲಿ ಕಾಣಿಸಿಕೊಂಡಿದೆಯೆಂದು ಈ ಉದಾಹರಣದಿಂದ ತಿಳಿದುಕೊಳ್ಳಬಹುದು. ಕೆಳಗಿನ ಪದ್ಯಗಳನ್ನು ನೋಡಿ.

೨. ಲೋಕಕಾ । ನಂದಮಯ । ಏಕಸ್ವ । ರೂಪನೇ ।

| ೫

ಗೋಕರ್ಣ । ದೊಳು ನಿಂತು । ಸ್ಥಿರವೆನಿಸಿ । ದೇ ।

| ೧

ಏಕೋ ದೇ । ವ ಎಂಬೆ । ಪಂಚಾಕ್ಷ । ರವ ಜಪಿಸಿ

I ೩

ಗೋಕರ್ಣ । ವಾಸ ಶ್ರೀ । ಮಹಾಬಲೇ । ಶ್ವರನೇ । (ಉದಯರಾಗ)

೩. ಎಂಟನೆ । ಅಂಕೆಯ । ನೆನಪಿಡು । ತ ।

ತಂಟೆಗ । ಳಿಲ್ಲದೆ । ಅಡಿಯಿಡು । ತ ।

ಗೆಂಟನೊ । ಳೈದುವ । ಸಮಯದ । ಲೀ ।

ಒಂಟಿಯಾ । ಗದೆ ನಡು । ಪಿಡಿಯುತ । ಲೀ ॥ (ಜೆಡೆ ಹೆಣೆವ ಹಾಡು)

೪. ಧರಣಿ । ಮಂಡಲ । ಮಧ್ಯ । ದೊಳಗೆ ।

ಮೆರೆಯು । ತಿಹ ಕ । ರ್ಣಾಟ । ದೇಶದಿ

ಇರುವ ಕಾಳಿಂಗ । ನೆಂಬ । ಗೊಲ್ಲನ

ಪರಿಂಬ । ನಾನೆಂತು । ಪೇಳು ವೆ । (ಗೋವಿನ ಹಾಡು)

೫. ಬುದ್ಧಿ ಯಲಿ । ತನುಮನವ । ತಿದ್ದಿ ಕೊ । ಳ್ಳಲು ಬೇಕು ।

ಮುಪ್ಪಾ ಗ । ಬೇಕು । ಮುನಿಯೋಗಿ । ಗಳಿಗೆ ॥

ಮಧ್ವಮ । ತಾಬ್ಧಿಯೊಳು । ಮೀನಾಗಿ । ರಲು ಬೇಕು

ಶುಷ್ಕ ನಾ । ಗಿರಬೇಕು । ಕರಣತ್ರಯ । ಗಳಲಿ ।

(ಎರಡು ಮಾತ್ರೆಗಳಿಂದ ಹೆಚ್ಚಿನ ಬೆಲೆಯುಳ್ಳ ಅಕ್ಷರಗಳಿಗೆ ಅವುಗಳಿಗಾಗುವ ಮಾತ್ರೆಯ ಲೆಕ್ಕವನ್ನು ಆ ಆ ಅಕ್ಷರದ ಮೇಲುಗಡೆ ಇಲ್ಲಿ ಕಾಣಿಸಿದೆ.)

ಈ ಮೂರು ಮಾತ್ರೆ, ನಾಲ್ಕು ಮಾತ್ರೆಯುಳ್ಳ ಅಕ್ಷರವನ್ನು ಕುರಿತು ಪ್ರೊ॥ ತೀ. ನಂ. ಶ್ರೀಯವರು ಹೀಗೆಂದಿರುವರು—

"ಪ್ಲುತವನ್ನು 'ತs' ಎಂಬಂತೆ ಗುರುತಿಸುವುದು ಈಚೆಗೆ ರೂಢಿಯಾಗಿದೆ.

ಕೆಲವು ವೇಳೆ ಒಂದು ಅಕ್ಷರದ ಕಾಲ ಮೂರು ಮಾತ್ರೆಗೂ ಮೀರುವುದುಂಟು. ಮೂರಕ್ಕಿಂತಲೂ ಹೆಚ್ಚು ಮಾತ್ರೆಗಳ ಬೆಲೆ ಒಂದು ಅಕ್ಷರಕ್ಕೆ ಇರುವಲ್ಲಿ ಅದನ್ನು 'ಮೇ' ಹೀಗೆ ಗುರುತಿಸಬಹುದು[30]. ಮೇಲಿನ ಉದಾಹರಣೆಗಳಲ್ಲಿ ಸಂಯುಕ್ತಾಕ್ಷರದ ಹಿಂದಣ ಲಘುವೂ ಆಕಾರ-ಓಕಾರಗಳೂ ಬಿಂದು ಸೇರಿದ ಅಕ್ಷರಗಳೂ ಕನ್ನಡದಲ್ಲಿ ಲಘುವಾದುದನ್ನು ಕಾಣಬಹುದು. ಅಲ್ಲದೆ, ಲಘುವಿಗೆ ಕೆಲವೆಡೆ ಎರಡು ಮಾತ್ರೆಗಳಿಂದ ಐದು ಮಾತ್ರೆಗಳ ವರೆಗಿನ ಮೌಲ್ಯ ಬಂದುದನ್ನೂ ಕಾಣಬಹುದು.

ಅಂಶಲಯ ಪ್ರತೀತವೆನಿಸುವ ಕೆಲವು ಪದ್ಯೋದಾಹರಣೆಗಳು ಕೆಳಗಿವೆ. ಅವುಗಳಿಂದ ಗುರು-ಲಘುಪಲ್ಲಟದಲ್ಲಿ ಇನ್ನೂ ಒಂದೆರಡು ಸ್ವಾರಸ್ಯ ವಿಚಾರಗಳನ್ನರಿಯಬಹುದು—

೫. ಉದರ ವೈ । ರಾಗ್ಯವಿ । ದು ನಮ್ಮ ।
ಪದುಮ ನಾ ।....ಭನಲಿ । ಲೇಶ ಭ । ಕುತಿಯಿಲ್ಲ ॥
ಉದಯ ಕಾ । ಲದೊಳೆದ್ದು । ಗಡಗಡ । ನಡುಗುತ ।

ನದಿಯೊಳು । ಮಿಂದೆವೆಂದು । ಹಿಗ್ಗುತಲಿ ।

ಮದಮತ್ಸ । ರ ಕ್ರೋಧ । ಒಳಗೆ ತುಂ । ಬಿಟ್ಟುಕೊಂಡು
ಬದಿಯೊಳಿ । ದ್ದವರಿಗಾ । ಶ್ಚರ್ಯ ತೋ । ರುವದು ॥ (ಪುರಂದರದಾಸರ ಕೀರ್ತನೆ)

೬. ರನ್ನನ । ಹೊನ್ನನ । ಜನ್ನನು । ಯ್ಯನ ಚತು
ರೋನ್ನತ । ಕವಿತಾ....। ರ್ಣವನ ॥

ಸನ್ನುತ । ಕವಿಸಂಪ । ರಾಜ ಮೊದ । ಲಾದರ
ಚೆನ್ನಡಿ । ಗಳಿಗೆರ । ಗುವೆನು ॥ (ಶಿಶುಮಾಯಣ-ಕವಿಚರಿತೆ ಪುಟ ೪೦೬).

---

30 ತೀ. ನಂ. ಶ್ರೀಕಂಠಯ್ಯ—ಸಮಾಲೋಚನ, "ಮಾತ್ರೆ, ಮುಡಿ, ಪದ್ಮಗಣ" ಎಂಬ ಲೇಖನ ನೋಡಿ.

೭. ಮುತ್ತಿನಾ | ಕಂಬಕ್ಕೆ | ಪಚ್ಚೆಯಾ | ಬಯಿನೇಣು |
ಅಚ್ಚ ಮ | ಲ್ಲಿಗೆಯ | ಮುಡಿದವಳು–ನಂದಗೋಪಿ
ಅರ್ಥಿಯಲಿ | ಮೊಸರ | ಕಡೆದಳು ‖ (ಹಳ್ಳಿಯ ಹಾಡು)

೮. ಮೊಸರ | ಕಡೆದರೆ | ಶಿಶುವೆದ್ದು | ಕರೆದಿತು |
ಕುಸುಮನಾ | ಭ ನೇ | ಶರಣೆನುತ–ಕಡೆದರೆ
ಮೊಸರಿಂದ | ಬೆಣ್ಣೆ | ಹೆರ ಬಕ್ಕು ‖ (ಹಳ್ಳಿಯ ಹಾಡು)

೯. ಸುಡಿಮು ಜೇ | ಸತ್ತಾಗ| ದುಡಿದುಡಿದು| ಸತ್ತಾಗ |
ಜನಕ ಹಿ | ಗ್ಗಿನ ಹಾಡು | ನೀಡಾಂವಾ....
ಬಳ್ಳ್ಯಾಗ | ಕುಣಿದೀದಿ | ಬೆಳಕಿನ್ಯಾಗ | ತಣಿದೀದಿ |
ಹೂವಾಗಿ | ಅರಳೀದಿ | ಗುರುದೇವ....‖ (ಬೇಂದ್ರೆ–ಸಖೀಗೀತ)

೧೦. ಹೃದಯ ಕ | ರ್ರನೆ ಕರಗಿ | ನದಿಯಾಗಿ | ಸನ್ನಿಯ
ಉದಯ ವಾ | ಗು ವಂತೆ | ಕೋಗಿಲೇ |
ಅದಯರಿ ದ್ದವರೆಲ್ಲ | ಸದಯರಾ | ಗುವಂತೆ |
ಕೂಗುವಿ | ಯಾ ಹೇಳು | ಕೋಗಿಲೇ ‖ (ಸಖೀಗೀತ)

ಮೇಲೆ ಕೊಟ್ಟಿರುವ ಪದ್ಯಗಳು ಅಂಶಗಣ ನಿಬದ್ಧವಾಗಿರುವುದರಿಂದ ಅವುಗಳಲ್ಲಿ ಬರುವ ಅಕ್ಷರಗಳ ಗುರು-ಲಘು ಮೌಲ್ಯವನ್ನರಿಯುವುದು ಸುಲಭವಾಗಿಲ್ಲ. ಲಿಪಿರೂಪವನ್ನಷ್ಟೆ ನೋಡಿ ಗುರು-ಲಘುಗಳನ್ನು ಗಣಿಸುವ ಕ್ರಮ ಹಾಡುಗಬ್ಬದಲ್ಲಿ ಸರಿಯೆನಿಸದು. ಹಾಡುವ ಮಟ್ಟು, ತಾಳದ ಗತಿ–ಅಲ್ಲಿ ಲಕ್ಷಿಸತಕ್ಕ ವಿಷಯಗಳು. ಮೇಲಿನವು ವಿಷ್ಣುಗಣಪ್ರಧಾನವಾದ ಪದ್ಯಗಳಾದುದರಿಂದ ಅಲ್ಲಿ ಬರುವ ಗಣಗಳ ಮೂಲರೂಪ ಮೂರು ಗುರು (೧೧೧). ಆ ಮೂಲದ ಆದಿ ಗುರುವಿಗೆ ಮಾತ್ರ ಲಘುಗಳು ಎರಡು (||). ಉಳಿದವಕ್ಕೆ ಲಘುಗುರು ತಾರತಮ್ಯವಿಲ್ಲದೆ, ಒಂದೊಂದಕ್ಷರವಿರುವುದಷ್ಟೆ. ಆದುದರಿಂದಲೇ

ಮೇಲಿನ ಉದಾಹರಣ ಪದ್ಯಗಳಲ್ಲಿ, ಏಂದೆವೆಂದು, ಬಿಟ್ಟುಕೊಂಡು, ರಾಜವೊದ, ನಂದಗೋಪಿ—ಎಂಬಲ್ಲೆಲ್ಲ ಆದ್ಯಕ್ಷರವನ್ನು ಲಘುವಾಗಿ ಗಣಿಸಬೇಕು; ಅವು ಇರುವಂತೆ ಗುರುವಾಗಿ ಉಚ್ಚರಿಸಿದಾಗ, ರುದ್ರಗಣಗಳಾಗುವವಲ್ಲದೆ, ಪದ್ಯದ ಗತಿಗೂ ಭಂಗ ಬರುತ್ತದೆ. ರ ಕ್ರೋಧ, ಮೊಸರ, ಭನೇ, ಗು ವಂತೆ, ಎಂಬ ಗಣಾದ್ಯಕ್ಷರಗಳು ಎರಡು ಲಘುವಿನ ಬೆಲೆಯುಳ್ಳವು--ಅವನ್ನು ದೀರ್ಘವಾಗಿ ಉಚ್ಚರಿಸುವುದೂ ಇದೆ; ಆದರೆ ದೀರ್ಘವಾಗಿ ಉಚ್ಚರಿಸಿದಾಗ ಅರ್ಥವ್ಯಕ್ತಿಯ ಸೊಬಗು ಕೆಡುವುದರಿಂದ ಲಘುವಾಗಿಯೇ ಉಚ್ಚರಿಸಿ, ಇನ್ನೊಂದು ಲಘೂಚ್ಚಾರಣೆಯಷ್ಟು ವಿರಾಮವನ್ನು (ಮೌನವನ್ನು) ತಳೆಯುವುದು ಚೆಲ್ವು. ಪದ್ಯ ೫ ರಲ್ಲಿ ನಾಲ್ಕನೆಯ ಪಾದಾಂತ್ಯದಲ್ಲಿ ರುದ್ರಗಣವಿದೆ. ಆರನೆಯ ಪಾದಾಂತ್ಯದಲ್ಲಿ ಬ್ರಹ್ಮಗಣವಿದೆ. ೬ನೆಯ ಪದ್ಯದ ಎರಡನೆಯ ಮತ್ತು ನಾಲ್ಕನೆಯ ಪಾದಾಂತ್ಯ ಗಣಗಳು ಬ್ರಹ್ಮ. ಅಲ್ಲಿ 'ಕವಿತಾ' ಎಂದು ಬರುವಲ್ಲಿ ಉಚ್ಚಾರಣೆಗೆ ಇನ್ನೊಂದು ಅ ಕಾರವನ್ನು ಕೊನೆಗೆ ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.

ಮೇಲಿನವುಗಳಲ್ಲಿ ದಪ್ಪಕ್ಷರದಲ್ಲಿರುವ ಗಣಗಳನ್ನು ತ್ವರಿತೋಚ್ಚಾರಣೆಯಿಂದ ಕುಗ್ಗಿಸಿ, ಅಕ್ಷರ ಸಂಖ್ಯೆಯನ್ನು ಕಡಮೆಗೊಳಿಸಿ ವಿಷ್ಣುಗಣಕ್ಕೆ ಇಳಿಸಬೇಕಾಗುತ್ತದೆ:—**ಮುಡಿದವಳು**—ಮುಡಿದವ್ಳು, **ಅರ್ಥಿಯಲಿ**—ಅರ್ಥೀಲಿ, **ಶರಣೆನುತ**—ಶರಣೆನ್ತ, **ದುಡಿ ದುಡಿದು**—ದುಡ್ದುಡ್ದು, **ರ್ರನೆ ಕರಗಿ**—ರ್ರನೆ ಕರ್ಗಿ, **ಬೆಳಕಿನ್ಯಾಗ**—ಬೆಳ್ಕಿನ್ಯಾಗ (ಇಲ್ಲಿ ಎರಡೂ ದ್ವಿತ್ವಾಕ್ಷರಗಳನ್ನು ಶಿಥಿಲವಾಗಿ ಉಚ್ಚರಿಸಬೇಕು). ಮೇಲೆ ಉಧಾಹರಿಸಿದಂತಹ ಪದ್ಯಗಳ ಉಚ್ಚಾರಣೆಯಲ್ಲಿ ತ್ವರಿತ, ಶಿಥಿಲ, ಮಂದ (ವಿಲಂಬ) ಗತಿಗಳನ್ನು ಅನುಸರಿಸಬೇಕಾಗುವುದು ಸಹಜ. ಈ ಗತಿಗಳು ಇಂತಹ ಪದ್ಯಜಾತಿಯ ವೈಶಿಷ್ಟ್ಯಗಳು ಅಥವಾ ವೈಚಿತ್ರ್ಯಗಳೆಂದು ಹೇಳಬಹುದು.

ಮಾತ್ರಾಗಣಬದ್ಧವಾದ ಜಾತಿಯಲ್ಲಿ ಇಂತಹ ವೈಚಿತ್ರ್ಯ ಕಡಮೆ, ಅಂಶ

ಗಣದ ಪದ್ಯಗಳಲ್ಲಿ ಹೆಚ್ಚು. ಮೊದಲನೆಯದರಲ್ಲಿ ನಿಶ್ಚಿತ ಮಾತ್ರಾ ಸಂಖ್ಯೆಯ ಗಣಗಳಿರುವುದರಿಂದ ಅದರ ತಾಳಗತಿಯನ್ನು ಸುಲಭವಾಗಿ ತಿಳಿಯಬಹುದು. ಅಲ್ಲಿ ಪದ್ಯದಲ್ಲಿ ಬರುವ ಗಣಗಳು ಮೂರು ಮಾತ್ರೆಯವಾದರೆ ರೂಪಕತಾಳ ವಾಗುವುದು, ನಾಲ್ಕು ಮಾತ್ರೆಯವಾದರೆ ಏಕತಾಳ–ಆದಿತಾಳಗಳಾಗುವವು, ಐದು ಮಾತ್ರೆಗೆ ಜಂಪೆತಾಳ, ಮೂರು ಮತ್ತು ನಾಲ್ಕು ಮಾತ್ರೆಗಳ ಗಣಗಳಾದರೆ, ಅಷ್ಟತಾಳ–ತ್ರಿಪುಟತಾಳಗಳಿಗೆ ಒಪ್ಪುವುದು. ಪದ್ಯವು ಅಂಶಗಣನಿಬದ್ಧವಾಗಿದ್ದರೆ, ಅದಕ್ಕೆ ಇಂತಹ ತಾಳವೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ;ಯಾವ ತಾಳಕ್ಕೂ ಸಾಮಾನ್ಯವಾಗಿ ಅದನ್ನು ಅನುಗೊಳಿಸಬಹುದು. ಇದಕ್ಕೆ ಕಾರಣ, ಅದರ ಗಣಗಳನ್ನು ಕುಗ್ಗಿಸಲೂ ಹಿಗ್ಗಿಸಲೂ ಇರುವ ಅನುಕೂಲತೆ. ವಿಷ್ಣುಗಣವೊಂದಕ್ಕೆ ನಾಲ್ಕು ಮಾತ್ರೆಗಳಿಂದ ಆರುಮಾತ್ರೆಗಳ ವರೆಗಿನ ಮೌಲ್ಯವು ಬರುವುದರಿಂದ ಏಕ, ಜಂಪೆ, ರೂಪಕತಾಳಗಳಿಗೆ ಅದು ಹೊಂದಿಕೆಯಾಗಬಲ್ಲುದು ; ಅದನ್ನು ಇನ್ನಷ್ಟು ಹಿಗ್ಗಿಸಿ, ಅಷ್ಟತಾಳಕ್ಕೂ ಒಡಂಬಡಿಸಬಹುದು. ಹೀಗೆ ತಾಳಗಳಿಗೆ ಒಡಂಬಡಿಸುವಾಗ ಎಷ್ಟೋ ಗುರು-ಲಘು ಪಲ್ಲಟಗಳು ಆಗುವವು. ಅರ್ಥ–ಭಾವಗಳು ಕೆಡದಂತೆ ಅಂತಹ ಪಲ್ಲಟಗಳನ್ನು ಮಾಡಿಕೊಳ್ಳುವುದು ಉತ್ತಮ ಪಾಠಕರ ಜಾಣ್ಮೆ. ತಾಳಬದ್ಧವಾಗಿ ಅರ್ಥಯುಕ್ತವಾಗಿ ಅವನ್ನು ಹಾಡುವ ಉಚ್ಚಾರಣೆಗೆ ಅನುಸರಿಸಿ ಗುರುಲಘುಗಳನ್ನು ಗುರುತಿಸಿ, ಅವುಗಳ ಮಾತ್ರಾ ಮೌಲ್ಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ಆಗ ಗುರು-ಲಘು ಪಲ್ಲಟದ ವೈಚಿತ್ರ್ಯವನ್ನು ತಿಳಿದುಕೊಳ್ಳಲಾಗುತ್ತದೆ.

ಪಾತಂಜಲಿ ಮಹಾಭಾಷ್ಯದಲ್ಲಿ ಹೇಳುವ ಪ್ರಕಾರ ಇಂತಹ ಹ್ರಸ್ವದೀರ್ಘ ಪಲ್ಲಟವು ಸ್ವರದೋಷವೆನಿಸುವುದು. ದೀರ್ಘವು ಹ್ರಸ್ವವಾದರೆ 'ಅರ್ಧಕ' ವೆನಿಸುವುದು ; ಹ್ರಸ್ವವು ದೀರ್ಘವೆನಿಸಿದರೆ, 'ಧ್ಮಾತ'ವೆನಿಸುವುದು ; ತ್ವರಿತೋಚ್ಚಾರಣೆಗೆ ಒಳಪಟ್ಟು ಎರಡು ಮೂರು ಅಕ್ಕರಗಳಿಗೆ ಒಂದೇ ಅಕ್ಷರದ ಮೌಲ್ಯ ಬಂದರೆ 'ನಿರಸ್ತ' ಎನಿಸುವುದು ; ಸಾಮಗಾನದಂತೆ ಎಳೆದು ಹೇಳುವುದು 'ಪ್ರಗೀತ'ವೆನಿಸುವುದು. ಅಲ್ಲಿ ಸಂಸ್ಕೃತ ವ್ಯಾಕರಣ ದೃಷ್ಟಿಯಿಂದ ಇವು ದೋಷಗಳಾದರೂ ಪ್ರಯೋಗಪ್ರಧಾನವಾಗಿರುವ ಇತರ ಭಾಷೆಗಳಲ್ಲಿ ಇವು ಸಹಜ

ಗುಣಗಳು, ನಿರ್ದೋಷಗಳು ಅಲ್ಲದೆ, ಗೇಯತೆಯ ಸೊಬಗನ್ನು ಹೆಚ್ಚಿಸುವಂಥವು. ಇವು ಕವಿಗಳ ನಿಷ್ಪ್ರತಿಬಂಧಕವಾದ ರಚನಾವೈಖರಿಯ ಹಾಗೂ ಸ್ವತಂತ್ರವಾದ ಛಂದಸ್ಸಿನ ಅನುಸರಣೆಯನ್ನು ದ್ಯೋತಿಸುವಂಥವು.

ಪದ್ಯಪಾದಗಳಲ್ಲಿ ಹೀಗೆ ಗುರು-ಲಘುಗಳ ಮಾತ್ರಾವಹೌಲ್ಯ ಹೆಚ್ಚುಕಡಮೆಯಾಗಲು ಕಾರಣವೇನೆಂಬುದು ಛಂದಸ್ಸಿನಲ್ಲಿ ಮುಖ್ಯವಾಗಿ ಅರಿತುಕೊಳ್ಳಬೇಕಾದ ವಿಷಯ. ಯಾವ ತತ್ವದ ಆಧಾರದ ಮೇಲೆ ಗುರು ಲಘು ನಿರ್ಧಾರವಾಗಬೇಕೆಂಬುದನ್ನು ಅರಿಯದಿದ್ದ ಛಂದಶ್ಶಾಸ್ತ್ರಪರಿಚಯ ಅಪೂರ್ಣ. ಅದನ್ನು ಕುರಿತು ಪ್ರಾಕೃತಪೈಂಗಲದಲ್ಲಿ ಹೀಗೆ ವಿವರಣೆ ಮಾಡಿದೆ—

"ಯದಿ ದೀರ್ಘೋऽಪಿ ವರ್ಣೋ ಲಘುಚಿಹ್ನಯಾ ಪಠ್ಯತೇ ಸೋऽಪಿ ಲಘುಃ। ವರ್ಣೋऽಪಿ ತ್ವರಿತಂ ಪಠಿತೋ ದ್ವಿತ್ರಾನಪ್ಯೇಕಂ ಜಾನೀಹಿ, ಏಕತ್ವೇನೈವ ತಸ್ಯ ಗಣನಂ ಕಾರ್ಯಮಿತ್ಯರ್ಥಃ [31] "

ದೀರ್ಘಾಕ್ಷರವಾಗಿದ್ದರೂ ಲಘುವಾಗಿ (ಒಂದು ಮಾತ್ರೆಯ ಕಾಲದಲ್ಲಿ) ಉಚ್ಚರಿಸಲ್ಪಡುವುದಾದರೆ ಅದು ಲಘುವೆನಿಸುವುದು. ತ್ವರೆಯಾಗಿ ಪಠಿಸುವಾಗ ಎರಡು ಅಥವಾ ಮೂರು ಮಾತ್ರೆಗಳಿಗೆ ಒಂದೇ ಮಾತ್ರೆಯಾಗುವುದೂ ವ್ಯವಹಾರವೇ ಆಗಿದೆ.

ಮಾತ್ರೆಯ, ಗುರುಲಘುವಿನ, ಗಣದ, ಪಾದದ ಹಾಗೂ ಪದ್ಯದ ಮಾನದಂಡ ಶ್ರವ್ಯತೆಯೇ ಆಗಿದೆಯೆಂಬುದನ್ನು ಆಂಗ್ಲ ವಿದ್ವಾಂಸರೂ ಒಪ್ಪಿದ್ದಾರೆ—

'Hearing tests metre'

'Poetry utters words in time'

'All verse is supposed to be read aloud, and in considering it we must study sound rather than sight, phonetics rather than orthography' [32]

---

31 ಪ್ರಾಕೃತ ಪೈಂಗಲ, ಸೂ. ೮, ವ್ಯಾಖ್ಯಾನ.

32 T. S. Omond, A study of Metre, P. 22, (1920).

ಕನ್ನಡದ ಹೊಸ ಛಂದಸ್ಸಿನ ಮಟ್ಟುಗಳಲ್ಲಿಯೂ ಇಂತಹ ಗುರುಲಘು ಪಲ್ಲಟಗಳನ್ನೂ ವಿಕಲ್ಪಗಳನ್ನೂ ಮಾತ್ರಾಪೌಲ್ಯದ ಏರಿಕೆಗಳನ್ನೂ ಹೇರಳವಾಗಿ ಕಾಣಬಹುದು. ಅವನ್ನು ಕಂಡುಹಿಡಿವ ಬಗೆಗೆ ಮೇಲಿನ ಉದಾಹರಣ ವಿವರಣಗಳು ಬೆಳಕೀಯದಿರಲಾರವು. ಇದುವರೆಗಣ ವಿವರದಿಂದ ಸಾರಾಂಶವಾಗಿ ಈ ಕೆಳಗಿನ ವಿಚಾರಗಳನ್ನು ಮನದಟ್ಟು ಮಾಡಿಕೊಳ್ಳಬಹುದು.

ಅಂಶಲಯ ಪ್ರಧಾನವಾಗಿರುವ ದೇಶೀಚ್ಛಂದಸ್ಸಿನಲ್ಲಿ, ತಾಳದ ಗತಿಗೆ ಒಡಂಬಡುವ ಮಾತ್ರಾಛಂದಸ್ಸಿನಲ್ಲಿ ಹಾಗೂ ಇವೆರಡೂ ಸಮ್ಮಿಳಿತವಾಗಿರುವ ಹೊಸ ಛಂದಸ್ಸಿನಲ್ಲಿ ಒಂದು ಅಕ್ಷರವು ಹ್ರಸ್ವವೋ ದೀರ್ಘವೋ (ಲಘುವೋ ಗುರುವೋ) ಎಂಬ ನಿರ್ಣಯವಾಗುವುದು ಅದರ ಲಿಖಿತರೂಪದಿಂದಲ್ಲ, ಪದ್ಯದಲ್ಲಿ ನಿಯತಸ್ಥಾನವನ್ನು ಸೇರಿಕೊಂಡು ಅದರ ನಡೆಗೆ ಅನುಗುಣವಾಗುವ ಉಚ್ಚಾರಣೆಯಿಂದ. ಈ ಉಚ್ಚಾರಣೆಯನ್ನೇ 'ಶ್ರವ್ಯತೆ' ಎನ್ನಬಹುದು. ಹಾಡುಗಬ್ಬದಲ್ಲಂತೂ ಹಿಂದೆ ವಿವರಿಸಿದಂತೆ ಶ್ರವ್ಯತೆಯೇ ಪದ್ಯದ ಸರ್ವಸ್ವ. ಶ್ರವ್ಯತೆಯೇ ಪ್ರಾಣ. ಶ್ರಾವ್ಯವಾಗಿರದ ಹಾಡು ಹಾಡಲ್ಲ. ಶ್ರವ್ಯತೆಯೆಂಬುದು ಪಾಠಕರ ಮತ್ತು ಶ್ರೋತೃಗಳ ಕುತೂಹಲಕಾರಿ ಹೃದಯವನ್ನು ಅರಳಿಸುವುದು; ಮನವನ್ನು ತಣಿಸುವುದು, ಮಣಿಸುವುದು, ಕುಣಿಸುವುದು. ಶ್ರವ್ಯತೆಯ ಸಾರ್ವಭೌಮಾಶ್ರಯದಲ್ಲಿ ಗುರು–ಲಘು ಅಕ್ಷರಗಳು ಬೇಕಾದಂತೆ ಹಣಿದು, ಮಾಯಾವಿಗಳಂತೆ ಯಾವ ರೂಪಕ್ಕೂ ತಿರುಗಿಕೊಳ್ಳುವವು. ಓದುಗಬ್ಬದಲ್ಲಾದರೆ ಗುರು ಲಘುಗಳಿಗೆ ತಮ್ಮ ನಿಜವಾದ ಬೆಲೆ; ಅಲ್ಲಿ ಅವು ಮಣಿಯುವು, ಪಲ್ಲಟಗೊಳ್ಳವು. ನಿರ್ದಿಷ್ಟ ಸಾಮಾನ್ಯನಿಯಮಗಳಿಂದ ಸೂತ್ರನಿರೂಪಿತವಾಗುವ ಕಟ್ಟುಪಾಡಿಗೆ ಒಳವಡುವುದರಿಂದ ಅವಕ್ಕೆ ಅಲ್ಲಿ ಸ್ವಯಂಪ್ರಭುತ್ವವಿದೆ. ಗುರು ಲಘುಗಳು, ಗಣಗಳು, ಪಾದಗಳು ತಂತಮ್ಮ ವ್ಯಾಪ್ತಿಯಲ್ಲಿ ಪೂರ್ಣತೆಯನ್ನು ತಾಳಿರುವುದರಿಂದ ಅವು ಅಲ್ಲಿ, ಎಂದರೆ ಮಾರ್ಗ ಕಾವ್ಯದಲ್ಲಿ, ತಲೆತಗ್ಗಿಸುವಂತಿಲ್ಲ; ಮಾತ್ರಾಪೌಲ್ಯದಲ್ಲಿ ಸಂಕೋಚವನ್ನಾಗಲಿ ವಿಸ್ತರಣೆಯನ್ನಾಗಲಿ ತಾಳುವಂತಿಲ್ಲ. (ಅಲ್ಲಿ ಪ್ಲುತಕ್ಕೆ ಮಾತ್ರೆ ಎರಡೇ.) ಹಾಡುಗಬ್ಬದಲ್ಲಿ ಮಾತ್ರ ಗುರುಲಘುಗಳು ಅದರ ಶ್ರವ್ಯತೆಯ ಕತ್ವಕ್ಕೆ ಬಾಗಿ ಕೆಲವೆಡೆ ಒಂದು ಬೇರೊಂದಾಗುವ, ಕೆಲವೆಡೆ ಇದ್ದೂ ಇಲ್ಲದಂತೆ

ಕಾಣುವ ಕಣ್ಣುಕಟ್ಟನ್ನು ಮರೆದು ಸ್ವವಿಷಯದಲ್ಲಿ ನಿರಪೇಕ್ಷ–ನಿಸ್ಸಂಗ ವೃತ್ತಿಯನ್ನು ತಾಳುತ್ತವೆ. ಈ ವಿವರಿಸಿದ ಶ್ರವ್ಯತೆಯು ನಾದದ, ಅರ್ಥದ, ಭಾವದ, ತಾಳದ ಲಯವನ್ನು ಹೃದಯಂಗಮವಾಗಿ ಪ್ರತಿಬಿಂಬಿಸುತ್ತದೆ.

ಹಾಡೊಂದನ್ನು ಹಾಡುವಾಗ ಅದು ಪ್ರಾರಂಭವಾಗಿ ಕೊನೆಗೊಳ್ಳಲು ನಿಯತವಾಗುವ ಕಾಲದ ಅಂತರವಿರುವುದಷ್ಟೆ. ಆ ಅಂತರದಲ್ಲಿ ಹೊರ ಹೊಮ್ಮುವ ನಾದವಿಶೇಷದ ಪರಿಣಾಮವನ್ನು '**ನಾದಲಯ**' ವೆನ್ನಬಹುದು. ಹಾಡಿನಲ್ಲಿ ಮುಖ್ಯವಾದ ರಮಣೀಯಾಂಶವಿದು. ಹಾಡಿನ ಉಚ್ಚಾರಣೆಯಲ್ಲಿ ಅಡಗಿದ ಅರ್ಥವನ್ನೂ ಭಾವವನ್ನೂ ಪರಿಗಣಿಸಿದಾಗ ಅವು ಕೂಡ, ಒಂದು ಸಮಗ್ರತೆಯನ್ನು ನಿಯತ ಕಾಲದಲ್ಲಿ ವ್ಯಕ್ತಪಡಿಸುವುದರಿಂದ ಅವನ್ನು 'ಅರ್ಥ ಲಯ–ಭಾವಲಯ'ವೆನ್ನಬಹುದು. ಈ ನಾದ–ಅರ್ಥ–ಭಾವಗಳೊಡನೆ ನಿಯತ ತಾಳದ ಗತಿಯೂ ಸೇರಿಕೊಂಡಿರುತ್ತದೆ. ನಿಶ್ಚಿತ ಮಾತ್ರಾಗಣನೆಯಿಂದ ಹಾಡಿನ ಸಾಹಿತ್ಯಾಂಶವು ಒಡಮೆರೆದು ತಾಳವು ಆವರ್ತನೆಗೊಂಡಂತೆಲ್ಲ ತಾಳದ ಲಯಪ್ರತೀತಿಯುಂಟಾಗುವುದು. ತಾಳದ ಗತಿ ಆಯಾ ಹಾಡಿನಲ್ಲಿ ನಿಶ್ಚಿತ ಅಕ್ಷರಗಳ ಉಚ್ಚಾರಣೆಗೆ ಹೊಂದಿ ಸಾಗಿದರೆ ಮಾತ್ರ, ಆ ಹಾಡಿನಲ್ಲಿ **ತಾಳಲಯ** ವಿದೆಯೆಂದು ಹೇಳಬಹುದು. ಆ ತಾಳಗಳ ಪೆಟ್ಟು ಲಯದ ಅಕ್ಷರಗಳನ್ನು ತಪ್ಪಿ ಬೀಳುತ್ತಿದ್ದರೆ, ತಾಳ "**ಅವಲಯ**" ಎನಿಸುವುದು. ಹೀಗೆ ಶ್ರವ್ಯತೆಯಿಂದ ನಿಬದ್ಧವಾಗುವ ಲಯದ ಸಾಮರಸ್ಯವೇ ಹಾಡುಗಳ ಸರ್ವಸ್ವವಾದುದರಿಂದ ಸಂದರ್ಭಾನುಸಾರವಾಗಿ ಅಥವಾ ರಚನಾವೈಖರಿಗನುಗುಣವಾಗಿ ಹಾಡುಗಳಲ್ಲಿ ಬರುವ ಗುರುವು ಲಘುವಾಗುವುದು, ಲಘುವು ಗುರುವಾಗುವುದು. ಈ ಗುರು ಲಘು ಸಂಯೋಗವು ಗಣನೆಗೆ ಒಳಗಾದಾಗ ಗಣವೆನಿಸುವುದು. ಗಣಗಳಿಂದ ಕೂಡಿ ಗತಿವಡೆದಾಗ ಪಾದವಾಗಿ ಪದ್ಯವಾಗುವುದು (ಪದ ಗತೌ). ಪದ್ಯರಚನೆಯ ಕೂಲಂಕಷ ವಿಷಯವೇ ಛಂದಸ್ಸು.

ಕವಿಕರ್ಮಾಂಬುದಮೊತ್ತಲುಂ ಕವಿಯೆ ಕಾವ್ಯಾಲಾಪ ಮೇಘಸ್ವನಂ
ದಿವಮುಂ ಶಬ್ದಿಸೆ ಕಾವ್ಯದೀಪ್ತಿ ತಟಿದಾಶ್ಲಿಷ್ಟಂ ರಸಸ್ಯಂದಿ ವ
ರ್ಷ ವಿಶೇಷಂ ಜನತಾ ಮನೋಜಗದಶೇಷಾತ್ತಂ ಲಯಂಗೊಂಬವೋಲ್
ಕವಿತಾವಾರಿಧಿ ಪೆರ್ಚೆ ವೀಚಿನಿಚಯಂ ಗೈಗೇಗಳುಂ ಸ್ಪರ್ಧೆಯಿಂ ||

(ಕವಿ–ಕನೀಯಂ)

ಪದ್ಯರಚನೆಯ ರಹಸ್ಯ

(ಪದ್ಯಲಕ್ಷಣ-ರಚನಾ ಪ್ರಭೇದ—ಅನುವಾದ ಪದ್ಯ-ರಚನಾಭ್ಯಾಸ ಕ್ರಮ—ವಿವಿಧ ಛಂದಃ ಪರಿವರ್ತನೆಗಳ ರಹಸ್ಯ.)

'ಪದ್ಯ' ಎಂಬುದನ್ನು ಲಾಕ್ಷಣಿಕರು ಪದ್ಯಕಾವ್ಯವೆಂಬ ಅರ್ಥದಲ್ಲಿ ಪ್ರಯೋಗಿಸಿರುವಂತೆ ತೋರುತ್ತದೆ. ಅದರ ಪ್ರಯೋಜನ, ಬಾಹ್ಯಾಂತಃಸ್ವರೂಪ, ವೈಶಿಷ್ಟ್ಯ, ರಚನೆಗೆ ಕಾರಣ—ಮುಂತಾದ ಅಂಶಗಳನ್ನು ಕವಿರಾಜಮಾರ್ಗವು ಹೀಗೆ ಸ್ಪಷ್ಟೀಕರಿಸಿದೆ—

ಪದ್ಯಂ ಸಮಸ್ತ ಜನತಾ
ಹೃದ್ಯಂ ಪದ-ವಿದಿತ-ಪಾದ-ನಿಯಮ-ನಿವೇದ್ಯಂ
ವಿದ್ಯಾ ಪಾರ ಪರಾಯಣ
ಮಾದ್ಯಂ ಸದ್ವೃತ್ತಿ ವೃತ್ತ ಜಾತ್ಯಾಯತ್ತಂ[1]

ಪದ್ಯವು '**ಸಮಸ್ತ ಜನತಾಹೃದ್ಯಂ**' ಆಗಿರುವಂಥದೆಂದು ಅದರ ಪರಿಣಾಮವನ್ನು ಅಥವಾ ಪ್ರಯೋಜನವನ್ನು ಮೊದಲಾಗಿ ಇಲ್ಲಿ ತಿಳಿಸಿದಂತಾಗಿದೆ. ಹೀಗೆ ಹೃದ್ಯವಾಗಲು ಕಾರಣ-ಅದು ನಾದಾತ್ಮಕವಾಗಿಯೂ ಸಾಹಿತ್ಯಾತ್ಮಕವಾಗಿಯೂ ಇರುವುದೇ ಆಗಿದೆ. ಶಬ್ದಮಾಧುರ್ಯದಿಂದ ಅರ್ಥಸೌಂದರ್ಯದಿಂದ ಅದು ಪಂಡಿತ ಪಾಮರರೆಲ್ಲರಿಗೂ ಮನೋಜ್ಞವಾಗುವುದು. "**ಪದವಿದಿತ ಪಾದನಿಯಮ ನಿವೇದ್ಯಂ**" ಇದು ಪದ್ಯದ ಎರಡನೆಯ ಲಕ್ಷಣ. ಅದು ಪದಗಳಿಂದ ಪ್ರಸಿದ್ಧವಾದ ಪಾದಗಳ ನಿಯಮದಿಂದ ಗ್ರಾಹ್ಯವಾಗುವುದು—ಎಂಬೀ ವಿವರಣೆ ಅದರ ಬಾಹ್ಯಸ್ವರೂಪದ ನಿರೂಪಣೆಯಾಗಿದೆ; ಪಾದನಿಯಮವೂ ಪದ್ಯದ ಮುಖ್ಯವಾದ ಬಾಹ್ಯ ಲಕ್ಷಣ. '**ವಿದ್ಯಾಪಾರ ಪರಾಯಣಂ**' ಎಂಬುದು ಪದ್ಯದ ಮೂರನೆಯ ಲಕ್ಷಣ. ವಿದ್ಯೆಯು ಎಲ್ಲೆಯನ್ನೈದಿರುವುದು ಅಥವಾ ಪರಿಪೂರ್ಣವಾದ ವಿದ್ಯೆಯ ಪರಿಣಾಮದಿಂದಲೇ

---

1 ಶ್ರೀ ವಿಜಯ—ಕವಿರಾಜಮಾರ್ಗ, ಪ್ರಥಮ ಪರಿಚ್ಛೇದ, ಪದ್ಯ ೩೦.

ಪ್ರಕಟವಾಗುವುದು-ಎಂಬೀ ಲಕ್ಷಣವು ಪದ್ಯ ರಚನೆಗೆ ಕಾರಣವಾಗಿರುವ ವಿದ್ವತ್ತನ್ನು ನಿರೂಪಿಸುತ್ತದೆ. '**ಆದ್ಯಂ**' ಎಂಬುದು ಪ್ರಾಚೀನತೆಯ ಸೂಚನೆ. ಸಾಹಿತ್ಯದ ಪ್ರಾರಂಭ ಸ್ವರೂಪವು ಪದ್ಯಾತ್ಮಕವೆಂಬೀ ಅಭಿಪ್ರಾಯವನ್ನು ಈ ಶಬ್ದವು ಪುಷ್ಟೀಕರಿಸುತ್ತದೆ. "**ಸದ್ವೃತ್ತಿ ವೃತ್ತ ಜಾತ್ಯಾಯತ್ತಂ**" ಸದ್ವೃತ್ತಿಯಿಂದ-ಅಂದರೆ ರಸವಿಶೇಷವನ್ನು ಪ್ರತಿಪಾದಿಸುವ ಸಂದರ್ಭಗಳಿಂದ ಕೂಡಿದುದಾಗಿ, ವೃತ್ತ-ಜಾತಿ ಆಯತ್ತವಾದುದು. ವರ್ಣಗಣ ನಿಬದ್ಧವಾದ ವೃತ್ತಗಳಿಂದಲೂ ಮಾತ್ರಾಗಣನಿಬದ್ಧವಾದ ರಚನೆಗಳಿಂದಲೂ ಕೂಡಿದುದು. ಹೀಗೆ ಈ ಕಂದಪದ್ಯದಲ್ಲಿ ಪದ್ಯಕಾವ್ಯದ ಲಕ್ಷಣಗಳಾಗಿ ಅರ್ಥ, ಅಲಂಕಾರ, ರಸ, ಛಂದೋಯುಕ್ತತೆ ಮುಂತಾದವನ್ನೆಲ್ಲ ತಿಳಿಸಿದಂತಾಗಿದೆ.

ಪದ್ಯರಚನೆಯಲ್ಲಿ ಪ್ರಾಸಬದ್ಧತೆಯನ್ನು ಉತ್ತಮ ಕವಿತಾಶಕ್ತಿಯ ಒರೆಗಲ್ಲೆಂದು ಅಥವಾ ಲಕ್ಷಣವೆಂದು ಕನ್ನಡದ ಕವಿಗಳೂ ಲಾಕ್ಷಣಿಕರೂ ಮಾನ್ಯಮಾಡಿದ್ದಾರೆ.

ನುತ ಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ[2]

ಪ್ರಾಸೆಂಬುದು (ಪ್ರ+ಅಸು) ಪ್ರಕರ್ಷವೆನಿಸುವ ಪ್ರಾಣ, ಅದೇ ಪದ್ಯ ರಚನೆಯ ಶಕ್ತಿ-ಎಂಬ ಅಭಿಪ್ರಾಯ ಲಾಕ್ಷಣಿಕರದು. ಪ್ರಾಸಿಲ್ಲದ ಪದ್ಯ ನಿರ್ಜೀವವೇ ಸರಿ—

ಉಸಿರಬೀಡದ ತನುವವೊಲ್ ಭಾ
ವಿಸಲುಂ ಪ್ರಾಸಿಲ್ಲದಿರ್ಪ ಪದಪದ್ಯಂಗಳ್
ಒಸೆದದನು ಪೇಟಿಕೆ ಕೇಳಿದ
ರಸಿಕರ್ಗಾಯುಷ್ಯ ಮಾನಹಾನಿಗಳಕ್ಕುಂ[3]

ಕನ್ನಡ ಜಾನಪದ ಕವಿವರನಾದ ಸರ್ವಜ್ಞನು ಪ್ರಾಸಾಕ್ಷರಕ್ಕೆ ಕೊಟ್ಟಿರುವ ಮಹತ್ವವನ್ನು ಈ ತ್ರಿಪದಿಯಲ್ಲಿ ಕಾಣಬಹುದು—

---

2 ಅದರಲ್ಲೇ ದ್ವಿತೀಯ ಪರಿಚ್ಛೇದ, ಪದ್ಯ ೩೦.

3 ಈಶ್ವರಕವಿ—ಕವಿಜಿಹ್ವಾಬಂಧನ.

ಪ್ರಾಸಿಲ್ಲದಕ್ಕರವ ತಾಸು ಹಾಡಿದರೇನು
ಸಾಸಿವೆ ಸುಣ್ಣ ಹದಮಾಡಿ ಕಣ್ಣಿಗೆ
ಪೂಸಿಕೊಂಡಂತೆ–ಸರ್ವಜ್ಞ

ಪ್ರಾಸಿಲ್ಲದ ರಚನೆ ಕುರುಡು ಎಂದು ಸರ್ವಜ್ಞನ ಅಭಿಪ್ರಾಯ. ಆ ಕುರುಡುತನವು ತನಗೆ ತಾನೇ ಮಾಡಿಕೊಂಡ ಹಾಗೆ–ಎಂದು ಆತನು ಹೇಳುತ್ತಾನೆ. ಇನ್ನೊಂದುಕಡೆ ಬೇರೊಬ್ಬನು ಹೇಳಿರುವ ನುಡಿಯಿದು—

ಎರಡನೆಯಕ್ಕರ ಕೊಳಿಕೆಯ
ಸರಿಗೆಗಳಿಂ ಸಮೆದ ಪದ್ಯಕಂಠಿಕೆ ಕವಿತಾ
ತರುಣಿಯ ಮಂಗಳ ಸೂತ್ರಕೆ
ದೊರೆ.........................[4]

ದ್ವಿತೀಯಾಕ್ಷರ ಪ್ರಾಸವೆಂಬುದು ಕೊಳಿಕೆಯುಳ್ಳ ಸರಿಗೆ. ಇದರಿಂದ ಮಾಡಿರುವ ಪದ್ಯವೆಂಬ ಕಂಠಿಸರವು ಕವಿತೆಯೆಂಬ ಸ್ತ್ರೀಯ ಕೊರಳಿನ ಮಂಗಳ ಸೂತ್ರಕ್ಕೆ ಸಮಾನವಾದುದು–ಎಂದು ಇಲ್ಲಿ ಅಭಿಮತವಾಗಿದೆ. ಆಂಗ್ಲ ವಿದ್ವಾಂಸರೂ ಪ್ರಾಸಕ್ಕೆ ಮಹತ್ವವನ್ನು ಹೇಳಿದ್ದಾರೆ.

When a poet rhymes well, he has mastered his medium thoroughly.[5]

ಪದ್ಯವನ್ನು ರಚನೆಯ ದೃಷ್ಟಿಯಿಂದ ಮೂರು ವಿಧವಾಗಿ ಪರಿಗಣಿಸಬಹುದು :—ಸ್ವತಂತ್ರ, ಅನುಕರಣ ಮತ್ತು ಅನುವಾದ.

ಕವಿ ತನ್ನ ಸಂಸ್ಕಾರಾನುಗುಣವಾಗಿ ಭಾವಿಸಿದ ವಿಷಯವನ್ನು ಸ್ವಪ್ರತಿಭೆಯಿಂದ ಪದ್ಯರೂಪವಾಗಿ ಪ್ರಕಟಿಸಿದಾಗ ಅದು ಸ್ವತಂತ್ರ ಪದ್ಯವೆನಿಸುವುದು. ಇತರ ಕವಿಗಳ ವಿಚಾರದಿಂದ ಪ್ರೇರಿತನಾಗಿ ಅವೇ ವಿಚಾರಗಳನ್ನೊಳಗೊಂಡು

---

4 ಕನ್ನಡಿಯಂ–ಅನನ್ಯದೇಶೀ ಕೋಶ, ಪೀಠಿಕೆ ಪದ್ಯ ೬.

5 Arthur Melville Clark–Studies in Literary Modes, Page 176.

ತನ್ನಲ್ಲಿ ಮೂಡಿದ ನವೀನ ವಿಚಾರಗಳನ್ನು ಅವಕ್ಕೆ ಕೂಡಿಸಿ, ಪದ್ಯ ರಚಿಸಿದಾಗ ಅದು **ಅನುಕರಣ**ವೆನಿಸುವುದು. ಅನ್ಯ ಕವಿಗಳ ಗದ್ಯಪದ್ಯಗಳನ್ನು ಯಥಾ ರೀತಿ ತನ್ನ ಪದ್ಯರೂಪಕ್ಕೆ ರೂಪಾಂತರಿಸಿದಾಗ ಅದು ಅನುವಾದವೆನಿಸುವುದು.

ಸ್ವತಂತ್ರ ಕವಿಗಳು ಲೋಕಪ್ರಸಿದ್ಧವಾದ ಅಥವಾ ಪೂರ್ವ ಕವಿ ಪ್ರಣೀತವಾದ ಕಥಾ ವಸ್ತುಗಳನ್ನಾಯ್ದು, ಕಾವ್ಯಕ್ಕೆ ಕಳೆ ಬರುವಂತೆ ಕಥೆ-ಪಾತ್ರ-ನಿರೂಪಣ ಕ್ರಮ ಇವನ್ನು ತಮ್ಮ ಭಾವಸ್ಫುರಣೆಗೆ ಅನುಸಾರವಾಗಿ ಮಾರ್ಪಡಿಸಿ ಪದ್ಯರಚನೆ ಮಾಡಿದ್ದಾರೆ. ಇಂತಹರ ಪದ್ಯಗಳಲ್ಲಿಯೂ ತಮ್ಮ ಪೂರ್ವ ಕಾವ್ಯಾಭ್ಯಾಸದ ಪರಿಣಾಮವಾಗಿ ಅನ್ಯರವೇ ಆದ ಕೆಲವು ಪದ-ಅರ್ಥ-ಭಾವಗಳು ಬಂದಿರಲು ಸಾಧ್ಯವಿದೆ. ಸಹಜವಾಗಿ ಅವು ಬಂದಾಗ ಕಾವ್ಯಕ್ಕೆ ಶೋಭಾವಹವೇ ಆಗುತ್ತವೆ. ಕಾವ್ಯ ಸಮಾಧಿಯಲ್ಲಿರುವ ಕವಿಗೆ ತನ್ನ ರಚನೆಯ ಮುಂದೋಟದಲ್ಲಿ ತನಗೆ ತಿಳಿಯದಂತೆಯೆ ಪೂರ್ವಕವಿಗಳ ವಾಕ್ಪ್ರಯೋಗ ಬರಬಹುದೆಂದು ಶಂಕಿಸಿದ ಕವಿ ರಾಘವಾಂಕನ ಮಾತು ಗಣನೀಯವಾದುದು—

> ಬಗೆವೆರಸಿ ಸಂದಷ್ಟ ಮಾದೊಡಜಿಃಯೆಂ ಪರೋ
> ಕ್ತಿಗಳರ್ಥಮಂ ಕಳುವುದಧಮತನಂ....[6]

ಕವಿಯ ರಸಾವೇಶದೆಡೆಯಲ್ಲಿ ತಾನಾಗಿ ಅನ್ಯರ ಉಕ್ತಿಗಳು-ಪ್ರಯೋಗಗಳ ಬರಲು ಸಾಧ್ಯವಿದೆಯೆಂದು ಇಲ್ಲಿನ ಅಭಿಪ್ರಾಯವಾಗಿದೆ.

ಕನ್ನಡದಲ್ಲಿ ಅನುವಾದಕವಿಗಳು ಹಲವರಾಗಿದ್ದಾರೆ. ನಾಗವರ್ಮನ ಕಾದಂಬರಿ, ಚೌಂಡರಸನ ದಶಕುಮಾರ ಚರಿತೆ, ಸಿಂಗರಾರ್ಯನ ಮಿತ್ರವಿಂದಾ ಗೋವಿಂದ ನಾಟಕ, ಕರಿಬಸಪ್ಪ ಶಾಸ್ತ್ರಿಗಳ ಕನ್ನಡ ಅಭಿಜ್ಞಾನ ಶಾಕುಂತಲ-ಇತ್ಯಾದಿಗಳು ಅನುವಾದಗಳು. ಪಂಪ-ಪೊನ್ನ-ರನ್ನ-ಅಭಿನವ ಪಂಪ-ದೇವಪ್ಪಾದಿ ಕವಿಗಳ ಕಾವ್ಯಪದ್ಯಗಳಲ್ಲಿ ಸ್ವತಂತ್ರವೆನಿಸುವ ಅಂಶಗಳೇ ಹೆಚ್ಚಾಗಿದ್ದರೂ, ಅಲ್ಲಲ್ಲಿ ಅನುಕರಣ-ಅನುವಾದ ಸಂಗತಿಗಳು ಎರಡೂ ಗೋಚರಿಸು

---

6 ರಾಘವಾಂಕ-ಸೋಮನಾಥ ಚಾರಿತ್ರ, ಪ್ರಥಮಸ್ಥಲಂ, ಪದ್ಯ ೧೫.

ತ್ತವೆ. ಪ್ರತಿಭಾನ್ವಿತ ಕವಿ ಮಾಡಿದ ಅನುವಾದಪದ್ಯ ಸ್ವತಂತ್ರವೆನಿಸುವಷ್ಟು ಮಟ್ಟಿಗೆ ಭಾವ ಪೂರ್ಣವಾಗಿ ಉಕ್ತಿವೈಚಿತ್ರ್ಯದಿಂದ ತುಂಬುತ್ತದೆ.

ಪದ್ಯ: ಸ್ವಕೀಯವಾದ ಒಂದೆರಡು ಅನುವಾದಗಳ ಉದಾಹರಣಗಳನ್ನು ಇಲ್ಲಿ ಕೊಡಲಾಗಿದೆ. ಕೆಳಗಿನವುಗಳಲ್ಲಿ ಮೊದಲನೆಯದು ಸಂಸ್ಕೃತದ ಒಂದು ವೃತ್ತ ಮತ್ತು ಅದರ ಕನ್ನಡದ ಅನುವಾದ.

ಶಾರ್ದೂಲ ವಿಕ್ರೀಡಿತ ವೃತ್ತ

ಶ್ಲೇಷೇ ಕೇಚನ ಶಬ್ದಗುಂಫ ವಿಷಯೇ ಕೇಚಿದ್ರಸೇ ಚಾಪರೇಽ
ಲಂಕಾರೇ ಕತಿಚಿತ್ ಸದರ್ಥವಿಷಯೇ ಚಾನ್ಯೇ ಕಥಾವರ್ಣಕೇ
ಆಃ ಸರ್ವತ್ರ ಗಭೀರಧೀರ ಕವಿತಾ ವಿಂಧ್ಯಾಟವೀ ಚಾತುರೀ
ಸಂಚಾರೀ ಕವಿಕುಂಭಿಕುಂಭ ಭಿದುರೋ ಬಾಣಸ್ತು ಪಂಚಾನನಃ

ಅನುವಾದ: **ಮತ್ತೇಭವಿಕ್ರೀಡಿತ ವೃತ್ತ**

ಕೆಲಬರ್ ಶ್ಲೇಷದೆ ಶಬ್ದಪುಂಜದೆ ರಸಶ್ರೀಯೊಳ್ ಕಥಾವರ್ಣನಾ
ವಲಿಯೊಳ್ ಚಾರು ಸದರ್ಥದೊಳ್ ಮೆರೆವಲಂಕಾರಂಗಳಲ್ಲೆಯ್ದಲೇಂ
ಸಲೆ ಸರ್ವತ್ರ ಗಭೀರಧೀರ ಕವಿತಾ ವಿಂಧ್ಯಾವಿಹಾರೀ ಕವೀಂ
ದ್ರಲಲಾಮ ದ್ವಿಪಕುಂಭಭೇದಕನೆ ಬಾಣಂ ತಾನೆ ಪಂಚಾನನಂ

ಇಲ್ಲಿ ಮೂಲದ ವೃತ್ತವನ್ನು ಇನ್ನೊಂದು ವೃತ್ತಕ್ಕೆ ತಿರುಗಿಸಲಾಗಿದೆ. ಭಗವದ್ಗೀತೆಯ ಧ್ಯಾನಶ್ಲೋಕವೊಂದು ಮತ್ತು ಅದರ ಅನುವಾದವಿದು:—

ಶ್ಲೋಕ|| ವಸುದೇವಸುತಂ ದೇವಂ ಕಂಸ ಚಾಣೂರ ಮರ್ದನಂ
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ

ಇದರ ಅನುವಾದ: —

ಕಂದ || ವಸುದೇವಸುತಂ ಕಂಸಾ
ದ್ಯಸುರಹರಂ ದೇವಕೀಮನಕ್ಕಂ ಕಡುಸಂ
ತಸಗುಡುವಂ ಶ್ರೀಕೃಷ್ಣಂ
ವಸುಧೆಗೆ ಗುರುದೇವನಾತನವನಂ ನಮಿಪೆಂ |[7]

---

[7] ಕವಿ ಕನೀಯಂ—ಗೀತಾಸ್ಕಂಧ.

ಬಸವಣ್ಣನವರ ವಚನವೊಂದನ್ನು ವೃತ್ತಕ್ಕೆ ಮಾರ್ಪಡಿಸಿದ ಒಂದು ಉದಾಹರಣವನ್ನು ಇಲ್ಲಿ ಕೊಟ್ಟಿದೆ:

ವಚನ॥ ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನನೊಲಿಸುವ ಪರಿ.

ಇದರ ಅನುವಾದ ಪದ್ಯ:

ಮತ್ತೇಭವಿಕ್ರೀಡಿತ ವೃತ್ತ.

ಕಳವಂ ಮಾಡದಿರೆಂದಿಗಂ ಕೊಲದಿರಾ ಮಿಥ್ಯೋಕ್ತಿ ನೀನಾಡದಿರ್
ಮುಳಿಸಂ ತಾಳದಿರನ್ಯರೊಳ್ ಸಹನೆಯಿಂದಿರ್ ತನ್ನ ಕೊಂಡಾಡದಿರ್
ಪಳಿಯಲ್ವೇಡಿತರರ್ಕಳನ್ನಿದುವೆ ಅಂತರ್ಬಾಹ್ಯ ಸಂಶುದ್ಧಿ ಮೇಣ್
ತಿಳಿ ನೀಂ ಕೂಡಲ ಸಂಗದೇವನನೊಲಿಸ್ಪಾ ಪಾಂಗಿದೆಂದೆಂಬುದಂ ೮॥

ಪದ್ಯರಚನೆಯ ಅಭ್ಯಾಸ

ಪದ್ಯರಚನೆಗೆ (ಕವಿತೆಗೆ) ಕಾರಣಗಳು ಪ್ರತಿಭೆ, ಕಾವ್ಯಪರಿಚಯ, ವಿದ್ವತ್ಸೇವೆ, ಅಭ್ಯಾಸ-ಎಂಬೀ ನಾಲ್ಕೆಂದು ಲಾಕ್ಷಣಿಕರ ಮತ. ಅಭ್ಯಾಸವೆಂದರೇನು ? " **ಆಲಸ್ಯಮನುೞಿದೆಸವುದ್ಯೋಗಮಭ್ಯಾಸಕರ್ಮಂ** "[9] ಆಲಸ್ಯಗೊಳ್ಳದೆ ಪದ್ಯರಚನೆಯನ್ನು ಮಾಡುತ್ತ ಇರುವುದೇ ಅಭ್ಯಾಸವೆನಿಸುವುದು. ಈ ಅಭ್ಯಾಸದಿಂದಲೇ ಪದ್ಯರಚನೆ ಬರುಬರುತ್ತ ಲೀಲಾಜಾಲವಾಗಿ ಸಿದ್ಧಿಸುವುದು. ಛಂದಸ್ಸು ಆಗ ತಾನಾಗಿಯೇ ಜತೆಗೂಡುವುದು. ಹೀಗಿದ್ದರೂ ಈ ಅಭ್ಯಾಸವನ್ನು ಪ್ರಾರಂಭಿಸುವ ಬಗೆ ಯಾವುದು-ಎಂಬ ಪ್ರಶ್ನೆ ಹಾಗೆಯೇ ಉಳಿಯುವುದು.

---

8 ಟಿ. ಕೇಶವ ಭಟ್ಟ—ಬಸವ ವಚನ ವೃತ್ತ ಶತಕ. ಪದ್ಯ ೮

9 ನಾಗವರ್ಮ—ಕಾವ್ಯಾವಲೋಕನ. ಪದ್ಯ ೪೨೪.

ಯಾವುದಾದರೊಂದು ಕಥೆಯ ಭಾಗವನ್ನೋ ಸಂವಾದದ ಸಾರವನ್ನೋ ಸನ್ನಿವೇಶದ ವಿವರವನ್ನೋ ವಸ್ತುವಿನ ವರ್ಣನೆಯನ್ನೋ ಆರಿಸಿ, ಆ ವಿಷಯವಾಗಿ ಮನಸ್ಸಿಗೆ ಹೊಳೆದುದನ್ನು ಯಾವುದಾದರೊಂದು ಮೆಚ್ಚಿನ ಛಂದೋರೂಪದಲ್ಲಿ ಬರೆಯತೊಡಗುವುದೇ ಅಭ್ಯಾಸದ ನಾಂದಿ. ಒಂದು ರೂಪದಲ್ಲಿರುವ ಪದ್ಯವನ್ನೆ ಇನ್ನೊಂದು ರೂಪಕ್ಕೆ ಪರಿವರ್ತನೆ ಮಾಡುವುದೂ ಅಭ್ಯಾಸವೆನಿಸುವುದು. ಇಂತಹ ಪರಿವರ್ತನೆ ಯಶಸ್ವಿಯಾಗಬೇಕಾದರೆ, ಸಮುಚಿತ ಪದಪ್ರಯೋಗ ನೈಪುಣ್ಯ ಆವಶ್ಯಕ. ಅದು ಕೂಡ ಕೆಲಮಟ್ಟಿಗೆ ಅಭ್ಯಾಸದ ಪರಿಣಾಮವೆಂದೇ ಹೇಳಬಹುದು. ಇಂತಹ ಸಾಧನೆಯ ರಹಸ್ಯವನ್ನು ತಿಳಿಸುವುದಕ್ಕಾಗಿ ಕೆಲವು ಉದಾಹರಣೆಗಳನ್ನು ಪ್ರಸ್ತಾವಿಸಬೇಕಾಗುತ್ತದೆ. ಕರ್ಣಾಟಕದಲ್ಲೆಲ್ಲ ಪ್ರಸಿದ್ಧವಾಗಿರುವ **'ಗೋವಿನ ಹಾಡು'** ಎಂಬ ಕಥನ ಕಾವ್ಯದ ಮೊದಲನೆಯ ಪದ (ಪದ್ಯ) ವನ್ನು ಇಲ್ಲಿ ಆರಿಸಿಕೊಳ್ಳಲಾಗಿದೆ. ಅದೊಂದನ್ನೆ ಬೇರೆ ಬೇರೆ ಛಂದಸ್ಸುಗಳ ಅಚ್ಚಿನಲ್ಲೆರೆದ ಪದ್ಯಗಳಾಗಿ ಇಲ್ಲಿ ಕಾಣಿಸಲಾಗಿದೆ. ಅದರ ಮೂಲ ಪದ್ಯವಿದು :

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನಿಂತು ಹೇಳುವೆ

ಈ ಪದ್ಯ ಜಾತಿಗೆ "ಗೋವಿನ ಕಥೆಯ ಮಟ್ಟು" ಎಂಬ ಹೆಸರು ಬಂದುಬಿಟ್ಟಿದೆ. ಇದು ಮೂರು ಮಾತ್ರೆಯ ಮತ್ತು ನಾಲ್ಕು ಮಾತ್ರೆಯ ಗಣಗಳಿಂದ ಕೂಡಿ, ಭಾಮಿನಿ ಷಟ್ಪದಿಯ ಲಯಾನುಸಾರಿಯಾಗಿದೆ. ಅಲ್ಲಲ್ಲಿ ಗುರು–ಲಘು ಪಲ್ಲಟವು ಇದರಲ್ಲಿದೆ. ಈ ಪದ್ಯವನ್ನು ತ್ರಿಪದಿಗೆ ಪರಿವರ್ತನೆ ಮಾಡಿ ಕೆಳಗೆ ಕೊಡಲಾಗಿದೆ. ಆಗ ಇದು ಮಾತ್ರಾಗಣ ನಿಯಮವನ್ನು ಬಿಟ್ಟು ಅಂಶಗಣಾನುಸಾರಿಯಾಗುವುದು. ತ್ರಿಪದಿಗೆ ಹನ್ನೊಂದು ಗಣಗಳು. ಅವುಗಳಲ್ಲಿ ಆರನೆಯದು ಮತ್ತು ಹತ್ತನೆಯದು ಬ್ರಹ್ಮಗಣ. ಉಳಿದವೆಲ್ಲವೂ ವಿಷ್ಣುಗಣಗಳು.

ತ್ರಿಪದಿ

ಧರಣಿಯ ಮಧ್ಯದಿ | ಮೆರೆವ ಕರ್ಣಾಟದಿ
ಇರುವ ಗೋವಳನು ಕಾಳಿಂಗ_ನೆಂಬನ
ಪರಿಯ ನಾನಿಂತು ಹೇಳುವೆ

ಈ ಪರಿವರ್ತನೆಯಲ್ಲಿ 'ಧರಣಿಮಂಡಲ' ಎಂಬ ಸಮಸ್ತಪದದಲ್ಲಿ 'ಮಂಡಲ' ಎಂಬುದನ್ನು ಕೈಬಿಟ್ಟಿದೆ; 'ಧರಣಿಯ' ಎಂದು ಇಟ್ಟುಕೊಂಡಿದೆ. ಉಳಿದ ಪದಗಳು ಹೆಚ್ಚಿನ ಮಟ್ಟಿಗೂ ಮೂಲದಂತೆಯೇ ಇವೆ.

ಸಾಂಗತ್ಯ

ತ್ರಿಪದಿಯ ಮೊದಲ ಏಳುಗಣಗಳನ್ನು ಮಾತ್ರ ತೆಗೆದು ಕೊಂಡು, ಆರನೆಯದನ್ನು ವಿಷ್ಣುಗಣವಾಗಿಯೂ ಏಳನೆಯದನ್ನು ಬ್ರಹ್ಮಗಣವಾಗಿಯೂ ಪರಿವರ್ತಿಸಿದರೆ, ಸಾಂಗತ್ಯದ ಅರ್ಧ ಪದ್ಯವಾಗುವುದು. ಅದಕ್ಕೆ ಉದಾಹರಣೆ:—

ವಸುಮತಿ ವಲಯ ಮಧ್ಯದೆ ಕರ್ಣಾಟಕ
ಮೆಸೆವುದಲ್ಲೊಬ್ಬ ಕಾಳಿಂಗ
ಪೆಸರಾಂತ ಗೊಲ್ಲನಿರ್ದಪನಾತನ ಪರಿ
ಯೊಸೆದು ಪೇಳುವೆನು ನಾನಿಂತು

ಈ ತ್ರಿಪದಿ ಸಾಂಗತ್ಯಗಳು ಬ್ರಹ್ಮ-ವಿಷ್ಣುಗಣಗಳಿಂದ ಆಗುತ್ತವೆ. ವಿಷ್ಣುಗಣ ಒಂದು ಅಂಶಾಧಿಕವಾದಾಗ ರುದ್ರಗಣವಾಗುವುದು. ತ್ರಿಪದಿಯಲ್ಲಿ ಈ ಗಣಗಳು ಪಲ್ಲಟವಾಗುವುದುಂಟು. ಅಂತಹ ಕಡೆ ತ್ವರಿತೋಚ್ಚಾರಣೆಯಿಂದ ಅದನ್ನು ಸರಿಗೊಳಿಸಬೇಕಾಗುತ್ತದೆ.

ಯಾಲಪದ

ರುದ್ರಗಣಗಳಿಂದ 'ಯಾಲಪದ' ರಚನೆಯಾಗುತ್ತದೆ. ಇದರಲ್ಲಿ ಒಂದು

ಉಪಪಾದವೂ ಆ ಉಪಪಾದಕ್ಕೆ ಏಕಾಕ್ಷರಿಯ ಅನುಪಾದವೂ ಇರುತ್ತವೆ :—

ಮೇದಿನೀ ಮಂಡಲದ ಮಧ್ಯ
ವಾದ ಕರ್ಣಾಟ ದೇಶದೊ
ಳಾದನು ಕಾಳಿಂಗ ಗೊಲ್ಲನು ॥
ನಾ । ನವನ ಪರಿಯ ।
ಮೋದದಿಂದಲಿಂತು ಪೇಳ್ವೆನು

ಸರಳಾರ

ಹೆಂಗುಸರು ಹಾಡುವ ಶೋಭಾನೆಗಳ ಮಟ್ಟಿನಲ್ಲಿರುವ ಹಾಡಿದು. ಇದು ವಿಷ್ಣುಗಣಗಳಿಂದ ಆಗುತ್ತದೆ. ಎರಡನೆಯ ಮತ್ತು ನಾಲ್ಕನೆಯ ಪಾದಗಳ ಅಂತ್ಯದಲ್ಲಿ ಮಾತ್ರ ಒಂದೊಂದು ರುದ್ರಗಣ ಇರುತ್ತದೆ. ಹಾಗೆಯೇ ಕೊನೆಗೆ ಎರಡು ಪಂಕ್ತಿಗಳಾಗಿ ಬರುವ ಪಲ್ಲವಿಯ ಪಾದಗಳ ಕೊನೆಗೂ ರುದ್ರಗಣವಿರುತ್ತದೆ. ಪಲ್ಲವಿಯ ಎರಡನೆಯ ಪಾದಕ್ಕೆ ಒಂದು ಉಪಪಾದವೂ ಇರುತ್ತದೆ :—

ಭೂಮಿವಲಯ ಮಧ್ಯದೊಳೊಪ್ಪಿರುವಭಿ
ರಾಮ ಕರ್ಣಾಟಕ ದೇಶದಲಿ
ಧಾಮವೆಸಗಿಹನು ಕಾಳಿಂಗನೆಂದೆಂಬ
ನಾಮದೊಳೋರ್ವನು ಗೋವಳನು ॥
ಒರೆಯುವೆನವನ ಪರಿಯನಿಂತು । ಬಹು ।
ಸುರುಚಿರವೆನಿಸುವ ಚರಿತವನು ॥

ಇವೆಲ್ಲವೂ ಅಂಶಚ್ಛಂದದ ಪದ್ಯಗಳಾಗಿ ಮಾರ್ಪಡಿಸಲಾದ ಉದಾಹರಣೆಗಳು. ಇವೇ ಉದಾಹೃತ ಪದ್ಯವನ್ನು ಜಾತಿಚ್ಛಂದಕ್ಕೆ ಪರಿವರ್ತಿಸಿದ ಕೆಲವು ಉದಾಹರಣೆಗಳನ್ನು ಮುಂದೆ ಕಾಣಿಸಲಾಗಿದೆ.

ದ್ವಿಪದಿ

ಎರಡು ಪಾದಗಳುಳ್ಳ ಈ ಪದ್ಯವು ಜಾತಿಚ್ಛಂದದ ಪದ್ಯಗಳಲ್ಲಿ ಚಿಕ್ಕದು. ಒಂದೊಂದು ಪಾದದಲ್ಲಿ ಐದು ಮಾತ್ರೆಯ ಮೂರು ಗಣಗಳಿದ್ದು

ಕೊನೆಗೊಂದು ತ್ರಿಮಾತ್ರಾ ಗಣವಿರುತ್ತದೆ. ಇದರ ರಚನೆಯಲ್ಲಿ ಮೂಲ ಸಾಹಿತ್ಯದ ಸಂಕ್ಷೇಪಣವು ನಡೆಯುತ್ತದೆ.

ಒರೆವೆ ತಿರೆನಡುವೆ ಕರ್ಣಾಟದೊಳು ನೆಲಸಿ
ಇರುವ ಕಾಳಿಂಗ ಗೊಲ್ಲನ ಪರಿಯ ನೆನಸಿ ॥

ಇಲ್ಲಿ 'ಧರಣಿ ಮಂಡಲ ಮಧ್ಯದೊಳಗೆ' ಎಂಬುದನ್ನು 'ತಿರೆನಡುವೆ' ಎಂದು ಸಂಕ್ಷೇಪಿಸಿ ಪರಿವರ್ತಿಸಬೇಕಾಯಿತು.

ಚೌಪದಿ

ದ್ವಿಪದಿಯನ್ನೆ ದ್ವಿಗುಣಿತಗೊಳಿಸಿದಾಗ ಚೌಪದಿಯಾಗುವುದು. ಆಧುನಿಕರು ಪದ್ಯರಚನೆಯಲ್ಲಿ ದ್ವಿತೀಯಾಕ್ಷರ ಪ್ರಾಸದ ನಿಯಮೋಲ್ಲಂಘನವನ್ನು ಶ್ರೇಷ್ಠ ಗುಣವಾಗಿ ಗಣಿಸುತ್ತಾರೆ. ಇದು ಸಾಂಪ್ರದಾಯಿಕ ರಚನಾಕ್ರಮಕ್ಕೆ ವಿದ್ರೋಹವೆನಿಸುವುದು. ಆದರೂ ಅಸಹಜವಾಗಿ ಶಬ್ದಗಳನ್ನು ಔಚಿತ್ಯವರಿಯದೆ ತುರುಕಿ ತುಂಬಿಸಿ, ಕಟ್ಟುವ ಅವ್ಯುತ್ಪನ್ನ ಕವಿಗಳ ಪ್ರಾಸಬದ್ಧ ಕವಿತೆಗಿಂತ ಲೇಸು. ದ್ವಿತೀಯಾಕ್ಷರ ಪ್ರಾಸವಿಲ್ಲದಿದ್ದರೂ ಅಂತ್ಯ ಪ್ರಾಸವಿರುವ ಚೌಪದಿಯನ್ನು ಇಲ್ಲಿ ಕೊಡಲಾಗಿದೆ—

ಮೇದಿನಿಯ ಚಾರುವಲಯದ ಮಧ್ಯದಲ್ಲಿ
ರಾಜಿಸುವ ಕರ್ಣಾಟ ದೇಶವಿಹುದಲ್ಲಿ
ವಾಸಿಸುವನೋರ್ವನವ ಕಾಳಿಂಗ ಗೊಲ್ಲ
ಪೇಳಲುಜ್ಜುಗಿಪೆನಾನವನ ಪರಿಯೆಲ್ಲ ॥

ದ್ವಿತೀಯಾಕ್ಷರ ಪ್ರಾಸ ಅಂತ್ಯಾಕ್ಷರಪ್ರಾಸವೆರಡನ್ನೂ ಅಳವಡಿಸಿರುವ ಚೌಪದಿಯಿದು :—

ನೀರಜಭವಾಂಡವಲಯದ ಮಧ್ಯದಲ್ಲಿ
ಚಾರುತರ ದೇಶವಿದೆ ಕರ್ಣಾಟವಲ್ಲಿ
ತೋರುವ ನಿವಾಸಿ ಕಾಳಿಂಗ ಗೋವಳನು
ಸಾರ ವಿವರವನೊರೆವೆನಿಂತಾನವನನು ॥

ಕೆಳಗಿನದು ಪ್ರಾಸಬದ್ಧವಾಗಿರುವ **ವೀರ ಚೌಪದಿ**—

ಧರಣಿಮಂಡಲ ಮಧ್ಯದಲ್ಲಿ ಶೋಭಯನೊಂದಿ
ಮೆರೆವ ಕರ್ಣಾಟಾಖ್ಯ ದೇಶದಲ್ಲಿ
ಇರುವ ಕಾಳಿಂಗನೆಂದೆಂಬ ಗೋವಳನವನ
ಪರಿಯನೆಲ್ಲವನಿಂತು ಪೇಳ್ವೆನಿಲ್ಲಿ

ಇದೇ ಪದ್ಯದ ಮೊದಲನೆಯ ಮತ್ತು ಮೂರನೆಯ ಪಾದಗಳನ್ನು ನಡುವೆ ವಿಚ್ಛೇದಿಸಿದರೆ, ಆರು ಪಾದಗಳಾಗಿ **ಕುಸುಮಷಟ್ಪದಿ**ಯಾಗುವುದು. ಪ್ರಾಸಕ್ಕನುಗುಣವಾಗಿ ಮೇಲಿನ ಸಾಹಿತ್ಯವನ್ನು ಒಂದಿಷ್ಟು ಪರಿವರ್ತಿಸಿದ ಕುಸುಮಷಟ್ಪದಿಯಿದು :—

ಧರಣಿ ಮಂಡಲದೊಳಗೆ
ಮೆರೆವ ಮಧ್ಯದೊಳೊಪ್ಪು-
ತಿರುವ ಕರ್ಣಾಟಾಖ್ಯ ದೇಶದಲ್ಲಿ
ಇರುವ ಕಾಳಿಂಗ ಪೆಸ-
ರೆರೆಯ ಗೋವಳನವನ
ಪರಿಯನೆಲ್ಲವನಿಂತು ಪೇಳ್ವೆನಿಲ್ಲಿ||

ಭಾಮಿನಿ ಷಟ್ಪದಿ

ಇದೇ ಪದ್ಯವನ್ನು ಭಾಮಿನಿ ಷಟ್ಪದಿಯಾಗಿ ಪರಿವರ್ತಿಸುವಾಗ ಶಬ್ದಪೂರ್ಣತೆಗಾಗಿ ಕೆಲವು ವಿಶೇಷಣಗಳನ್ನು ಕೂಡಿಸಬೇಕಾಗುತ್ತದೆ. ಭಾಮಿನಿಷಟ್ಪದಿಯು ಮೂರು ಮತ್ತು ನಾಲ್ಕು ಮಾತ್ರೆಗಳ ಗಣಗಳಿಂದಾಗುವುದು.—

ವಾರಿನಿಧಿಯ ತರಂಗ ತಾಟಿತ
ಧಾರಿಣೀವಲಯದೊಳಗೈವ-
ತ್ತಾರು ದೇಶಂಗಳಲಿ ಮೇಲ್ಮೆಯ ತಳೆದು ರಾಜಿಪುದು
ಚಾರು ಕರ್ಣಾಟಾಖ್ಯವದರೊಳು
ಸಾರಗುಣ ಕಾಳಿಂಗಗೊಲ್ಲನು-
ದಾರವೆನಿಸುವ ಪರಿಯನೆಲ್ಲವನಿಂತು ಪೇಳುವೆನು

ವಾರ್ಧಿಕ ಷಟ್ಪದಿ

ಷಟ್ಪದಿಗಳಲ್ಲಿ ವಾರ್ಧಿಕ ದೊಡ್ಡದು. ಅದು ಐದು ಮಾತ್ರೆಗಳ ಗಣದಿಂದ ರಚಿತವಾಗುತ್ತದೆ. ಚಿಕ್ಕದಾದ ಮೂಲಪದ್ಯವೊಂದನ್ನು ವಾರ್ಧಿಕವಾಗಿ ಅವತರಣಗೊಳಿಸುವುದು ಸುಲಭವಲ್ಲ. ಈ ಕಾರ್ಯಕ್ಕೆ ಶಬ್ದ ವಿಸ್ತಾರವು ಆವಶ್ಯಕ. ಹೀಗಿದ್ದರೂ ಅನಾವಶ್ಯಕವೆನಿಸಬಹುದಾದ ಪದಗಳನ್ನು ಬಳಸದೆ ರಚಿಸುವುದರಲ್ಲೇ ಜಾಣ್ಮೆಯಿರುತ್ತದೆ:—

ವರ್ಣಿಸುವೆ ನಾನಿಂತು ಪುಣ್ಯಸಂಕಥನವಂ
ಪೂರ್ಣಚಿತ್ತದೊಳಮನುರಾಗಯುತ ಮತಿಸವಾ-
ಕೀರ್ಣರಾಲಿಸುಗೆ ವಸುಧಾಮಂಡಲದೊಳಗೈವತ್ತಾರು ದೇಶಗಳೊಳು ॥
ಕರ್ಣಾಟಕಾಖ್ಯದೇಶಂ ಸತ್ಯಸಂದೇಶ
ಪೂರ್ಣಸದ್ಭಕ್ತಿಕೋಶಂ ಮೆರೆವುದಿಲ್ಲಿ ಸುಗು-
ಣಾರ್ಣವಂ ಕಾಳಿಂಗನೆಂಬ ಗೋವಳನಿರ್ಪನವನ ಪರಿಯಂ ಪೇಳ್ವೆನು ॥

ಕಂದಪದ್ಯ

ಇದುವರೆಗೆ ಅಂಶಗಣ-ಮಾತ್ರಾಗಣಗಳಿಂದಾಗುವ ಪದ್ಯಗಳನ್ನು ನಿರೂಪಿಸಲಾಯಿತು. ಇವುಗಳ ರಚನೆಗಿಂತ ಕಠಿನವಾದುವು ಗಣಚ್ಛಂದದ ಆರ್ಯಾಜಾತಿಯ ಪದ್ಯಗಳು. ಅವಕ್ಕೆ ಪ್ರಯುಕ್ತವಾಗುವ ಗಣಗಳು ನಾಲ್ಕು ಮಾತ್ರೆಯವು. ಅವುಗಳಲ್ಲಿ ಕಂದಪದ್ಯವಿದು :—

ಧರಣಿಯ ಮಂಡಲ ಮಧ್ಯದೆ
ಮೆರೆವಾ ಕರ್ಣಾಟದೇಶದಲ್ಲಿಯೆ ಗೊಲ್ಲ-
ರ್ಗೆರೆಯಂ ಕಾಳಿಂಗಾಭಿದ-
ನಿರುತಿರ್ಪಂ ಪೇಳ್ವೆನಿಂತುಟಾತನ ಪರಿಯಂ

ಕಂದಕ್ಕಿಂತ ಕಠಿನವೆನಿಸುವ ರಚನೆ ಸಮವೃತ್ತದ ಪದ್ಯಗಳದು. ಇವು ವರ್ಣಗಣಗಳಾದ-ಮ, ಯ, ರ, ಸ, ತ, ಜ, ಭ, ನ, ಎಂಬ ಗಣಗಳಿಂದಲೂ ಲಗಾಕ್ಷರಗಳಿಂದಲೂ ರಚಿತವಾಗುತ್ತವೆ.

ಮತ್ತೇಭವಿಕ್ರೀಡಿತ ವೃತ್ತ

ಪೃಥಿವೀ ಮಂಡಲ ಮಂಡನ ಪ್ರತಿಮಮಪ್ಪಾ ಮಧ್ಯಭೂಭಾಗ ಸಂ
ಸ್ಥಿತ ಕರ್ಣಾಟಕ ದೇಶಮಾದಮೆಸೆಗುಂ ತದ್ದೇಶದೊಳ್ ಕೀರ್ತಿಸಂ
ಶ್ರಿತನಿರ್ದೋಪ್ಪಿದನೊರ್ವ ಗೊಲ್ಲರೊಡೆಯಂ ಕಾಳಿಂಗನೆಂಬಂ ಸಮು
ನ್ನತ ಚಾರಿತ್ರಯುತಂ ತದೀಯ ಚರಿತಂ ನಾಕಿಂತಿದಂ ಪೇಳ್ದಪೆಂ

ಉತ್ಪಲಮಾಲಾವೃತ್ತ

ರಾಜಿಪ ಮೇದಿನೀವಲಯ ಮಧ್ಯದೆ ನಾಯಕರತ್ನದಂತೆ ರಾ
ರಾಜಿಪ ದೇಶಮೊಪ್ಪುವುದು ಕನ್ನಡವಲ್ಲಿರುತಿರ್ದಪಂ ಯಶೋ
ಭಾಜನನಾ ಕಳಿಂಗನೆಸರಿಂದಮೆ ಗೊಲ್ಲನದೊರ್ವನಾತನೊಳ್
ಸಾಜಮೆನಿಪ್ಪವೋಲೆಸೆದಿರೆನೆಸೀತು ತದೀಯ ಚರಿತ್ರವೆಲ್ಲಮಂ

ಯಾವುದಾದರೊಂದು ಛಂದಸ್ಸಿನಲ್ಲಿ ಪದ್ಯವನ್ನು ಬರೆಯುವಾಗ ಪ್ರಾಸಾದಿ ಶಬ್ದಾಲಂಕಾರವನ್ನು ಹೇಗೆ ಮತ್ತು ಎಲ್ಲಿ ತರಬಹುದೆಂಬುದನ್ನು ಪ್ರಾರಂಭದಲ್ಲೇ ಯೋಚಿಸಬೇಕಾಗುತ್ತದೆ. ಕವಿಭಾವನೆಗೆ ಅನುಗುಣವಾಗಿ ಅರ್ಥಾಲಂಕಾರವನ್ನೂ ತರುವ ಸಂಗತಿಯನ್ನು ಮೊದಲೇ ನಿಯೋಜಿಸಬೇಕಾಗುತ್ತದೆ. ಹಾಗೆಯೇ ಅಂಕಿತನಾಮಗಳನ್ನು ಛಂದೋನುಗುಣವಾಗಿ ಯಾವೆಡೆಗೆ ಒಡ್ಡಬೇಕೆಂಬುದನ್ನೂ ನಿಶ್ಚಯಿಸಬೇಕಾಗುತ್ತದೆ. ಗೋವಿನ ಹಾಡಿನ ಉದಾಹೃತಪದ್ಯದಲ್ಲಿ '**ಕಾಳಿಂಗ**' ಮತ್ತು '**ಕರ್ಣಾಟ**' ಎಂಬ ಎರಡು ಅಂಕಿತನಾಮಗಳಿವೆ. ಮತ್ತೇಭವಿಕ್ರೀಡಿತ-ಶಾರ್ದೂಲ ವಿಕ್ರೀಡಿತವೃತ್ತಗಳಿಗೆ ಅವೆರಡೂ ಜೋಡಣೆಗೊಳ್ಳುತ್ತವೆ ಆದರೆ ಉತ್ಪಲಮಾಲೆ ಚಂಪಕಮಾಲೆಗಳಿಗೆ ಅವು ಪರಸ್ಪರ ಬಾಧಕಪದಗಳಾಗಿದ್ದು ಹೊಂದಿಕೆಯಾಗುವುದಿಲ್ಲ. ಮೇಲಿನ 'ಉತ್ಪಲಮಾಲೆ'ಯಲ್ಲಿ '**ಕಾಳಿಂಗ**' ಎಂಬುದು '**ಕಳಿಂಗ**' ಎಂದಾಗಿದೆ. '**ಕರ್ಣಾಟ**' ಎಂಬುದು '**ಕನ್ನಡ**' ಆಗಬೇಕಾಯಿತು. ಹೀಗೆ ಆಗದೆ ಅಲ್ಲಿ ವಿಧಿಯಿಲ್ಲ. ಪ್ರಯತ್ನಪಟ್ಟು '**ಕರ್ಣಾಟಕ**' ಎಂಬ ಪದವನ್ನು ಇಟ್ಟುಕೊಂಡು ಇದರ '**ಟ**' ಕಾರವನ್ನು ದ್ವಿತೀಯಾಕ್ಷರ ಪ್ರಾಸದೆಡೆಗೆ ನಿಲ್ಲಿಸಿ ಪದ್ಯರಚಿಸಲು ಸಾಧ್ಯವಾದೀತು. ಆಗ '**ಕಾಳಿಂಗ**' ಎಂಬ ಶಬ್ದರೂಪವು ಒಡ್ಡಲಾರದು.

'ಕಾಳಿಂಗ' ಎಂಬುದರ **"ಳಿಂಗ"** ಎಂಬುದನ್ನು ಪಾದಾದಿಯಾಗಿ ಮಾಡಿದರೆ, **'ಕರ್ಣಾಟಕ'** ಎಂಬುದು ಒಡ್ಡಲಾರದು. ಆದುದರಿಂದ ಉತ್ಪಲಮಾಲೆ–ಚಂಪಕಮಾಲೆಗಳ ರಚನೆಯಲ್ಲಿ ಈ ಎರಡು ಶಬ್ದಗಳಲ್ಲಿ ಒಂದು ಮಾತ್ರ ಇದ್ದ ರೂಪದಲ್ಲೇ ಸೇರ್ಪಡೆಯಾದೀತು. ಅದಕ್ಕೆ ಉದಾಹರಣೆ:—

ಉತ್ಪಲ ಮಾಲೆ.

ತುಂಗತರಂಗವಾರ್ಧಿಪರಿವೇಷ್ಟಿತ ಭೂವಲಯಕ್ಕೆ ಮಧ್ಯಭಾ
ಗಂ ಗುಣಭಾಸಿ ಕನ್ನಡದ ದೇಶಮೆ ರಾಜಿಸುತಿರ್ಪುದಲ್ಲಿ ಕಾ
ಳಿಂಗನೆನಿಪ್ಪ ಗೊಲ್ಲನುರುಕೀರ್ತಿಗೆ ಬಲ್ಲಹನಾದ ಚಾರು ವೃ
ತ್ತಂಗಳನೆಲ್ಲವಿಲ್ಲಿಯೆ ಒರೆವೆಂ ಪರಿಭಾವಿಸಿ ಕೇಳ್ಗೆ ಸಜ್ಜನರ್

ಛಂದೋಬದ್ಧವಾಗಿ ಪದ್ಯರಚನೆ ಮಾಡುವ ರಹಸ್ಯದ ಅಂಶವಿದು. ರಚನಾಭ್ಯಾಸದಲ್ಲಿ ಮುಂದುವರಿದಂತೆಲ್ಲ ಇಂತಹ ನವರಹಸ್ಯಗಳು ಮತ್ತೂ ಮತ್ತೂ ತಾವಾಗಿ ಗೊತ್ತಾಗುವವು. ಛಂದಸ್ಸಿನ ಗತಿ ಸಿದ್ಧಿಯಾದರೆ ಮಾತ್ರ ಸುಲಲಿತವಾಗಿ ಪದ್ಯರಚನೆ ಸಾಧ್ಯವಾದೀತು. ಅಂತು ಪದ್ಯರಚನೆಗೆ ಅಭ್ಯಾಸವೇ ಮೆಟ್ಟಲು. ಅಂತಹ ಅಭ್ಯಾಸಯೋಗದ ದಿಗ್ದರ್ಶನವಿದು. "ಅಭ್ಯಾಸಯೋಗೇನ ತತೋ ಮಾಮಿಚ್ಛಾಪ್ತುಂ...." ಎಂಬ ಉಕ್ತಿ ಪದ್ಯ ರಚನಾಭ್ಯಾಸಿಗೆ ಅನ್ವಯವಾಗುತ್ತದೆ.

ಒನಕೆವಾಡು

[ಒನಕೆ ವಾಡಿನ ಪ್ರಾಚೀನತೆ-ಸ್ವರೂಪ-ತ್ರಿಪದಿ-ತ್ರಿಪದಿಯ ವಿವಿಧ ನಾಮಗಳು-ಅವುಗಳ ಔಚಿತ್ಯ-ತ್ರಿಪದಿಗೆ ಪಾದಗಳು ಮೂರಲ್ಲ-'ತ್ರಿಪದಿ'ಯ ಸಂಶೋಧನ.]

ಮಾನವನು ಅನ್ನ ಸೇವಿಸುತ್ತಿದ್ದಾಗಿನಿಂದಲೇ ಬತ್ತ ಕುಟ್ಟುವ ಕೆಲಸವೂ ನಡೆದುಬಂದಿದೆಯೆನ್ನಬಹುದು. ಈ ಕೆಲಸಕ್ಕೆ ಸಾಧನೋಪಕರಣ ಒನಕೆ. ಬತ್ತ ಕುಟ್ಟುವುದು ಜೀವನಾವಶ್ಯಕ ಕಾರ್ಯವೆ ನಿಜ. ಇದು ಶ್ರಾಮಕವೂ ಅವ್ಯಸ್ತವೂ (Monotonous) ಆದ ಕೆಲಸ. ಇದನ್ನು ಮಾಡುವವರು ಶ್ರಮಜೀವಿಗಳಾದ ಹೆಂಗುಸರೇ ಹೆಚ್ಚು. ಅವರು ಬತ್ತ ಕುಟ್ಟುವಾಗ ಆದ ದಣಿವನ್ನು ಕಳೆವುದಕ್ಕೂ ಚಿತ್ತಪ್ರಸನ್ನತೆಯನ್ನು ತಳೆವುದಕ್ಕೂ ತಮ್ಮ ಮೆಚ್ಚಿನ ಹಾಡುಗಳನ್ನು ಹಾಡಿಕೊಳ್ಳುವರು; ಒನಕೆಯ ಕುಟ್ಟಿನ ತಾಳಗತಿಗೆ ಸರಿಯಾಗಿ ಹಾಡಿಕೊಳ್ಳುವರು. ಬತ್ತ ಕುಟ್ಟುವಾಗ ಮಾತ್ರವಲ್ಲದೆ, ಇಂದಿಗೂ ಬೀಸುಗಲ್ಲು ತಿರುಗಿಸುವಾಗ-ತೊಟ್ಟಿಲು ತೂಗುವಾಗ-ಗಾಡಿ ಎಬ್ಬುವಾಗ-ಹಸು ಮೇವು ಮಾಡಿಸುವಾಗ-ಬೂತದ ಕೋಲ ಏರ್ಪಡುವಾಗ-ನೇಜಿ(ನಾಟಿ) ಕೆಲಸ ನಡೆವಾಗ-ಹಾಡಿನ ದನಿ ಹೊರಟೇ ಬಿಡುತ್ತದೆ. ಆ ಹಾಡಿನ ದನಿಯೊಡವೆರೆತು ಗ್ರಾಮೀಣ ಜನತೆಯ ಜೀವನದ ಸರಳಸಾಹಿತ್ಯವೂ ಹರಿಯುತ್ತದೆ. ಬತ್ತ ಕುಟ್ಟುವ ಹಾಡು "**ಒನಕೆವಾಡು**". ಈ ಒನಕೆವಾಡಿನ ಹಳಮೆ, ನಡೆ, ನುಡಿ, ಧಾಟಿ, ಹುರುಳು, ಲಕ್ಷಣ-ಮುಂತಾದವನ್ನು ತಿಳಿದು ತಿಳಿಸಬಲ್ಲವರು ವಿರಳ. ಯಂತ್ರ ಯುಗದವರಾದ ಇಂದಿನ ಶ್ರಮಿಕ ವರ್ಗದ ಹೆಂಗುಸರಿಗೆ ಒನಕೆವಾಡು ಅಪರಿಚಿತವೆಂಬಂತಾಗಿದೆ. ಆದರೆ, ಪರಿಶೀಲನೆ ನಡೆಯಿಸಿದಾಗ ಪುರಾತನ ಕಾಲದಿಂದಲೇ ಒನಕೆವಾಡು ಅತ್ಯಂತ ಪರಿಚಿತವೂ ಪ್ರಚಲಿತವೂ ಜನಪ್ರಿಯವೂ ಆದ ಹಾಡಾಗಿತ್ತೆಂದು ತಿಳಿದು ಬರುತ್ತದೆ.

ಒನಕೆವಾಡಿನ ಪ್ರಾಚೀನತೆಯ ಆಧಾರ ನಮಗೆ ಋಗ್ವೇದದಲ್ಲೇ ಸಿಗುತ್ತದೆ. ವೇದದಲ್ಲಿ 'ಅವಘಾತ ಮಂತ್ರ' ಎಂಬುದಿದೆ. ಯಜ್ಞಕ್ಕೆ ಬೇಕಾಗುವ ಧಾನ್ಯವನ್ನು ಕುಟ್ಟಿ ಶುದ್ಧಿ ಮಾಡುವಾಗ ಹೇಳುವ ಮಂತ್ರವಿದು. ಪ್ರತಿ

ಯೊಂದು ಒನಕೆ ಪೆಟ್ಟಿಗೂ ಈ ಮಂತ್ರವನ್ನು ಉಚ್ಚರಿಸಬೇಕೆಂದು ಅಲ್ಲಿ ಹೇಳಿದೆ. 'ಪೂರ್ಣಿಕ' ಎಂಬವಳು ಬತ್ತ ಕುಟ್ಟುತ್ತಿರುವುದನ್ನೂ ಮಾಣವಕನು ಆಗ ಅವಘಾತ ಮಂತ್ರ ಹೇಳುವುದನ್ನೂ ಸಾಯಣಭಾಷ್ಯದಲ್ಲಿ ಉಲ್ಲೇಖಿಸಲಾಗಿದೆ.[1]

ಶಾಸನಗಳ ಕಾಲದಿಂದಲೇ 'ಒನಕೆವಾಡು' ಕನ್ನಡದಲ್ಲಿ ಪ್ರಸ್ತಾಪಿತವಾದುದನ್ನು ಕಾಣಬಹುದು. ಶಿವಮೊಗ್ಗ ಜಿಲ್ಲೆಯ ಹುಂಚದ ಪಂಚಬಸ್ತಿ ಅಂಗಳದ ಶಿಲಾಶಾಸನದಲ್ಲಿ ಒನಕೆವಾಡಿನ ಉಲ್ಲೇಖ ಹೀಗಿದೆ:—

"ಶಿವಮಾರದೇವಂ ಸೈಗೊಟ್ಟನೆಂಬೆಱಡನೆಯ ಪೆಸಱಂ ತಾಳ್ದಿ ಶಿವಮಾರಮತಮೆಂದು ಗಜಶಾಸ್ತ್ರಮಂ ಮಾಡಿ ಮತ್ತಂ"

ಕಂದ ||
ಏವೇೞ್ವುದೊ ಶಿವಮಾರ ಮ
ಹೀ ವಳಯಾಧಿಪನ ಸುಭಗ ಕವಿತಾಗುಣಮಂ
ಭೂವಳಯದೊಳ್ ಗಜಾಷ್ಟಕ
ಮೋವನಿಗೆಯುಮೊನಕೆವಾಡುಮಾದುದೆ ಪೇೞ್ಗುಂ || [2]

ಶಿವಮಾರನೆಂಬ ಈ ಗಂಗರಾಜನು ಕ್ರಿ.ಶ. ೮೦೦ನೆಯ ಕಾಲದಲ್ಲಿದ್ದನು. ಇವನು ಬರೆದ ಗಜಾಷ್ಟಕವು **ಓವನಿಗೆ**ಯೂ **ಒನಕೆವಾಡೂ** ಆಯಿತಂತೆ; ಅಷ್ಟೊಂದು ಪ್ರಚುರವಾಯಿತೆಂದು ಈ ಮಾತಿನ ಭಾವವಾಗಿ ಕಾಣುತ್ತದೆ. ಶಿವಮಾರನ ಗಜಾಷ್ಟಕ ಉಪಲಬ್ಧವಿಲ್ಲ. ಆ ಪ್ರಾಕ್ಕಾಲದ ಓವನಿಗೆ ಹಾಡಾಗಲಿ ಒನಕೆವಾಡಾಗಲಿ ಇಂದಿಗೆ ಉಳಿದಿಲ್ಲ. ಅವು ಗ್ರಾಮೀಣರ ಸಾಹಿತ್ಯವಾಗಿ, ಕವಿಕೃತ ಕಾವ್ಯಪಂಕ್ತಿಗೆ ಸೇರದೆ, ಗ್ರಂಥಸ್ಥವಾಗದೆ ಉಳಿದುದರಿಂದಲೇ ಉಳಿದಿಲ್ಲವೆನ್ನಬಹುದು. ಇವುಗಳಲ್ಲಿ "**ಓವನಿಗೆ**" ಬೇರೊಂದು ಸಂಶೋಧ ಲೇಖನದ ವಸ್ತುವಾಗಬಲ್ಲುದು. ಆದುದರಿಂದ ಒನಕೆವಾಡನ್ನು

---

1 ಋಗ್ವೇದ ಸಂಹಿತಾ-ಭಾಗ ೧, ಪುಟ ೩೮೩ (ಶ್ರೀ ಜಯಚಾಮರಾಜೇಂದ್ರ ವೇದ ರತ್ನಮಾಲಾ).

2 Epigraphic Carnatica Vol. VIII, Shimoga, Part II Nagar Taluq 35.

ಮಾತ್ರ ಸದ್ಯಃ ಇಲ್ಲಿ ಲಕ್ಷ್ಯವಿಟ್ಟದೆ. ಇದಂತೂ ಬತ್ತ ಕುಟ್ಟುವಾಗ ಹಾಡುವ ಹಾಡೆಂದು ಮುಂದಿನ ವಿವರಣೆಗಳಿಂದ ವಿದಿತವಾಗುತ್ತದೆ.

ಕ್ರಿ. ಶ. ೧೧೭೦ನೆಯ ಕಾಲದ ಕವಿ ನೇಮಿಚಂದ್ರನು ಒನಕೆ ಹಾಡನ್ನು "ಶಿವುಡೆ" ಎಂದು ಕರೆದಿದ್ದಾನೆ. ಅದರ ಸ್ವರೂಪವನ್ನು ಹೀಗೆ ತಿಳಿಸಿದ್ದಾನೆ—

"ವಚನ........ಮುಂದೆ ಚಂದನದ ಚೌಕಿಗೆಯ ಮುಂದೆ ಮರಕತದೊರಳೊಳ್ ಮುತ್ತಿನಕ್ಕಿಯಂ ಪೊಯ್ದು ಕನಕದೊನಕೆಯಂ ನಳಿತೋಳ್ಗಳಿಂ ನೆಗಪಿ.

ಶಿವುಡೆ

ಅಂಗಜನೈದು ಶರಂಗಳ ಬಂದ ಬ
ಸಂಗಳ ಪುಟಿಲ ತಳಿರುಯ್ಯಲಜ್ಜವೆ
ಳ್ದಂಗಳ ಮೇಲೆ ಸಿರಿ ನಿಳ್ಕೆ ||
ಮನವನಂಟುವ ರೂಪು ದನಿ ನಗೆ ಮೆಲ್ಪು ತಂ
ಪಸುಗುಣಮುಳ್ಳ ವಧುವಿರೆ ಮತ್ತೆ ಪೂ
ವಿನ ಸರಲೇಕೆ ಮದನಂಗೆ ||

ಪತ್ತಿದ ಗಂಡರ ಚಿತ್ತವ ಕಿಡಲೀಯ
ದಿತ್ತುದೆ ಕೋಟಿ ತನಗೆಂಬ ಸೂಳೆಯ
ಹಿತ್ತಿಲಲ್ಲಿರದೇ ಸುರಭೂಜ || [3]

ಇಲ್ಲಿ ಇಂತಹ ಹತ್ತು ತ್ರಿಪದಿಗಳ ಕೊನೆಗೆ ಬರುವ ವಚನದಲ್ಲಿ ಹೀಗೆ ಹೇಳಿದೆ—

"ಎಂದಿರ್ವರೊಂದಾಗಿ ಸೂಳೆಸಿದ್ಧಾಂತಮನೊನಕೆವಾಡಂ ಮಾಡಿ ಪಾಡುವ ಪೆಂಡಿರ ವಿನೋದಕ್ಕೆ ವಿನೋದ ನದೀ ಸಮುದ್ರಂ ನಸುನಗುತ್ತುಂ ಪೋಗೆವೋಗೆ" [4]

ಈ ಉದಾಹರಣದಿಂದ ಒನಕೆವಾಡು ತ್ರಿಪದೀರೂಪವುಳ್ಳುದೆಂದೂ ಅದಕ್ಕೆ ಸೂಳೆಸಿದ್ಧಾಂತ ವಿಷಯವಾಗುವುದೆಂದೂ ತಿಳಿಸಿದಂತಾಗಿದೆ.

---

3 ನೇಮಿಚಂದ್ರ—ಲೀಲಾವತೀ ಪ್ರಬಂಧ ಆ. ೨ ಪದ್ಯ ೩೫.

4 ಅಲ್ಲೇ.

ಇದನ್ನೆ ಪುಷ್ಟೀಕರಿಸುವ ಇನ್ನೊಂದು ಕಾವ್ಯೋದಾಹರಣವಿದೆ. ಕ್ರಿ. ಶ. ೧೨೨೨ನೆಯ ಕಾಲದ ಸೋಮರಾಜನೆಂಬ ಕವಿ ವರ್ಣಿಸಿರುವಂತೆ ಉದ್ಭಟ ಕ್ಷಿತೀಶನು ಜ್ಯೋತ್ಸ್ನಾವಿಹಾರವನ್ನು ಕೈಕೊಂಡು ಸೂಳೆಗೇರಿ ಹೊಕ್ಕು, ಅಲ್ಲಿಯ ಆಲಾಪಗಳನ್ನು ಕೇಳುತ್ತ ಬರುತ್ತಿರುವಲ್ಲಿ ಹೀಗೆ ಹೇಳಿದೆ—

"ಮತ್ತೊಂದೆಡೆಯೊಳೆಳವೆಣ್ ತಳತಳಿಪ ಪೊನ್ನೊನಕೆಗಳಂ ಪಿಡಿದು, ರುಂದ್ರ ಚಂದ್ರಕಾಂತದೊರಲೊಳ್ ತಂಡುಲಮಂ ತೀವಿ ಚಳಿಸುತ್ತತಿ ವಿಳಾಸದಿಂ ಕಲಕಂಠ-ಕಂಠ-ಸಂಜನಿತ-ಮಂಜುಳ-ಮಧುರ-ಸ್ವರಮಂ ಶಟಿವಿಂಚರದಿಂ ಪಾಡುತ್ತೆಸೆದಿರ್ದಳ್ ಅದೆಂತೆಂದೊಡೆ—

ನೆವವಿಟ್ಟು ವಿತ್ತಮಂ ಕವರಲಱಿಯದೆ ಸುಮ್ಮ
ನವಿಚಾರದಿಂದೆ ವಿಟನನಂಡಲೆವುದೀ
ಯುವನಿಯೊಳ್ ನೀತಿ ಬೆಲೆವೆಣ್ಗೆ ||

ಚದುರಂಗೆ ನೆತ್ತಮಿಂ ಪೊದವಿದ ಪಾಡು ಸ
ಕ್ಕದದೋದು ಹಾಸ್ಯಮಿನಿಗಬ್ಬಮೊಳ್ಪುಮಿ
ಲ್ಲದ ಸೂಳೆವನೆಯೆ ಬಱಿವನೆಯೆ ||

ನಡೆಯುದದು ಕೊಡದೊಡಂ ಕೆಡುವುದದು ಪಿರಿದೀಯೆ
ಸೊಡಗರ್ಗುಡಿಗೆಣ್ಣೆಯೆಱೆದಂತೆ ಬೆಲೆವೆಣ್ಗೆ
ಕುಡುವುದು ಹದಕೆ ಚದುರಿಗಂ || [5]

ಇಲ್ಲಿ ಬಂದಿರುವ ಹನ್ನೆರಡು ಪದ್ಯಗಳು ತ್ರಿಪದಿಗಳು. ಇವನ್ನು ಬತ್ತ ಕುಟ್ಟುವಾಗ ಹಾಡಿದಂತೆ ತಿಳಿಸಲಾಗಿದೆ. ಹಿಂದಿನ ಉದಾಹರಣದಂತೆ ಇಲ್ಲಿಯೂ ಸೂಳೆಸಿದ್ಧಾಂತವೇ ಪ್ರತಿಪಾದಿತವಾಗಿದೆ.

ಕ್ರಿ. ಶ. ೧೫೫೦ನೆಯ ಕಾಲದ ದೇವಪ್ಪಕವಿ ಒಂದೆಡೆ ಶಬರಿಯರು ಬಿದಿರಕ್ಕಿ ಕುಟ್ಟುವುದನ್ನು ವಿವರಿಸಿದ್ದಾನೆ—

---

[5] ಸೋಮರಾಜ—ಉದ್ಭಟ ಕಾವ್ಯ, ೮, ೧೦, ಪದ್ಯ ೮೮,೯೩,೯೫.

ಸಾಂಗತ್ಯ ॥ ವದನ ಬೆವರೆ ಕುರುಳುಣ್ಮಲು ಬಲುವೊಲೆ
ಗದಗದಿಸಲು ತಂತವ್ಮ
ಎದೆಯಾಣ್ಮರ ಪಾಡುತ ವನಚರಿಯರು
ಬಿದಿರಕ್ಕಿಯು ತಳಿಸುವರು ॥

ಇಂದು ಕಾಂತದ ಪೊರಲೊಳು ಬಿದಿರಕ್ಕಿಯು
ಚಂದನದೊನಕೆಯು ಪಿಡಿದು
ಸಿಂದು ತಳಿಸುತ ರಾಗದೊಳ್ ಪಾಡುವ ಪೆಣ್ಣ
ಗೊಂದಣವೆಸೆವುದಾಯೆಡೆಯ ॥ 6

ಇದು ಸಾಂಗತ್ಯದ ಕಾವ್ಯವಾದುದರಿಂದ ಇಲ್ಲಿ ತ್ರಿಪದಿಗೆ ಆಸ್ಪದವಿಲ್ಲ. ಆದರೆ ಈ ಪದ್ಯಗತಿ ತ್ರಿಪದಿಯದೇ ಆಗಿದೆ. ತ್ರಿಪದಿ ಚೌಕಂಗೊಂಡು ಸಾಂಗತ್ಯವೆನಿಸುವುದು. ಇಲ್ಲಿ ಬಂದಿರುವ ಸಾಹಿತ್ಯಾಂಶವಂತೂ ಒನಕೆವಾಡಿ ನಂಥದೇ ಆಗಿದೆಯೆಂಬುದು ಸ್ಪಷ್ಟವಿದೆ.

ಹಿಂದಿನ ಕಾಲದ ಒನಕೆವಾಡು ತ್ರಿಪದೀರೂಪದಲ್ಲಿ ಇದ್ದಂತೆ, ಇಂದು ಉಪಲಬ್ಧವಾಗುವ "ಬತ್ತ ಕುಟ್ಟುವ ಹಾಡು" ತ್ರಿಪದಿಯಲ್ಲೇ ಇದೆ. ಇದರ ಲ್ಲಿಯೂ ಹಿಂದಿನವರಂತೆ ರತಿಶೃಂಗಾರದ ಮಾತುಗಳೇ ಬರುತ್ತವೆ—

ತ್ರಿಪದಿ ॥ ಬತ್ತ ತೊಳಿವ ಕೈಗೆ ಬಯಿನೆ ಮುಳ್ಳೆಟ್ಟಿತು
ಮದ್ದಿಗ್ಹೋದಣ್ಣ ಬರಲಿಲ್ಲ ಬಸರೂರ
ಸೂಳೆ ಕಂಡಣ್ಣ—ಬೆರಗಾದ ॥

ಕೋಟ ಕುಂದಾಪುರ ನೋಟಕ್ಕೆ ಗಂಗೊಳ್ಳಿ
ಪೇಟೆ ಪಟ್ಟಣವು ಬಸರೂರು (ಬಸರೂರ) ಹೆಣ್ಮಕ್ಳು
ನಾಟಕದ ನಗೆಯ ನಗುವರು. 7

ಅನಾಗರಿಕ ಅನಕ್ಷರ ಜನತೆಯು ಮುಚ್ಚುಮರೆಯಿಲ್ಲದ ಶೃಂಗಾರಹಾಸ್ಯ ಮಯ ಸಾಹಿತ್ಯಾಂಶವು ಇಂದಿನ ಒನಕೆವಾಡುಗಳಲ್ಲಿ ಕಾಣುತ್ತದೆ. ಈ ಒನಕೆ ವಾಡುಗಳು ತ್ರಿಪದೀರೂಪದಲ್ಲಿರುವುದೂ ಕಾಣುತ್ತಿದೆ.

---

6 ದೇವಪ್ಪ ಕವಿ—ರಾಮ ವಿಜಯಕಾವ್ಯ ಸಂಧಿ ೧೫, ಪದ್ಯ ೭೫,೭೭.

7 ಟ. ಕೇಶವಭಟ್ಟ—ಹಾಡಿನ ಚೂಡಾಮಣಿ (ಜನಪದ ಗೀತ ಸಂಗ್ರಹ)

ಬತ್ತ ಕುಟ್ಟುವಾಗ ತ್ರಿಪದಿಗಳನ್ನು ಹಾಡಬೇಕೆಂಬ ಶಾಸ್ತ್ರನಿಯಮವು ಹನ್ನೆರಡನೆಯ ಶತಮಾನದಲ್ಲೇ ಇದ್ದಂತೆ ತೋರುತ್ತದೆ. ಕಲ್ಯಾಣಿಯ ಚಾಲುಕ್ಯರಾಜನಾದ ಮೂರನೆಯ ಸೋಮೇಶ್ವರನು (ಕ್ರಿ. ಶ. ೧೧೨೬–೧೧೩೮) ತನ್ನ "**ಅಭಿಲಷಿತಾರ್ಥ ಚಿಂತಾಮಣಿ**" ಅಥವಾ "**ಮಾನಸೋಲ್ಲಾಸ**" ಎಂಬ ಗ್ರಂಥದಲ್ಲಿ ಹೇಳಿರುವ ವಿಚಾರ ಹೀಗಿದೆ—

ತ್ರಿಪದೀ ಕಂಡನೇ ಚೈವ ಶೃಂಗಾರೇ ವಿಪ್ರಲಂಭಕೇ
ಪ್ರಾಯ : ಶಾಸ್ತ್ರಿಭಿರೇನ್ವೈಷಾ ಗೇಯಾ ನಾನಾರ್ಥಭೂಷಿತಾ[6]

ಬತ್ತ ಮೊದಲಾದ ಧಾನ್ಯವನ್ನು ಕುಟ್ಟುವಲ್ಲಿ, ಶೃಂಗಾರ ವಿಪ್ರಲಂಭಗಳನ್ನು ವರ್ಣಿಸುವಲ್ಲಿ, ಕೊಂಕು-ಅಣಕ-ಕಟಕಿ-ನೇರು ಮುಂತಾದ ಅರ್ಥಗಳಿಂದ ಶೋಭಾಯಮಾನವಾದ ತ್ರಿಪದಿಗಳನ್ನು ಹಾಡಬೇಕೆಂದು ಮೇಲಿನ ಶಾಸ್ತ್ರಾಭಿಪ್ರಾಯ. ಬತ್ತ ಕುಟ್ಟುವ ಹಾಡು ಇಂದಿಗೂ ಇದೇ ಲಕ್ಷಣದಿಂದ ಕೂಡಿರುತ್ತದೆ. ಇದರಿಂದ ಒನಕೆವಾಡಿನ ಸ್ವರೂಪವು ತ್ರಿಪದಿಯೇ ಆಗಿದೆಯೆಂಬುದು ಸಿದ್ಧಾಂತವಾಗುವುದು. ಇದಕ್ಕೆ ಕಾರಣವೇನೆಂಬುದನ್ನು ಪರಿಶೀಲಿಸಬೇಕು.

ಬತ್ತ ಕುಟ್ಟುವುದು ಹೇಗೆ ಅತ್ಯಂತ ಪ್ರಾಚೀನವೋ ಹಾಗೆಯೇ ಕನ್ನಡದ ದೇಶೀಯ ಪದ್ಯರೂಪಗಳಲ್ಲಿ ಅತಿ ಪ್ರಾಚೀನವಾದುದು ಮತ್ತು ಮೂಲರೂಪವಾದುದು "ತ್ರಿಪದಿ" ಇದು ಕನ್ನಡದ ಛಂದಸ್ಸಿನ ಓಂಕಾರ ಅಥವಾ ತ್ರಿಮೂರ್ತಿ. ತ್ರಿಪದಿಯನ್ನು ಶ್ರೀ ದ. ರಾ. ಬೇಂದ್ರೆಯವರು "**ಕನ್ನಡ ವೃತ್ತಗಳ ಗಾಯತ್ರಿ**"[7] ಎಂತಲೂ, **ಡಿ.** ಎಸ್. ಕರ್ಕಿಯವರು "**ಛಂದೋ ಗಂಗೆಯ ಗಂಗೋತ್ರಿ**"[8] ಎಂತಲೂ, ರಂ. ಶ್ರೀ. ಮುಗಳಿಯವರು "**ಕನ್ನಡ ಛಂದಸ್ಸಿನ ತಾಯಿಬೇರು**"[9] ಎಂತಲೂ ತಿಳಿಸಿರುತ್ತಾರೆ. ಮೊತ್ತ

---

6 ಪ್ರೊ. ಡಿ. ಎಲ್. ಎನ್. ಅವರ ಲೇಖನ—ಪ್ರಬುದ್ಧ ಕರ್ನಾಟಕ ಸಂಪುಟ ೪೫, ಸಂಚಿಕೆ ೨ (೧೯೬೩).

7 ಹಲಸಂಗಿ ಗೆಳೆಯರು–ಗರತಿಯ ಹಾಡು, ೧೯೫೭, ಪರಿಚಯ ಪುಟ ೧೩.

8 ಡಿ. ಎಸ್. ಕರ್ಕಿ–ಛಂದೋವಿಕಾಸ

9 ರಂ. ಶ್ರೀ ಮುಗಳಿ–ಸಾಹಿತ್ಯ ಚರಿತ್ರೆ, ೧೯೫೩, ಪುಟ ೧೧

ಮೊದಲಾಗಿ ತ್ರಿಪದಿ ಪದ್ಯವು ಕ್ರಿ. ಶ. ೭೦೦ ನೆಯ ಕಾಲದಲ್ಲಿ ಕೆತ್ತಿರುವ ಬಾದಾಮಿಯ ಶಾಸನವೊಂದರಲ್ಲಿ ದೊರೆತಿದೆ. ಅದು ಪೂರ್ವದ ಹಳಗನ್ನಡ ಶಬ್ದರೂಪವುಳ್ಳದು, ಕಪ್ಪೆ ಅರಭಟ್ಟನ ಸ್ತುತಿರೂಪದಲ್ಲಿದೆ. ಆ ತ್ರಿಪದಿಗಳಲ್ಲಿ ಮೊದಲನೆಯದಕ್ಕೆ ಪಾದಗಳು ಎರಡೇ ಇವೆ. ಉಳಿದ ಮೂರು ಪದ್ಯಗಳೂ ಮೂರು ಪಾದಗಳುಳ್ಳವು ಉದಾಹರಣೆಗೆ ಎರಡನ್ನು ಇಲ್ಲಿ ಕೊಡಲಾಗಿದೆ—

ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟಜನ ವರ್ಜಿತನ್ ಕಲಿಯುಗವಿಪರೀತನ್

ಸಾಧುಗೆ ಸಾಧು ಮಾಧೂರ್ಯಂಗೆ ಮಾಧೂರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ [10]

ಇದೇ ರೀತಿ ಶಿಕಾರಿಪುರದ ೧೨೯ ನೆಯ, ಕ್ರಿ. ಶ ೧೦೭೧ ನೆಯ ಕಾಲದ ಶಾಸನದಲ್ಲಿಯೂ ಎರಡು ತ್ರಿಪದಿಗಳಿವೆ.[11] ಕ್ರಿ. ಶ. ೯ ನೆಯ ಶತಮಾನದ ಕವಿರಾಜಮಾರ್ಗದಲ್ಲಿ "ತಿವದಿ" ಎಂಬ ಶಬ್ದ ಬಂದಿದೆ. ಕನ್ನಡದಲ್ಲಿ ಪ್ರಾಚೀನವೂ ದೇಶೀಯವೂ ಆಗಿರುವ ತ್ರಿಪದಿ ಅತಿ ಪ್ರಾಚೀನತೆಯುಳ್ಳ ಬತ್ತ ಕುಟ್ಟುವ ಕೆಲಸಕ್ಕೆ ಹೊಂದಿಕೆಯಾದುದು ಸಹಜವೆನಿಸುತ್ತದೆ. ಪ್ರಾಯಃ ತ್ರಿಪದಿಯು ಪ್ರಚಲಿತ ಪದ್ಯವಾವುದಿದ್ದರೂ ಅದನ್ನು ಒನಕೆವಾಡಾಗಿ ಬಳಸುತ್ತಿದ್ದಿರಬಹುದು. ಒನಕೆಯಿಂದ ಬತ್ತ ಕುಟ್ಟುವಾಗ ಸ್ಫೂರ್ತಿಗೊಂಡು ಲಯಬದ್ಧವಾಗಿ ನುಡಿದ ಜೀವನಾನುಭವವೇ ತ್ರಿಪದಿರೂಪಗೊಂಡಿರಬೇಕು ಎನಿಸುತ್ತದೆ. ತ್ರಿಪದಿರೂಪದಲ್ಲಿರುವ ಅವೆಷ್ಟೋ ಜೋಗುಳ ಪದಗಳು, ಶೋಭಾನೆಯ ಸೊಲ್ಲುಗಳು, ಬೀಸುವ ಹಾಡುಗಳು, ವಿನೋದದ ಬಿಡಿ ಹಾಡುಗಳು-ಮುಂತಾದುವೆಲ್ಲವೂ ಒನಕೆವಾಡುಗಳೇ ಆಗುತ್ತವೆ. ಅಂದರೆ, ಅವನ್ನೆಲ್ಲ-ಅಂಥವನ್ನೆಲ್ಲ ಬತ್ತ ಕುಟ್ಟುವಾಗ ಹಾಡುತ್ತಾರೆ. ಇದರಿಂದ ತ್ರಿಪದಿಯೆಂಬುದು ಛಂದಸ್ಸೂಚಕವೆಂದೂ, ಒನಕೆವಾಡೆಂಬುದು ಹಾಡುವ ಸಂದರ್ಭಸೂಚಕವೆಂದೂ ಇಟ್ಟುಕೊಳ್ಳಬಹುದು.

---

[10] Indian Antiquary, 1881 Vol. X P. 61.

[11] ಶಾಸನ ಪದ್ಯಮಂಜರಿ, ೧೯೨೩, ಪುಟ ೧೯.

"ತ್ರಿಪದಿ" ಎಂದಾಗ ಅದು ಮೂರು ಪಾದಗಳಿರುವ ಪದ್ಯವೆಂದು ಸ್ಥೂಲವಾಗಿ, ಸ್ಪಷ್ಟವಾಗಿ ತಿಳಿದವರೆಲ್ಲರೂ ಕೊಡುವ ವಿವರಣೆ. ಈ ಮೂರು ಪಾದಗಳಲ್ಲಿ ೧೧ ಅಂಶಗಣಗಳು, ಅವುಗಳಲ್ಲಿ ೬ ನೆಯದು ಮತ್ತು ೧೦ ನೆಯದು ಬ್ರಹ್ಮಗಣ, ಉಳಿದವೆಲ್ಲವೂ ವಿಷ್ಣುಗಣಗಳು. (ಬ್ರಹ್ಮ-ವಿಷ್ಣು ರುದ್ರಗಣಗಳಿಗೆ ರತಿ-ಮದನ-ಶರಗಣಗಳೆಂಬ ಹೆಸರೂ ಇದೆ.) ನಿಯಮವು ಹೀಗಿದ್ದರೂ ಕೆಲವೆಡೆ ಗಣಪಲ್ಲಟವಿದೆ–ಅಂದರೆ, ವಿಷ್ಣುವಿನ ಸ್ಥಾನದಲ್ಲಿ ಬ್ರಹ್ಮಗಣ ಅಥವಾ ರುದ್ರಗಣ ಬರುವುದಿದೆ. ಹೀಗಿದೆ ತ್ರಿಪದಿಯ ಛಂದೋಲಕ್ಷಣ. ಆದರೆ ತ್ರಿಪದಿಗೆ ಪಾದಗಳೆಷ್ಟು? ಹೆಸರುಗಳಾವುವು? ಎಂಬಿವನ್ನೂ ವಿವೇಚಿಸುವುದು ಆವಶ್ಯಕ.

ತ್ರಿಪದಿಗೆ ತಿವಿದಿ, ತ್ರಿವಿಧಿ, ತಿವುಡೆ–ಎಂಬ ಹೆಸರುಗಳೂ ಕಾಣಿಸಿವೆ. 'ವಚನ' ಎಂದೂ ಅದನ್ನು ಕರೆದಿದ್ದಾರೆ. ಸರ್ವಜ್ಞನ ತ್ರಿಪದಿಗಳಿಗೆ ಸರ್ವಜ್ಞ ಪದಗಳು, ಸರ್ವಜ್ಞ ಮೂರ್ತಿಯ ವಚನಗಳು–ಎಂಬ ಹೆಸರುಗಳಿವೆ. ತ್ರಿಪದಿಯು ಪದ್ಯಗಂಧಿಯಾಗಿರುವ ಗದ್ಯದಂತೆ ಕಾಣಿಸುವುದೇ 'ವಚನ' ಎನಿಸಲು ಕಾರಣವಿರಬಹುದು. ತ್ರಿಪದಿಯು ರಚಿಸಿದ ಕೃತಿಯಲ್ಲ, ಆಡಿದ ಮಾತುಗಳೇ ಇರಬೇಕು ಕವಿರಾಜಮಾರ್ಗ, ಛಂದೋಂಬುಧಿ ಗ್ರಂಥಗಳಲ್ಲಿ ತ್ರಿಪದಿಯನ್ನು 'ತಿವದಿ' ಎಂದು ಪ್ರಯೋಗಿಸಿದೆ. ಇದು 'ತ್ರಿಪದಿ' ಶಬ್ದದ ತದ್ಭವರೂಪವೇ ಸರಿ 'ತ್ರಿವಿಧಿ' ಎಂಬುದು ಮಹಾದೇವಿಯಕ್ಕನ "ಯೋಗಾಂಗ ತ್ರಿವಿಧಿ" ಎಂಬಲ್ಲಿ ಕಾಣುತ್ತದೆ. ಅದಕ್ಕೆ ಉದಾಹರಣವಿದು—

ಅಷ್ಟದಳ ಕಮಲದಾ ಬಟ್ಟಬಯಲೊಳಗೊಂದು
ಮುಟ್ಟಬಾರದಾ ಘನವಿಹುದು ಮನದೊಳಗೆ
ದೃಷ್ಟಿಯಿಟ್ಟವನೆ ಕಡುಜಾಣ [12]

ಇದು ತ್ರಿಪದಿಯೆ. ತ್ರಿವಿಧಿ ಎಂದುದು ಅದರಲ್ಲಿ ಅಡಕವಾದ ಪಾದಗಳ ಮೂರು ವಿಧಾನ (ವಿಧಿ) ಗಳನ್ನು ಅಥವಾ ಹಾಡಲು ಪ್ರಸಿದ್ಧವಾದ ಯಾವುದೋ ಮೂರು ಮಟ್ಟುಗಳನ್ನು ಲಕ್ಷ್ಯವಿಟ್ಟಾಗಿರಬಹುದು. ಅಂತು

---

12 ಕರ್ಣಾಟಕ ಕವಿಚರಿತೆ, ಭಾಗ ೧, ಪುಟ ೧೪೯.

ತ್ರಿವಿಧಿಯು ತ್ರಿಪದಿಗಿಂತ ಬೇರೆಯಲ್ಲವೆಂಬುದು ನಮಗಿಲ್ಲಿ ಬೇಕಾದುದು. ಲೀಲಾವತೀ ಪ್ರಬಂಧದಲ್ಲಿ "ತಿವುಡೆ" ಎಂದು ಕರೆದುದು ತ್ರಿಪದಿಗೆ ಹೊಂದುವ ತ್ರಿಪುಟ ತಾಳದ ಗತಿಯನ್ನು ಲಕ್ಷಿಸಿಯೇ ಆಗಿರಬೇಕು. ಯಕ್ಷಗಾನದಲ್ಲಿ ಇಂದಿಗೂ ಹಲವು ಪದ್ಯರೂಪಗಳಿಗೆ ತಾಳದ ಹೆಸರೇ ರೂಢವಾಗಿದೆ. ಅಂಶ ಗಣನಿಬದ್ಧವಾಗಿರುವ ತ್ರಿಪದಿಗೆ ನಿಶ್ಚಿತವಾದ ತಾಳವಿಲ್ಲ. ಆದುದರಿಂದ ಅದನ್ನು ತಾಳಹೀನ ಪದ್ಯವೆಂದಿದ್ದಾರೆ.

ತದಾ ಸ್ಯಾತ್ ತ್ರಿಪದೀ ತಾಳಹೀನಾ ಕರ್ಣಾಟಭಾಷಯಾ [13]

ತ್ರಿಪದಿಯು ಅಂಶಗಣಗಳನ್ನು ಮಾತ್ರೆಗಳ ಲಯಕ್ಕನುಗುಣವಾಗಿ ಹಿಗ್ಗಿಸಿ, ಕುಗ್ಗಿಸಿ ಬೇರೆ ಬೇರೆ ತಾಳಗಳಿಗೆ ಹೊಂದಿಸಲು ಸಾಧ್ಯವಾಗುವುದೇ ಅದರದೊಂದು ವೈಶಿಷ್ಟ್ಯ. ಅದರ ಪ್ರತಿಯೊಂದು ಅಂಶಗಣವನ್ನೂ ಚತುರ್ಮಾತ್ರಾಗಣಕ್ಕೆ ಸರಿಪಡಿಸಿ ಹಾಡಿದಾಗ ಅದು ಏಕತಾಳಕ್ಕೆ ಸರಿಹೋಗುವುದು. ಐದು ಮಾತ್ರೆಗಳ ಗಣವಾಗುವಂತೆ ಎಳೆದು ಹಾಡಿದಾಗ, ಝಂಪೆ ತಾಳದ ಗತಿ ಬರುವುದು. ಎಲ್ಲ ಗಣಗಳನ್ನೂ ವಿಷ್ಣುಗಣ ಕಲ್ಪನೆಯಿಂದ ಪ್ರತಿಯೊಂದು ಅಂಶಕ್ಕೂ ಎರಡು ಮಾತ್ರೆಯ ಪಾಲ್ಯವಿತ್ತು ಹಾಡಿದಾಗ ಆರು ಮಾತ್ರೆಗಳಿಂದ ಗತಿವಡೆವ ರೂಪಕತಾಳವಾಗುವುದು ಹಾಗೆಯೇ ಮೂರು-ನಾಲ್ಕು ಮಾತ್ರೆಗಳ ಖಂಡವಾಗಿ ಮಾಡಿಕೊಂಡರೆ ಅಟ್ಟತಾಳ, ತಿವುಡೆತಾಳಗಳಾಗುವುವು. ಇದರಿಂದ ತ್ರಿಪದಿಗೆ ತಾಳವಾವುದೆನ್ನಲು ಸಾಧ್ಯವಿಲ್ಲ—ಎಂಬುದನ್ನು ಲಕ್ಷಿಸಿಯೇ ಅದನ್ನು ತಾಳಹೀನವೆಂದೂ ವಚನವೆಂದೂ ಪೂರ್ವಿಕರು ಕರೆದರೆಂದು ತೋರುತ್ತದೆ.

ತ್ರಿಪದಿಗೆ ಪಾದಗಳು ಮೂರೇ ಎಂದು ಹೇಳಲು ಬರುವುದಿಲ್ಲ. ಜನಪದ ಗೀತಗಳಲ್ಲಿ ಇಂದಿಗೂ ತ್ರಿಪದಿಯ ಗತಿಯಿಂದ ಕೂಡಿದ ಎರಡೇ ಪಾದಗಳಿರುವ ಹಲವು ಪದ್ಯಗಳಿರುತ್ತವೆ. ಹಿಂದೆ ಉದಾಹರಿಸಿದ ಶಾಸನ ಪದ್ಯದಲ್ಲಿ ಮೊದಲನೆಯದಕ್ಕೆ ಎರಡೇ ಪಾದಗಳು. ಮೂರು ಸಾಲುಗಳಿರುವ ತ್ರಿಪದಿಗಳಲ್ಲಿಯೂ ಎರಡನೆಯ ಸಾಲಿನ ಮೂರನೆಯ ಗಣಕ್ಕೆ ಪದ್ಯವೊಮ್ಮೆ ಕೊನೆಗೊಂಡು ಪುನಃ

---

13 ಶಾರ್ಙ್ಗದೇವ–ಸಂಗೀತ ರತ್ನಾಕರ (Adyar Ed. 1944) IV.

ಅದು ಆವೃತ್ತಿ ಹೊಂದಿದಂತೆ ಯಾರಿಗಾದರೂ ಕಾಣುತ್ತದೆ. ಉದಾಹರಣೆಗೆ ಕೆಳಗಿನ ತ್ರಿಪದಿಯನ್ನು ಪರಿಶೀಲಿಸಬಹುದು—

ಹಾಲ ಕಂದಲ ಮುಂದೆ ಬಾಲನ ತೊಟ್ಟಿಲು
ಲೀಲೆಯಾಡುವನಾ ಸೆಳೆಮಂಚ ||

ಈ ಪದ್ಯವು ಮೂರು ಪಾದಗಳನ್ನು ತಾಳಿದಾಗ—

ಹಾಲ ಕಂದಲ ಮುಂದೆ ಬಾಲನ ತೊಟ್ಟಿಲು
ಲೀಲೆಯಾಡುವನಾ ಸೆಳೆಮಂಚದಾ ಕೆಳಗೆ
ಬಾಳಂತಿ ಮೊಸರ ಕಡೆದಳು|| 14

ಇದರಿಂದ ತ್ರಿಪದಿ ಮೂಲತಃ ಎರಡೇ ಪಾದಗಳಿರುವ ಪದ್ಯವಾಗಿತ್ತೆಂದು ಭಾವಿಸಬೇಕಾಗುತ್ತದೆ. ತ್ರಿಪದಿಯು ಮೊದಲು ಎರಡು ಸಾಲಿನ ಹಾಡಾಗಿದ್ದು ಎರಡನೆಯ ಪಾದದ ಪೂರ್ವಭಾಗ ಮತ್ತೊಮ್ಮೆ ಪುಗುಚಿ ಒಂದು, ಮೂರು ಸಾಲಾಯಿತೆಂದು ಕೈಪಿಡಿಕಾರರು ಅಭಿಪ್ರಾಯಪಟ್ಟಿದ್ದಾರೆ. ತಮಿಳಿನ ಕುಜಳ್ ಮತ್ತು ವೆಣ್ಬಾವೃತ್ತಗಳನ್ನು ಹೋಲುವುದೆಂದೂ ತಿಳಿಸಿದ್ದಾರೆ [15]

ಮೂರುಪಾದಗಳಾಗಿ ಕಾಣುವ ತ್ರಿಪದಿಯನ್ನೇ ದ್ವಿತೀಯಾಕ್ಷರ ಪ್ರಾಸ ಲಕ್ಷಿತವಾಗಿ ಗಣಿಸಿದಾಗ, ಮೊದಲ ಪಾದದಲ್ಲಿ ಎರಡು ಪಾದಗಳಾಗುತ್ತವೆ. ಆಗ ತ್ರಿಪದಿಗೆ ಪಾದಗಳು ನಾಲ್ಕು—

ಹಾಲ ಕಂದಲ ಮುಂದೆ
ಬಾಲನ ತೊಟ್ಟಿಲು
ಲೀಲೆಯಾಡುವನಾ ಸೆಳೆಮಂಚದಾ ಕೆಳಗೆ
ಬಾಳಂತಿ ಮೊಸರ ಕಡೆದಳು ||

ಕೆಲವರು ಛಂದಶ್ಶಾಸ್ತ್ರಜ್ಞರು ತ್ರಿಪದಿಗೆ ಪಾದಗಳು ನಾಲ್ಕೆಂದೇ ಹೇಳಿದುದನ್ನಿಲ್ಲಿ ಲಕ್ಷಿಸಬಹುದು. ಶಾಂರ್ಗದೇವನ ವಿಚಾರವಿದು.

ಆದ್ಯಾದ್ವಿ ದ್ವಿಗಣೌ ಪಾದೌ ತೃತೀಯಶ್ಚ ಚತುರ್ಗಣಃ
ಚತುರ್ಥ ಸ್ತ್ರಿಗಣಃ ಪಾದೇಷ್ವೇಕಾದಶಗಣಾ ಇಮೇ 16

---

14 ಹಾಡಿನ ಚೂಡಾಮಣಿ—ಮೊಸರು ಕಡೆವ ಹಾಡು.

15 ಕನ್ನಡ ಕೈಪಿಡಿ, ೧೯೫೫, ಸಂಪುಟ ೧, ಭಾಗ ೨ ಪುಟ ೧೨೫.

16 ಶಾಂರ್ಗದೇವ—ಸಂಗೀತ ರತ್ನಾಕರ, (೧೯೪೪) iv.

ತ್ರಿಪದಿಯ ಮೊದಲ ಎರಡು ಪಾದಗಳಲ್ಲಿ ಎರಡೆರಡು ಗಣಗಳೂ ಮೂರನೆಯ ಪಾದದಲ್ಲಿ ನಾಲ್ಕು ಗಣಗಳೂ ನಾಲ್ಕನೆಯದರಲ್ಲಿ ಮೂರು ಗಣಗಳೂ ಹೀಗೆ ಒಟ್ಟು ಹನ್ನೊಂದು ಗಣಗಳು—ಎಂದು ಸಂಗೀತರತ್ನಾಕರದಲ್ಲಿ ಹೇಳಿದೆ. ಮಾನಸೋಲ್ಲಾಸದಲ್ಲಿಯೂ ತ್ರಿಪದಿಗೆ ಇದೇ ರೀತಿ ನಾಲ್ಕು ಪಾದಗಳೆಂದು ವಿವರಿಸಿದೆ.[17] ಜಯಕೀರ್ತಿಯು ತ್ರಿಪದಿ ರೂಪದಲ್ಲೇ ಬರೆದ ಸೂತ್ರದಲ್ಲಿ ನಾಲ್ಕು ಪಾದಗಳನ್ನೇ ವಿವರಿಸಿದ್ದಾನೆ.[18] ಹೀಗೆ ಲಾಕ್ಷಣಿಕರ ಅಭಿಪ್ರಾಯವು ಕೂಡ ತ್ರಿಪದಿಗೆ ಪಾದಗಳು ನಾಲ್ಕೆಂಬುದು ಕಂಡುಬರುತ್ತದೆ. ನಮ್ಮ ದೃಷ್ಟಿಯಿಂದ ತ್ರಿಪದಿಗೆ ಪಾದಗಳು ಐದೂ ಆಗುತ್ತಿವೆ. ಉದಾಹರಣವಿದು–

ಹಾಲ ಕಂದಲ ಮುಂದೆ
ಬಾಲನ ತೊಟ್ಟಿಲು
ಲೀಲೆಯಾಡುವನಾ ಸೆಳೆಮಂಚ
ಲೀಲೆಯಾಡುವನಾ ಸೆಳೆಮಂಚದಾ ಕೆಳಗೆ
ಬಾಳಂತಿ ಮೊಸರ ಕಡೆದಳು.

ಹೀಗೆ ತ್ರಿಪದಿಗೆ ಪಾದಗಳು ಎರಡರಿಂದ ಐದರ ವರೆಗೂ ಗಣಿಸಲಾಗುತ್ತಿವೆ. ಹೀಗೆ ಗಣಿಸುವುದು ಅನುಚಿತವೇನೂ ಅಲ್ಲ. ಹಾಗಿದ್ದರೆ ಅದಕ್ಕೆ 'ತ್ರಿಪದಿ' ಎಂಬ ಹೆಸರೇಕೆ? ಎಂಬುದೀಗ ಸಮಸ್ಯೆಯಾಗಿಯೇ ಉಳಿಯಿತು. ಈ ಸಮಸ್ಯೆಯನ್ನು ಪರಿಹರಿಸಲು ಇಲ್ಲಿ ಯಥಾಸಾಧ್ಯ ಪ್ರಯತ್ನಿಸಲಾಗಿದೆ. ಬತ್ತ ಕುಟ್ಟುವ ಹಾಡಿನೊಳಗಣ ಒಂದು ತ್ರಿಪದಿಯಿದು—

ಮುತ್ತಿರು ಮೊರಿಯಲಿ ಮುದುಕಿಯು ಕೇರಲಿ
ನುತ್ತಿರುವವರು ಬಡಿಯಲಿ ಜಗಲೀಲಿ
ಕೂತು ನಾವ್ ಕವಳ ಮೆಲ್ಲುವೋ[19]

---

17 ಪ್ರ. ಕರ್ಣಾಟಕ ೪೫–೨, ೧೯೬೩. ಶ್ರೀ ಡಿ. ಎಲ್. ನರಸಿಂಹಾಚಾರ್ ಅವರ ಲೇಖನ, ಪುಟ ೫೬.

18 ಜಯಕೀರ್ತಿ—ಛಂದೋನುಶಾಸನ, ಸಪ್ತಮೋಧಿಕಾರ: ಶ್ಲೋಕ ೯.

19 ಹಾಡಿನ ಚೂಡಾಮಣಿ—ಬತ್ತ ಕುಟ್ಟುವ ಹಾಡು.

ಬತ್ತ ಮೆರಿಯಲು ಮೂವರನ್ನಿಲ್ಲಿ ಅಪೇಕ್ಷಿಸಿದೆ. ಬತ್ತವನ್ನು ಒಬ್ಬಳೆ ಕುಟ್ಟುವುದೆಂದರೆ ಬೇಸರ. ಇಬ್ಬರು ಅದಕ್ಕಿಂತ ಲೇಸಾದರೂ ಕೆಲಸವು ಮಧ್ಯಮ. ಮೂವರಿದ್ದರೆ ಲೇಸು, ಕೆಲಸವು ಬೇಗನೆ ಸಾಗುವುದು. ನಾಲ್ವರು ಕೂಡಿ ಒಂದೇ ಗುಳಿಗೆ ಕುಟ್ಟುವುದೆಂದರೆ, ಕೆಲಸವು ಅತಿ ಸಾವಕಾಶವಾಗುವುದು; ಇದು ಆಲಸ್ಯದ ಲಕ್ಷಣವಾಗುವುದು. ಆದುದರಿಂದಲೇ ಮೂವರು ಮೆರಿಯುವುದೇ ಮೇಲು. ಮೂವರು ಮೂರು ಒನಕೆಗಳನ್ನೆತ್ತಿ ಅನುಕ್ರಮವಾಗಿ ನೆಲಕುಳಿಗೆ (ಒರಲಿಗೆ) ಗುರಿತಪ್ಪದೆ ಕುಟ್ಟುವಾಗ ಹೊರಕ್ಕೆ ಹಾರುವ ಧಾನ್ಯವನ್ನು ತಂತಮ್ಮ ಒಂದೊಂದು ಪಾದದಿಂದ ಕೂಡುವರು. ಹೀಗೆ ಕೂಡದಿದ್ದರೆ ಅಕ್ಕಿ ಸರಿಯಾಗಿ ತೊಳ್ಳದು; ಅಲ್ಲದೆ ಒಂದೇಭಾಗಕ್ಕೆ ಒನಕೆಯು ಪೆಟ್ಟು ಬಿದ್ದುದರಿಂದ ಅಕ್ಕಿ ಕಡಿಯುವುದು (ಹೋಳಾಗುವುದು). ಆ ಒನಕೆಪೆಟ್ಟಿನ ತಾಳಗತಿ ಒಂದಕ್ಕೊಂದು ಸಮಾನಾವಕಾಶವುಳ್ಳದಾಗಿ ರೂಪಕತಾಳವಾಗುವುದು. ಈ ಮೂರು ಪೆಟ್ಟುಗಳಲ್ಲಿ ಒಂದು ಮಾತ್ರ ಸ್ವಲ್ಪ ತಡೆದು ಬೀಳುತ್ತಿದ್ದರೆ ಏಕತಾಳವಾಗುವುದು. ಅದು ಇನ್ನಷ್ಟು ತಡೆದು ಬೀಳುತ್ತಿದ್ದರೆ ಆಗ ತ್ರಿಪುಟ ತಾಳವಾಗುವುದು. ಹೀಗೆ ಯಾವುದಾದರೊಂದು ತಾಳಗತಿಗೆ ಅನುಗುಣವಾಗಿ ಮೂರು ಪಾದಗಳ ಕ್ರಿಯೆಯನ್ನೂ ಕೂಡಿಸಿ ಬತ್ತಕುಟ್ಟುತ್ತ-ಹಾಡಲು ಅಳವಡುವ ಗೀತ ತ್ರಿಪದಿ.

ಈಗ ವಿವರಿಸಿದಂತೆ ಬತ್ತಕುಟ್ಟುವ ಕೆಲಸವೇ ತ್ರಿಪದಿಯೆನಿಸುವುದು. ಬತ್ತಕುಟ್ಟುವಾಗ ಹಾಡುವ ಗೀತಸಾಹಿತ್ಯವು ಇದರಿಂದಲೇ ತ್ರಿಪದಿಯೆನಿಸಿರಬೇಕು. ತ್ರಿಪದಿಯನ್ನು ಒನಕೆವಾಡಾಗಿ ಹಾಡಬೇಕೆಂದು 'ಮಾನಸೋಲ್ಲಾಸ' ಗ್ರಂಥದಲ್ಲಿ ತಿಳಿಸಿದುದೂ ಈ ಕಾರಣದಿಂದಲೇ ಮತ್ತಷ್ಟು ಸರಿಗಾಣುತ್ತಿದೆ. ಆದುದರಿಂದ ಅನಾದಿ ಕಾಲದಿಂದ ನಡೆದು ಬಂದ ಬತ್ತ ಕುಟ್ಟುವ ಕೆಲಸಕ್ಕೆ ಹೊಂದಿಕೆಯಾಗುವ ಹಾಡಾಗಿ 'ಒನಕೆವಾಡು' ಮತ್ತು 'ತ್ರಿಪದಿ' ಎಂಬವೆರಡೂ ಲಾಕ್ಷಣಿಕವಾಗಿ ಅಭಿನ್ನಗಳೆಂದು ನಿರ್ಧಾರಮಾಡಬಹುದಲ್ಲವೆ?

ಸಾಂಗತ್ಯದ ಥಾಟಿ ಮತ್ತು ಛಂದಸ್ಸು

[ಸಾಂಗತ್ಯದ ಲಕ್ಷಣ—ಅಂಶಗಣ ಪ್ರಸ್ತಾರ–ವೈಶಿಷ್ಟ್ಯ–ಸಾಂಗತ್ಯ ತಾಳಹೀನವೆ?-ಸಾಂಗತ್ಯಕ್ಕೊಪ್ಪುವ ತಾಳಗಳು.]

ಕನ್ನಡದ ಹಾಡುಗಬ್ಬಗಳಲ್ಲಿ ಹಾಗೂ ಹಳ್ಳಿಹಾಡುಗಳಲ್ಲಿ ಪ್ರಯುಕ್ತವಾಗಿರುವ ಪ್ರಸಿದ್ಧವಾದ ಒಂದು ಛಂದಸ್ಸು 'ಸಾಂಗತ್ಯ'. ಇದರಲ್ಲಿ ಬರುವ ಕವಿಭಾವ ಅತಿಸಹಜ. ಇದು ಅರ್ಥ ಸೌಲಭ್ಯ–ಭಾವ ಮಾಧುರ್ಯ–ಪದ ಸೌಷ್ಠವಗಳಿಂದ ಕೂಡುತ್ತದೆ. ಆದುದರಿಂದ ಇದು ಬಹುಜನಪ್ರಿಯ. ಇದರ ಛಂದೋರಚನೆ ಅಚ್ಚ ದೇಶೀಯ. ರಾಗಜ್ಞಾನವಿಲ್ಲದವರೂ ರಾಗವೆಳೆದು ಪದ ಪದವನ್ನು ಅಕ್ಕರಕ್ಕರವನ್ನು ಉಚ್ಚಾರಣೆಮಾಡಿ ಹಾಡಿದರೆಂದರೆ ಕಿವಿಗೆ ಇಂಪಾಗುವುದು. ಹೆಂಗುಸರ ಶೋಭಾನೆಗಳಂತೆ ತಾಳರಹಿತವಾಗಿಯೂ ಇದು ಹಾಡಲಿಕ್ಕೆ ಬರುತ್ತದೆ. ರಾಗಜ್ಞಾನವುಳ್ಳವರು ಇದನ್ನು ರಸಭಾವಾನುಗುಣವಾದ ರಾಗಗಳ ಮೇಳದಿಂದ ಹಾಡಬಹುದು. ತಾಳದ ಅರಿವುಳ್ಳವರು ಅದರ ಲಯಕ್ಕೆ ಅನುಗುಣವಾದ ಗಮಕ–ಗತ್ತುಗಳಿಂದ ಹಾಡಬಹುದು ರಾಗ-ತಾಳಬದ್ಧವಾದ ಸಾಂಗತ್ಯದ ಗಾನಕ್ಕೆ ವಾದ್ಯವೂ ಮೇಳವಾಗುವುದು. ವಾದ್ಯಸಹಿತ ಗಾನವಿದ್ದಾಗ ಅದಕ್ಕೆ ನೃತ್ಯವನ್ನೂ ಮೇಳವಿಸಲು ಸಾಧ್ಯ. ಆದುದರಿಂದಲೇ ಸಂಗೀತ ಲಕ್ಷಣವನ್ನು ಲಾಕ್ಷಣಿಕರು ಹೀಗೆ ಹೇಳಿದ್ದಾರೆ–

"ಗೀತಂ ವಾದ್ಯಂ ತಥಾ ನೃತ್ಯಂ
ತ್ರಯಂ ಸಂಗೀತಮುಚ್ಯತೇ" [1]

ಸಾಂಗತ್ಯ ಪದ್ಯವು ಗೀತ-ವಾದ್ಯ-ನೃತ್ಯಗಳಿಗೆ ಅಳವಡುವುದೆಂದ ಮೇಲೆ, ಬಹುಶಃ ಸಂಗೀತಕ್ಕೆ ಸಂಬಂಧಿಸಿಯೇ ಇದು ಸಾಂಗತ್ಯವೆನಿಸಿತೋ ಏನೋ ! ಸಂ + ಗತಿ — ಸರಿಯಾದ ಗತಿ (ನಡಿಗೆ)ಯನ್ನು ಪಡೆದುದರಿಂದ ಸಾಂಗತ್ಯವೆನಿಸಿತೆಂದು ಭಾವಿಸುವುದು ಸೂಕ್ತವೇ ಆಗಿದೆ.

---

[1] ಶಾಂರ್ಗದೇವ—ಸಂಗೀತ ರತ್ನಾಕರ, ಸ್ವರಾಧ್ಯಾಯ, ಶ್ಲೋಕ ೨೧.

ಸಾಂಗತ್ಯವನ್ನು ತಾಳಬದ್ಧವಾಗಿ ಹಾಡಬಹುದಾಗಿದ್ದರೆ, ಅದಕ್ಕೆ ಒಪ್ಪುವ ತಾಳ ಯಾವುದು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವಾಗಿ ಸಾಂಗತ್ಯವನ್ನು ಯಾವ ತಾಳದಲ್ಲಿಯೂ ಹಾಡಬಹುದು—ಎಂದು ಒಂದೇ ಮಾತಿನ ಉತ್ತರ ಕೊಡಬಹುದು. ಈ ಉತ್ತರದ ಸಮರ್ಥನೆ ಆಗಬೇಕಾದರೆ, ಇದರ ಛಂದೋಗತಿಯನ್ನು ಅವಲೋಕಿಸಬೇಕಾಗುತ್ತದೆ.

ಕನ್ನಡ ದೇಶೀಯ ಪದ್ಯಸಾಹಿತ್ಯದ ಇತಿಹಾಸವನ್ನು ನೋಡಿದರೆ, ಉಪಲಬ್ಧವಾಗಿರುವ ಆಧಾರದಿಂದ "ತ್ರಿಪದಿ"ಯೇ ಮೊದಲ ರೂಪವಾಗಿ ಕಾಣಿಸುತ್ತದೆ. ಕ್ರಿ. ಶ. ೭೦೦ ನೆಯ ಬಾದಾಮಿ ಶಾಸನದಲ್ಲಿ ಈ ದೇಶೀಚ್ಛಂದವು ಮೊದಲ ಬಾರಿಗೆ ಬಂದಿದೆ. ಅಲ್ಲಿಂದೀಚೆ ಹಲವಾರು ಮಹಾಕವಿಗಳು ತಮ್ಮ ಕಾವ್ಯಗಳಲ್ಲಿಯೂ ಜಾನಪದ ಕವಿ ಕವಯಿತ್ರಿಯರು ಹಳ್ಳಿಹಾಡುಗಳಲ್ಲಿಯೂ ತ್ರಿಪದಿಯನ್ನು ಬಳಸಿದ್ದಾರೆ. ತ್ರಿಪದಿಯೇ "ಚೌಕಂಗೊಂಡು" ಸಾಂಗತ್ಯವಾಗಿದೆ. ಸಾಂಗತ್ಯದ ಸ್ವರೂಪವನ್ನು ಇದಕ್ಕಿಂತಲೂ ಸ್ಪಷ್ಟವಾಗಿ ಹೇಳುವುದಾದರೆ, ತ್ರಿಪದಿಗೆ ಮೂಲವೆನಿಸುವ "ಏಳೆ" ತನ್ನ ಆರನೆಯ ಮತ್ತು ಏಳನೆಯ ಗಣಗಳ ಪರಸ್ಪರ ಪಲ್ಲಟದಿಂದ ಸಾಂಗತ್ಯದ ಪದ್ಯಾರ್ಧವಾಗುವುದು. ಅದನ್ನಿಲ್ಲಿ ಉದಾಹರಣೆಯಿಂದ ಸ್ಪಷ್ಟೀಕರಿಸಬಹುದು—

ತ್ರಿಪದಿ

೧ ೨ ೩ ೪

ಕಣ್ಣು ಕಾ. ಣದ ಹಕ್ಕಿ. ಹಣ್ಣುಳ್ಳ. ವನಕ್ಹೋಗಿ.

೫ ೬ ೭ ೮

ಹಣ್ಣಂದೇ. ತಿಂಗು. ಕಸುಗಾಯು. ಕುಡಿಗದು.

೯ ೧೦ ೧೧

ಗಿಣ್ಣು ಹಾ. ಲೇಂದೇ. ಹನಿನೀರ.

ಏಳೆ

೧ ೨ ೩ ೪

ಕಣ್ಣು ಕಾ. ಣದ ಹಕ್ಕಿ. ಹಣ್ಣುಳ್ಳ. ವನಕ್ಹೋಗಿ.

೫ ೬ ೭

ಹಣ್ಣಂ ದೇ. ತಿಂಗು. ಕಸುಗಾಯು.

ಸಾಂಗತ್ಯದ ಪದ್ಯಾರ್ಧ

೧ ೨ ೩ ೪

ಕಣ್ಣು ಕಾ. ಣದ ಹಕ್ಕಿ. ಹಣ್ಣು ಳ್ಳ. ವನಕ್ಹೋಗಿ.

೫ ೬ ೭

ಹಣ್ಣೆಂ ದೇ. ಕಸುಗಾಯ. ತಿಂಗು.

ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುವ ಅಂಶಗಳಿವು :—

ತ್ರಿಪದಿಗೆ ಮೇಲೆ ಕಾಣಿಸಿದಂತೆ ಹನ್ನೊಂದು ಗಣಗಳಿರುತ್ತವೆ. ಅವುಗಳಲ್ಲಿ ಆರನೆಯ ಮತ್ತು ಹತ್ತನೆಯ ಸ್ಥಾನಗಳಲ್ಲಿ ಬ್ರಹ್ಮಗಣಗಳಿರುತ್ತವೆ. ಉಳಿದವೆಲ್ಲವೂ ವಿಷ್ಣು ಗಣಗಳು. ನಿಯಮ ಹೀಗಿದ್ದರೂ ಕೆಲವು ತ್ರಿಪದಿ ಪದ್ಯಗಳಲ್ಲಿ ಒಮ್ಮೊಮ್ಮೆ ವಿಷ್ಣುಗಣದ ಸ್ಥಾನದಲ್ಲಿ ರುದ್ರಗಣ ಬರುವ ವಾಡಿಕೆಯಿದೆ. ಕೆಲವೊಮ್ಮೆ ವಿಷ್ಣುಗಣ ಸ್ಥಾನದಲ್ಲಿ ಬ್ರಹ್ಮಗಣ ಬರುವುದೂ ಇದೆ. ಅಂತಹ ಸಂದರ್ಭದಲ್ಲಿ ರುದ್ರಗಣವನ್ನು ಶೀಘ್ರೋಚ್ಚಾರಣೆಯಿಂದ ವಿಷ್ಣುಗಣದ ಮೌಲ್ಯಕ್ಕೆ ಸರಿಯಾಗುವಂತೆ ಮೊಟಕು ಮಾಡಬೇಕಾಗುತ್ತದೆ. ಹಾಗೆಯೇ ಬ್ರಹ್ಮಗಣವನ್ನು ಎಳೆದು, ವಿಷ್ಣುಗಣ ಮೌಲ್ಯಕ್ಕೆ ಬರುವಂತೆ ಹಿಗ್ಗಿಸಬೇಕಾಗುತ್ತದೆ.

ತ್ರಿಪದಿಯನ್ನು ಏಳನೆಯ ಗಣದ ಕೊನೆಗೆ ನಿಲ್ಲಿಸಿದ ತುಣುಕು "ಏಳೆ" ಯಾಗುತ್ತದೆ. ಅದೇ ಏಳೆಯ ಏಳನೆಯ ಗಣವನ್ನು ಆರನೆಯ ಸ್ಥಾನದಲ್ಲಿಟ್ಟು, ಆರನೆಯ ಗಣವನ್ನು ಏಳನೆಯದಾಗಿ ಮಾಡಿದಾಗ ಸಾಂಗತ್ಯದ ಅರ್ಧ ಪದ್ಯವಾದುದನ್ನು ಮೇಲೆ ಕಾಣಿಸಿದೆ

ಈ ಗಣಗಳು ಅಂಶಗಣಗಳಾಗಿದ್ದು, ಇವಕ್ಕೆ ಅದ್ಭುತವಾದ ಮತ್ತು ವಿಚಿತ್ರವಾದ ಹ್ರಾಸ-ವಿಕಾಸ ಶಕ್ತಿಗಳಿವೆ. ಈ ಶಕ್ತಿಗಳಿಗೆ ಅವುಗಳ ಸ್ವರೂಪವೇ ಕಾರಣ.

ಅಂಶಗಣಗಳು ಕನ್ನಡದಲ್ಲಿ ಬ್ರಹ್ಮ-ವಿಷ್ಣು-ರುದ್ರ ನಾಮಾಂಕಿತದಿಂದ ಮೂದೆರನಾಗಿವೆ. ಛಂದೋನುಶಾಸನ, ಮಾನಸೋಲ್ಲಾಸ ಗ್ರಂಥಗಳಲ್ಲಿ ಇವೇ ಗಣಗಳಿಗೆ ಅನುಕ್ರಮವಾಗಿ ರತಿ-ಮದನ-ಶರ ಎಂಬ ಗಣನಾಮಗಳಿವೆ.

ತೆಲುಗಿನಲ್ಲಿ ಇವನ್ನೇ ಸೂರ್ಯ-ಇಂದ್ರ-ಚಂದ್ರ ಗಣಗಳೆಂದು ಕರೆದಿದ್ದಾರೆ. ತಮಿಳಿನಲ್ಲಿ ಈರಶೈಶೀರ್, ಮೂವಶೈಶೀರ್, ನಾಲಶೈಶೀರ್ ಎಂದು ಈ ಗಣಗಳಿಗೆ ಅವುಗಳ ಅಂಶಗಳ ಸಂಖ್ಯೆಗೆ ಅನುಗುಣವಾದ ಹೆಸರು. ಈ ಗಣಗಳು ಕ್ರಮವಾಗಿ ಎರಡು, ಮೂರು, ನಾಲ್ಕು ಗುರುಚಿಹ್ನೆಗಳ ಮೂಲದಿಂದ ಪ್ರಸ್ತಾರಗೊಳ್ಳುತ್ತವೆ. ಬ್ರಹ್ಮಗಣ ಸಂಖ್ಯೆ ನಾಲ್ಕು, ವಿಷ್ಣುಗಣಗಳು ಎಂಟು, ಮತ್ತು ರುದ್ರಗಣಗಳು ಹದಿನಾರು. ಇವುಗಳ ಪ್ರಸ್ತಾರ ಕ್ರಮದಲ್ಲಿ ಮೊದಲನೆಯ ಸಾಲಿನಲ್ಲಿ ಮಾತ್ರ ಒಂದು ಗುರುವಿನ ಕೆಳಗೆ ಎರಡು ಲಘುವಿನಂತೆ ಬರುತ್ತದೆ. ಇದರಿಂದ ಈ ಗಣಗಳ ಮಾತ್ರಾ ಮೌಲ್ಯದಲ್ಲಿ ಲಕ್ಷ್ಯಾರ್ಹವೆನಿಸುವಷ್ಟು ಹೆಚ್ಚು ಕಡಮೆಗಳಾಗುತ್ತವೆ. ಆ ಗಣಗಳ ಪ್ರಸ್ತಾರವಿದು—

ಬ್ರಹ್ಮಗಣ (೪)

∩	∩
||	∩
∩	|
||	|

ವಿಷ್ಣುಗಣ (೮)

∩	∩	∩
||	∩	∩
∩	|	∩
||	|	∩
∩	∩	|
||	∩	|
∩	|	|
||	|	|

ರುದ್ರಗಣ (೧೬)

∩	∩	∩	∩
||	∩	∩	∩
∩	|	∩	∩
||	|	∩	∩
∩	∩	|	∩
||	∩	|	∩
∩	|	|	∩
||	|	|	∩
∩	∩	∩	|
||	∩	∩	|
∩	|	∩	|
||	|	∩	|
∩	∩	|	|
||	∩	|	|
∩	|	|	|
||	|	|	|

ಮೇಲಿನ ಪ್ರಸ್ತಾರದಿಂದ, ಗಣಗಳ ಸ್ವರೂಪ–ಮಾತ್ರಾಮೌಲ್ಯಗಳನ್ನು ಗಣಿಸಿದಾಗ ಈ ಗಣಗಳ ವೈಶಿಷ್ಟ್ಯ ಅರಿವಾಗುವುದು. ಬ್ರಹ್ಮಗಣದ ಮಾತ್ರಾಮೌಲ್ಯ ಹೆಚ್ಚೆಂದರೆ ನಾಲ್ಕು ಮಾತ್ರೆಗಳು. ಕಡಮೆಯೆಂದರೆ ಮೂರೇ.

ಹಾಗೆಯೇ ವಿಷ್ಣುಗಣಕ್ಕೆ ಹೆಚ್ಚೆಂದರೆ ಆರು ಮಾತ್ರೆಗಳು; ಕನಿಷ್ಠಕ್ಕಿಳಿದರೆ ನಾಲ್ಕು. ರುದ್ರಗಣಕ್ಕೆ ಅತ್ಯಧಿಕವೆಂದರೆ ಎಂಟು ಮಾತ್ರೆಗಳಾಗುತ್ತವೆ. ಕಡಮೆಯೆಂದರೆ ಐದೇ. ಹಾಡುಗಳಲ್ಲಿ ಈ ಗಣಗಳನ್ನು ಆಯಾ ಹಾಡಿನ ಗತಿಗೆ ಅನುಗುಣವಾಗಿ ಹಿಗ್ಗಿಸಿ ಅಥವಾ ಕುಗ್ಗಿಸಿ, ಕೆಲವೆಡೆ ಒಂದು ಗಣವನ್ನು ಬೇರೊಂದು ಗಣದ ಮೌಲ್ಯಕ್ಕೆ ಮಾರ್ಪಡಿಸುವ ಅವಕಾಶವೂ ಉಂಟು. ಅದಕ್ಕೊಂದು ಉದಾಹರಣೆ—

ತಾವರಿಯು. ಗಿಡಹುಟ್ಟಿ. ದೇವರಿಗೆ ನೆರಳಾದಿ.
ನಾ ಹುಟ್ಟಿ. ಮನಿಗೆ. ಎರವಾದೆ. ಹಡೆದವ್ವ.
ನೀ ಕೊಟ್ಟ. ಮನಿಗೆ. ಹೆಸರಾದೆ. [2]

ಮೇಲಿನ ತ್ರಿಪದಿಯಲ್ಲಿ ಒಂದನೆಯ ಮತ್ತು ಮೂರನೆಯ ಗಣಗಳು-ತಾವರಿಯು, ದೇವರಿಗೆ ಎಂಬವು ರುದ್ರಗಣಗಳಾಗಿವೆ. ಉಚ್ಚಾರಣೆಯಲ್ಲಿ ಇವನ್ನು ತಾವರ್‍ಯ, ದೇವರ್ಗೆ ಎಂದು ಕುಗ್ಗಿಸಿ ವಿಷ್ಣುಗಣಗಳ ರೂಪಕ್ಕೆ ತರಬಹುದು. ಈ ಬಗೆಯ ಹ್ರಾಸದ ಲಕ್ಷಣವೂ ಕೆಲವೆಡೆ ವಿಕಾಸದ ಲಕ್ಷಣವೂ ತ್ರಿಪದೀಜನ್ಯವೆನಿಸುವ ಸಾಂಗತ್ಯಕ್ಕೂ ಅನ್ವಯಿಸುತ್ತವೆ

ತ್ರಿಪದಿಯ ಏಳು ಗಣಗಳಲ್ಲಿ ಅಥವಾ ಏಳೆಯಲ್ಲಿ ಸಾಂಗತ್ಯದ ಅರ್ಧಪದ್ಯ ಅಡಕವಾಗಿದೆ-ಎಂಬುದನ್ನು ತೋರಿಸಿಕೊಡಲಾಯಿತು. ಸಾಂಗತ್ಯದಲ್ಲಿ ಗಣಪಲ್ಲಟ ಬಹಳವಾಗಿದೆ. ಇದರಲ್ಲಿ ಏಳನೆಯ ಗಣ ಮಾತ್ರ ಬ್ರಹ್ಮವಾಗಿರುತ್ತದೆ. ಉಳಿದುವೆಲ್ಲವೂ ವಿಷ್ಣುಗಣಗಳೇ ಆಗಬೇಕಾಗಿದ್ದರೂ ಕೆಲವೆಡೆಗಳಲ್ಲಿ ಬ್ರಹ್ಮವೇ ಬಂದಿದ್ದು ವಿಷ್ಣುವಿನ ಬೆಲೆಯನ್ನು ಗಳಿಸಿಕೊಳ್ಳುತ್ತದೆ :—

ಶ್ರೀ ಪೌ. ಲೋಮೀಶ. ನತಪಾದ ಪದ್ಮನ.
ಶ್ರೀಪತಿ. ಸುತಮದ. ಹರನ.
ಶ್ರೀಪಂಚ. ಕಲ್ಯಾಣ. ಯುತ ಜಿನ. ರಾಜನ.
ಶ್ರೀಪಾ. ದವೆ ಶರ. ಣೆನಗೆ. [3]

---

2 ಗರತಿಯ ಹಾಡುಗಳು—ಕನ್ನಡ ಬಾವುಟ ಪುಟ ೭೩,

3 ದೇವಪ್ಪ ಕವಿ—ರಾಮವಿಜಯ ಕಾವ್ಯ, ಸಂಧಿ ೧, ಪದ್ಯ ೧,

(ಇಲ್ಲಿ ಮೊದಲನೆಯ ಮತ್ತು ಹನ್ನೆರಡನೆಯ ಗಣಗಳು ಬ್ರಹ್ಮಗಣಗಳಾಗಿವೆ.) ಧಾಟಿಗನುಗುಣವಾಗಿ ಹಾಡುವಾಗ ಈ ಅಸ್ಥಾನ ಪ್ರವಿಷ್ಟವಾದ ಬ್ರಹ್ಮಗಣಗಳನ್ನು ವಿಷ್ಣುಗಣಗಳಾಗಿ ಹಿಗ್ಗಿಸಿಕೊಳ್ಳಬೇಕು.

ಪದ್ಯದ ಮುಖ್ಯ ರಚನೋದ್ದೇಶ ಅದನ್ನು ಹಾಡುವುದೇ ಆಗಿರುತ್ತದೆ. ಹಾಡುವುದೆಂದೊಡನೆ ಅದರ 'ಧಾಟಿ'ವ್ಯಕ್ತವಾಗುತ್ತದೆ. ಧಾಟಿಯ ಮೂಲಕವಾಗಿ ಪದ್ಯದ ಗತಿ ಸಂಗತವಾಗುತ್ತದೆ. ತನ್ಮೂಲಕ ಆಯಾ ಪದ್ಯದ ಸಾಹಿತ್ಯದಲ್ಲಡಗಿರುವ ಅರ್ಥ-ರಸ-ಭಾವಗಳು ವೇದ್ಯವಾಗುತ್ತವೆ. ಧಾಟಿಯಲ್ಲಿ ರಾಗ–ತಾಳ ಎಂಬ ಎರಡೂ ಅಂಶಗಳು ಬರುತ್ತವೆ. ರಾಗವು ಆಯಾ ಹಾಡಿನ ಸಾಹಿತ್ಯದಲ್ಲಿ ಪ್ರಕಟವಾಗುವ ಭಾವ-ರಸಗಳಿಗೆ ತಕ್ಕಂತೆ ಇರುವಂಥದು. ಸರಿಗಪಾದಿ ಸ್ವರ ರಚನೆಯಿಂದ ಪುಷ್ಟಿಗೊಳ್ಳುವ ರಾಗಗಳ ವಿವರಣೆ ಇಲ್ಲಿ ಪ್ರಸ್ತುತವಲ್ಲ. 'ತಾಳ'ವೆಂಬುದು ಹಾಡಿನ ಸಾಹಿತ್ಯದ ಛಂದೋಗತಿಯನ್ನು ಅವಲಂಬಿಸುವುದರಿಂದ ಪ್ರಸ್ತುತ ವಿಷಯವಾಗುತ್ತದೆ. ಛಂದಸ್ಸಿಗೆ ಮೂಲ ವಿಷಯವು ಮಾತ್ರಾಗಣನೆ. ತಾಳವೂ ಮಾತ್ರೆಯನ್ನೇ ಆಧಾರವಾಗಿಟ್ಟು ಮುಂದುವರಿಯುತ್ತದೆ.[4] ಹೀಗೆ ತಾಳ ಮತ್ತು ಛಂದಸ್ಸುಗಳ ಮೂಲಾಧಾರ ಒಂದೇ. ಹಾಗಿದ್ದರೆ ಸಾಂಗತ್ಯಕ್ಕೆ ತಾಳ ಯಾವುದು? ಇದಕ್ಕೆ ಉತ್ತರ, ತ್ರಿಪದಿಗೆ ತಾಳ ಯಾವುದು ಎಂಬಲ್ಲಿಂದ ಬರುತ್ತದೆ. ಏಕೆಂದರೆ ತ್ರಿಪದಿಯ ಚೌಕವೇ ಸಾಂಗತ್ಯ.

"ತ್ರಿಪದೀ ತಾಲಹೀನಾ ಕರ್ಣಾಟ ಭಾಷಯಾ"[5]

ಎಂದರೆ ಕನ್ನಡದ ತ್ರಿಪದಿಗೆ ತಾಳವಿಲ್ಲವೆಂದಂತೆ ಆಯಿತು. ಇಂದಿಗೆ ಪ್ರಚಲಿತವಾಗಿರುವ ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ "ಸಾಂಗತ್ಯ" ಪದ್ಯ

---

4 ಸಂಗೀತ ವಿದ್ವಾಂಸರು ಒಂದು ಚತುರಶ್ರ ಲಘುವನ್ನು, ಅಂದರೆ ನಾಲ್ಕು ಹ್ರಸ್ವಾಕ್ಷರ ಕಾಲವನ್ನು ಒಂದು 'ಮಾತ್ರಾ ಕಾಲ' ಎನ್ನುತ್ತಾರೆ, ಆಗ ಛಂದಶ್ಶಾಸ್ತ್ರದಲ್ಲಿ ಹೇಳುವ ಒಂದು 'ಮಾತ್ರಾ ಕಾಲ' ಎಂಬುದು ಸಂಗೀತ ಶಾಸ್ತ್ರದಂತೆ ಒಂದು ಅಕ್ಷರ (ಹ್ರಸ್ವಾಕ್ಷರ) ಕಾಲವಾಗುತ್ತದೆ.

5 ಶಾರ್ಙ್ಗದೇವ–ಸಂಗೀತ ರತ್ನಾಕರ–ಭಾಗ iv.

ವಿಲ್ಲದೇ ಇರಲಾರದು. ಅದು ಬಂದಲ್ಲೆಲ್ಲ "ರಾಗ-ಸಾಂಗತ್ಯ, ತಾಳ-ರೂಪಕ" ಅಗ್ರೋಲ್ಲೇಖವಿರುತ್ತದೆ. ಅಲ್ಲಿ ಸೂಚಿಸಿರುವ 'ರಾಗ' ಎಂಬುದು ಬೇರೆ ಕಡೆ ಕಲ್ಯಾಣಿ, ಕಾಂಭೋದಿ-ಇತ್ಯಾದಿ ಹೆಸರುಗಳನ್ನು ಸೂಚಿಸುತ್ತದೆ. ಆದರೆ 'ಸಾಂಗತ್ಯ' ಎಂಬುದು ಹಾಡಿನ ಮಟ್ಟು, ಪದ್ಯಸ್ವರೂಪ ಮಾತ್ರ. ಏಕೆಂದರೆ 'ಸಾಂಗತ್ಯ' ಎಂಬೊಂದು ರಾಗವಿದ್ದಂತೆ ತೋರುವುದಿಲ್ಲ. ಯಕ್ಷಗಾನ ಕೃತಿಗಳಲ್ಲಿ ಇನ್ನಿತರ ಕಡೆ ಸೂಚಿಸಿರುವ ಹೆಸರಿನ ರಾಗಗಳಿದ್ದರೂ ಅವು ಕೂಡ ಹೆಚ್ಚಿನ ಮಟ್ಟಿಗೆ ವಿಶಿಷ್ಟರೀತಿಯ ಛಂದಸ್ಸೂಚಕವೇ ಆಗಿರುತ್ತವೆ. ಸಾಂಗತ್ಯ ಪದ್ಯಗಳಿಗೆಲ್ಲ ಯಕ್ಷಗಾನ ಕೃತಿಗಳಲ್ಲಿ ರೂಪಕ ತಾಳವನ್ನೆ ಹೇಳಿದೆ. ತ್ರಿಪದಿ ತಾಳಹೀನವಾದರೆ ಸಾಂಗತ್ಯವೂ ತಾಳಹೀನವಾಗಬೇಕಲ್ಲ! ವಾದನ ನೃತ್ಯಗಳೆರಡೂ ಇರುವ ಯಕ್ಷಗಾನ ಪ್ರಯೋಗದಲ್ಲಿ ಸಾಂಗತ್ಯವನ್ನು ತಾಳಬದ್ಧವಾಗಿಯೇ ಹಾಡುತ್ತಾರೆ. ಯಕ್ಷಗಾನದಲ್ಲಿ ಸಾಂಗತ್ಯಕ್ಕೆ ರೂಪಕತಾಳವನ್ನು ನಿರೂಪಿಸಲಾಗಿದ್ದರೂ ಕುಶಲನಾದ ಭಾಗವತನು (ಹಾಡುಗಾರನು) ಅದನ್ನು ಅಷ್ಟತಾಳ, ತ್ರಿಪುಟತಾಳ, ಏಕತಾಳ, ಆದಿತಾಳ, ಚೌತಾಳ, ಝಂಪೆತಾಳ, ತಿತ್ತಿತ್ತೈಗಳಲ್ಲಿ—ಹೆಚ್ಚೇಕೆ, ಎಲ್ಲ ತಾಳಗಳಲ್ಲಿಯೂ ಸಂದರ್ಭವರಿತು ಹಾಡುತ್ತಾನೆ. ಇದರಿಂದ 'ತಾಲಹೀನಾ' ಎಂಬುದಕ್ಕೆ ನಿರ್ದಿಷ್ಟವಾದ ಯಾವುದಾದರೂ 'ಒಂದು ತಾಳ'ವೆಂಬುದಿಲ್ಲ—ಎಲ್ಲಾ ತಾಳಗಳಿಗೂ ಆಶ್ರಯವಾಗುತ್ತದೆ-ಎಂಬುದೇ ಅರ್ಥವಾಗಿದೆ. ಸಾಂಗತ್ಯ ಪದ್ಯದಲ್ಲಿ ಇವನ್ನು ಶ್ರುತಪಡಿಸಲಾಗುವುದು. ಭರತೇಶ ವೈಭವದಿಂದ ಆಯ್ದ ಪದ್ಯವಿದು—

| | | | ∩ ∩ | ∩ | ∩ ∩ ∩ |
ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ

| | | ∩ ∩ ∩ | ∩ |
ಕಿರಣ ಸುಜ್ಞಾನ ಪ್ರಕಾಶ

| | | | | | | | ∩ | | | | ∩ |
ಸುರರ ಮುಕುಟ ಮಣಿ ರಂಜಿತ ಚರಣಾಬ್ಜ

| | ∩ | | | | | ∩ |
ಶರಣಾಗು ಪ್ರಥಮ ಜಿನೇಶ

ಈ ಸಾಂಗತ್ಯಪದ್ಯವನ್ನು ಗುರು ಲಘುಪಲ್ಲಟವಿಲ್ಲದೆ, ಇದ್ದುದನ್ನು ಇದ್ದಂತೆ ಓದಿದರೆ, ಧಾಟಿಯೂ ಇಲ್ಲದಾಗುವುದು, ತಾಳಹೀನವೂ ಆಗುವುದು.

ಸಂಸ್ಕೃತದಲ್ಲಿ ಅಶ್ವಘೋಷ ಕವಿ ಬರೆದ "ಸೌಂದರನಂದ" ಎಂಬ ಕಾವ್ಯವನ್ನು ಕಡವ ಶಂಭುಶರ್ಮರೆಂಬ ಕವಿಗಳು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಈ ಕಾವ್ಯದ ಒಂಬತ್ತನೆಯ ಮತ್ತು ಹದಿನೈದನೆಯ ಸರ್ಗಗಳನ್ನು ಜಾನಪದ ಸಾಂಗತ್ಯದಲ್ಲಿ ಬರೆದಿದ್ದಾರೆ. ಒಂಬತ್ತನೆಯ ಸರ್ಗದ ಸಾಂಗತ್ಯವನ್ನು "ಶುದ್ಧ ಸಾಂಗತ್ಯ" ಎಂದು ಕರೆದಿರುವ ಕವಿಗಳು ಹೇಳಿರುವ ಮಾತುಗಳಿವು—

"ಜಾನಪದ ಸಾಂಗತ್ಯದಲ್ಲಿ ಹಾಡುವವನ ಇಚ್ಛಾನುಸಾರ ಹ್ರಸ್ವ-ದೀರ್ಘಾಕ್ಷರಗಳನ್ನು ಮಾರ್ಪಡಿಸಿ, ಹೇಳಬೇಕಾಗುವುದರಿಂದ ಶಬ್ದಗಳು ಅಪಾರ್ಥಕಗಳಾಗಿಯೇ ಕೇಳಿಸುವುವು. ಇದ್ದಂತೆ ಹಾಡಲಾಗುವುದಿಲ್ಲ. ಆದರೂ ಅಭ್ಯಾಸ ಪಾಠದಿಂದ ಏಕದೇಶವಿಕೃತ ಶಬ್ದಗಳ ಅರ್ಥವನ್ನು ಭಾಷಾಭಿಜ್ಞರು ತಿಳಿದುಕೊಳ್ಳುವರು. ಇಲ್ಲಿರುವ ಸಾಂಗತ್ಯದಲ್ಲಿ ನಿಶ್ಚಿತ ಮಾತ್ರೆಗಳ ಮತ್ತು ಗುರುವಿನ ನಿಯಮವಿರುವುದರಿಂದ ಹಾಡುವಾಗ ಅಕ್ಷರಗಳನ್ನು ವಿಕೃತಗೊಳಿಸುವ ಅವಶ್ಯವಿಲ್ಲ. ಆದುದರಿಂದ ಈ ಸಾಂಗತ್ಯವನ್ನು "ಶುದ್ಧ ಸಾಂಗತ್ಯ"ವೆಂದು ಕರೆಯಲಾಗಿದೆ." [6] ಉದಾ:—

ಮತ್ತಿಂತಾ. ಸವಣಂ ಪೇ.ಳ್ದಿರೆಯುಂ ನಂ. ದಂ ಬಗೆಯಿಂ
ಪತ್ತಿರೆನ. ಲ್ಲೆ ಯುನುಪಶಾಂ. ತತೆಯುಂ
ಪೆತ್ತಿಲ್ಲಂ. ಮುಚ್ಚಂಬೋಲ್. ಕೇಳ್ದಲ್ಲಾ. ತನ ನುಡಿಯಂ.
ಚಿತ್ತದೆ ಚಿಂ. ತಿಸುತಂತಾ. ನವಳಂ. [7]

ಈ ಸಾಂಗತ್ಯ ಬಂಧವು ಅಂಶಗಣದಿಂದ ಆಗಿಲ್ಲ. ಇದು ಮಾತ್ರಾಗಣಗಳಿಂದಾಗಿರುವ ರಚನೆ. ಇದರಲ್ಲಿ ಎರಡನೆಯ ಮತ್ತು ನಾಲ್ಕನೆಯ ಪಾದಾಂತ್ಯದಲ್ಲಿ ಅಂತ್ಯಗುರುವುಳ್ಳ ಚತುರ್ಮಾತ್ರಾ ಗಣವಿದೆ. ಉಳಿದ

---

6 ದಿ. ಕಡವ ಶಂಭುಶರ್ಮ–ಸೌಂದರನಂದ, ಮೇಲ್ಪುಟ ೩೩.

7 ಅದರಲ್ಲೇ ೯ನೆಯ ಸರ್ಗದ ಮೊದಲನೆಯ ಪದ್ಯ.

ಎಲ್ಲಾ ಗಣಗಳೂ ಆರು ಮಾತ್ರೆಯುಳ್ಳವು. ಇದು ಮಟ್ಟೆತಾಳಕ್ಕೆ (ಖಂಡ ಜಾತಿ ಮಠ್ಯಕ್ಕೆ) ಸರಿಯಾಗಿ ಅಳವಡುತ್ತದೆ. ರೂಪಕತಾಳಕ್ಕೂ ಹೊದ್ದುಗೆಯಾಗುತ್ತದೆ. ಹಾಡುವುದಕ್ಕೆ ಅಷ್ಟೇನೂ ಸೊಗಸಾಗುವುದಿಲ್ಲ. ಈ ಬಗೆಯ ರಚನೆ ಅಪರೂಪ ಮತ್ತು ಅಪೂರ್ವ.

ಸಾಂಗತ್ಯ–ರೂಪಕತಾಳ (ಚತುರಶ್ರಜಾತಿ ರೂಪಕ)

ಸಾಂಗತ್ಯ ಪದ್ಯವನ್ನು ರೂಪಕತಾಳದಲ್ಲಿ ಹಾಡಬೇಕೆಂದು ಇಟ್ಟುಕೊಳ್ಳೋಣ. ರೂಪಕತಾಳದ ಒಂದು ಆವರ್ತಕ್ಕೆ ಮಾತ್ರೆಗಳು ಆರು. ತಾಳಗಳಲ್ಲೆಲ್ಲಾ ಅಭ್ಯಾಸಕ್ಕೆ ಸುಲಭವೆನಿಸುವ ತಾಳವಿದು. ಸಂಗೀತ ಪಾಠ ಕಲಿಸುವವರು "ಲಂಬೋದರ ಲಕುಮಿಕರ" ಎಂಬ ರೂಪಕ ತಾಳದ ಪಾಠವನ್ನೆ ಮೊದಲು ಕಲಿಸುವುದು ಇದೇ ಕಾರಣದಿಂದಿರಬಹುದು. ಸಾಂಗತ್ಯವನ್ನು ರೂಪಕ ತಾಳದಲ್ಲಿ ಹಾಡಬೇಕಾದರೆ, ಅದರ ಪ್ರತಿಯೊಂದು ವಿಷ್ಣುಗಣವನ್ನೂ ಅದರ ಮೂಲಗಣ (ಪ್ರಸ್ತಾರದಲ್ಲಿ ಬರುವ ಮೊದಲನೆಯ ಗಣ) ವಾಗಿರುವ ಮೂರು ಗುರು ಮೌಲ್ಯಕ್ಕೆ ಅಳವಡಿಸಬೇಕು. ಆಗ ಆಯಾ ಗಣವೊಂದಕ್ಕೆ ಆರು ಮಾತ್ರೆಗಳಾಗುವುದರಿಂದ ರೂಪಕತಾಳಕ್ಕೆ ಸರಿಹೋಗುವುದು. ಕೊನೆಯ ಬ್ರಹ್ಮಗಣವನ್ನು ರಾಗವೆಳೆದು ವಿಷ್ಣುಗಣ ಪರಿಮಿತಿಗೆ ತರಬೇಕು. ಆಗ ಹಿಂದಿನ ಅಂಶಗಣ ಘಟಿತ ಸಾಂಗತ್ಯದ ಮಾತ್ರಾಗಣನೆಯ ಸ್ವರೂಪವಿದು :—

|| | | | | ∩ ∩ | | ∩ | | ∩   ∩ ∩ | |
ಪರಮ ಅಪಅ.   ರಂ ಜ್ಯೋ ತಿ ಇ.   ಕೋಟಿಇಚಂ.   ದ್ರಾ ದಿತ್ಯಅ.

| | || | | ∩ ∩ | | ∩ | | | |
ಕಿರಣಅ ಸುಉ.   ಜ್ಞಾನ ಪ್ರ ಅ.   ಕಾಶಅಅಅ.

| | | | | | | | | | | | ∩ | | | | | | ∩ | |
ಸುರರಅಮುಅ.   ಕುಟಮುಅಣಿಇ.   ರಂಜಿಇತಅ.   ಚರಣಾಬ್ಜಅ.

|| ∩ | | | | | | | | ∩ | | | |
ಶರಣಾಗುಉ.   ಪ್ರಥಮುಅಜಿಇ.   ನೇಶಅಅಅ.

ಮಟ್ಟೆತಾಳ (ಮಠ್ಯತಾಳ)

ಮೇಲಿನ ರೂಪಕತಾಳದ ಎರಡು ಆವರ್ತಗಳು–ಅಂದರೆ, ಹನ್ನೆರಡು ಮಾತ್ರೆಗಳ (ಹ್ರಸ್ವಾಕ್ಷರಗಳ) ಕಾಲವು ಖಂಡ ಜಾತಿ ಮಠ್ಯತಾಳದ ಒಂದು

ಆವರ್ತ. ಮಟ್ಟೆತಾಳದಲ್ಲಿ ಹಾಡುವಾಗ ಪ್ರತಿಯೊಂದು ಗಣದ ಮೊದಲನೆಯ ಅಂಶಕ್ಕೆ ಘಾತ ಬೀಳುತ್ತದೆ.

ತ್ರಿವುಡೆತಾಳ (ತ್ರಿಶ್ರ ತ್ರಿಪುಟತಾಳ)

ತ್ರಿವುಡೆ ತಾಳದ ಒಂದು ಆವರ್ತಕ್ಕೆ ಏಳು ಮಾತ್ರೆಗಳು. ಆದುದರಿಂದ ಇಲ್ಲಿ ಸಾಂಗತ್ಯದ ಒಂದೊಂದು ಗಣವನ್ನು ಏಳು ಮಾತ್ರೆಗಳಾಗಿ (ಮೂರು ಮತ್ತು ನಾಲ್ಕು ಮಾತ್ರೆಗಳ ಒಂದೊಂದು ಘಟಕವಾಗಿ) ಪರಿಗಣಿಸಿ ಹಾಡುವುದರಿಂದ ತ್ರಿವುಡೆತಾಳವಾಗುವುದು :–

ಸಿ ಇಇದ್ಧಅರಅ. ಸಕಅ ತಅ ವಿಇ. ಶುಉಉದ್ಧ ಅರಅ. ಬೋಒಧ ಅಸಅ
ಮೃಉಉದ್ಧಅ:ಅ ನೆನೆಎದುಉಸಾ. ನೀಇಗಳಅಅ.

ಸಿಇಇದ್ಧಅರಅ. ಸದೊ ಒಳುಉಲೋ. ಹವಅನಅದ್ದಿ ಇ. ದಂತಾತ್ಮಅ.

ಸಿಇಇದ್ಧಿ ಇಯುಅ. ಪಡೆಎವೆಎನಿಇ. ನ್ನೇಎನು ಉಉಉ.

ಅಷ್ಟತಾಳ (ಖಂಡಜಾತಿ ಅಟ್ಟತಾಳ)

ಎರಡು ತ್ರಿಶ್ರ ಜಾತಿ ತ್ರಿಪುಟ ತಾಳದ ಆವರ್ತವು ಒಂದು ಖಂಡ ಜಾತಿ ಅಟ್ಟತಾಳವಾಗುವುದರಿಂದ ಮೇಲೆ ಕಾಣಿಸಿದ ತಾಳಗತಿಯಿಂದಲೇ ಅಷ್ಟತಾಳವೂ ಗತಿಗೊಳ್ಳುತ್ತದೆ.

ಸಾಂಗತ್ಯದ ಗಣಗಳಲ್ಲಿ ಮೊದಲನೆಯದನ್ನು ಮೂರು ಮಾತ್ರೆಗಳ ಬ್ರಹ್ಮ ಗಣವಾಗಿಯೂ ಎರಡನೆಯುದನ್ನು ನಾಲ್ಕು ಮಾತ್ರೆಗಳ ವಿಷ್ಣು ಗಣವಾಗಿಯೂ ರೂಪಿಸಿ ಹಾಡಲು ಬರುತ್ತದೆ. ಆಗ ಇದೇ ಸಾಹಿತ್ಯವನ್ನು ದ್ರುತಗತಿಯಲ್ಲಿ ಅಥವಾ ಎರಡನೆಯ ಕಾಲದಲ್ಲಿ ಹಾಡಿದಂತಾಗುವುದು. ಆಗಲೂ ತಾಳವು ತ್ರಿವುಡೆ–ಅಷ್ಟತಾಳಗಳೇ ಆಗುವವು. ಉದಾಹರಣೆಯಿದು –

ಸಿದ್ಧರ. ಸತತವಿ. ಶುದ್ಧರ. ಬೋಧಸ

ವೃದ್ಧರ. ನೆನೆದುನಾ. ನೀಇ.ಗಅಅಅ

ಸಿದ್ಧರ. ಸದೊಳುಲೋ. ಹವನದ್ವಿ. ದಂತಾತ್ಮ.

ಸಿದ್ಧಿಯು. ಪಡೆವೆನಿ. ನ್ನೀಎ. ನುಉಉಉ.

ನಿಧಾನತ್ರಿವುಡೆ ತಾಳ

ತ್ರಿವುಡೆತಾಳದಲ್ಲಿಯೇ 'ನಿಧಾನ ತ್ರಿವುಡೆ' ಎಂಬೊಂದು ತಾಳಗತಿ ಯಕ್ಷಗಾನದ ವಾದನ ಪದ್ಧತಿಯಲ್ಲಿ ಪ್ರಚಲಿತವಾಗಿದೆ. ಸಂಗೀತ ಶಾಸ್ತ್ರಜ್ಞರು ಈ ತಾಳವನ್ನು ಹೀಗೆ ವಿವರಿಸುತ್ತಾರೆ—"ತ್ರಿಶ್ರ ಜಾತಿ ತ್ರಿಪುಟತಾಳದಲ್ಲಿ ಬರುವ ಪ್ರತಿಯೊಂದು ಸಶಬ್ದ ಮತ್ತು ನಿಶ್ಶಬ್ದ ಕ್ರಿಯೆಗೂ ಎರಡೆರಡು ಅಕ್ಷರ ಕಾಲ ಕೊಡುವುದರಿಂದ ನಿಧಾನ ತ್ರಿವುಡೆಯಾಗುತ್ತದೆ." ಈ ನಿಧಾನ ತ್ರಿವುಡೆಯ ಒಂದು ಆವರ್ತಕ್ಕೆ ಹದಿನಾಲ್ಕು ಮಾತ್ರೆಗಳಾಗುತ್ತವೆ. ಆದುದರಿಂದ ಈ ತಾಳಕ್ಕೆ ಇದೇ ಸಾಹಿತ್ಯವನ್ನು ಜೊತೆಗೂಡಿಸುವಾಗ ಪ್ರತಿಯೊಂದು ಗಣವನ್ನು ಹದಿನಾಲ್ಕು ಮಾತ್ರೆಗಳಷ್ಟು ವಿಸ್ತರಿಸಬೇಕಾಗುತ್ತದೆ. ಆಗ ಪದ್ಯದ ಪ್ರತಿಯೊಂದು ಗಣದ ನಡುವೆಯೂ ಹಲವು ಸ್ವರಗಳನ್ನು ತುಂಬಬೇಕಾಗುವುದು. ಅರ್ಧ ಪದ್ಯದ ಉದಾಹರಣೆಯಿದು :

ಸಿಇಇಇದ್ಧ ಅಅಅಅಅರಅಅಅ. ಸಅತಅತಅಅಅಅಅವಿಇಇಇ.

ಶುಉಉಉದ್ಧ ಅಅಅಅಅರಅಅಅ. ಬೊಒಒಒಧಅಅಅಅಅಸಅಅಅ.

ವೃಉಉಉದ್ಧ ಅಅಅಅಅರಅಅಅ. ನೆಎನೆಎದುಉಉಉಉಉಉನಾಅಅ

ನೀಇಇಗಅಅಅಅಅಅಅಅಅ.

ಏಕತಾಳ (ಚತುರಶ್ರ ಏಕತಾಳ)

ಏಕತಾಳಕ್ಕೆ ಮಾತ್ರೆಗಳು ನಾಲ್ಕು. ಆದುದರಿಂದ ಇಲ್ಲಿ ಸಾಂಗತ್ಯದ ಪ್ರತಿಯೊಂದು ಗಣವನ್ನು ನಾಲ್ಕು ಮಾತ್ರೆಗಳ ಮೌಲ್ಯಕ್ಕೆ ಅಳವಡಿಸಬೇಕಾಗುವುದು. ಅದು ಹೀಗೆ—

। । । ।	∩ । ।	। । । ।	∩ । ।
ಅಭಿಮತ.	ಸಿದ್ಧಿದಾ.	ಯಕಯೋಗಿ.	ನಾಯಕ.
। । । ।	∩ । ।	∩ ∩	
ಉಭಯಲಾ.	ವಣ್ಯವ.	ರೇಣ್ಯಾ	
। । । ।	∩ । ।	∩ । ।	। । । ।
ಪ್ರಭೆದೋರು.	ತೆನ್ನಂತ.	ರಂಗದೊ.	ಳಿರುಬೋಧ.
। । । । ∩ । ।		। । ∩	
ವಿಭುವೆ ಚಿ. ದಂಬರ.		ಪುರುಷಾ.	

ಆದಿತಾಳ

ಇದೇ ಸಾಹಿತ್ಯವನ್ನು ವಿಲಂಬಗತಿಗೆ ತಂದು, ಪ್ರತಿಯೊಂದು ಗಣವನ್ನು ಎಂಟು ಮಾತ್ರೆಗಳ ಕಾಲಕ್ಕೆ ವಿಸ್ತರಿಸಿದಾಗ, ಇಂತಹ ಎರಡು ಗಣಗಳಿಗೆ ಒಂದು ಆದಿತಾಳದ ಆವರ್ತವಾಗುವುದು. ಆದಿತಾಳಕ್ಕೆ ಹದಿನಾರು ಮಾತ್ರೆಗಳು. ಅಂದರೆ, ನಾಲ್ಕು ಚತುರಶ್ರ ಏಕತಾಳದ ಒಂದು ಆವರ್ತ. ಅರ್ಧಪದ್ಯವನ್ನಿಲ್ಲಿ ಉದಾಹರಣೆಗೆ ಕೊಡಬಹುದು.—

। । । । । । । । । । । । ∩ । ।
ಅ ಭಿ ಮ ಅ ತ ಅ ಸಿ ಇ ಇ ಇ ದ್ಧಿ ಇ ದಾ ಅ. ಅ

। । ∩ । । ∩ । । । । । । । ।
ಯ ಕ ಯೋ ಗಿ ಇ ನಾ ಅ ಅ ಯ ಅ ಕ ಅ ಅ ಅ.

। । । । ∩ ∩ । । । । । । ∩ ∩
ಉ ಭ ಯ ಅ ಲಾ ವಂಣ್ಯ ಅ ವ ಅ ಅ ಅ. ರೇಣ್ಯಾ...............॥

ಚೌತಾಳ

ಚೌತಾಳದ ಮಾತ್ರಾಸಂಖ್ಯೆ ಆದಿತಾಳದಂತೆಯೇ ಇರುತ್ತದೆ. ಇದು ಘಾತದ ಮೇಲೆ ಮೂರು ಅಕ್ಷರಕಾಲ ಬಿಟ್ಟು ಪ್ರಾರಂಭವಾಗುವ ಆದಿತಾಳ. ಅಕ್ಷರಗಳಿಗೆ ಬೀಳುವ ಘಾತದ ದೃಷ್ಟಿಯಿಂದ ಮಾತ್ರ ವ್ಯತ್ಯಾಸವಿರುವುದರಿಂದ ಅದಕ್ಕೆ ಬೇರೊಂದು ಉದಾಹರಣದ ಆವಶ್ಯಕತೆ ಇರದು

ಝಂಪೆತಾಳ

ಝಂಪೆತಾಳಕ್ಕೆ ಮಾತ್ರೆಗಳು ಐದು. ಯಕ್ಷಗಾನವಿದರು ಇದನ್ನು ತ್ವರಿತ ಝಂಪೆ ಎಂಕಲೂ ಸಂಗೀತಜ್ಞರು ಅರೆಝಂಪೆ ಯೆಂತಲೂ ಹೇಳುವರು. ಅದಕ್ಕನುಗುಣವಾಗಬೇಕಾದರೆ ಪ್ರತಿಯೊಂದು ಗಣದ ಮೌಲ್ಯವನ್ನು ಐದು ಮಾತ್ರೆಗೆ ಅಳವಡಿಸಬೇಕಾಗುತ್ತದೆ. ಪದ್ಯದ ಉದಾಹರಣವಿದು —

```
| | | ∩      | | ∩ |     ∩ | | |     | | | | |
ಬರೆಯಬಾ.     ರದತಿದ್ದ     ಬಾರಅದ.      ಕಡೆದಅರೆ.

| | | ∩      | | ∩ |     | | | | |
ದೊರೆಯಬಾ.    ರದರೂಪಿ.    ನಭವಅಅ

| | | ∩      | | | ∩     ∩ | | |     | | | |
ಬರೆದುಬ.      ಜ್ಜಣಿಪಿದಂ.   ತೆನ್ನೆಎದೆ.     ಯೊಳಗಿರು

| | | | |    ∩ | | |     | | | | |
ಗುರುವೆಎಚಿ.   ದಂಬಅರ.      ಪುರುಷಅಅ.
```

ಝಂಪೆತಾಳದಲ್ಲಿ ನಿಧಾನಝಂಪೆ ಎಂಬ ಉಪಭೇದವಿದೆ. ಅದರ ಒಂದು ಆವರ್ತಕ್ಕೆ ಹತ್ತು ಮಾತ್ರೆಗಳಾಗುತ್ತವೆ. ಅದಕ್ಕೆ ಸರಿಗೊಳಿಸ ಬೇಕಾದರೆ, ಪ್ರತಿಯೊಂದು ಗಣವನ್ನೂ ಹತ್ತು ಮಾತ್ರೆಗಳ ಕಾಲಕ್ಕೆ ವಿಸ್ತರಿಸ ಬೇಕಾಗುವುದು. ಉದಾ—

```
| | | | | | ∩ | |        | | | | | | | | | |
ಬರೆಯಅಅಅಬಾಅಅ.           ರದತಿಇಇಇದ್ದಇಇ

∩ | | | | | | | | |      | | | | | | ∩ | |
ಬಾರಅಅಅದಅಅಅ            ಕಡೆದಅಅಅರೇಎಎ

| | | | | | ∩ | |        | | ∩ | | | | | |     | | | |
ದೊರೆಯಅಅಅಬಾಅಅ          ರದರೂಉಉಉಪಿಇಇಇ        ನಭವಅ ...
```

ದ್ವಿತಾಳ

ಒಂದೇ ಪದ್ಯದ ಪೂರ್ವಭಾಗವನ್ನು ಒಂದು ತಾಳದಲ್ಲಿ ಹಾಡಿ, ಅದರ ಉತ್ತರಾರ್ಧವನ್ನು ಇನ್ನೊಂದು ತಾಳದಲ್ಲಿ ಹಾಡುವುದೆಂದರೆ, ಒಳ್ಳೆಯ ಆಕರ್ಷಕವಾಗುವುದಲ್ಲದೆ, ಪದ್ಯದ ಭಾವಮಾಧುರ್ಯವನ್ನೂ ಛಂದದ ಸೊಬಗನ್ನೂ ಪ್ರಕಟಪಡಿಸಲು ತುಂಬ ಸಹಾಯಕವಾಗಬಹುದು. ಪೂರ್ವಭಾಗವನ್ನು ಆದಿತಾಳ, ಚೌತಾಳ, ನಿಧಾನತ್ರಿವುಡೆ, ರೂಪಕ, ಏಕತಾಳಗಳಲ್ಲಿ ಹಾಡಿ, ಉತ್ತರಾರ್ಧವನ್ನು ತಿತ್ತಿತ್ತೈ ಎಂಬ ವಿಶಿಷ್ಟವಾಗಿರುವ ನರ್ತನೋಪಯೋಗಿ ತಾಳದಲ್ಲಿ ಹಾಡುವುದು ಮನೋಜ್ಞ. ಪೂರ್ವಾರ್ಧವನ್ನು ಮಧ್ಯಮಾವತಿ ರಾಗದಲ್ಲಿ ನಿಧಾನವಾದ ಏಕತಾಳದ ಗತಿಯಲ್ಲಿ ಹಾಡಿದಾಗ ಗಣಗಳ ಮಾತ್ರಾರೂಪವು ಹೀಗಿರುವುದು—

ನಿಂದ ಅ ಅ ಅ ಲ್ಲಿ ಇ.   ನಡೆದ ಅ ಅ ಅ ಲ್ಲಿ ಇ.

ಕುಳಿತ ಅ ಅ ಅ ಲ್ಲಿ ಇ.   ಸರ್ವ ಅ ಅ ತ್ರ ಅ.

ಕುಂದ ಅ ಅ ಅ ದೆ ಎ.   ಕುಶಲ ಅ ಅ ಅ ಲೀ.   ಲೆಯನು....

ಉತ್ತರಾರ್ಧದ ತಿತ್ತಿತ್ತೈತಾಳದ ರೂಪ.—

ಸಂಧಿ ಇ ಸು. ವ ಅ ಭ ವ ಅ ನ. ನ್ನೆ ದೆ ಯೊ ಒ ಳ. ಗಿ ಇ ರು ಚಿ ಇ ದಾ.

ನಂದ ಅ ಚಿ. ದಂ ಬ ಅ ರ. ಪು ರು ಷಾ

ಸಾಂಗತ್ಯವು ಹೇಗೆ ಎಲ್ಲಾ ತಾಳಗಳಿಗೂ ಅಳವಡುವುದೆಂಬುದನ್ನು ಯಥಾಸಾಧ್ಯವಾಗಿ ಬರೆವಣಿಗೆಯಲ್ಲಿ ಮೇಲೆ ತಿಳಿಸಲಾಯಿತು. ಈ ಸಂಗತಿಯನ್ನು ಇನ್ನಷ್ಟು ದೃಢಪಡಿಸಬೇಕಾದರೆ, ಕೈಯಲ್ಲಿ ತಾಳದ ಪೆಟ್ಟುಗಳನ್ನು ಬಾರಿಸಿಯೇ ನಿರೂಪಿಸಬೇಕಾಗಬಹುದು. ಆದರೆ ಅದೇನೂ ಕಷ್ಟದ ಕೆಲಸ

ವಲ್ಲ. ಲೇಖನದಲ್ಲಿ ತಿಳಿಸುವುದೇ ಕಠಿನ. ತಿಳಿಸಿದಷ್ಟು ಸುಗ್ರಾಹ್ಯವಾದೀತೆನ್ನಲು ಬರುವುದಿಲ್ಲ. ಸಾಂಗತ್ಯದಂತಹ ಹಾಡುಗಬ್ಬವನ್ನು ಓದುವ, ಹಾಡುವ ಮತ್ತು ರಚಿಸುವ ಕಡೆಗೆ ಹಾಯಿಸಿರುವ ಒಂದು ನೋಟಮಾತ್ರವಿದು. ಒಟ್ಟಿನಲ್ಲಿ ಸಾಂಗತ್ಯವನ್ನು ಎಲ್ಲ ತಾಳಗಳಲ್ಲಿಯೂ ಹಾಡಬಹುದೆಂಬುದರಲ್ಲಿ ಸಂದೇಹವಿಲ್ಲ. ಹಾಗೆ ಹಾಡುವಾಗ ಈ ಅಂಶಗಣಗಳನ್ನು ಆಯಾ ತಾಳದ ಮಾತ್ರಾ ಸಂಖ್ಯೆಗನುಗುಣವಾಗಿ ಮಾತ್ರಾಗಣಗಳಾಗಿ ರೂಪಿಸಬೇಕಾಗುವುದೆಂಬುದು ಸ್ಪಷ್ಟ. ಮಾತ್ರಾಗಣವಾಗಿ ರೂಪಿಸದಿದ್ದರೆ, ಅದು ತಾಳಹೀನ ಪದ್ಯವೇ ಆಗುವುದು. ಆಗ ರಾಗವನ್ನು ಬಿಟ್ಟರೆ, ಪದ್ಯವೇ ಆಗದು ವಾಕ್ಯ ರಚನಾಕ್ರಮ ತಪ್ಪಿರುವ ಗದ್ಯವೆನಿಸಬಹುದು. ಆಗ ಪದ್ಯದ ಮಾಧುರ್ಯವಿಲ್ಲದಾಗುವುದು. ಆದರೆ ತಾಳವಿಲ್ಲದೆಯೂ ಎಳೆಸೆಳೆದು ಹಾಡಿದರೆ ಇಂಪು ಮೆಯ್ಗೂಡುವುದು. ತಾಳದ ಗತಿ ವೇದ್ಯವಾದಂತೆಲ್ಲ ಆಯಾ ತಾಳದ ಗತ್ತು ನಿಲವುಗಳಿಗೆ ಅನುಗುಣವಾಗುವ ಪದಜೋಡಣೆ, ಸಾಹಿತ್ಯದ ಸೊಗಸು, ಭಾವಗಳ ಬೆಡಗು, ಮಾತಿನ ಬಿನ್ನಾಣಗಳು ಪ್ರಕಟವಾಗಿ ಹಾಡು ಸುಂದರವಾಗಿ ಶ್ರೋತೃಗಳಿಗೂ ವಾಚಕರಿಗೂ ಚೇತೋಹಾರಿಯಾಗುವುದು; ಸಾಂಗತ್ಯ ರಚನೆಯ ಉದ್ದೇಶವು ಈಡೇರುವುದು.*

---

* ಈ ಲೇಖನದಲ್ಲಿ ಸಂಗೀತ ಶಾಸ್ತ್ರಕ್ಕೆ ಸಂಬಂಧಿಸುವ ತಾಳವಿಚಾರವನ್ನು ತಿಳಿಸಿದ ವೈಣಿಕ ವಿದ್ವಾನ್ ಶ್ರೀ ಎಲ್. ರಾಜಾರಾವ್ ಅವರಿಗೆ ಕೃತಜ್ಞನಾಗಿದ್ದೇನೆ. ಉಳಿದ ವಿಚಾರಗಳು ದ. ಕ. ಜಿಲ್ಲೆಯಲ್ಲಿ ಪ್ರಚಲಿತವಿರುವ ತೆಂಕುತಿಟ್ಟಿನ ಯಕ್ಷಗಾನ ಪದ್ಧತಿಗೆ ಅನುಸಾರವಾಗಿರುವ ಸ್ವಾನುಭವ.

ಹವಿಕರ ಕನ್ನಡ

[ಕನ್ನಡದಲ್ಲಿ ದೇಸಿ— ಹವಿಕರ ಕನ್ನಡದ ಕುರಿತು ವಿದ್ವಾಂಸರ ಮಾತುಗಳು— ಹವಿಕರ ಕನ್ನಡದ ವ್ಯಾಕರಣ ಲಕ್ಷಣಗಳು— ಭಾಷಾಶಾಸ್ತ್ರದೃಷ್ಟಿಯಿಂದ ಕೆಲವು ಹವಿಕರ ಶಬ್ದಗಳ ಪರಿಚಯ.]

ಹವ್ಯಕ, ಹವಿಕ (ಹವೀಕ), ಹೈಗ ಎಂಬ ನಾಮಧೇಯಗಳುಳ್ಳ ಜನ ವರ್ಗದ ಭಾಷೆ ಕನ್ನಡ. ಪ್ರಯೋಗವೈಶಿಷ್ಟ್ಯದಿಂದ ಇದಕ್ಕೆ **'ಹವ್ಯಕ ಭಾಷೆ'** ಅಥವಾ **'ಹವ್ಯಕರ (ಹವಿಕರ) ಕನ್ನಡ'** ಎಂಬ ಹೆಸರು ರೂಢವಾಗಿದೆ. ಹವಿಕರು ಶ್ರೀ ಗೋಕರ್ಣಮಂಡಲದ ಶ್ರೀ ಶಂಕರಾಚಾರ್ಯ ಗುರುಪರಂಪರೆಯ ಶಿಷ್ಯರಾಗಿರುವ ಬ್ರಾಹ್ಮಣರು. ಇವರ ಭಾಷೆಯನ್ನು ಪರಿಶೀಲಿಸಿದಾಗ ಇದು ಕನ್ನಡದ ಉಪಭಾಷೆ ಅಥವಾ ಕನ್ನಡದ ಪ್ರಾಚೀನತಮ ರೂಪಗಳನ್ನು ಉಳಿಸಿಕೊಂಡು ಒಳೆದು ಬಂದ ಕನ್ನಡವೆನಿಸಬಹುದು.

ಲೋಕಪ್ರಸಿದ್ಧವಾಗಿರುವ ಕನ್ನಡಕ್ಕೆ ಗ್ರಾಂಥಿಕ ವ್ಯಾವಹಾರಿಕ ಎಂಬೆರಡು ರೂಪಗಳಿವೆ. ಇವು ಒಂದನ್ನೊಂದು ಕೂಡಿಕೊಂಡು ಪೋಷಿಸಿಕೊಂಡು ಕಾಲಗಳನ್ನು ದಾಟಿ ಬಂದಿವೆ. ಗ್ರಾಂಥಿಕವು ಶಿಷ್ಟವ್ಯವಹಾರಾರ್ಹವಾಗಿ, ವ್ಯಾಕರಣ ನಿಯಮಿತವಾಗಿ ಮಾರ್ಗಬದ್ಧಸಾಹಿತ್ಯಗಳಲ್ಲಿ–ವಿದ್ವಜ್ಜನರ ಕೃತಿಗಳಲ್ಲಿ ಪ್ರಕಟವಾಗುವುದು. ಈ ಗ್ರಾಂಥಿಕ ಭಾಷೆಗೆ ಕಾಲಾನುಗುಣವಾಗಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ರೂಪಾನುಗುಣವಾದ ಹೆಸರುಗಳಾಗಿವೆ. ಕಾವ್ಯಗ್ರಂಥಗಳಲ್ಲಿ ಈ ರೂಪಗಳನ್ನು ನಾವು ಗುರುತಿಸಬಲ್ಲೆವು. ಆದರೆ ವ್ಯಾವಹಾರಿಕ ಭಾಷೆಯೆಂಬುದು ಹಿಂದೆ ಹೇಗಿತ್ತೆಂಬುದು ಕಷ್ಟ. ಹಿಂದಿನ ಸಾಹಿತ್ಯಗಳನ್ನು ನೋಡಿ, ಅಲ್ಲಿನ ಕೆಲವು ವಿಶಿಷ್ಟ ಪ್ರಯೋಗಗಳಿಂದ ಸ್ವಲ್ಪ ಊಹಿಸಬಹುದು; ಯಥಾರೂಪವನ್ನು ಸಮಗ್ರವಾಗಿ ತಿಳಿಯಲು ಸಾಧ್ಯವಾಗದು.

ಈ ವ್ಯಾವಹಾರಿಕಭಾಷೆ ಪ್ರದೇಶಾನುಗುಣವಾಗಿಯೂ ಜನಾನುಗುಣವಾಗಿಯೂ ವಿವಿಧರೂಪ ತಳೆಯುವುದು. ಇಂದಿನ ಹೊಸಗನ್ನಡದಲ್ಲಿ

ಮುಖ್ಯವಾಗಿ ಮಂಗಳೂರು ಕನ್ನಡ, ಧಾರವಾಡ ಕನ್ನಡ, ಮೈಸೂರು ಕನ್ನಡ–ಎಂಬ ಸ್ಥೂಲ ಪ್ರಭೇದಗಳಾಗಿವೆ. ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ಇಂದಿನ ವ್ಯಾವಹಾರಿಕ ಕನ್ನಡದಲ್ಲಿ ಜಿಲ್ಲೆ ಜಿಲ್ಲೆಗೂ ರೂಪವ್ಯತ್ಯಾಸಗಳು ಗೋಚರಿಸಬಹುದು. ಈ ಪ್ರಭೇದವು ಗ್ರಾಂಥಿಕ ಭಾಷೆಯ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆ, ಅದನ್ನಿದು ಬಳಿವಂತೆ ಮಾಡುತ್ತದೆ. ಒಂದೇ ಭಾಷೆಯೊಳಗೆ ಇಂತಹ ಬಹುರೂಪತೆ ಇರುವುದು ಇಂದು ಮಾತ್ರವಲ್ಲ; ಒಂಬತ್ತನೆಯ ಶತಮಾನದ ಕನ್ನಡದಲ್ಲಿಯೂ ಇತ್ತೆಂದು "ಕವಿರಾಜಮಾರ್ಗ"ದಲ್ಲಿ ಹೇಳಿದೆ. ಅವುಗಳಲ್ಲಿ ಒಂದನ್ನು ಆಡುವವರಿಗೆ ಇನ್ನೊಂದು ದೋಷಕರವಾಗಿ ಕಾಣಿಸುತ್ತಿತ್ತೆಂದು ಹೇಳಿದೆ. ಈ ವೈಶಿಷ್ಟ್ಯವನ್ನು ಅಲ್ಲಿ 'ದೇಶಿ' ಎಂದು ಕರೆಯಲಾಗಿದೆ—

ದೋಸಮಿನಿತೆಂದು ಬಗೆದು
ಡ್ಭಾಪಿಸಿ ತಱಸಂದು ಕನ್ನಡಂಗಳೊಳ್ ದುಂ
ಪಾಸುಗಿಯುಮಱಿಯಲಾಗದೆ
ಬೇಸಱುಗುಂ ದೇಸಿ ಬೇಱೆವೇಱಪ್ಪುದಱಿಂ [1]

ಇಂದಿಗೆ ಉಳಿದುಕೊಂಡು ಬಂದಿರುವ ಈ ಕನ್ನಡದ "ಬೇರೆ ಬೇರೆತನ"ದಲ್ಲಿ "ಹವಿಕರ ಕನ್ನಡ" ಎಂಬುದೂ ಒಂದು. ಇದು ಜನಾನುಗುಣವಾದುದು. ಇದರಲ್ಲಿಯೂ ಪ್ರಾದೇಶಿಕವೆನಿಸುವ ಆಂತರಿಕಭೇದಗಳಿವೆ. ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ ಎಂಬೀ ಜಿಲ್ಲೆಗಳೊಳಗಣ ಹವಿಕರ ಕನ್ನಡ ನುಡಿಯ ಶಬ್ದಗಳಲ್ಲಿ ವಾಕ್ಯಪ್ರಯೋಗಗಳಲ್ಲಿ ಆಂತರಿಕ ವ್ಯತ್ಯಾಸಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯೊಳಗಣ ಹವಿಕರಲ್ಲಿಯೂ ಕುಂಬಳೆ, ವಿಟ್ಲ, ಪುತ್ತೂರು, ಪಂಜ–ಎಂಬ ಸೀಮೆಗಳಿಗನುಗುಣವಾಗಿ ಮಾತಿನ ವ್ಯತ್ಯಾಸಗಳು ಕಂಡು ಬರುತ್ತಿವೆ. ಹಾಗೆಯೇ ಇತರ ಜಿಲ್ಲೆಗಳ ಒಳಗಣ ಸೀಮೆಗಳಲ್ಲಿ ವ್ಯತ್ಯಾಸಗಳಿರುವುದು ಸಹಜ.

ಕನ್ನಡದ ಗ್ರಾಂಥಿಕ ಭಾಷೆಗೆ ಉಪಯುಕ್ತವಾಗುವ ಶಬ್ದಸಂಪತ್ತನ್ನೂ ಭಾವಶಕ್ತಿಯನ್ನೂ ಅರ್ಥಸಾಮರ್ಥ್ಯವನ್ನೂ ಸೊಗಸಾದ ನುಡಿಗಟ್ಟುಗಳನ್ನೂ

---

1 ಕವಿರಾಜಮಾರ್ಗ, ೧–೪೬,

ಗಾದೆಗಳನ್ನೂ ತನ್ಮೂಲಕ ಜನಜೀವನದ ಯೋಗ್ಯ ಅನುಭವಗಳನ್ನೂ ಈ ಹವ್ಯಕಭಾಷೆ ಒದಗಿಸಬಲ್ಲುದು. ಆದುದರಿಂದ ಇದರ ಅಧ್ಯಯನ ಎಲ್ಲ ಕನ್ನಡಿಗರಿಗೂ ಉಪಯೋಗಕರ ಈ ಭಾಷೆಯ ಸೊಗಸನ್ನು ಕಂಡ ಹಲವರು ವಿದ್ವಾಂಸರು ತಮ್ಮ ಗ್ರಂಥಗಳಲ್ಲಿ ಈ ಕಡೆಗೆ ಭಾಷಾಕುತೂಹಲಿಗಳ ಅವಧಾನವನ್ನು ಸೆಳೆದಿದ್ದಾರೆ. ಶ್ರೀ ಶಂ. ಬಾ. ಜೋಶಿ ಅವರ ಮಾತುಗಳಿವು—

"ಇವರ ಮನೆಮಾತು ನೃಪತುಂಗನ ಕಾಲಕ್ಕೂ ಹಿಂದೆ ಇದ್ದ ಪಳಗನ್ನಡ. ಪ್ರಾಚೀನ ಕಾಲದ ತಮ್ಮ ಭಾಷೆಯನ್ನು ಇವರು ಕಾದುಕೊಂಡು ಬಂದಿದ್ದಾರೆ. ಹವ್ಯಕರ ಹೊರ್ತು ಬೇರೆ ಯಾವ ಜನಾಂಗದವರೂ ತತ್ಸದೃಶವಾದ ಭಾಷೆಯನ್ನಾಡುವುದಿಲ್ಲ."[2]

ಶ್ರೀಯುತ ಮಾಸ್ತಿಯವರು ಹೀಗೆಂದಿದ್ದಾರೆ:

"ಬೇರೆ ಎನ್ನಿಸುವ ಕನ್ನಡ ಒಂದಿದೆ. ಅದನ್ನು ಹವ್ಯಕರು ಆಡುತ್ತಾರೆ. ಅದು ಹಳಗನ್ನಡದ ರೂಪಗಳನ್ನು ಉಳಿಸಿಕೊಂಡು ಈಗಿನ ಕಾಲಕ್ಕೆ ಪ್ರತ್ಯೇಕವೆಂಬಂತೆಯೇ ಇದೆ"[3]

ಡಾ|| ರಂ. ಶ್ರೀ. ಮುಗಳಿಯವರೂ ಹವ್ಯಕರ ಕನ್ನಡದ ವೈಶಿಷ್ಟ್ಯವನ್ನು ಕಂಡಿದ್ದಾರೆ. ಅವರ ಮಾತುಗಳಿವು—

"ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಈ ಎರಡೂ ಜಿಲ್ಲೆಗಳಲ್ಲಿ ಹವ್ಯಕ ಭಾಷೆ ಬಳಕೆಯಲ್ಲಿದೆ. ಹಳಗನ್ನಡದ ಅವಶೇಷಗಳು ಇದರಲ್ಲಿ ಎದ್ದು ಕಾಣುತ್ತವೆ."[4]

ಕನ್ನಡ ಭಾಷೆಯ ಇಂತಹ ಬಹುಮುಖಗಳನ್ನು ಅಭ್ಯಾಸ ಮಾಡುವ ಆವಶ್ಯಕತೆಯ ವಿಚಾರವಾಗಿ ಡಾ|| ವಿ ಕೆ. ಗೋಕಾಕರು ಹೇಳಿರುವ ಮನನೀಯ ವಾಕ್ಯಗಳು ಇಂತಿವೆ—

"ಇಂದಿನ ಕನ್ನಡ ಭಾಷೆಯಲ್ಲಿ ಸಹ ಅನೇಕ ಪ್ರಕಾರಗಳಿವೆ. ಒಂದೊಂದು ಜಿಲ್ಲೆಯ ಕನ್ನಡದ ಬಳಕೆಯೂ ಒಂದೊಂದು ಗ್ರಂಥದ ಸಾಮಗ್ರಿಯಾಗಿ ಕಾದು ಕುಳಿ

---

2 ಕಣ್ಮರೆಯಾದ ಕನ್ನಡ, ಪುಟ ೯೧,

3 ಡಾ|| ಮಾಸ್ತಿ—ನಮ್ಮ ನುಡಿ, ಪುಟ ೨೭–೨೮

4 ಡಾ|| ರಂ. ಶ್ರೀ. ಮುಗಳಿ—ಕನ್ನಡ ಸಾಹಿತ್ಯದ ಇತಿಹಾಸ (೧೯೬೩) ಪುಟ ೧೦.

ತಿದೆ. ಈ ಎಲ್ಲ ಕನ್ನಡಗಳನ್ನು ಕುರಿತು ಬರೆಯುವುದು ಅಗತ್ಯವಾಗಿದೆ. ಹಳ್ಳಿಗನ್ನಡ, ಬಳಕೆಗನ್ನಡಗಳು ನಾಡಿನಲ್ಲಿ ಬೇರೆಬೇರೆ ರೂಪವನ್ನು ತಾಳುತ್ತಿವೆ. ಇಂದಿನ ಗ್ರಂಥಸ್ಥ ಕನ್ನಡಕ್ಕೆ ಇವು ಬಣ್ಣಬಣ್ಣವನ್ನು ತರುತ್ತವೆ- ಇವುಗಳ ತುಲನಾತ್ಮಕ ಅಭ್ಯಾಸವೂ ಅಗತ್ಯ- ಕೆಲವು ಜನ ತರುಣ ಅಭ್ಯಾಸಿಗಳು ತಮ್ಮ ಜೀವನವನ್ನು ಮೀಸಲಾಗಿಡ ಬೇಕಾಗಿದೆ ಇಂತಹ ಕಾರ್ಯಕ್ಕೆ."[5]

ಕನ್ನಡ ಭಾಷೆಯು ಮತ್ತು ಕನ್ನಡ ಭಾಷಾಶಾಸ್ತ್ರದ ಅಧ್ಯಯನಕ್ಕೆ ಉಪಯುಕ್ತವಾಗುವ ಹವ್ಯಕ ಭಾಷೆಯ ಕೆಲವು ಲಾಕ್ಷಣಿಕ ವೈಶಿಷ್ಟ್ಯಗಳನ್ನು ತಿಳಿಸಬಹುದು. ದಕ್ಷಿಣ ಕನ್ನಡ ಜಿಲ್ಲೆಯ (ಕಾಸರಗೋಡು ವರೆಗಿನ) ಹವಿಕರ ಕನ್ನಡವನ್ನು ಸ್ಥೂಲವಾಗಿ ಇಲ್ಲಿ ಲಕ್ಷ್ಯವಿಟ್ಟಿದೆ—

(೧) ಭಾಷಾಶಾಸ್ತ್ರಜ್ಞರು ದ್ರಾವಿಡ ಭಾಷೆಯ ವಿಶೇಷ ಲಕ್ಷಣವನ್ನು ಹೇಳುತ್ತ, ಇದರಲ್ಲಿ ಉತ್ತಮ ಪುರುಷ ಸರ್ವನಾಮದ ಬಹುವಚನಕ್ಕೆ ಎರಡು ರೂಪಗಳಿವೆ–ಎನ್ನುತ್ತಾರೆ. ಮಧ್ಯಮಪುರುಷ ಸೇರಿರುವುದು ಮತ್ತು ಸೇರದೆ ಇರುವುದು–ಎಂಬಿವೇ ಆ ಎರಡು ರೂಪಗಳು. ಹಳಗನ್ನಡದಲ್ಲಾಗಲೀ ಹೊಸಗನ್ನಡದಲ್ಲಾಗಲೀ ಈ ಎರಡು ರೂಪಗಳ ಸರ್ವನಾಮವಿಲ್ಲ. ಆದರೆ, ಹವಿಕರ ಕನ್ನಡದಲ್ಲಿದೆ. ಉದಾ :—

ಮಧ್ಯಮಪುರುಷ ಸೇರಿದ ಉತ್ತಮ ಪುರುಷ ಬಹುವಚನ:—

ಹವಿಕ	ಹಳಗನ್ನಡ	ಹೊಸಗನ್ನಡ
ನಾವು ಹೋಪೊ̆	ಅಂ ಪೋಪಂ	ನಾವು ಹೋಗುವ (ನಾವು ಹೋಗೋಣ)

ಮಧ್ಯಮಪುರುಷ ಬಿಟ್ಟು ಉತ್ತಮಪುರುಷ ಬಹುವಚನ:—

ಎಂಗೊ̆ ಹೋವುತ್ತೆಯೊ̆ ("ಎಂಗೊ̆" ಎಂಬುದು ಹವಿಕರ ಮಾತಿನಲ್ಲಿ ಮಾತ್ರ ಇದೆ.)

---

[5] ಡಾ|| ವಿ. ಕೆ. ಗೋಕಾಕ—ನವ್ಯತೆ ಹಾಗೂ ಕಾವ್ಯಜೀವನ (೧೯೫೫) ಪುಟ ೭.

(೨) ಸ್ತ್ರೀಲಿಂಗದ ಏಕವಚನಕ್ಕೆ ನಪುಂಸಕಲಿಂಗದ ಏಕವಚನದ ಪ್ರಯೋಗವಿದೆ—

ಹವಿಕ	ಹೊಸಗನ್ನಡ
ಅಕ್ಕ ಬಂತು	ಅಕ್ಕ ಬಂದಳು
ತಂಗೆ ಬಯಿಂದು	ತಂಗಿ ಬಂದಿದ್ದಾಳೆ (ಬಂದಿದ್ದಳು)
ಅಬ್ಬೆ ಇದ್ದು	ತಾಯಿ ಇದ್ದಾಳೆ.

ಶಬ್ದಮಣಿದರ್ಪಣದಲ್ಲಿ ಲಕ್ಷ್ಮಿ, ಸರಸ್ವತಿ ಮುಂತಾದ ಸ್ತ್ರೀದೇವತೆಗಳಿಗೆ ಏಕವಚನದಲ್ಲಿ ನಪುಂಸಕಲಿಂಗದ ಪ್ರಯೋಗವನ್ನೂ ಹೇಳಿದೆ. ಆದರೆ ಇದು ಹೊಸಗನ್ನಡದಲ್ಲಿಲ್ಲ ಹವಿಕರ ಭಾಷೆಯಲ್ಲಿ ಉಳಿದುಕೊಂಡಿದೆ. ತೆಲುಗಿನಲ್ಲಿ ಇಂದಿಗೂ ಸ್ತ್ರೀಲಿಂಗದ ಏಕವಚನಕ್ಕೆ ನಪುಂಸಕ ಏಕವಚನವೇ ಪ್ರಯೋಗವಾಗುತ್ತಿದೆ.

ಸ್ತ್ರೀವಾಚಕವಾಗಿರುವ ಕೃಲ್ಲಿಂಗದ ಏಕವಚನದಲ್ಲಿ ಸ್ತ್ರೀಪ್ರತ್ಯಯವಿದೆ—

ಉದಾ :—

ಹೋದೋಳು (ಹೋದವಳು)

ಬಂದೋಳು (ಬಂದವಳು)

ಹೀಗಿದ್ದರೂ ಸ್ತ್ರೀಲಿಂಗದ ಬಹುವಚನವು ನಪುಂಸಕಲಿಂಗದ ಬಹುವಚನವೇ ಆಗಿರುತ್ತದೆ—

ಹೋದೋವು (ಹೋದವುಗಳು, ಹೋದ ಸ್ತ್ರೀಯರು)

ಬಂದೋವು (ಬಂದವುಗಳು, ಬಂದ ಸ್ತ್ರೀಯರು)

(೩) ಅಕಾರಾಂತ ಸ್ತ್ರೀಲಿಂಗದ ವಿಭಕ್ತಿಪ್ರತ್ಯಯಗಳು ಪುಲ್ಲಿಂಗದಂತೆಯೇ ಇರುತ್ತವೆ—

ಕಮಲ, ಕಮಲನ, ಕಮಲಂದ, ಕಮಲಂಗೆ, ಕಮಲನ, ಕಮಲನಲ್ಲಿ. ಕನ್ನಡದಲ್ಲಿ ಅಕ್ಕ, ಅವ್ವ, ಅಮ್ಮ–ಎಂಬ ಶಬ್ದಗಳಿಗೆ ಪುಲ್ಲಿಂಗಪ್ರತ್ಯಯಗಳೆಂದೇ ಶಬ್ದಮಣಿದರ್ಪಣವು ಹೇಳುತ್ತದೆ. ಹವಿಕರ ಕನ್ನಡದಲ್ಲಿ ಅವ್ವ, ಅಮ್ಮ ಎಂಬಿವುಗಳ ಸ್ಥಾನದಲ್ಲಿ 'ಅಬ್ಬೆ' ಎಂಬ ಶಬ್ದವಿದೆ.)*

(೪) ಅಕಾರಾಂತ ಪುಲ್ಲಿಂಗ–ಸ್ತ್ರೀಲಿಂಗ ಶಬ್ದಗಳಿಗೆ ಪ್ರಥಮಾವಿಭಕ್ತಿಯ ಪ್ರತ್ಯಯವಾಗಿ ಅರ್ಧಾನುಸ್ವಾರವಿದೆ—

ಅವ, ರಾಮ, ಶಂಕರ, ಅಕ್ಕ, ಮಾವ, ಇತ್ಯಾದಿ.

[ವ್ಯಾಕರಣಕಾರರು ಪ್ರಥಮಾವಿಭಕ್ತಿ ಪ್ರತ್ಯಯವಾಗಿ ಹೇಳುವ ಬಿಂದುವಿಗೆ ಇದು ಪೂರ್ವರೂಪವಿರಬಹುದು.]

(೫) ಅಕಾರಾಂತ ನಪುಂಸಕಲಿಂಗದ ಮತ್ತು ಅಕಾರಾಂತವಲ್ಲದ ಎಲ್ಲಾ ಲಿಂಗಶಬ್ದಗಳ ಪ್ರಥಮಾವಿಭಕ್ತಿಗೆ ವಿಭಕ್ತಿಸಂಜ್ಞಕ ಧ್ವನಿಯಿಲ್ಲ–

ಉದಾ :—

ಅಕಾರಾಂತ ನಪುಂಸಕಲಿಂಗ–ಮರ, ನೆಲ, ಪುಸ್ತಕ ಇತ್ಯಾದಿ.

ಅಕಾರಾಂತವಲ್ಲದ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಶಬ್ದಗಳು—ಗುರು, ಹರಿ; ಸೀತೆ, ಪಾರ್ವತಿ; ಹೊಳೆ, ಎಲಿ (ಇಲಿ) ಇತ್ಯಾದಿ.

[ಇಂಥವಕ್ಕೆಲ್ಲ ಪ್ರಥಮಾ ವಿಭಕ್ತಿಯ ಪ್ರತ್ಯಯವು ಲೋಪವಾಗುತ್ತದೆಂದು ಹೇಳಬಹುದು.]

(೬) ಪುಲ್ಲಿಂಗ–ಸ್ತ್ರೀಲಿಂಗಗಳಲ್ಲಿ ದ್ವಿತೀಯೆಯ ಮತ್ತು ಷಷ್ಠಿಯ ವಿಭಕ್ತಿರೂಪಗಳು ಒಂದೇ ರೀತಿ :—

---

* ಇಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹವಿಕರಲ್ಲಿ–ಎಂದು ತಿಳಿದುಕೊಳ್ಳಬೇಕು.

ದ್ವಿತೀಯೆ— ರಾಮನ, ಗಣಪತಿಯ, ಸೀತೆಯ

ಷಷ್ಠಿ— ರಾಮನ, ಗಣಪತಿಯ, ಸೀತೆಯ.

ವಾಕ್ಯದಲ್ಲಿ ಪ್ರಯೋಗ :--

ರಾಮನ ದೆನಿಗೇಳು (ರಾಮನನ್ನು ಕರೆ)–ಇದು ದ್ವಿತೀಯಾವಿಭಕ್ತಿ.

ರಾಮನ ತಮ್ಮ ಲಕ್ಷ್ಮಣ —ಇಲ್ಲಿ ಷಷ್ಠಿ.

ಅಕಾರಾಂತ ನಪುಂಸಕಲಿಂಗದಲ್ಲಿ ದ್ವಿತೀಯೆ ಷಷ್ಠಿಗಳ ರೂಪವು ಬೇರೆ ಬೇರೆಯಾಗಿದೆ. ಉದಾ :

ಮರವ ಕಡಿ (ಮರವನ್ನು ಕಡಿ) ಇಲ್ಲಿ ದ್ವಿತೀಯೆ.
ಮರದ ಗೆಲ್ಲು (ಮರದ ಕೊಂಬೆ) ಇಲ್ಲಿ ಷಷ್ಠಿ.

(೭) ಬಹುವಚನ ಪ್ರತ್ಯಯಗಳು "ಗೊ" ಮತ್ತು "ಕ್ಳೊ" ಎಂಬಿವು. (ಕನ್ನಡ ವ್ಯಾಕರಣದಲ್ಲಿ 'ಗಳ್' ಮತ್ತು 'ಕಳ್' ಎಂಬಿವನ್ನು ಹೇಳಿದೆ.)

ಉದಾ :—

ಹವಿಕ	**ಹಳಗನ್ನಡ**	**ಹೊಸಗನ್ನಡ**
ಜನಂಗೊ	ಜನಂಗಳ್	ಜನಗಳು.
ಮರಂಗೊ	ಮರಂಗಳ್	ಮರಗಳು
ಹೆಮ್ಮಕ್ಳೊ	ಪೆಣ್ಮಕ್ಕಳ್	ಹೆಣ್ಣು ಮಕ್ಕಳು ; ಹೆಂಗುಸರು
ಮಕ್ಳೊ	ಮಕ್ಕಳ್	ಮಕ್ಕಳು
ನಿಂಗೊ	ನೀಂ (ನೀಂಗಳ್)	ನೀವು
ಎಂಗೊ	ನಾವು	ನಾವು

(೮) ಹವಿಕರ ಕನ್ನಡದ ಶಬ್ದರೂಪಗಳಲ್ಲಿ ಕೆಲವು ಪೂರ್ವದ ಹಳಗನ್ನಡವನ್ನು ಹೋಲುವುದಾಗಿಯೂ ಕೆಲವು ಹಳಗನ್ನಡವಾಗಿಯೂ ಇನ್ನು ಕೆಲವು ಹೊಸಗನ್ನಡವಾಗಿಯೂ ಕಾಣಿಸುತ್ತವೆ. ಉದಾ :—

ಪೂರ್ವದ ಹಳಗನ್ನಡ	ಹವಿಕ
ಬಂದಾನ್	ಬಂದೋನು
ಸಂದಾನ್	ಸಂದೋನು

ಹಳಗನ್ನಡ	ಹವಿಕ
ತಂಗೆ	ತಂಗೆ
ಅಬ್ಬೆ	ಅಬ್ಬೆ
ಕೂಸು	ಕೂಸು (= ವಿವಾಹ ಯೋಗ್ಯ ಕನ್ಯೆ)
ಇಲ್ಲೆ, ಇಲ್ಲೆಯೊ	ಇಲ್ಲೆ, ಇಲ್ಲೆಯೊ
ಎಸರು	ಎಸರು (ಅನ್ನಕ್ಕೆ ಇಟ್ಟ ನೀರು)

ಉಚ್ಚಾರಣೆಯಲ್ಲಿ ಹಳಗನ್ನಡಕ್ಕೆ ಸಾಮ್ಯವುಳ್ಳ ಕೆಲವು ರೂಪಗಳು :—

ಹವಿಕ	ಹಳಗನ್ನಡ	ಹೊಸಗನ್ನಡ
ಹೋಪಲೆ	ಪೋಪೊಡೆ	ಹೋಗಲು, ಹೋಗುವುದಕ್ಕೆ
ಹೋಪಲೆ ಹೇಳಿ ಹೋಗಲೆ ಹೇಳಿ	ಪೋಗಲ್ವೇಡಿ	ಹೋಗುವುದಕ್ಕಾಗಿ.
ತಿಂಬೊ	ತಿಂಬಂ	ತಿನ್ನುವ, ತಿನ್ನೋಣ.
ಅಕ್ಕು	ಅಕ್ಕುಂ	ಆಗಬಹುದು ; ಆಗುವುದು.
ಹೋಪೊ	ಪೋಪಂ	ಹೋಗುವ, ಹೋಗೋಣ.

ಹೋದಾಡ ಹೋದಾಡೊ ಹೋದನಡ	ಪೋದಂ ಗಡ	ಹೋದನಂತೆ.

ಹೊಸಗನ್ನಡ ರೂಪದಲ್ಲಿರುವ ಹವಿಕ ಕನ್ನಡದ ರೂಪಗಳು :—

ಹಾಲು, ಹೇಳು, ಹಳತು, ಹೊಸತು (ಹೊಸತ್ತು–ಎಂತಲೂ ಹವಿಕರ ಕನ್ನಡದಲ್ಲಿದೆ.), ಹಿಳ್ಳೆ (ಈ ರೂಪವು ಹೊಸಗನ್ನಡದಲ್ಲಿಲ್ಲ. ಹಳಗನ್ನಡದಲ್ಲಿರುವ 'ಪಿಳ್ಳೆ' ಎಂಬುದೇ ಹೊಸಗನ್ನಡ ರೂಪತಾಳಿದೆ. ಆದರೆ ಹವಿಕ ಭಾಷೆಯಲ್ಲಿ 'ಹಿಳ್ಳೆ' ಎಂದು 'ಶಿಶು' ಎಂಬ ಅರ್ಥದಲ್ಲಿ ಪ್ರಯೋಗವಾಗುತ್ತಿದೆ.)

(೯) ಹ್ರಸ್ವಪೂರ್ವವಾಗಿರುವ ಕೆಲವು ಶಬ್ದಗಳಿಗೆ ಕಕಾರಾದಿ ಶಬ್ದಗಳು ಸೇರಿ ಏಕಶಬ್ದವಾಗುವಾಗ ಆ ಕಕಾರಕ್ಕೆ ದ್ವಿತ್ವವು ಬರುತ್ತದೆ. ಉದಾ :—

ಹನಿಕ್ಕಾಲು (ಮಳೆ ನೀರು ಚಾವಣಿಯ ಮಾಡಿನಿಂದ ಕೆಳಬೀಳುವ ಸ್ಥಳ.)

ಮರಕ್ಕಾಲು (ಎರಡು ಉದ್ದದ ದೊಣ್ಣೆಗಳಲ್ಲಿ ಕಾಲಿಡಲು ಸ್ಥಳಮಾಡಿ, ಅವನ್ನೇ ಕಾಲುಗಳಾಗಿ ನಡೆಯಲು ಆಟಕ್ಕೆ ಉಪಯೋಗಿಸುವುದುಂಟು. ಅಂತಹ ಮರಕ್ಕೆ 'ಮರಕ್ಕಾಲು' ಎನ್ನುತ್ತಾರೆ.)

ನೊರೆಕ್ಕಾಯಿ (ಅಂಟವಾಳದ ಕಾಯಿ.)
ಸೊರೆಕ್ಕಾಯಿ (ಸೋರೆಕಾಯಿ.)
ಗುರಿಕ್ಕಾರ (ಗ್ರಾಮದಲ್ಲಿ ಸಾಮಾಜಿಕ ಮುಖ್ಯಸ್ಥ.)
ಮೊಳಕ್ಕಾಲು (ಕಾಲ ಮೊಣಗಂಟಿನ ವರೆಗಿನ ಕಾಲು.)
ಮೊಳಕ್ಕೈ (ಕೈಮೊಣಗಂಟಿನ ವರೆಗಿನ ಕೈ.)
ಹಸೆಕ್ಕರೆ (ಹಸೆಗೆ ಕರೆ) ಉದಾ :— ಹಸೆಕ್ಕರೆವ ಹಾಡು.
ಮದಕ್ಕರಿ (ಒಂದು ಬಗೆಯ ಕುಷ್ಠವ್ಯಾಧಿ.)
ಮಡಿಕ್ಕೇರಿ, ಸರಕ್ಕಾರ, ತಲೆಕ್ಕಾವೇರಿ, ಕುಡಿಕ್ಕೆ (ಕುಡಿಕೆ),
ಒಳಕ್ಕೈ (ಲಾಭದ ಗಳಿಕೆ), ಬಲಿಕ್ಕೆ (ಮೆತ್ತಗಲ್ಲದ.)

ಒಣಕ್ಕೆ (ಒನಕೆ.)
ಮುನೆಕ್ಕಾವು } (ಇಕ್ಕುಳ)
ಮೊನೆಕ್ಕಾವು }

[ಕನ್ನಡದ ವ್ಯಾಕರಣ ಪ್ರಕಾರ ಮರಕ್ಕೆ, ಜನಕ್ಕೆ- ಎಂಬ ಅಕಾರಾಂತಗಳ ಎರಡು ಹ್ರಸ್ವಗಳನಂತರ ಬರುವ ಕಕಾರಾದಿಯ ವಿಭಕ್ತಿ ಪ್ರತ್ಯಯಕ್ಕೆ ದ್ವಿತ್ವ ಬರಲು ಇದೇ ಪ್ರಭಾವವಿರಬಹುದೆ?]

ತಮಿಳಿನಲ್ಲಿ ಕೋಟಿಕ್ಕೂಸು (ಕೋಳಿಮರಿ,) ಪಶುಕ್ಕಾವಲ್ (ಪಶುಪಾಲನೆ) ಎಂಬ ದ್ವಿತ್ವ ರೂಪಗಳಿವೆ. ತುಳುವಿನಲ್ಲಿ ಇದೇ ಬಗೆಯಾಗಿ ನೊರೆಕ್ಕಾಯಿ, ತುರ್ಕೆಕಾಯಿ-ಎಂಬಲ್ಲೆಲ್ಲ ದ್ವಿತ್ವವಿದೆ. ತುಳು-ಹವಿಕ ಭಾಷೆಗಳ ಕೆಲವು ಸ್ಥಳವಾಚಕಗಳಲ್ಲಿ ಕಕಾರವಲ್ಲದೆಡೆಯಲ್ಲಿಯೂ ಈ ಬಗೆಯ ದ್ವಿತ್ವವಿದೆ :—

ಕೋಡಿಚ್ಚಾಲು, ಓಂತಿಚ್ಚಾರು, ಕುಪ್ಪುಚ್ಚಾರು, ಪಾರೆಕ್ಕೋಡಿ-- ಇತ್ಯಾದಿ.

(೧೦) ಹ್ರಸ್ವ ವ್ಯಂಜನದ ಮುಂದೆ **'ತನ'** **'ತಿಕೆ'** ಎಂಬ ತದ್ಧಿತ ಪ್ರತ್ಯಯಗಳು ಬಂದಾಗ ವ್ಯಂಜನದ ಸಕಾರವು ಸೇರಿಕೊಳ್ಳುತ್ತದೆ. ಉದಾ :—

ಬಡಸ್ತನ, ಬಡಸ್ತಿಕೆ; ನಂಟಸ್ತನ, ನಂಟಸ್ತಿಕೆ; ದೊಡ್ಡಸ್ತನ, ದೊಡ್ಡಸ್ತಿಕೆ-ಇತ್ಯಾದಿ.

ಪ್ರತ್ಯಯವಿಲ್ಲದಲ್ಲಿಯೂ ಕ್ವಚಿತ್ಪ್ರಯೋಗವಿದೆ—ಉದಾ :—ಕಸ್ತಲೆ (= ಕತ್ತಲೆ), ಮೆಸ್ತಂಗೆ (= ಮೆತ್ತಗೆ).

(೧೧) ಆಗು, ಹೋಗು ಎಂಬ ಧಾತುಗಳು ಕ್ರಿಯಾಪದ (ಆಖ್ಯಾತಪದ) ಗಳಾದಾಗ ಮಧ್ಯಗತವಾದ ಆ ಗಕಾರಕ್ಕೆ ಯಕಾರ ಅಥವಾ ವಕಾರವು ಬರುತ್ತದೆ. ಉದಾ :—

ಹವಿಕ	ಕನ್ನಡ
ಆಯಿದು	ಆಗಿದೆ
ಆವುತ್ತು	ಆಗುವುದು
ಹೋಯಿದ	ಹೋಗಿದ್ದಾನೆ;
ಹೋಯಿದು	ಹೋಗಿದೆ, ಹೋಗಿದ್ದಾಳೆ
ಹೋವುತ್ತೆ	ಹೋಗುತ್ತೇನೆ, ಹೋಗುತ್ತಿ

ಇವಲ್ಲದೆ "ಹೂವು" ಎಂಬುದು ಹವಿಕ ಕನ್ನಡದಲ್ಲಿ "ಹೂಗು" ಆಗಿದೆ.

ಹೀಗೆ ಮಧ್ಯಗತ 'ವ'ಕಾರವು 'ಗ'ಕಾರವಾಗುವ ಪ್ರವೃತ್ತಿ ತಮಿಳು ತೆಲುಗುಗಳಲ್ಲಿಯೂ ಇದೆ. ಆ ಕುರಿತು ಕಾಲ್ಡ್‌ವೆಲರ ಮಾತಿದು :--

"க்" When used as sonant—that is as "ग्" –changes into "వ్". Where we have "ग्" in Tamil, we sometimes find వ్ in Telugu— e. g. ஆகு Tam. to become ; అవు, Tel.[7]

ಕನ್ನಡದಲ್ಲಿ ಕೆಲವು ಶಬ್ದಗಳ 'ಗ'ಕಾರವು 'ವ'ಕಾರವಾದುದಕ್ಕೆ ಉದಾಹರಣೆಗಳಿವೆ—ತೊಗೆ-ತೊವೆ; ತೊಗಲು-ತೊವಲು; ಸೊವಡು-ಸೊಗಡು ಇತ್ಯಾದಿ. ಹವಿಕರ ಕನ್ನಡದಲ್ಲಿ ಇಂತಹ ಪರಿವರ್ತನೆಗೆ ಉದಾಹರಣೆಗಳಿವೆ ಯೆಂಬುದು ಸ್ಪಷ್ಟವಾಗಿದೆ.

ಹಳಗನ್ನಡ ಕಾವ್ಯಗಳಲ್ಲಿ ಕ್ವಚಿತ್ತಾಗಿ ಗೋಚರಿಸುವ ಉದ್ದೇಶಾರ್ಥಕ ಪ್ರತ್ಯಯವಾಗಿರುವ 'ಅಲೆ' ಸೇರಿದ ಕ್ರಿಯೆ ಹವಿಕರ ಭಾಷೆಯಲ್ಲಿ ಬಹಳವಾಗಿ ಪ್ರಯೋಗವಾಗುತ್ತದೆ. ಉದಾ :--ಉಡಲೆ†, ಉಂಬಲೆ, ಬೇಡಲೆ (ಉಡಲ್, ಉಣ್ಣಲ್, ಬೇಡಲ್ ಎಂಬ ಅರ್ಥಗಳುಳ್ಳವು).

---

[7] Caldwell— Comparative Grammar of Dravidian Languages, page 151.

† ನೇಮಿಚಂದ್ರನ ನೇಮಿನಾಥ ಪುರಾಣ :(ಆ. ೮, ಪದ್ಯ ೭೭) ದಲ್ಲಿ 'ಉಡಲೆ' ಎಂಬುದು 'ಉಡುವುದಕ್ಕಾಗಿ' ಎಂಬ ಅರ್ಥದಲ್ಲಿ ಬಂದಿದೆ.

(೧೨) ಕ್ರಿಯಾಪದದ ವಿಧಿರೂಪದಲ್ಲಿ ಆಗ್ರಹಸೂಚಕವೆನಿಸುವದೊಂದು ಪ್ರಯೋಗವಿದೆ. ಇದು ಉತ್ತಮ ಪುರುಷಕ್ಕೂ ಅನ್ವಯಿಸುವುದು ಹವಿಕ ಭಾಷೆಯ ವೈಶಿಷ್ಟ್ಯ. ಉದಾ :--

ಪ್ರಥಮ ಪುರುಷ :—ಅವ ಓದಿಕ್ಕಲಿ, ಅದು ಓದಿಕ್ಕಲಿ (Let him/her read)

ಮಧ್ಯಮ ಪುರುಷ :--ನೀನು ಓದಿಕ್ಕು, ನಿಂಗೊ ಓದಿಕ್ಕಿ (You please read)

ಉತ್ತಮ ಪುರುಷ :—ಆನು ಓದಿಕಿತೆ, ಆನು ಓದಿಕ್ಕಿತೆ (Let me read)

ಮಧ್ಯಮ ಪುರುಷ ಸಹಿತವಾದ ಉತ್ತಮ ಪುರುಷ ಬಹುವಚನ :—

ನಾವು ಓದಿಕ್ಕುವೊ (Let us read)

ಮಧ್ಯಮ ಪುರುಷ ರಹಿತವಾದ ಉತ್ತಮ ಪುರುಷ ಬಹುವಚನ :—

ಎಂಗೊ ಓದಿಕಿತೆಯೊ

ಎಂಗೊ ಓದಿಕ್ಕಿತೆಯೊ

[ತುಳು ಭಾಷೆಯಲ್ಲಿ ಈ ರೀತಿಯ ಪ್ರಯೋಗಗಳಿವೆ. ಆದರೆ ಪ್ರಚಲಿತವಾದ ಕರ್ಣಾಟ ಭಾಷೆಯಲ್ಲಿ ಕಾಣುವುದಿಲ್ಲ. ಅಲ್ಲಿ 'ಆನು ಓದಿಕಿತೆ' ಎಂಬುದನ್ನು "ನಾನು ಓದಿಬಿಡುತ್ತೇನೆ" ಎಂದು ಹೇಳಬೇಕಾದೀತು. ಅದು 'Let me read' ಎಂಬುದರ ಪೂರ್ಣಭಾವವನ್ನು ಕೊಡಲಾರದು.]

* * * * *

ಕನ್ನಡದ ಭಾಷಾ ಶಾಸ್ತ್ರಕ್ಕೆ ಹವಿಕರ ಭಾಷೆಯ ಕೊಡುಗೆಯೇನೆಂಬುದಕ್ಕೆ ಕೆಲವು ವಿಶೇಷ ಶಬ್ದಗಳ ಉದಾಹರಣೆಗಳಿವು :—

೧ **ಅಪ್ಪಚ್ಚಿ (= ಚಿಕ್ಕಪ್ಪ ; ಚಿಕ್ಕಮಕ್ಕಳಿಗಾಗಿ ಮಾಡಿದ ದೋಸೆ ಅಥವಾ ಕಡುಬು)**

ಇಲ್ಲಿ 'ಅಚ್ಚಿ' ಎಂಬುದು 'ಚಿಕ್ಕದು' ಎಂಬ ಅರ್ಥ ಕೊಡುತ್ತದೆ. ಅಪ್ಪನಿಗಿಂತ ಚಿಕ್ಕವನು ಚಿಕ್ಕಪ್ಪ. ಹಾಗೆಯೆ ಚಿಕ್ಕವರಿಗಾಗಿ ಇರತಕ್ಕ 'ಅಪ್ಪ' (= ಕಡುಬು) 'ಅಪ್ಪಚ್ಚಿ' ಎನಿಸುವುದು. ಕನಕದಾಸರ ಮೋಹನ ತರಂಗಿಣಿ ಯಲ್ಲಿ 'ಚಿಕ್ಕಪ್ಪ' ಎಂಬ ಅರ್ಥದಲ್ಲಿ 'ಚಿಪ್ಪ' (ಚಿ =ಚಿಕ್ಕ, ಪ್ಪ =ಅಪ್ಪ, ತಂದೆ) ಎಂಬ ಶಬ್ದ ಬಂದಿದೆ.

೨ **ಅವು** (= ದೋಸೆ ಅಥವಾ ವಿಶೇಷ ಭಕ್ಷ್ಯ).

ಈ ಶಬ್ದಕ್ಕೆ ಕೆಲವು ವಿಶೇಷಣಗಳನ್ನು ಸೇರಿಸುವುದರಿಂದ ಇನ್ನೂ ಕೆಲವು ರೀತಿಯ ದೋಸೆ-ತಿಂಡಿಗಳಾಗುತ್ತವೆ. ಉದಾ :—

ತೆಳ್ಳವು (= ತೆಳುದೋಸೆ), ತೊಡೆದವು (ಒಲೆಗೆ ಕವಚಿಟ್ಟ ಮಡಕೆಗೆ ಹಿಟ್ಟನ್ನು ತೊಡೆದು (= ಸವರಿ) ಮಾಡುವಂಥದು- ಇದು ಶಿವಮೊಗ್ಗದ ಕಡೆ ಹವಿಕರಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ.). 'ಅವು' ಎಂಬುದಕ್ಕೆ 'ತನ' ಎಂಬ ಪ್ರತ್ಯಯ ಸೇರಿ, 'ಅವುತನ' ವಾಗುವುದಷ್ಟೆ. ರೂಢಿಯಲ್ಲಿ ಇದು 'ಅವುತಣ, ಔತಣ' ಆಗಿ ವ್ಯುತ್ಪತ್ತಿಯನ್ನು ಮರೆಗೊಳಿಸಿದೆ. ಆದರೆ ಹವಿಕರ ಭಾಷೆಯಿಂದ ಅದರ ವ್ಯುತ್ಪತ್ತಿ ಪ್ರಕಟವಾಗುತ್ತದೆ.

೩. **ಎಸಮುಚ್ಚೇಲು** (= ಎಸರ್ಮುಚ್ಚೆ)

ಅನ್ನಕ್ಕಿಟ್ಟ ನೀರಿಗೆ ಮುಚ್ಚುವ ಮರದ ಅಥವಾ ಲೋಹದ ತಟ್ಟೆಯಿದು. ಅನ್ನದ ತಿಳಿಯನ್ನು ಬಸಿಯುವುದಕ್ಕೂ ಉಪಯೋಗಿಸುತ್ತಾರೆ. 'ಎಸರ್ಮುಚ್ಚೇಲು' ಎಂಬುದೇ 'ಎಸಮುಚ್ಚೆಲು' ಆಗಿದೆ. ಹವಿಕಭಾಷೆಯಲ್ಲಿ ಎಲು, ಏಲು-ಎಂಬೀ ತದ್ಧಿತ ಪ್ರತ್ಯಯಗಳು ಅರ್ಹವಾದ, ಸ್ವಭಾವವನ್ನುಳ್ಳ-ಎಂಬ ಅರ್ಥಗಳಲ್ಲಿ ಬರುತ್ತವೆ. ಉದಾ :— ಓದೇಲು (ಓದುವ ಸ್ವಭಾವವುಳ್ಳ), ಜಾರೇಲು (ಜಾರುವ ಗುಣವುಳ್ಳ); ಇದರಂತೆ 'ಮುಚ್ಚೇಲು' ಎಂದರೆ 'ಮುಚ್ಚಲು ಅರ್ಹವಾದುದು' ಎಂದು ಅರ್ಥ. ಪ್ರಚಲಿತವಾದ ಕನ್ನಡದಲ್ಲಿ

'ಮುಚ್ಚಳ' ಎಂಬ ಶಬ್ದವಿದೆ. ಇದು 'ಮುಚ್ಚೀಲು' ಎಂಬುದರಿಂದಲೇ ಬಂತೋ ಏನೋ! 'ಎಸವುರ್ುಚ್ಚೆ' ಎಂತ ರುದ್ರಭಟ್ಟನು ಜಗನ್ನಾಥ ವಿಜಯಲ್ಲಿ ಪ್ರಯೋಗಿಸಿದ್ದಾನೆ-- "ಆನೆ ಮೆಟ್ಟಿದೆಸವುರ್ುಚ್ಚೆವೊಲಾಗೆ ಕೂರ್ಮನೊಡೆದಂ." (ಆ. ೧-೩೦.)

೪. ಅರೆಮಡಲು (=ತಾಳೆಮರದ ಗರಿ)

'ಮಡಲು' ಎಂದು ತೆಂಗಿನ ಮರದ ಗರಿಗೆ ಹೆಸರು. ಅದು ಒಣಗಿದ್ದರೆ 'ಒಣ ಮಡಲು' ಎಂತಲೂ ಒಣಗದಿದ್ದರೆ 'ಹಸಿ ಮಡಲು' ಎಂತಲೂ ಹೇಳುತ್ತಾರೆ. 'ಅರೆ ಮಡಲು' ಗಾತ್ರದಲ್ಲಿ ತೆಂಗಿನ ಮಡಲಿನ ಅರ್ಧಾಂಶದಷ್ಟಿರಬಹುದು. ಆದರೆ, ಈ ಹೆಸರು ಅದರ ಗುಣವಾಚಕವಾಗಿಯೇ ಬಂದಿರಬೇಕು. ಆರ್-ಉಚ್ಚಧ್ವನಿಮಾಡು. ಈ ಮಡಲಿಗೆ ಗಾಳಿಸೋಂಕಿದರೆ ಸಾಕು, ಧ್ವನಿಮಾಡುತ್ತದೆ. ಇದನ್ನು ತಟ್ಟಿ ಬೇಲಿಗಳಿಗೆ ಬಿಗಿಯುವುದುಂಟು; ಆಗ ಹಸುಗಳಾಗಲಿ ಕಳ್ಳರಾಗಲಿ ನುಸುಳಿ ಬರುವಾಗ ಸ್ಪರ್ಶಮಾತ್ರದಿಂದಲೇ ಸದ್ದು ಉಂಟಾಗಿ ಕಾವಲುಗಾರರಿಗೆ ಕೇಳಿಸುವುದು. 'ಆರುವ ಮಡಲು' ಬರುತ್ತ ಆರೆ ಮಡಲಾಗಿರಬಹುದು, ಎನಿಸುತ್ತದೆ

೫. ಕಡಿಕ್ಕೆ (=ಕಣಜ)

"ಕಡಿ+ಇಕ್ಕೆ, ಇರ್ಕೆ" ಕಡಿಕ್ಕೆ ಆಗಿದೆ. ಕಡಿ (ಕಾಳುಕಡಿ) ಎಂದರೆ ಧಾನ್ಯ. ಬತ್ತ, ರಾಗಿ ಮುಂತಾದವನ್ನು ಶೇಖರಿಸಿ ಇಡುವ ಸಾಧನವಾಗಿ 'ಕಡಿಕ್ಕೆ' ಶಬ್ದವು ಸಾರ್ಥಕವಾಗಿದೆ. ತುಳುವಿನಲ್ಲಿ 'ಕದಿಕ್ಕೆ' ಎನ್ನುವರು, ಆಗ ಶಬ್ದದ ಅರ್ಥವು ಗೋಚರಿಸುವುಲ್ಲ.

೬. ತೆರೆಸೀರೆ (=ಪರದೆ)

"ತೆರೆ"ಯಾಗಿ ಉಪಯೋಗಿಸುವ ಸೀರೆ (=ವಸ್ತ್ರ) ಇದು. ಬಯಲಾಟಗಳಲ್ಲಿ ವೇಷವು ಮೊದಲ ಬಾರಿ ರಂಗಸ್ಥಳಕ್ಕೆ ಬರುವಾಗ ಕೆಲವು ವೇಷಗಳಿಗೆ 'ತೆರೆಸೀರೆ' ಹಿಡಿವ ಕ್ರಮವಿದೆ.

೭. ತೊಡವಣಿಕ (=ಮೊದಲ ಬಾರಿ ಕರುಹಾಕಿರುವ ಹಸು ಅಥವಾ ಎಮ್ಮೆ.)

ತೊಡಗು=ಪ್ರಾರಂಭಿಸು. ಮಣಿಕ, ಮಣಕ, ಮಾಣವಕ=ಕರು. ಶಿವಮೊಗ್ಗದ ಕಡೆಯ ಹವಿಕರಲ್ಲಿ ಇದನ್ನು "ಚೊಚ್ಚಲ ಮಣಕ" ಎನ್ನುತ್ತಾರೆ.

೮. ನೇವಾಳ (=ನೇವಳ)

ಈ ಶಬ್ದವು ಕಾವ್ಯಗಳಲ್ಲಿಯೂ ಬಂದಿದೆ. ಚಿನ್ನದ ಅಥವಾ ಬೆಳ್ಳಿಯ ಸರ-ಎಂದು ಕಿಟ್ಟೆಲರ ಕೋಶದಲ್ಲಿ ಇದಕ್ಕೆ ಅರ್ಥವಿದೆ. 'ಉಡಿದಾರ' ಎಂದೂ ಇದಕ್ಕೆ ಅರ್ಥ ಹೇಳುತ್ತಾರೆ. ನೇ (ನೇಯ್) ಎಂಬ ಧಾತುವಿನಿಂದ 'ನೇವ' ಕೃದ್ವಿಶೇಷಣದಿಂದ ಕೂಡಿದ ಆಳ (ಆಣ) ಎಂಬ ಶಬ್ದವಿದು. ಬೆಳ್ಳಿಯ ಅಥವಾ ಚಿನ್ನದ ಸರಿಗೆಗಳನ್ನು ನೆಯ್ದು ಮಾಡಿರುವ ದಪ್ಪದ ದಾರವೇ ನೇವಳ. ಇದಕ್ಕೆ ಪವನನ್ನೋ ರೂಪಾಯಿ ನಾಣ್ಯವನ್ನೋ ಜೋಡಿಸಿ ಕೊರಲಿಗೂ ಆಭರಣವಾಗಿ ಮಾಡುವುದುಂಟು "ಆಣ (ಆಣಿ)" ಎಂಬುದು ಪರೌಲ್ಯವುಳ್ಳ ಲೋಹದ ವಸ್ತು. ಆಭರಣ' ಎಂಬ ಅರ್ಥದಲ್ಲಿಯೂ ಬಂದಿದೆ. ಹರಿವಾಣ, ತಾಂಬಾಣ, ದಬ್ಬಣ, ಒಡ್ಯಾಣ (ಉಡಿಯಾಣ)-ಇತ್ಯಾದಿಗಳ ವ್ಯುತ್ಪತ್ತಿಯನ್ನರಿಯಲು 'ನೇವಾಳ' ಶಬ್ದ ಸಹಾಯಕವಾಗುವುದು

೯. ಪಿಜುರು (=ಹಿಂದಕ್ಕೆ ತಿರುಗು)

ಇದು "ಪಿಂ=ಹಿಂದಕ್ಕೆ; ಜುರು (ಗು)=ಸರಿ, ತಿರುಗು-ಎಂಬುದರಿಂದ ರೂಪಿತವಾಗಿದೆ.

೧೦. ಉಪ್ಪರಟೆ, ಉಪ್ರಟೆ (=ತಲೆ ಕೆಳಗಾಗಿ, ಒಂದಕ್ಕೊಂದು)

ಉಪ್ಪರ=ಮೇಲೆ, ಅಟೆ=ಅಡಿ, ಕೆಳಗೆ. ಈಗ ಇದರ ಅರ್ಥವು ಸ್ಪಷ್ಟವಾಗುವುದು.

೧೧ ಬಗತ್ತಲೆ (=ಬೈತಲೆ)

ಇಲ್ಲಿ 'ತಲೆ' ಎಂದರೆ, ಲಕ್ಷ್ಯಾರ್ಥಕವಾಗಿ ಕೂದಲು. ತಲೆಯ ಕೂದಲನ್ನು ಬಾಚಣಿಗೆಯಿಂದ ಅತ್ತಿತ್ತ ಬಗೆದು ವಿಭಾಗಮಾಡಿದುದು "ಬಗತ್ತಲೆ" (ಬಗೆತಲೆ) ಬಗತಲೆ-ಎಂಬುದು. ಇದು 'ಬಯಿತಲೆ', 'ಬೈತಲೆ'-ಆಗಿರುವಂತೆ ತೋರುತ್ತದೆ.

೧೨. ಕೊದಿಲು (ಕೊದಿ + ಇಲ್ — ಅನ್ನಕ್ಕೆ ಬೆರಸಿ ಉಣ್ಣುವ ಹುಳಿ ಅಥವಾ ಸಾಂಬಾರು.)

'ಕೊದಿ' ಎಂದರೆ ತಿನ್ನುವ ಅತ್ಯಾಶೆ. ಬಹಳ ಹಸಿದವನು ಊಟವನ್ನು ಪ್ರಾರಂಭಿಸಿ, ಕ್ರಮವಾಗಿ ತಂಬುಳಿ, ತುಪ್ಪದನ್ನ, ಶೋವೆ, ಪಲ್ಯ, ಸಾರು— ಇವನ್ನು ಉಂಡನಂತರ ಕೊದಿಲನ್ನು ಬಳಸುವುದು ಹವಿಕರ ರೂಢಿ. ಕೊದಿಲು ತರುವ ಹೊತ್ತಿಗೆ ಉಣ್ಣುವವರ 'ಕೊದಿ' ಕಡಮೆಯಾಗಿರುತ್ತದೆ, ಹಸಿವು ಇಂಗಿರುತ್ತದೆ. 'ಕೊದಿಲು' ಉಂಡನಂತರ 'ಕೊದಿ' ಸ್ವಲ್ಪವೂ ಉಳಿಯುವುದಿಲ್ಲ. ಈ ಅರ್ಥದಿಂದ 'ಕೊದಿಲ್' ಶಬ್ದವು ಸಾರ್ಥಕವಾಗುತ್ತದೆ. ತುಳುವಿನಲ್ಲಿ ಇದನ್ನು 'ಕೊದ್ದೆಲ್' ಎನ್ನುತ್ತಾರೆ.

೧೩. ಮೇಲಾರ (= ಕಾಯಿಹುಳಿ, ಮಜ್ಜಿಗೆ ಹುಳಿ)

ಮೇಲು + ಆರ–ಎಂಬ ಪದಗಳ ಕೂಟ ಇದರಲ್ಲಿದೆ. 'ಮೇಲು' ಎಂದರೆ ಇಲ್ಲಿ 'ಕೊನೆ' ಎಂದರ್ಥ. 'ಆರ' ಎಂದರೆ 'ಆಹಾರ'. ಅನ್ನಕ್ಕೆ ಸೇರಿಸಿ ಉಣ್ಣುವ ಅಡುಗೆಗಳಲ್ಲೆಲ್ಲ ಇದು ಮೇಲಿನದು. ಅಂದರೆ, ಶ್ರೇಷ್ಠವಾದುದು ಮತ್ತು ಕೊನೆಯದು. ದಕ್ಷಿಣ ಕನ್ನಡದ ಹವಿಕರಲ್ಲಿ ಇದನ್ನು ಎಲ್ಲ ಅಡಿಗೆ ವಸ್ತುಗಳನ್ನು ಬಳಸಿ ಆದನಂತರ, ಅಂದರೆ, ಮಜ್ಜಿಗೆ ಮೊಸರುಗಳ ಬಳಕೆಗೆ ಮೊದಲು ಬಳಸುವುದು ರೂಢಿ. ಈ ಕಾರಣದಿಂದ ಇದು 'ಮೇಲಾರ'ವಾಗಿದೆ.

೧೪ ಸೊರಕ್ಕಾಯಿ, ಸೊರೆಕ್ಕಾಯಿ (= ಸೋರೆಕಾಯಿ).

ಪುಂಗಿ, ತಂಬೂರಿ ಇತ್ಯಾದಿ ಶ್ರುತ್ಯುಪಕರಣವಾಗಿದ್ದು, ಇದು ಸೊರ (= ಸ್ವರ) + ಕಾಯಿ—ಎನಿಸಿದೆ. ಅಥವಾ ಸುರೆ (ಮದ್ಯ) ತುಂಬಿಸಿ ಮರದಿಂದ ಕೆಳಗಿಳಿಸಲು ಉಪಯುಕ್ತವಾದುದು. 'ಕುಡು' ಎಂಬುದು 'ಕೊಡು' ಆದಂತೆ 'ಸುರೆ' 'ಸೊರೆ' ಯಾಗಬಲ್ಲುದು. ತುಳುವಿನಲ್ಲಿ ಇದನ್ನು "ತುರೆ" ಎನ್ನುವರು. **"ಸೋರೆಕಾಯಿ"** ಎಂದಾಗ ಆ ವಸ್ತುವಿನ ಉಪಯೋಗದ ಭಾವವೇನೂ ಆಗುವುದಿಲ್ಲ. ಹವಿಕರ ಕನ್ನಡದ ಮೂಲಕ ಅದರ ವ್ಯುತ್ಪತ್ತಿ ವೇದ್ಯವಾಗುತ್ತದೆ.

೧೫. ಹೊದಳು (=ಅರಳು).

ಬತ್ತ, ಜೋಳ ಮುಂತಾದವನ್ನು ಹುರಿದಾಗ, ಅದು ವಿಸ್ತೃತವಾಗಿ "ಹೊದಳು" ಆಗುತ್ತದೆ. ಪೊದಟಿಬ್=ವ್ಯಾಪಿಸು. 'ಅರಳು' ಎಂಬುದೂ 'ವಿಕಾಸನಾಗು' ಎಂಬ ಅರ್ಥವನ್ನೇ ಕೊಡುವುದು. ತುಳುವಿನಲ್ಲಿ ಇದನ್ನು "ಪೊರಿ" ಎನ್ನುವರು. 'ಪೊರೆ' ಎಂದರೆ 'ಹಿಗ್ಗಿಕೊಳ್ಳು' ಎಂದು ಕನ್ನಡದಲ್ಲಿ ಪ್ರಯೋಗದಲ್ಲಿದೆ. 'ಹೊದಳು' ಎಂಬುದು ಹವಿಕರ ನುಡಿಯಲ್ಲಿದ್ದು ಕನ್ನಡದ ಸಾಹಿತ್ಯ ಭಾಷೆಗೆ ಸೇರಲು ಅರ್ಹವಾಗಿದೆ

೧೬. ಕೆಬಿರ (=ಕಿವುಡ).

'ಕಿವಿ' ಎಂಬುದು ತುಳುವಿನಲ್ಲಿ 'ಕೆಬಿ'. ಅದೇ ಶಬ್ದಾರ್ಥದಲ್ಲಿ ಹವಿಕರ ನುಡಿಯಲ್ಲಿ "ಕೆಬಿ+ಇರ" ಎಂಬುದು ಬಂದಿದೆ. ಇಲ್ಲಿ ಕೆಬಿ (ಕಿವಿ)—ಎಂದರೆ 'ಶ್ರವಣಶಕ್ತಿ' ಎಂದು ಲಕ್ಷ್ಯಾರ್ಥವನ್ನಿಟ್ಟುಕೊಳ್ಳಬೇಕು. 'ಇರ'—ಇರದು, ಇಲ್ಲದವ. ನಿಂದಿಸುವ ಸಂದರ್ಭದಲ್ಲಿ 'ಕೆಬಿರ' ಎಂತಲೂ, ವಾರ್ತೆಯ ಸಂದರ್ಭದಲ್ಲಿ "ಪೊಟ್ಟ" ಎಂತಲೂ ಕಿವುಡನನ್ನು ಹವಿಕರು ಹೇಳುವರು.

೧೭. ಬಕ್ಕೆ.

'ಬಕ್ಕೆವಲಸು' ಎಂಬ ಹಲಸಿನ ಪ್ರಭೇದವನ್ನು ಕಾವ್ಯಗಳಲ್ಲಿ ಕಾಣುತ್ತೇವೆ. ಗಟ್ಟಿಯಾದ ಸೊಳೆಗಳಿರುವ ಹಲಸಿನ ಹಣ್ಣಿನ ಜಾತಿಗೆ 'ಬಕ್ಕೆ' ಎಂದು ಹೆಸರು. ಇದು 'ಬಲಿಕ್ಕೆ' ಎಂಬ ಶಬ್ದದಿಂದ ಬಂದಿರಬಹುದು. ಬೇಯದ ಅನ್ನದ ಅಗುಳನ್ನು "ಇದು ಬಲಿಕ್ಕೆ" ಆಗಿದೆ ಎನ್ನುತ್ತಾರೆ.

೧೮. ಸಕ್ಕಣ (=ಉದ್ಧರಣೆ).

ಆಚಮನ, ಅರ್ಘ್ಯಕ್ರಿಯೆಗಳಿಗೆ ಸಾಧನವಾಗಿರುವ ಲೋಹದ ಚಿಕ್ಕ ಸೌಟು ಇದು. 'ಸಕ್ಕ+ಅಣ'-ಇಲ್ಲಿ 'ಸಕ್ಕ' ಎಂದರೆ ಚಿಕ್ಕದು. ಅಣ (ಆಣ)=ಲೋಹದಿಂದ ಮಾಡಿದುದು. 'ಸಕ್ಕರೆ' ಎಂಬಲ್ಲಿ "ಚಿಕ್ಕದಾದ ಕಲ್ಲು (ಅಜ[3]=ಕಲ್ಲು)" ಎಂದು ಅರ್ಥವಾಗುವುದು. ಈ 'ಸಕ್ಕಣ' ಎಂಬುದರ ವ್ಯುತ್ಪತ್ತಿಯ ಆಧಾರದಿಂದ ಹರಿವಾಣ, ತಾಂಬಾಣ, ಕಡಿವಾಣ, ಉಡಿಯಾಣ

ಇತ್ಯಾದಿ ಶಬ್ದಗಳಿಗೂ ವ್ಯುತ್ಪತ್ತಿಯನ್ನು ಕಂಡುಹಿಡಿಯಬಹುದು. (ತುಳುವಿನಲ್ಲಿ 'ಚಕ್ಕಣ' ಎಂಬೊಂದು ಪದವಿದೆ. ಚಿಕ್ಕ ಮಗುವಿಗಾಗಿ ಮಾಡಿರುವ ಚಾಪೆಗೆ ಆ ಹೆಸರಿದೆ. ಅಲ್ಲಿ 'ಚಕ್ಕ' ಎಂಬುದಕ್ಕೆ "ಚಿಕ್ಕ" "ಮಗು"-ಎಂದು ಅರ್ಥವಾಗುವುದು. 'ಅಣ' ಎಂದರೆ ಅಲ್ಲಿ ಬೆಲೆಯುಳ್ಳ ಒಂದು ವಸ್ತು-ಎಂದು ತಿಳಿದುಕೊಳ್ಳಬೇಕು).

ಕನ್ನಡ ಭಾಷೆಯ ಸಂಪದಭಿವೃದ್ಧಿಗೆ ಈ ಹವ್ಯಕ ಭಾಷೆ ಉಪಯುಕ್ತವಾದೀತು. ಹಲವು ಶಬ್ದಗಳ ಮೂಲವನ್ನೂ ಅವುಗಳ ಅರ್ಥದ ಸೆಲೆಯನ್ನೂ ಶೋಧಿಸುವುದಕ್ಕೆ ಈ ಭಾಷೆಯ ಪರಿಜ್ಞಾನವು ಸಹಾಯಕವಾಗುವುದು ನಿಶ್ಚಯ.*

---

* ಹೆಚ್ಚಿನ ಓದಿಕೆಗಾಗಿ ಈ ಕೆಳಗಿನವುಗಳನ್ನು ನೋಡಬಹುದು :—

1 ಟಿ. ಕೇಶವ ಭಟ್ಟ-"ಅನನ್ಯದೇಶೀಕೋಶ" ಎಂಬ ನಿಘಂಟು-ಪ್ರ.ಕ. (೧೯೬೪) ಸಂಪುಟ ೪೬, ಸಂಚಿಕೆಗಳು ೨ ಮತ್ತು ೩.

2 ಶ್ರೀ ತೆಕ್ಕುಂಜ ಗೋಪಾಲಕೃಷ್ಣ ಭಟ್ಟ-ಮಂಗಳೂರು ಹವೀಕರ ಆಡುನುಡಿ-ಎಂಬ ಲೇಖನ-ಪ್ರ. ಕ. ೪೭, ಸಂಚಿಕೆ ೧. (೧೯೬೫).

3 ಪ್ರೊ|| ಎಂ. ಮರಿಯಪ್ಪ ಭಟ್ಟ-ಕನ್ನಡ ಸಂಸ್ಕೃತಿ (೧೯೬೮)-ಈ ಗ್ರಂಥದಲ್ಲಿ "ದಕ್ಷಿಣ ಕನ್ನಡದ ಹವ್ಯಕ ಭಾಷೆ" ಎಂಬ ಲೇಖನ.

ಸಂಶೋಧನದ ನೆಲೆ

[ಸಂಶೋಧನಸ್ವರೂಪ–ಸಂಶೋಧನ ಪ್ರಜ್ಞೆ–ಸತ್ಯಸಾಕ್ಷಾತ್ಕರಣ–ಸಂಶೋಧಕನ ಕೃತಜ್ಞತೆ–ಗುಣವಿಶೇಷ–ಮೆಚ್ಚಿಕೆ–ಆನಂದ.]

ಸ್ವರೂಪ

ಜ್ಞಾನಾರ್ಜನದ ಎಲ್ಲ ಕ್ಷೇತ್ರಗಳಲ್ಲಿಯೂ "ಸಂಶೋಧನ" ಎಂಬುದು ಪ್ರಚಲಿತ ಶಬ್ದವಾಗಿದೆ. ಸಾಹಿತ್ಯ-ಶಾಸ್ತ್ರ-ಕಲೆ-ವಿಜ್ಞಾನಾದಿ ವಿಷಯಗಳ ಪ್ರಯೋಗ ಸಾಹಸಿಗಳಿಗೆ ಸಂಶೋಧನದಲ್ಲಿ ತತ್ಪರತೆ ಕೀರ್ತಿಗಳು ಗೌರವವೆನಿಸಿವೆ. ಇಂದಿನ ವಿಶ್ವವಿದ್ಯಾಲಯಗಳು ಸಂಶೋಧನ ಕಾರ್ಯಕ್ಕೆ ಮಹತ್ವ ಕೊಡುತ್ತಿವೆ-ಪ್ರೋತ್ಸಾಹಿಸುತ್ತಿವೆ. ಸಂಶೋಧನ ಕಾರ್ಯಕ್ಕೆ ಮಾರ್ಗದರ್ಶನ ಮಾಡುವ ಹಿರಿಯ ವಿದ್ವಾಂಸರೂ ಇದ್ದಾರೆ. ಆದರೆ ಸಂಶೋಧನ ತತ್ವವನ್ನು ನಿರೂಪಿಸುವ ಸಾಹಿತ್ಯ ಕನ್ನಡದಲ್ಲಿ ವಿರಳ.

ಉದ್ದಿಷ್ಟವಾದ ತತ್ವದ, ವಿಷಯದ, ಅರ್ಥದ ಅಥವಾ ವಸ್ತುವಿನ ಅನ್ವೇಷಣೆ 'ಸಂಶೋಧನ'ವೆನಿಸುವುದು. ಅನ್ವೇಷಣೆ, ಶುದ್ಧೀಕರಣ, ಆವಿಷ್ಕಾರ-ಇವು ಸಂಶೋಧನದ ಸ್ವರೂಪಗಳು. ಅನ್ವೇಷಣ ಪ್ರವೃತ್ತಿಯನ್ನು ಈ ವಿಶ್ವದ ಎಲ್ಲ ಕಡೆ-ಸ್ಥಾವರ ಜಂಗಮ ಜೀವಿಗಳಲ್ಲಿಯೂ ಒಂದಿಲ್ಲೊಂದು ಬಗೆಯಾಗಿ ನಾವು ಕಾಣುತ್ತೇವೆ. ಗಿಡಮರ ಬಳ್ಳಿಗಳು ನೆಲದ ಆಳದಲ್ಲಿ ಬೇರುಬಿಟ್ಟು, ತಮ್ಮ ಆಹಾರವನ್ನು ಹುಡುಕಿ ಹಿಡಿಯುತ್ತವೆ, ಕ್ರಿಮಿ-ಕೀಟಗಳು, ಮೃಗ-ಪಕ್ಷಿಗಳು ತಮ್ಮ ಆಹಾರಾನ್ವೇಷಣೆ ಮಾಡುತ್ತವೆ. ಮನುಷ್ಯೇತರ ಸಕಲ ಜೀವರಾಶಿಯ ಈ ಬಗೆಯ ಆಹಾರಾನ್ವೇಷಣೆಯ ರೂಪದ ಸಂಶೋಧನ ಪ್ರವೃತ್ತಿ ಅವವುಗಳಿಗೆ ಸಹಜವಾಗಿ ಬಂದವು. ಬುದ್ಧಿಜೀವಿಯಾದ ಮಾನವನ ದೃಷ್ಟಿಯಿಂದ ಇಂತಹ ಸಹಜ ಪ್ರವೃತ್ತಿಯ ನಡೆವಳಿ ಸಂಶೋಧನವೆನಿಸುವುದಿಲ್ಲ. ಸಂಶೋಧನದಲ್ಲಿ ಬುದ್ಧಿ-ಭಾವಗಳ ಪರಿಣತಿ ಕಾಣಿಸಬೇಕು; ಆ ಸಂಶೋಧನದ ಫಲ ಕೇವಲ ವ್ಯಕ್ತಿಗಾಗಿರದೆ ಸಮಾಜಕ್ಕಾಗಿರಬೇಕು.

ಮಾನವ ಜೀವನವು ಈ ಬಗೆಯ ಸಂಶೋಧನದಲ್ಲಿ ಉದ್ಯುಕ್ತವಾಗುತ್ತದೆ. ಸೃಷ್ಟಿಯ ದೃಶ್ಯಾದೃಶ್ಯಗಳ ರಹಸ್ಯವನ್ನು ಭೇದಿಸುವುದರಲ್ಲಿ ತತ್ಪರವಾಗುತ್ತದೆ.

ಪರಮಾತ್ಮನಂತೆ, ಜ್ಞಾನದಂತೆ, ಸತ್ಯದಂತೆ ಸಂಶೋಧನವೂ ಅನಾದಿ. ಇದರ ಕರ್ತಾರನಾದ ವಿಚಾರ ಪ್ರಧಾನನೆನಿಸುವ ಮನುಷ್ಯನಿಗೆ ತನ್ನ ಸುತ್ತಣ ಜಗತ್ತು ರಹಸ್ಯಮಯವೆನಿಸುತ್ತದೆ- ಪಂಚಭೂತಗಳು, ಅವುಗಳ ಗುಣ ವಿಶೇಷಗಳು, ಸೂರ್ಯ-ಚಂದ್ರ-ನಕ್ಷತ್ರಗಳು, ಋತುಭೇದಗಳು, ಕಾಲಮಾನ ಗಳು, ಹಗಲಿರುಳು, (ಸಸ್ಯ) ಜೀವರಾಶಿ-ಮುಂತಾದವೆಲ್ಲ ಅವನ ಸಂಶೋಧನ ಬುದ್ಧಿಯನ್ನು ಕೆದಕುತ್ತವೆ. ಇವೆಲ್ಲ ಹೇಗೆ ಆದವು? ಇವಕ್ಕೆಲ್ಲ ನಿಯಾಮಕ ನಿರುವನೆ? ಸೃಷ್ಟಿಯಲ್ಲಿ ಮಾನವನ ಉತ್ಪತ್ತಿ ಹೇಗೆ ಆಯಿತು? ಯಾವಾಗ ಆಯಿತು? ಎಂಬುದನ್ನು ಕುರಿತು, ಮಾನವನು ಸಂಶೋಧನ ಮಾಡುತ್ತಾ ಬಂದಿದ್ದಾನೆ. ತತ್ವಜ್ಞಾನ-ವಿಜ್ಞಾನ ಎಂಬೆರಡರ ಬಲದಿಂದಲೂ ಈ ವಿಷಯ ವನ್ನು ಕುರಿತ ಸಂಶೋಧನವು ದೇಶದಲ್ಲಿ ನಡೆದಿದೆ. ಈ ಸಂಶೋಧನ ಗಳ ಪರಿಣಾಮವೆಂಬಂತೆ ನಮ್ಮಲ್ಲಿ ವೇದ-ಉಪನಿಷತ್ತು-ಗೀತೆ-ಪುರಾಣ-ಧರ್ಮಶಾಸ್ತ್ರ-ಮಹಾಕಾವ್ಯ-ಕಾವ್ಯಶಾಸ್ತ್ರ-ಇತ್ಯಾದಿ ವಿವಿಧ ಜ್ಞಾನಾನುಭವಗಳ ಸಾಹಿತ್ಯಸೃಜನವಾಗಿದೆ. ಮಾನವ ಜೀವನದಲ್ಲಿ ಸಾಮಾಜಿಕ ವ್ಯವಹಾರಕ್ಕೂ ಸುಖಕ್ಕೂ ಸೌಕರ್ಯಕ್ಕೂ ಆನಂದಕ್ಕೂ ಸಾಧನಗಳಾದ ವಿವಿಧ ಕಲೆಗಳು, ಭಾಷೆಗಳು, ಗಣಿತ, ಜ್ಯೋತಿಷ್ಯ, ಆಯುರ್ವೇದ ಮುಂತಾದವೆಲ್ಲವು ನಮ್ಮ ಪೂರ್ವಿಕರ ಸಂಶೋಧನಗಳು. ಭಾಷೆಯ ಮೂಲಕ ವ್ಯಕ್ತವಾಗುವ ಸಾಹಿತ್ಯಕ್ಕೆ ಸಂಬಂಧಿಸುವ ಶಿಕ್ಷಾ-ವ್ಯಾಕರಣ-ಛಂದೋಲಂಕಾರ-ರಸಭಾವಾದಿ ವಿಚಾರಗಳು ಕೂಡ ಸಂಶೋಧನ ಫಲವೆಂಬಂತೆ ಇಂದಿನ ಜಿಜ್ಞಾಸುಗಳಿಗೆ ದೊರೆಯುತ್ತವೆ. ಧರ್ಮ, ಸಂಸ್ಕೃತಿ, ರಾಷ್ಟ್ರೀಯತೆ, ರಾಜನೀತಿ, ಸಮಾಜನೀತಿ, ಅರ್ಥನೀತಿ, ಪುರುಷಾರ್ಥವಿವೇಚನೆ-ಇವೆಲ್ಲವೂ ಸಂಶೋಧನದ ಆವಿಷ್ಕಾರಗಳು. ಇವನ್ನು ಅಧ್ಯಯನ ಮನನ ಮಾಡಿದಂತೆಲ್ಲ ಇವುಗಳ ಕುರಿತ ನೂತನ ಸಂಶೋಧನ ಗಳಿಗೆ ವಸ್ತು ದೊರೆಯುವುದು.

ರಾಮಾಯಣ ಕಾಲದಲ್ಲಿ ವೀರ ಆಂಜನೇಯನು ಉದಧಿಯನ್ನು ಲಂಘಿಸಿ, ಲಂಕೆಯ ಅಶೋಕ ವನಕ್ಕೆ ಹೋಗಿ ಸೀತಾದೇವಿಯನ್ನು ಅನ್ವೇಷಿಸಿದ

ಸಾಹಸ ಕಾರ್ಯ ಸಂಶೋಧನವೇ ಆಗಿದೆ. ಜಲಸ್ತಂಭ ವಿದ್ಯೆಯಿಂದ ಕೊಳದಲ್ಲಿ ಅಡಗಿದ್ದ ಕೌರವನನ್ನು ತಡಿಯ ಪಾದಚಿಹ್ನೆಗಳಿಂದ ಗುರುತಿಸಿ ಹಿಡಿದ ಪಾಂಡವರ ಕಾರ್ಯವೂ ಸಂಶೋಧನವಾಗಿದೆ. ಮಹಾಯೋಗಿಗಳ ಯೋಗಸಾಧನೆ, ಋಷಿಗಳ ತಪ, ಜ್ಞಾನಿಗಳ ತತ್ವಾಲೋಕನ-ಇವು ಹೇಗೂ ಸಂಶೋಧನಗಳೇ ಆಗಿವೆ. ಭೂ-ಖಂಡಗಳ ನವೀನ ಅನ್ವೇಷಣೆ, ನೆಲದೊಳಗಣ ಖನಿಜ ಸಂಪತ್ತಿನ ಶೋಧನೆ, ಜ್ಯೋತಿಶ್ಯಾಸ್ತ್ರದಿಂದ ಭವಿಷ್ಯ ನಿರ್ಣಯ, ಗಣಿತದ ಸಮಸ್ಯೆಗಳ ಪರಿಹಾರ, ನೂತನ ಯಂತ್ರೋಪಕರಣಗಳ ನಿರ್ಮಾಣ, ಚಂದ್ರಲೋಕ ಗಮನ–ಇಂಥವೆಲ್ಲವೂ ಸಂಶೋಧನಗಳಾಗಿವೆ. ಒಟ್ಟಿನಲ್ಲಿ ಸಂಶೋಧನವೆಂಬುದು ರಹಸ್ಯದ ಭೇದನವಾಗಿದ್ದು ಬಹುಮುಖವಾದುದು.

ಹಾಲಿನಲ್ಲಿ ಬೆಣ್ಣೆಯಿರುವುದು ರಹಸ್ಯ. ಈ ರಹಸ್ಯವನ್ನು ಮೊತ್ತ ಮೊದಲು ತಿಳಿದುದು 'ಸಂಶೋಧನ.' ಆ ಬೆಣ್ಣೆಯನ್ನು ಪಡೆಯುವುದಕ್ಕಾಗಿ ಮೊದಲು ಮಾಡಿದ ಕ್ರಿಯೆಗಳು (ನೆರವು ಹಾಕಿ ಮೊಸರು ಮಾಡಿ, ಕಡೆಗೋಲಿನಿಂದ ಕಡೆದುದು) ಸಂಶೋಧನ ಕಾರ್ಯ. ಅದೇ ಕಾರ್ಯವನ್ನು ಇಂದಿನ ತನಕ ಅನುಸರಿಸಿ ಬರುತ್ತಿರುವುದು 'ಅನುಭವ'. ಹೀಗೆ ಆವಾವುದು ರಹಸ್ಯವೋ, ಅಸ್ಫುಟವೋ ಅವನ್ನೆಲ್ಲ ಕಂಡುಹಿಡಿಯುವ ಮತ್ತು ಪ್ರಕಟಗೊಳಿಸುವ ಕಾರ್ಯವು ಸಂಶೋಧನವೆನಿಸುವುದರಿಂದ ಅದೊಂದು ವ್ಯಾಪಕವಾದ ಗುಣ.

ಪೂರ್ವಿಕರ ಸಂಶೋಧನಗಳು ಕಾಲವಶದಿಂದ ಇಂದಿನವರಿಗೆ ತಿಳಿದಿಲ್ಲದಿದ್ದರೆ, ತಿಳಿದುದು ಅಸಮರ್ಪಕವಾಗಿ, ಅಸ್ಪಷ್ಟವಾಗಿ ಅಪೂರ್ಣವಾಗಿದ್ದರೆ, ಅಥವಾ ತಪ್ಪಾಗಿದ್ದರೆ ಅಂಥವು ಇಂದಿಗೆ ಪುನಃ ಸಂಶೋಧನ ವಿಷಯಗಳಾಗುತ್ತವೆ. ಅವನ್ನು ಪುನರನ್ವೇಷಿಸಿ ಅವುಗಳಲ್ಲಡಗಿದ ಸತ್ಯವನ್ನೆತ್ತಿ ಹಿಡಿದು "ಇದಮಿತ್ಥಂ" ಎಂಬ ನಿರ್ಣಯಕ್ಕೆ ಬರುವ ಪ್ರಯತ್ನವು ಯೋಗ್ಯವಾದ ಸಂಶೋಧನವೆನಿಸುವುದು. ಈ ಬಗೆಯ ಪ್ರಯತ್ನ ಫಲಗಳೆರಡೂ 'ಸಂಶೋಧನ' ಎಂಬ ಹೆಸರಿಗೆ ಪಾತ್ರವಾಗುತ್ತವೆ. ಈ ಕಾರ್ಯಸಿದ್ಧಿಗಳೆರಡರ ಲಿಖಿತ ಸಾಹಿತ್ಯ ಸಂಶೋಧನಗ್ರಂಥವಾಗುತ್ತದೆ.

ಸಂಶೋಧನವು ಕೇವಲ ಅನ್ವೇಷಣದಲ್ಲಿ ಮುಗಿಯುವುದಿಲ್ಲ. ಅನ್ವೇ

ಷಣವು ಮುಂದಿನ ಪರಿಷ್ಕರಣ ಕಾರ್ಯಕ್ಕೆ ನಾಂದಿಯಾಗುವುದರಿಂದ ಸಂಶೋಧನವು ಮುಂದೆ ಮುಂದೆ ಚಲಿಸುವ ರಥವೆನ್ನಬಹುದು. ಈ ಕುರಿತು ವಿದ್ವಾಂಸರ ಮಾತುಗಳಿವು :—

"ಊಹೆ, ವೀಕ್ಷಣೆ, ಸಾಮಗ್ರಿಸಂಗ್ರಹ ಮತ್ತು ಪ್ರಯೋಗ (ಇವು) ಸಂಶೋಧನೆಯ ತೇರಿನ ನಾಲ್ಕು ಚಕ್ರಗಳು ; ಪ್ರತಿಭೆ, ಕಲ್ಪನೆ, ಪಾಂಡಿತ್ಯ ಮತ್ತು ಸತತ ಪ್ರಯತ್ನಗಳು ಅದರ ಚಾಲಕಶಕ್ತಿ. ವಿಶ್ಲೇಷಣೆ ವಿವರಣೆಗಳು ಅದಕ್ಕೆ ಮಾಡುವ ಅಲಂಕಾರಗಳು. ಅಂಕೆ-ಅಂಶಗಳ ಜಮಾವಣೆ, ಪ್ರಶ್ನಾವಳಿ, ಜನಸಂದರ್ಶನ, ಮಾದರಿ ಕಲೆತಗಳ ಮೂಲಕ ಸಾಮಗ್ರಿ ಸಂಗ್ರಹ ನಡೆಯುತ್ತದೆ. ಶಾಸ್ತ್ರಕಾರನಂತೆಯೇ ಒಂದಲ್ಲ ಒಂದು ರೀತಿಯಲ್ಲಿ ಸಾಹಿತಿ ತತ್ವಜ್ಞಾನಿಗಳೂ ಸಂಶೋಧಕರಾಗಬೇಕಾಗುತ್ತದೆ. ಕಾದಂಬರಿ ನಾಟಕ ವಿಮರ್ಶೆಗಳಲ್ಲಿ, ಗ್ರಂಥಸಂಪಾದನೆಯಲ್ಲಿ ಸಂಶೋಧನೆಯ ಪಾತ್ರ ಇದ್ದೇ ಇರುತ್ತದೆ. ಸೃಜನ ಶಕ್ತಿಯ ಜತೆಗೆ ಪಾಂಡಿತ್ಯವೂ ಅತ್ಯವಶ್ಯಕವಾಗುತ್ತದೆ. ವಸ್ತುನಿಷ್ಠದೃಷ್ಟಿ ಸಂಶೋಧನೆಯ ಆದ್ಯ ಹಾಗೂ ಪ್ರಮುಖ ಲಕ್ಷಣವಾದರೂ ಪ್ರತಿಭೆ ಮತ್ತು ಕಲ್ಪನೆಗಳಿಗೆ ಅಲ್ಲಿ ಜಾಗವಿಲ್ಲವೆಂದು ಹೇಳುವಂತಿಲ್ಲ."[1]

ಸಂಶೋಧನ ಪ್ರಜ್ಞೆ.

ಪ್ರತಿಭೆ, ಊಹೆ, ವೀಕ್ಷಣೆ, ಪಾಂಡಿತ್ಯ-ಇವು ಸಂಶೋಧಕನಿಗಿರುವಂತೆ ಕವಿಗಳಿಗೂ ಅವಶ್ಯಕವಾಗಿರುವುದರಿಂದ ಕವಿಭಾವಕೃತವೆನಿಸುವ, ಕವಿಕರ್ಮವೆನಿಸುವ ಕಾವ್ಯಗಳೂ ಒಂದು ಬಗೆಯಲ್ಲಿ ಸಂಶೋಧನಗಳೇ ಆಗುತ್ತವೆ. ಇವುಗಳ ರಚನೆಗೆ ಸಂಶೋಧನ ಪ್ರಜ್ಞೆ ಅವಶ್ಯಕ. ಕನ್ನಡದ ಆದಿಕವಿ ಪಂಪ ತನ್ನ ಪೋಷಕನಾದ ಅರಿಕೇಸರಿಯನ್ನು ಅರ್ಜುನನಿಗೆ ಅಭಿನ್ನವಾಗಿ ಮಾಡಿ, ನೂತನ ರೀತಿಯಲ್ಲಿ ಕಾವ್ಯವನ್ನು ಹೊಸೆದುದು ಆತನ ಸಂಶೋಧನೆಯ ಪ್ರಜ್ಞಾಫಲವೆನ್ನಬಹುದು. ಹರಿಹರ ಕವಿಯ ನೂತನ ರಚನಾಕ್ರಮ, ರಾಘವಾಂಕನ ಷಟ್ಪದೀ ಸಂಪ್ರದಾಯದ ಉದ್ಘಾಟನ, ದಾಸರ ಕೀರ್ತನೆಗಳ ರಚನೆ-ಹೀಗೆ ಎಲ್ಲೆಲ್ಲ ಕಾವ್ಯಗಳ ರಚನೆಯಲ್ಲಿ, ತಂತ್ರದಲ್ಲಿ, ರೀತಿಯಲ್ಲಿ, ರಸ

---

1 ಪ್ರೊ|| ದೇ. ಜವರೇಗೌಡ-ಸಂಶೋಧನೆ-ಎಂಬ ಪುಸ್ತಕದ ಮುನ್ನುಡಿ ಪುಟ ೫.

ಪ್ರತಿಪಾದನದಲ್ಲಿ ನವೀನತೆ ಕಂಡುಬರುವುದೋ ಅವಕ್ಕೆಲ್ಲ ಆಯಾ ಕವಿಗೆ ಇದ್ದ ಸಂಶೋಧನ ಪ್ರಜ್ಞೆಯೇ ಕಾರಣ. ಈ ಬಗೆಯ ಪ್ರಜ್ಞಾ ವಿಶೇಷವುಳ್ಳ ಕವಿ ತಾನು ಹಿಂದಣ ಮಾರ್ಗದಲ್ಲೇ ಇದ್ದರೂ ಅದರಲ್ಲೇ ಒಂದು ಹೊಸದೇಸೆಯನ್ನೂ, ಸೊಬಗನ್ನೂ ತರುತ್ತಾನೆ. ಆಧುನಿಕ ಮಹಾ ಕಾವ್ಯಗಳಲ್ಲಿ "ಶ್ರೀ ರಾಮಾಯಣ ದರ್ಶನ"ವು ಇಂಥದೇ ಸಂಶೋಧನ ಪ್ರಜ್ಞೆಯ ಪರಿಪಕ್ವತೆಯಿಂದ ಹೊರಹೊಮ್ಮಿದುದು. ಮಹಾಕವಿ ಕಾಳಿದಾಸನ ಅಭಿಜ್ಞಾನ ಶಾಕುಂತಲವು ಆತನ ಸಂಶೋಧನ ಪ್ರಜ್ಞೆ ಪರಿಣಮಿಸಿದ ವಸ್ತು-ಪಾತ್ರ-ಸನ್ನಿವೇಶ–ರಸಚಿತ್ರಣಗಳಿಂದ ಹೃದಯಂಗಮವಾದುದು.

ಮಹಾಕವಿಗಳ ಕಾವ್ಯ ನಿರ್ಮಾಣದಲ್ಲಿ ಇಂತಹ ಸಂಶೋಧನ ಪ್ರಜ್ಞೆ ಅಡಕವಾಗಿದ್ದರೂ ಅದು ಕಾವ್ಯರಸಾಧೀನವಾಗಿ, ಗುಪ್ತವಾಗಿ ನಿಲ್ಲುವುದರಿಂದ ಕವಿಗಳನ್ನು ಅವರ ಕಾವ್ಯರಚನೆಯಿಂದಾಗಿ ಸಂಶೋಧಕರೆಂದು ಯಾರೂ ಹೇಳುವುದಿಲ್ಲ. ಅವರ ಕಾವ್ಯಗಳಲ್ಲಿ ಬುದ್ಧಿಗಮ್ಯವಾದ ಭಾವವೇಧಕವಾದ ಸಾಹಿತ್ಯಾಂಶವನ್ನು ಅಥವಾ ಶಾಸ್ತ್ರಾಂಶವನ್ನು ಕಂಡುಹಿಡಿದವನು ಸಂಶೋಧಕನೆನಿಸುತ್ತಾನೆ. ಪ್ರತಿಭಾನ್ವಿತ ಕವಿ ತನ್ನ ಕಾವ್ಯ ರಚನೆಯ ವೇಳೆಯಲ್ಲಿ ತಿಳಿದೋ ತಿಳಿಯದೆಯೋ ಹೇಳಿರುವ ಮಾತುಗಳಲ್ಲಿ ಶಬ್ದ-ಅರ್ಥ-ಭಾವ-ಧ್ವನಿ ವಿಶೇಷಗಳಿಂದ ಹೊಸತು ವಿಚಾರಗಳು ಸ್ಫುರಿಸಿರುವುದನ್ನು ಸ್ವತಃ ಕಂಡಿರುವುದಕ್ಕಿಂತ ಹೆಚ್ಚಾಗಿ, ಅರ್ಥವತ್ತಾಗಿ ಸಹೃದಯ ಸಂಶೋಧಕ ಕಾಣಬಲ್ಲ. ಇದಕ್ಕೆ ಶ್ರೀಮದ್ವಾಲ್ಮೀಕಿ ರಾಮಾಯಣದಿಂದ ಉದಾಹರಣೆ ಕೊಡಬಹುದು.

ಆದಿ ಕವಿ ವಾಲ್ಮೀಕಿಯು ಕ್ರೌಂಚವಧೆಯನ್ನು ಮಾಡಿದ ಬೇಡನನ್ನು ಕುರಿತು ಹೇಳಿದ ಮಾತು ಹೀಗಿದೆ ;—

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ
ಯತ್‌ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ॥[2]

(ಎಲೈ ಬೇಡನೆ, ಈ ಜೊತೆಯ ಕೊಂಚೆ ಹಕ್ಕಿಗಳಲ್ಲಿ ಕಾಮಮೋಹದಿಂದ ಕೂಡಿದ ಒಂದನ್ನು ನೀನು ಕೊಂದಿರುತ್ತಿ, ಆದುದರಿಂದ ಹೆಚ್ಚು ಕಾಲ ಬದುಕಬಾರದು.)

---

2 ಶ್ರೀಮದ್ವಾಲ್ಮೀಕಿ ರಾಮಾಯಣ, ಬಾಲಕಾಂಡ ಸರ್ಗ ೨, ಶ್ಲೋಕ ೧೫.

ಗಂಡು ಹಕ್ಕಿ ಮಡಿದು ಬಿದ್ದಾಗ, ಹೆಣ್ಣು ಹಕ್ಕಿ ಚೀರುವುದನ್ನು ನೋಡಿ, ಮರುಕ ತಾಳಿ, ವ್ಯಾಧನ ಮೇಲೆ ಕೋಪದಿಂದ ಹೇಳಿದ ಕವಿವಾಣಿ ವಿಷ್ಣುಸ್ತುತಿಯು ಅರ್ಥವನ್ನು ತಾಳಿತು. 'ಮಾನಿಷಾದ' ಎಂಬುದಕ್ಕೆ 'ಎಲೈ ಲಕ್ಷ್ಮೀದೇವಿಗೆ ಆಶ್ರಯನಾದ ಮಹಾ ವಿಷ್ಣುವೆ' ಎಂದು ಅರ್ಥವಾಗುತ್ತದೆ. 'ಕ್ರೌಂಚಮಿಥುನಾತ್ ಕಾಮಮೋಹಿತಂ ಏಕಂ' ಎಂಬುದಕ್ಕೆ "ಕುಟಿಲರಾದ ದಾನವ ದಂಪತಿಗಳಲ್ಲಿ ಕಾಮಮೋಹಕ್ಕೆ ಒಳಗಾದ ಒಬ್ಬನಾದ ರಾವಣನನ್ನು" ಎಂದು ಅರ್ಥ. ರಾವಣ ಸಂಹಾರಕನಾದ ಮಹಾ ವಿಷ್ಣುವೇ, ನೀನು ಚಿರಕಾಲ ಕೀರ್ತಿಯನ್ನು ತಾಳಿರು-ಎಂಬುದು ಅರ್ಥಸಂಶೋಧನದ ಪರಿಣಾಮ ವಾಗಿದೆ.

ವಾಲ್ಮೀಕಿಯ ಮುಖದಲ್ಲಿ ಬಂದ ಕವಿತ್ವವಿದು. ಸಂಶೋಧನ ಪ್ರಜ್ಞೆ ಯಿಂದ ಈ ಅರ್ಥ ಬಂತೆಂದು ಹೇಳಬಹುದು. ಶೋಕಭಾವದಿಂದ ಮೂಡಿ ಬಂದ ಈ ಶ್ಲೋಕವನ್ನು ತನ್ನ ಶಿಷ್ಯನು ಕಂಠಪಾಠ ಮಾಡಿ ಹಾಡಿದುದನ್ನು ಕೇಳಿ ವಾಲ್ಮೀಕಿಗೆ ಸಂತೋಷವಾಯಿತು.

ಮನೀಷಿಯಾದ ಸುಯೋಗ್ಯ ಸಂಶೋಧಕನಿಗೆ ಹೊಸತೆನಿಸುವ ವಿಚಾರ ಹೊಳೆದರೆ, ಅಕ್ಷಯ ನಿಧಿ ದೊರೆತಷ್ಟು ಸಂತೋಷವಾಗುವುದು. ಅದನ್ನು ಕೇಳಿದ ಸಾಮಾಜಿಕ ವಿಚಾರಮತಿ ಸಹೃದಯನಿಗೂ ಅದೇ ಬಗೆಯ ಉಲ್ಲಾಸ ವಾಗುವುದು. ಆ ಸಂಶೋಧನವು ಪ್ರಕಟವಾದರೆ ಅದನ್ನೋದಿದ ಸಜ್ಜನರು ಸಂಶೋಧಕನಿಗೆ ಜಯಗಾನ ಮಾಡುವರು. ಆದರೆ ಸಂಶೋಧನದ ಮರ್ಮ ವನ್ನಾಗಲೀ, ಶ್ರಮವನ್ನಾಗಲೀ ಅರಿಯದವನಿಗೆ ಅದೊಂದು ಮರುಳ್ಗೆಲಸ ವಾಗಿ ತೋರುವುದು. ಅಸೂಯಾಪರನಿಗೆ ತಿರಸ್ಕರಣೀಯವಾಗಿ ಕಾಣುವುದು. ಇಂಥದೊಂದು ಸಮ-ವಿಷಮ ಪರಿಸ್ಥಿತಿಯ ಕಾಲಖಂಡದಲ್ಲಿ ಸಂಶೋಧನ ಕಾರ್ಯವು ಹಾದು ಹೋಗಬೇಕಾಗುತ್ತದೆ.

ಸತ್ಯಸಾಕ್ಷಾತ್ಕರಣ

ಕಾಲಪ್ರವಾಹದಲ್ಲಿ ಕೊಚ್ಚಿ ಅಥವಾ ಮುಚ್ಚಿ ಮರೆಯಾದ ಜ್ಞಾನ ವಿಷಯವನ್ನು ಹುಡುಕಿ ತೆಗೆದು ನೆಲೆನಿಲ್ಲಿಸುವ ಕಾರ್ಯವಿದು. ಅಜ್ಞಾನ ವನ್ನು ಖಂಡಿಸಿ ಸುಜ್ಞಾನವನ್ನು ಪ್ರಸ್ಥಾಪಿಸುವ ಕೆಲಸ. ಅರಿವುಗನ್ನಡಿಯು

ಶುದ್ಧೀಕರಣದ ಕಾರ್ಯ ಅಥವಾ ಅರಿವಿನ ಮಬ್ಬುಗಣ್ಣಿಗೆ ಕನ್ನಡಕ. ಅಧ್ಯಯನ ಚಿಂತನಶೀಲ ವಿಚಾರಮತಿಗೆ ಆದ ನವೀನ ಸ್ಫುರಣೆ. ಇದು ಹಳತೂ ಹೌದು, ಹೊಸತೂ ನಿಜ. ವೇದಾಂತ ವಾಕ್ಯದ ಯಾವುದೋ ಒಂದು ಸಮಸ್ಯೆಯ ಅರ್ಥನಿರ್ಣಯ, ಭಾಷೆಯ ತೊಡಕಿನ ಶಬ್ದದ ವ್ಯುತ್ಪತ್ತಿ, ಕವಿಭಾವದ ಇತ್ಯರ್ಥ, ಒಗಟಿನ ಅರ್ಥ ನಿರೂಪಣೆ, ವ್ಯಾಕರಣ ಭಾಷಾಶಾಸ್ತ್ರಗಳ ನೆಲೆಯ ಸಮಸ್ಯಾಪರಿಹಾರ, ಛಂದೋಲಕ್ಷಣದ ಸೂಕ್ತ ಅನ್ವೇಷಣೆ, ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ವಿವೇಚನೆ, ಗ್ರಂಥಪಾಠನಿರ್ಣಯ, ಗ್ರಂಥಸಂಪಾದನೆ, ಗುಣದೋಷ ವಿವೇಚನೆ-ಇಂಥವೆಲ್ಲವೂ ಸತ್ಯವನ್ನು ಅನ್ವೇಷಿಸುವ ಕಾರ್ಯಗಳು-ಸಂಶೋಧನಗಳು. ಗಣಿಯಲ್ಲಿ ಅಡಗಿದ ಚಿನ್ನದ ಅದುರಿನಂತೆ, ಕಡಲ ತಳದಲ್ಲಿರುವ ರನ್ನದಂತೆ, ಹೊರಕ್ಕೆ ಗೋಚರಿಸದೆ ಇರುವ ವಸ್ತು ವಿಷಯವನ್ನು ಪ್ರಯತ್ನದಿಂದ ತೆಗೆದು ಶುದ್ಧಗೊಳಿಸಿ, ಉಪಯೋಗಪಡಿಸುವ ಕಾರ್ಯವಿದು. ಸಂಶೋಧನ ಕಾರ್ಯಕ್ಕೆ ಮೊದಲು ಆ ವಸ್ತು ಅಥವಾ ಸಾಹಿತ್ಯ ಅಷ್ಟೇನೂ ಆಕರ್ಷಕವಲ್ಲ. ಕೇವಲ ಬಣ್ಣ ಆಕರ್ಷಕವಲ್ಲ, ಅದರ ಬಳಕೆಯಿಂದಾದ ಸುಂದರ ಚಿತ್ರ ಮನೋಜ್ಞವಾಗುವುದು. ಶಿಲೆ ಮೋಹಕವಲ್ಲ, ಅದು ಶಿಲ್ಪಿಯ ಕೆತ್ತನೆಗೆ ಒಳಗಾಗಿ ರೂಪತಾಳಿದಾಗ ಮನೋಹರವಾಗುವುದು. ಪದ್ಯದ ಅಥವಾ ಹಾಡಿನ ಉಚ್ಚಾರಣೆಗಿಂತ ಅದರಲ್ಲಿ ನಿಗೂಢವಾದ ಭಾವ-ಅರ್ಥಗಳ ರಹಸ್ಯ ಪ್ರಸ್ಫುರಿತವಾದಾಗ ಹೆಚ್ಚಿನ ಆನಂದವಾಗುವುದು. ಒಂದೆರಡು ಉದಾಹರಣೆಗಳಿವು :—

ಕಣ್ಣಾ ಮುಚ್ಚೇ ಕಾಡೇ ಗೂಡೇ
ಉದ್ದಿನ ಮೂಡೇ ಉರುಳೇ ಹೋಯ್ತು ||

ಮಕ್ಕಳು ಕಣ್ಣಮುಚ್ಚಾಲೆಯಾಡುವಾಗ ಹೇಳುವ ನುಡಿಯಿದು. ಇಲ್ಲಿ ಬಂದಿರುವ ಪದಗಳಲ್ಲಿ ಪ್ರತಿಯೊಂದಕ್ಕೂ ಅರ್ಥವಿದೆ. ಇದು ಅರ್ಥವಿಲ್ಲದ ನುಡಿಯಾಗಿದ್ದರೆ ಕೇವಲ ಲಯಬದ್ಧವಾದ ನಿರರ್ಥಕ ಪದಗಳ ಗುಂಪಾಗಿದ್ದರೆ, 'ತಣ್ಣಾ ಜಣ್ಣಾ ದಾಡೇ ಬಾಡೇ' ಹೀಗೆ ಏನಾದರೂ ಹೇಳಬಹುದಾಗಿತ್ತು. ಆದುದರಿಂದ ಇದರಲ್ಲಿ ಏನೋ ಗೂಢಾರ್ಥವಿರಬೇಕೆಂದು ಸಂಶೋಧಕನ ಬುದ್ಧಿ ಆ ಕಡೆಗೆ ಹರಿಯುವುದು ಸ್ವಾಭಾವಿಕ. ಧಿ|| ಪಂಡಿತ ದೇವಶಿಖಾಮಣಿ

ಅಳಸಿಂಗಾಚಾರ್ಯರು ಈ ನುಡಿಯಲ್ಲಿ ರಾಮಾಯಣದ ಕಥಾವಸ್ತು ಅಡಕವಾಗಿದೆಯೆಂದು ವಿವರಿಸಿದ್ದಾರೆ. ('ಕಣ್ಣಾ ಮುಚ್ಚೇ') ಅಯೋಧ್ಯಾಪುರ ನಿವಾಸಿಗಳು ಕಣ್ಣು ಮುಚ್ಚಿ ನಿದ್ದೆ ಮಾಡುವಷ್ಟರಲ್ಲಿ (ಕಾಡೇ ಗೂಡೇ) ರಾಮ ಲಕ್ಷ್ಮಣ, ಸೀತೆಯರಿಗೆ ವನವಾಸ ಪ್ರಾಪ್ತಿಯಾಯಿತು. (ಉದ್ದಿನ ಮೂಡೇ ಉರುಳೇ ಹೋಯ್ತು) ಉದ್ದಿನಂತೆ ಕಪ್ಪಗಾದ ರಕ್ಕಸರು ನಾಶವಾದರು-ಹೀಗೆ ಮಾಡಿರುವ ವಿವರಣೆ ಒಂದು ಸಂಶೋಧನವಾಗಿದೆ. ಈ ವಿವರಣೆಗೆ ಅವರೇ ಕೊಟ್ಟಿರುವ ಒಂದು ಪೂರ್ವಕಥೆ ಪೋಷಕವಾಗಿದೆ :—

ಶ್ರೀ ಚಿಕ್ಕದೇವರಾಜರ (ಕ್ರಿ. ಶ. ೧೬೭೩-೧೭೦೪) ಆಸ್ಥಾನ ಕವಿ ಸಿಂಗರಾರ್ಯರು. ಅವರು ಎಲ್ಲ ಸಾಹಿತ್ಯದಲ್ಲಿಯೂ ರಾಮಾಯಣದ ಇತಿವೃತ್ತವನ್ನೇ ಕಾಣುತ್ತಿದ್ದರು. ಮಕ್ಕಳಾಟದ ನುಡಿಯಾಗಿರುವ 'ಕಣ್ಣಾ ಮುಚ್ಚೇ—' ಎಂಬುದರಲ್ಲಿ ರಾಮಾಯಣದ ಅರ್ಥ ಹೇಗೆ ಇದೆ? ಎಂದು ಚಿಕ್ಕದೇವರಾಜರು ಕೇಳಲು, ಸಿಂಗರಾರ್ಯರು ಪದ-ಪದಗಳಿಗೆ ಮೇಲಿನಂತೆ ಅರ್ಥ ಯೋಜನೆ ಮಾಡಿದರು[3] ಇದರಿಂದ ಈ ವಿವರಣೆ ವಿಚಾರಮತಿಗೆ ಸರಿಯೆನಿಸುವ ಸತ್ಯಸಂಗತಿಯಾಗಿ ಭಾಸವಾಗುವುದು. ಈ ಸಂಶೋಧನವನ್ನು ತಪ್ಪೆಂದು ಅಲ್ಲಗಳೆವವರೂ ಇದ್ದಾರೆ.

ಸಂಶೋಧನದಲ್ಲಿ ಪ್ರಕಟವಾಗುವ ಸತ್ಯವೆಲ್ಲವೂ ಪೂರ್ಣ ಸತ್ಯವೆನ್ನಲಾಗುವುದಿಲ್ಲ. ಅಸತ್ಯವೂ ಅರ್ಧ ಸತ್ಯವೂ ಕೆಲವೊಮ್ಮೆ ಪೂರ್ಣ ಸತ್ಯವಾಗಿ ಭಾಸವಾಗುವುದುಂಟು. ದಾರಿಯಲ್ಲಿ ಬಿದ್ದಿರುವ ಹಗ್ಗ ಅರೆಬೆಳಕಿನಲ್ಲಿ ಹಾವಾಗಿ ಕಾಣಿಸಬಹುದು. ಮೊದಲ ನೋಟಕ್ಕೆ ಹಾವು ಸತ್ಯ. ಆದರೆ ಹೆಚ್ಚಿನ ಪರಿಶೀಲನೆಗೆ ಒಳಗಾದಾಗ ಹಾವು ಅಸತ್ಯವಾಗುವುದು, ಹಗ್ಗವೆಂಬುದು ಸತ್ಯ (ಪೂರ್ಣ ಸತ್ಯ) ವಾಗುವುದು. ಸಂಶೋಧನದಲ್ಲಿ ಈ ಬಗೆಯ ಪರಿಣಾಮಗಳಿಗೆ ಆಸ್ಪದವಿದೆ. ಒಂದೇ ವಿಷಯವಾಗಿದ್ದರೂ ಅದರ ಕುರಿತು ಹೊಸತು ಸತ್ಯ ಪ್ರಕಟವಾದೊಡನೆ, ಪೂರ್ವದ ಸಂಶೋಧನದ

---

[3] ರಾಷ್ಟ್ರಬಂಧು (ವಾರಪತ್ರಿಕೆ, ಮಂಗಳೂರು)-ಯುಗಾದಿ ಕಾಣಿಕೆ ೧೯೩೯, ಪುಟ ೩೬.

ಸತ್ಯವು ಅರ್ಧ ಸತ್ಯವೋ ಅಸತ್ಯವೋ ಆಗಿ ಪರಿಣಮಿಸುವುದು. ನಿರ್ವಿವಾದದ ಪರಿಪೂರ್ಣ ಸತ್ಯವೇ "ಋತ" (Universal Truth). ಇದನ್ನು ಸಾಧಿಸುವುದೇ ಸಂಶೋಧನದ ಗುರಿ.

ಕಾವ್ಯ ಲಕ್ಷಣವನ್ನು ನಿರೂಪಣೆ ಮಾಡಿರುವ ಲಾಕ್ಷಣಿಕರಲ್ಲಿ ಕೆಲವರು ರೀತಿಯನ್ನು ಕಾವ್ಯವೆಂದರು, ಕೆಲವರು ಅಲಂಕಾರವನ್ನು ಕಾವ್ಯಲಕ್ಷಣ ವೆಂದರು. ಇನ್ನು ಕೆಲವರಿಗೆ ಧ್ವನಿಯೂ, ಕೆಲವರಿಗೆ ರಸವೂ ಕಾವ್ಯಲಕ್ಷಣ ವೆನಿಸಿದವು. ಇವೆಲ್ಲವೂ ಉತ್ತಮ ಕಾವ್ಯದಲ್ಲಿ ಇರಬೇಕಾದ ಅಂಶಗಳಾದುದ ರಿಂದ ಇವುಗಳಲ್ಲಿ ಒಂದೊಂದನ್ನು ಹೇಳಿದುದು ಅಸತ್ಯವೇನೂ ಅಲ್ಲ. ಆದರೆ ಈ ಹೇಳಿಕೆ ಪೂರ್ಣ ಸತ್ಯವಲ್ಲ-ಎನ್ನಬಹುದು. ಸತ್ಯೋತ್ಕರ್ಷದ ಪ್ರತಿಪಾದನೆ ಸಂಶೋಧನದ ಲಕ್ಷಣವಾಗುತ್ತದೆ. ಸತ್ಯದ ಉತ್ಕರ್ಷದೊಡನೆ ಸೌಂದರ್ಯದ ಉತ್ಕರ್ಷವೂ ಅಡಕವಾಗುತ್ತದೆ. ಹೀಗೆ ಸತ್ಯಸೌಂದರ್ಯಗಳೆರಡರ ಪರಮೋ ತ್ಕರ್ಷವು ಸಂಶೋಧನದಲ್ಲಿ ಬರುತ್ತದೆ. ಈ ಬಗೆಯ ಸತ್ಯದಲ್ಲಿ ಭ್ರಾಂತಿಸತ್ಯ (ಅಸತ್ಯ), ಅಲ್ಪಸತ್ಯ, ಅಧಿಕ ಸತ್ಯ, ಪರಮ ಸತ್ಯ (ಋತ)-ಎಂಬ ಅಂತಸ್ತು ಗಳಿರುವುದರಿಂದ ಒಮ್ಮೆಗೇ ಒಂದು ಸಂಶೋಧನವನ್ನು ಪರಿಪೂರ್ಣವಾದು ದೆಂದು ನಿರ್ಧರಿಸುವಂತಿಲ್ಲ. ಸತ್ಪುರುಷರ ಚೇತನಕ್ಕೆ 'ಇದು ಸರಿ' ಎಂಬ ಭಾವನೆ ನಿರ್ವಿವಾದವಾಗಿ ತೋರಿದರೆ, ಆ ಸಂಶೋಧನವನ್ನು ಸತ್ಯ-ಸಾಕ್ಷಾ ತ್ಕರಣವೆನ್ನಬೇಕಾಗುತ್ತದೆ—

ಸತಾಂ ಹಿ ಸಂದೇಹಪದೇಷು ವಸ್ತುಷು
ಪ್ರಮಾಣಮಂತಃ ಕರಣ ಪ್ರವೃತ್ತಯಃ॥[4]

(ಸತ್ಪುರುಷರಿಗೆ ಸಂಶಯಕ್ಕೆಡೆಯಾದ ವಿಷಯಗಳಲ್ಲಿ ತಮ್ಮ ಮನಸ್ಸಿನ ಪ್ರವೃತ್ತಿ ಗಳೇ ಪ್ರಮಾಣವಾಗುತ್ತವೆ.)

'ಕವೇಃ ಕರ್ಮ ಕಾವ್ಯಂ' (ಕವಿಯ ಕರ್ಮವು ಕಾವ್ಯ) ಎನಿಸುವಂತೆ ಸಂಶೋ ಧಕನು ಮಾಡಿರುವ ಸತ್ಯಾನ್ವೇಷಣೆಯೂ ನಿರ್ಣಯವೂ ಸಂಶೋಧನವೆನಿಸು ತ್ತದೆ. ಈ ನಿರ್ಣಯವು ಇತರರಿಂದ ಸಕಾರಣವಾಗಿ ಖಂಡನೆಗೊಂಬ ತನಕ

---

4 ಕಾಳಿದಾಸ-ಅಭಿಜ್ಞಾನ ಶಾಕುಂತಲಂ, ಅಂಕ ೧, ಶ್ಲೋಕ ೧೯.

ಸತ್ಯವಾಗಿ ಉಳಿಯುತ್ತದೆ. ಇದಕ್ಕಿಂತ ಅಧಿಕ ಸತ್ಯವೆನಿಸುವ ಪ್ರತಿಪಾದನೆ ಬಂದಾಗ ಮೊದಲಿನ ನಿರ್ಣಯವು ದುರ್ಬಲವಾಗುತ್ತದೆ. ಇದರಿಂದ ಮೊದಲನೆಯದು ಸಂಶೋಧನವೇ ಅಲ್ಲವೆಂದು ದೂರೀಕರಿಸಲಾಗುವುದಿಲ್ಲ. "ನಾವು ಸಂಶೋಧಕನನ್ನು ಗುರುತಿಸುವುದು ಅವನು ಕಂಡುಹಿಡಿದ ಸತ್ಯದಿಂದ ಅಲ್ಲ, ಆ ಸತ್ಯವನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನದಿಂದ"[5] ಎಂಬೀ ಮಾತು ಲಕ್ಷ್ಯಾರ್ಹವಾದುದು.

ಸೂರ್ಯನು ಮೂಡುತ್ತಾನೆ, ಪಡುತ್ತಾನೆ-ಎಂಬುದು ಎಲ್ಲರ ಕಣ್ಣಿಗೆ ಕಾಣಿಸುವ ಸತ್ಯವಾದರೂ ಇದು ಭ್ರಾಂತಿ ಸತ್ಯ. ಆದರೆ ಸೂರ್ಯನು ಇದ್ದಲ್ಲೇ ಇರುತ್ತಾನೆ, ಭೂಮಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದರಿಂದ ಸೂರ್ಯನ ಉದಯಾಸ್ತಗಳಾಗುತ್ತವೆ-ಎಂಬುದು ಸಂಶೋಧನದಿಂದ ಸಿದ್ಧವಾಗಿರುವ ಪೂರ್ಣ ಸತ್ಯ. ಸಂಶೋಧನದಲ್ಲಿ ವಿಚಾರವು ಹೀಗೆ ಪರಿಣಮಿಸುವುದರಿಂದ ಸಂಶೋಧಕನು ತನ್ನ ತೀರ್ಮಾನದಲ್ಲಿ "ನನಗೆ ಹೀಗನಿಸುತ್ತಿದೆ, ಈ ಕಾರಣದಿಂದ ಹೀಗೆ ನಿರ್ಣಯ ಮಾಡಬಹುದು" ಎಂದು ಸಾಮಾನ್ಯವಾಗಿ ಕೆಲವೆಡೆ ಸಂದೇಹಯುಕ್ತವಾಗಿಯೇ ನುಡಿಯಬೇಕಾಗುತ್ತದೆ.

ಸಂಶೋಧಕನ ಕೃತಜ್ಞತೆ :—

ಇತರರು ಬೇರೆ ಕಡೆ ಮಾಡಿರುವ ಸಂಶೋಧನಗಳನ್ನೇ ತನ್ನ ಮಾತಿನಲ್ಲಿ ಕೃತಿಯಲ್ಲಿ ನಿರೂಪಣೆ ಮಾಡಿದವನು ಸಂಶೋಧಕನೆನಿಸನು. ತನ್ನ ಕೀರ್ತಿ ಇತರರ ಕೀರ್ತಿಯು ಪಡಿನೆಳಲಾದರೆ, ಅಂತಹ ಕೀರ್ತಿಯೇಕೆ ?

ಪಸರಿಸಿ ನೀಳ್ದ ತನ್ನ ಜಸದೊಳ್ ಪೆಜನೊರ್ವನ ಕೀರ್ತಿ ತಳ್ತು ರಂ
ಜಿಸೆ ನೆಗಳ್ದಾತನೇಂ ನೆಗಳ್ದಂ....[6]

ಎಂಬೀ ಕವಿವಾಣಿ ಸಂಶೋಧಕನಿಗೆ ನೀತಿ ಹೇಳುವಂತಿದೆ. ಆದುದರಿಂದಲೇ ಪ್ರಾಮಾಣಿಕನಾದ ಸಂಶೋಧಕನು ತನ್ನ ಕೃತಿಯಲ್ಲಿ ಇತರರ ವಿಚಾರಗಳನ್ನು

---

5 ಡಾ|| ಚಿದಾನಂದಮೂರ್ತಿ-ಸಂಶೋಧನೆ, ಪುಟ ೩.

6 ಪಂಪಭಾರತ-ಆಶ್ವಾಸ ೧೪, ಪದ್ಯ, ೩೯.

ಉಲ್ಲೇಖಿಸುವಲ್ಲಿ "ಇದು ಇಂಥವರದು" ಎಂತಲೇ ಗ್ರಂಥಾಧಾರ ಸೂಚನೆ ಕೊಡುತ್ತಾನೆ. ಇದಕ್ಕಾಗಿ ಆತನು ಇತರರ ಹಾಗೂ ಪೂರ್ವಿಕರ ಅಭಿಪ್ರಾಯವನ್ನು ತಿಳಿದಿರಬೇಕಾಗುತ್ತದೆ. ಪೂರ್ವಿಕರ ಅಭಿಪ್ರಾಯವನ್ನರಿಯದೆ, ಈಚೆಗೆ ಒಬ್ಬರು 'ವಿಕ್ರಮಾರ್ಜುನ ವಿಜಯ' ಕಾವ್ಯಕ್ಕೆ "ಸಮಸ್ತ ಭಾರತ" ಎಂಬ ಹೆಸರೇಕೆ ಬಂತು—ಎಂಬ ವಿಚಾರವಾಗಿ ಮಾತಾಡುವಾಗ "ಸಮಸ್ತ ಭಾರತ" ಎಂದರೆ 'ಸಂಪೂರ್ಣ ಭಾರತ' ಎಂದರು. ಈ ಹೆಸರ ಕುರಿತು ವಿವೇಚನೆ ನಡೆದಿರುವುದು ಗೊತ್ತಿಲ್ಲದವರಿಗೆ ಈ ಹೇಳಿಕೆ ಒಪ್ಪಿಗೆಯಾಗಬಹುದು. 'ನಾಡೋಜಪಂಪ' ಎಂಬ ಗ್ರಂಥಪಠನ ಮಾಡಿದವರಿಗೆ ಈ ಹೇಳಿಕೆ ಸರಿಗಾಣದು. ಪಂಪನು 'ಸಮಸ್ತ ಭಾರತ' ಎಂಬ ಪದವನ್ನು ಒಂದು ವಿಶೇಷವಾದ ಅರ್ಥದಲ್ಲೇ ಬಳಸಿದಂತಿದೆ. ಅದು ಸಂಪೂರ್ಣ ಭಾರತವಲ್ಲ. ಕಥಾವಸ್ತು ಗುಣಾರ್ಣವನ ಪಟ್ಟಾಭಿಷೇಕಕ್ಕೆ ಕೊನೆಗೊಂಡಿದೆ. ಭಾರತದ ಘಟನೆಗಳೂ ಪಾತ್ರಸ್ವರೂಪಗಳೂ ಅಷ್ಟಿಷ್ಟು ಮಾರ್ಪಾಡನ್ನೂ ತಾಳಿವೆ. ಆದುದರಿಂದ ಅಪೂರ್ಣ ಭಾರತವೇ ಸರಿ. ಹಾಗಿದ್ದರೆ "ಸಮಸ್ತ" ಎಂಬುದಕ್ಕೆ ಅಲ್ಲಿ ನಿಜಾರ್ಥವೇನು? ಎಂಬುದು ಸಂಶೋಧನದ ವಿಷಯ. "ಸಮಸ್ತ" ಎಂದರೆ ಸೇರಿಕೊಂಡುದು, ಪ್ರಸ್ತುತದಲ್ಲಿ ಅಪ್ರಸ್ತುತವನ್ನು ದ್ಯೋತಿಸುವ ಸಮಾಸೋಕ್ತಿಗರ್ಭಿತವಾದುದು. ಪ್ರಸ್ತುತವಾದ ಅರಿಕೇಸರಿಯ ಚರಿತ್ರೆಯಲ್ಲಿ ಅಪ್ರಸ್ತುತವಾದ ಅರ್ಜುನನ ಚರಿತ್ರೆಯನ್ನು ಸಮಾಸಗೊಳಿಸಿದುದರಿಂದ ಆ ಹೆಸರಾಯಿತೆಂಬುದು ಒಪ್ಪುವ ಸಂಶೋಧನವಾಗಿದೆ.[7] ಆದರೂ ಎಲ್ಲರೂ ಒಪ್ಪಬೇಕೆಂದೇನೂ ಇಲ್ಲ. ಈ ವಿಚಾರವಾಗಿ ಹೇಳುವಾಗ, ಇತರರು ಹೇಳಿರುವ ಸಂಗತಿಯನ್ನು ಉಲ್ಲೇಖಿಸಿ, ಒಪ್ಪಾದರೆ ಒಪ್ಪಿ, ತಪ್ಪಾದರೆ ಖಂಡಿಸಿ, ಸಕಾರಣವಾಗಿ ಹೀಗೆಂದು ತಿಳಿಸಿ ಮುಂದುವರಿಯಬೇಕಾದುದು ಆವಶ್ಯಕ. ಇದು ಕೃತಜ್ಞತೆಯ ಗುಣ. ದಿವಂಗತ ತೀ.ನಂ. ಶ್ರೀಕಂಠಯ್ಯನವರು ಪಂಪಭಾರತಕ್ಕೆ 'ಸಮಸ್ತ ಭಾರತ' ಎಂಬ ಹೆಸರು ಬರಲು ಕಾರಣವನ್ನು ಹೀಗೆ ತಿಳಿಸಿದ್ದಾರೆ:—

"ಸಮಾಸ ಎಂದರೆ ಕೂಡಿಸುವುದು; ಈ ಕಾವ್ಯದಲ್ಲಿ ಭಾರತದ ಕಥೆಯು

---

7 ದಿ. ಮುಳಿಯ ತಿಮ್ಮಪ್ಪಯ್ಯ—ನಾಡೋಜಪಂಪ ೧೯೩೮, ಪುಟ ೧೫೬.

ಜೊತೆಗೆ ತನ್ನ ಪ್ರಭುವಿನ ಚರಿತ್ರೆಯೂ ಕೂಡಿ ಬಂದಿದೆಯೆಂಬುದನ್ನೂ ಪಂಪನು ಈ ಮಾತಿನಿಂದ ಸೂಚಿಸಿರಬಹುದು" (ಪಂಪ, ೧೯೩೯ ಪುಟ ೩೧).

ಆದರೆ ಡಾ|| ರಂ. ಶ್ರೀ. ಮುಗಳಿಯವರು ಈ ಅಭಿಪ್ರಾಯವನ್ನು ಸಮ್ಮತಿಸಿಲ್ಲ. ಇದೊಂದು "ವಿವರಣೆಯ ಚಮತ್ಕೃತಿ ಮಾತ್ರ" ಎಂದು ಅವರು ಬರೆದಿದ್ದಾರೆ (ಕ. ಸಾ. ಚರಿತ್ರೆ ೧೯೫೩-ಪುಟ ೯೩). ಹೀಗೆ ಇತರರ ಅಭಿಪ್ರಾಯವನ್ನು ಒಪ್ಪುವುದು, ಒಪ್ಪದಿರುವುದು-ಎರಡೂ ಕೃತಜ್ಞತೆಯ ಗುಣಗಳೇ ಆಗಿದ್ದು ವಿಮರ್ಶೆಯಲ್ಲಿ ಹಾಗೂ ಸಂಶೋಧನೆಯಲ್ಲಿ ಕಂಡು ಬರಬೇಕಾದ ಸಂಗತಿಗಳು. ಹೀಗೆ ಸಂಶೋಧಕನು ಕೃತಜ್ಞನಾಗಿ ತನ್ನ ಸಂಶೋಧನವನ್ನು ಬೆಳೆಸಬೇಕು. ಹಿಂದಿನ ಆಧಾರವು ಭದ್ರವಾಗಿದ್ದಲ್ಲಿ ಪೂರ್ವಗ್ರಹ ವಶನಾಗಿ ಅದನ್ನು ಅಲುಗಾಡಿಸಲು ಯತ್ನಿಸಬಾರದು. ಅಂತಃಕರಣಕ್ಕೆ ಒಪ್ಪಿಗೆಯಾಗುವುದನ್ನು ಮೆಚ್ಚಬೇಕು, ಮೆಚ್ಚಿ 'ಭೇಷ್' ಎಂದು ತಲೆದೂಗಬೇಕು, ಒಪ್ಪಬೇಕು. ತಾನೇ ತಿಳಿದವನೆಂಬ ಅಹಮಿಕೆ ಸಂಶೋಧಕನಿಗೆ ಸಲ್ಲದು. ಇದಲ್ಲದೆ ಆತನು ತನ್ನ ಸಂಶೋಧನೆಯ ಪ್ರಾರಂಭ ದಲ್ಲೇ ಪೂರ್ವನಿರ್ಣಯವುಳ್ಳವನಾಗಬಾರದು-ಎಂಬುದಕ್ಕಾಗಿ ಓರ್ವ ಸಂಶೋಧಕರು ಹೇಳಿರುವ ಮಾತುಗಳಿವು :

" 'ಇದು ಸತ್ಯ; ಇದನ್ನು ಪ್ರಸ್ಥಾಪಿಸುವುದು ಕರ್ತವ್ಯ' ಎಂಬೀ ಬಗೆಯ ಶ್ರದ್ಧೆಯೆ ಪ್ರಾರಂಭ ಬಿಂದುವಾಗಿರುವ ಸಂಶೋಧನವು ಸತ್ಯದ ಅನ್ವೇಷಣೆಯಲ್ಲ; 'ಸತ್ಯ' ಎಂದು ತಾನು ಶ್ರದ್ಧೆ ವಹಿಸಿದ್ದನ್ನು ಸಿದ್ಧಪಡಿಸುವ ವಕೀಲೀರೀತಿಯ ಹವ್ಯಾಸ ಅದು. ಇಂತಹ ಸಂಶೋಧನಗಳು ಸತ್ಯಾಸತ್ಯ ನಿರ್ಣಯಕ್ಕೆ ಯಾವ ಬಗೆಯಿಂದಲೂ ಉಪಕಾರವಾಗಲಾರವು."[8]

ಹಿಂದಿನವರಿಗೆ ಕೃತಜ್ಞನಾಗಿ ತಾನು ಕಂಡುಹಿಡಿದು ಪ್ರಸ್ಥಾಪಿಸುವುದು ಏನನ್ನು ಎಂಬುದನ್ನು ಸ್ಪಷ್ಟವಾಗಿ ಆತನು ನಿರೂಪಿಸಬೇಕಾಗುತ್ತದೆ. ತನ್ನಿಂದ ಸಂಶೋಧಿಸಲಾಗದ ಅಥವಾ ತನ್ನ ಸಂಶೋಧನದಲ್ಲಿ ಅಪೂರ್ಣವಾಗಿ

---

[8] ಶಂ. ಬಾ. ಜೋಶಿ—ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ದ್ವಿತೀಯ ಭಾಗ, ಪುಟ ೧೨.

ಉಳಿದ ಸಂಗತಿಯನ್ನೂ ತಿಳಿಸಿ, ತನ್ನ ಮುಂದಿನವರಿಗೆ ಈ ಸತ್ಯಶೋಧನದ ಕಾರ್ಯದಲ್ಲಿ ದಾರಿಯನ್ನು ತೆರವು ಮಾಡುವುದು ಸಂಶೋಧಕನ ಇನ್ನೊಂದು ಹಿರಿಯ ಗುಣ. ತನ್ನ ಪ್ರೇರಣೆಯಿಂದ ಇತರರಲ್ಲಿಯೂ ಸಂಶೋಧನ ನಿಷ್ಠೆಯನ್ನು ಜಾಗೃತಗೊಳಿಸುವುದು, ಸಹೃದಯ ವಿದ್ವಜ್ಜನರ ಮತ್ತು ಸಂಶೋಧಕರ ಮನವನ್ನು ಸೆಳೆವುದು, ಸಂಶೋಧನದ ನೆಲೆಗೆ ಕಳೆಕಟ್ಟು ವಂಥದಾಗುವುದು.

ಗುಣವಿಶೇಷ

ಸಂಶೋಧಕನು ತನ್ನ ಭಾವ-ಬುದ್ಧಿಗಳ ಅನುಕೂಲ ಕ್ರಿಯೆಯುಳ್ಳವ ನಾಗಿ ಜಿಜ್ಞಾಸುವಾಗಿರಬೇಕು. ಅವನ ಹೃದಯದಲ್ಲಿ ತರ್ಕ-ಸಂದೇಹ-ಪ್ರಶ್ನೆ-ಕುತೂಹಲ-ಕಾರ್ಯೋತ್ಸಾಹ ಭಾವನೆಗಳು ಮೂಡುತ್ತಿರಬೇಕು. ಯಾವು ದಾದರೊಂದು ಸಂಗತಿ ತನ್ನ ವಿಚಾರಕ್ಕೆ ಬಂದಾಗ "ಇದು ಹೀಗೆಯೇ? ಇದಕ್ಕೆ ಈ ಅರ್ಥ ಸರಿಯೇ? ಈ ರೂಪನಿಷ್ಪತ್ತಿ ಹೇಗಿರಬಹುದು? ಇದು ಹೀಗೆನ್ನುವುದಕ್ಕೆ ಆಧಾರವೇನು? ಒಬ್ಬರು (—ಅವರು ವಿದ್ವಾಂಸರಿರ ಬಹುದು, ಮಹಾಪುರುಷರೇ ಇರಬಹುದು) ಹೇಳಿದರೆಂದ ಮಾತ್ರಕ್ಕೆ ಒಪ್ಪಲು ಅರ್ಹವೇ? ಈ ನೀತಿ ಬೇರೆ ಕಡೆಗೆ ಅನ್ವಿತವಾಗದೆ? ಇತ್ಯಾದಿ ವಿಮರ್ಶಕ ಚಿಕೀರ್ಷಕ ತರ್ಕಗಳು ಹೃದಯದಲ್ಲಿ ಮೂಡುವುದೇ ಸಂಶೋಧನ ಕಾರ್ಯಕ್ಕೆ ಮೂಲವೆನಿಸುವುದು. ಈ ಕಾರ್ಯ ಬಳೆಯಬೇಕಾದರೆ ಬಳಸುವ ಕೆಚ್ಚು ತಾಳ್ಮೆ-ವಿವೇಕ-ಸೌಜನ್ಯ-ಸೌಮನಸ್ಸ-ಧೈರ್ಯಗಳೂ ಇರಬೇಕು. ತನ್ನ ಕಲ್ಪನೆಯೇ ತಪ್ಪಾದಲ್ಲಿ ತಪ್ಪನ್ನೊಪ್ಪುವ ಸರಳ ಗುಣವೂ ಇರಬೇಕು. ಭಾವನಾಪರವಶತೆಯಿಂದ ಮೂಡುವ ದ್ವೇಷಾಸೂಯೆಗಳು ಸಂಶೋಧನಕ್ಕೆ ಹಾನಿಕರ.

ಸಂಶೋಧಕನು ಮಾಡಿರುವ ಜ್ಞಾನ ಸಂಗ್ರಹದಲ್ಲಿ ಯಾವ ವಿಚಾರ ದಲ್ಲಿಯೂ ಅಪಾರ್ಥವಿರಬಾರದು. ಮೂಲದಲ್ಲಿ ಗೋಚರಿಸುವ ಅರ್ಥವನ್ನು ತಪ್ಪಾಗಿ ಗಟ್ಟಿಮಾಡಿರಬಾರದು. ಸೂಕ್ಷ್ಮ ನಿರೀಕ್ಷೆಯೊಡನೆ ಗುಣಗ್ರಾಹಕ ತೆಯೂ ಸಾಹಿತ್ಯಜ್ಞಾನ ಭಾಷಾಜ್ಞಾನಗಳೊಡನೆ ಸದಸದ್ವಿವೇಕವೂ ಇರಬೇಕು.

ಇವೆಲ್ಲ ಇದ್ದರೂ ಆತನು ಮಾಡುವ ಸಂಶೋಧನದಲ್ಲಿ ನ್ಯೂನತೆ ಬಾರದೆನ್ನಲಾಗುವುದಿಲ್ಲ. ಸಂದಿಗ್ಧ ವಿಚಾರಗಳಲ್ಲಿ ನಿರ್ಣಯಕ್ಕೆ ಬರುವ ಕಡೆ ಆತನು ತುಂಬ ಜಾಗರೂಕನಾಗಿರಬೇಕು. ಸಂಶೋಧಕನು ಒಬ್ಬ ನ್ಯಾಯಾಧೀಶನಂತೆ. ತನ್ನ ತೀರ್ಮಾನಕ್ಕೆ ಮೊದಲು ಆತನು ಎಲ್ಲ ಕಡೆಯ ಎಲ್ಲ ಆಗು-ಹೋಗುಗಳನ್ನು ತಕ್ಕ ಕಾರಣ-ಸಮರ್ಥನೆ-ಊಹೆ-ತರ್ಕಾದಿಗಳಿಂದ ನಿಷ್ಪಕ್ಷವಾಗಿ ಗ್ರಹಿಸಬೇಕಾಗುತ್ತದೆ. ನ್ಯಾಯಾಧೀಶನು ವ್ಯಾಜ್ಯದ ಸಂಗತಿಗಳನ್ನು ಸರಿಯಾಗಿ ವಿಚಾರಿಸದೆ ತೀರ್ಮಾನವಿತ್ತರೆ ಸತ್ಯಕ್ಕೆ ಅಪಚಾರವಾಗುವುದು. ಸಂಶೋಧಕನ ತವಕದ ತೀರ್ಮಾನವೂ ಇದೇ ರೀತಿಯಾಗಬಲ್ಲುದು. ಆದುದರಿಂದ ಪೂರ್ವವಿವೇಚನೆ ಶುದ್ಧವೂ, ಪರಿಪೂರ್ಣವೂ ಆಗಿರಬೇಕು. ಇಷ್ಟಾದರೂ ತೀರ್ಮಾನವೀಯಲು ಆತನು ಹಿಂಜರಿಯಬೇಕಾಗುತ್ತದೆ- ಎಲ್ಲಾದರೂ ತಪ್ಪು ಬರಬಾರದೆಂದು. ಕೊನೆತನಕವೂ ಸಂದೇಹ ಬಗೆಹರಿಯದಿದ್ದರೆ, ಆಗ ಮಾತ್ರ ತನ್ನ ಕಲ್ಪನಾ ಬಲದಿಂದ ಒಂದು ತೀರ್ಪನ್ನು ಕೊಡುವುದು ತಪ್ಪಲ್ಲ.

ಮೆಚ್ಚಿಕೆ

ಸಾಹಿತ್ಯರಚನೆಯ ಮೊದಲನೆಯ ಮೆಚ್ಚುಗ ಸ್ವತಃ ಕೃತಿಕಾರನೇ ಆಗಿರುತ್ತಾನೆ. ಆದುದರಿಂದಲೇ ಇತರರ ಮೆಚ್ಚುಗೆ ಗಳಿಸದ, ಧನಾರ್ಜನೆಗೆ ಕಾರಣವಾಗದ ಕೃತಿ ರಚನೆಯ ಉದ್ದೇಶವನ್ನು "ಸ್ವಾಂತಃ ಸುಖಾಯ" (ತನ್ನ ಸಂತೋಷಕ್ಕಾಗಿ) ಎಂದು ವಿದ್ವಾಂಸರು ಆಡಿಕೊಳ್ಳುತ್ತಾರೆ. ಎಷ್ಟೋ ವೇಳೆ ಓದುಗರನ್ನು ಮೆಚ್ಚಿಸಲಿಕ್ಕಾಗಿ ರಚಿಸಿದ ಸಾಹಿತ್ಯವು ಸಾಹಿತ್ಯರಚಯಿತನಿಗೆ ಮೆಚ್ಚುಗೆಯಾಗದಿರುವುದೂ ಉಂಟು. ಸಂಶೋಧನ ಸಾಹಿತ್ಯವಂತೂ ರಚಯಿತನ ಪರಿಪೂರ್ಣವಾದ ಮೆಚ್ಚುಗೆಯಿಂದಲೇ ಹೊರಹೊಮ್ಮಿರುತ್ತದೆ. ಕಾವ್ಯ-ನಾಟಕ-ಕಥಾ-ಕಾದಂಬರಿ ಸಾಹಿತ್ಯಗಳಂತೆ ಸಂಶೋಧನವು ರಸಿಕ ಚೇತೋಹಾರಿಯಾಗಲಾರದು, ರಸದೌತಣವಾಗಲಾರದು. ಆದರೂ ಇದು ಆರೋಗ್ಯಕರ ಸತ್ವಪೂರ್ಣ ಆಹಾರವಾಗುವುದರಿಂದ 'ಬದುಕುವುದಕ್ಕಾಗಿ ಉಂಬ' ಸ್ವಭಾವದವರಿಗೆ ಮೆಚ್ಚುಗೆಯಾಗುವುದು. ಸಂಶೋಧಕನೊಡನೆ ಸಮಾನ ಮನೋಭಾವವುಳ್ಳ ಜಿಜ್ಞಾಸು ರಸಿಕನಿಗೆ ಸಂಶೋಧನ ಸಾಹಿತ್ಯ

ಮೆಚ್ಚುಗೆಯಾಗುವುದು, ಹಾಗಿದ್ದರೂ ಅಹಂಮನ್ಯತೆಯ ಸೆಳೆತಕ್ಕೆ ಒಳಗಾಗಿ ಯಾವ ಸಂಶೋಧನವನ್ನೂ "ಅದು ಹಾಗಲ್ಲ, ಹೀಗಲ್ಲ; ಅದರಲ್ಲಿ ಇದಿಲ್ಲ, ಅದಿಲ್ಲ" ಎಂದು ಖಂಡಿಸಲು ಬರುತ್ತದೆ. ನವೀನ ಕೃತಿಯನ್ನು ನೋಡಿ, ಮೆಚ್ಚಲರಿಯದೆ ನಿಂದಿಸುವವರಿಗೆ ಕವಿಯೋರ್ವನು ಹೇಳಿರುವ ಮಾತು-ಸಂಶೋಧನ ಕೃತಿಯನ್ನು ಹಳಿವ ಅಸಜ್ಜನನಿಗೂ ಅನ್ವಿತವಾಗುವುದು :—

ಪಳಿಯಲ್ ಬಲ್ಲಂ ನೆಗಟಿಲ್
ಖಳನೇಂ ಬಲ್ಲನೆ ನವೀನ ಕಾವ್ಯಮನಿಳೆಯೊಳ್
ತೊಳಗುವ ರವಿಯಂ ಮುಸುಳಿಪ
ಜಳಧರಮುದಜಿಂತೆ ಜಗವನೇಂ ಬೆಳಗುಗುಮೇ॥[9]

ಆರಿಸಿಕೊಂಡ ಶಂಕಾಸ್ಪದ ವಿಚಾರದಲ್ಲಿ ಸಂಶೋಧಕನು ತನ್ನ ಸಂಸ್ಕಾರ, ಅನುಭವ, ಕಲ್ಪನೆ, ಚಿಕಿತ್ಸಕ ಬುದ್ಧಿಗಳಿಂದ ವಿವೇಚಿಸಿ ಮಾಡಿದ ನಿರ್ಣಯವೇ ಸಂಶೋಧನವಾಗಿರುವುದರಿಂದ ಇತರ ಮನೋಧರ್ಮದವರಿಗೆ ಮೆಚ್ಚುಗೆಯಾಗದಿದ್ದರೂ ಅವರು ಸಂಶೋಧನದ ಕಾರ್ಯವನ್ನು ಮೆಚ್ಚಲು ಕಲಿತಿರಬೇಕು. ಸಂಶೋಧನವು ವಿದ್ವತ್ತೆಯ ಆರಾಧನವಾಗಿರುವುದರಿಂದ ಮೆಚ್ಚುಗೆಯನ್ನು ಗಳಿಸುವ ಕೆಲಸವೂ ಆಗಿದೆ.

ಸಂಶೋಧನ-ಆನಂದ

ಸಂಶೋಧನದ ಕಾರ್ಯ ಅತ್ಯಂತ ಶ್ರಮದಾಯಕವಾದುದು. ಸಂಶೋಧನ ಕೃತಿಯನ್ನು ಓದಿ, ಕೇಳಿ ಅರ್ಥ ಮಾಡುವುದೂ ಶ್ರಮಕರವೇ ಆಗಿದೆ. ಆದರೆ ಈ ಶ್ರಮವು ಪರಿಮಾಣದಲ್ಲಿ ಸಂಶೋಧಕನಿಗೆ ಆಗುವುದಕ್ಕಿಂತ ಎಷ್ಟೋ ಕಡಮೆಯದು. ಅದನ್ನು ಮೆಚ್ಚುವವರ ಸಂಖ್ಯೆಯೇನೋ ಕಡಮೆಯೆ. ಹಾಗಿದ್ದರೂ ಸಂಶೋಧನ ಸಾಹಿತ್ಯವನ್ನೇಕೆ ನಿರ್ಮಿಸುತ್ತಾರೆ? ವಿಶ್ವವಿದ್ಯಾಲಯದ ಗೌರವನಾಮ ಪಡೆಯುವುದಕ್ಕಾಗಿ ಎಂದು ಕೆಲವರು

---

[9] ಷಡಕ್ಷರಿ-ರಾಜಶೇಖರ ವಿಳಾಸ, ಆಶ್ವಾಸ ೧. ಪದ್ಯ ೪೮.

ಹೇಳಬಹುದು. ಈ ಮಾತು ಕೆಲವರಿಗೆ ಮಾತ್ರ ಅನ್ವಯುವಾಗಬಹುದು. ಪುರಾತನ ಕಾಲದಿಂದಲೇ ನಮ್ಮ ವೇದೋಪನಿಷತ್ತು-ಭಗವದ್ಗೀತೆ ಮುಂತಾದ ಧಾರ್ಮಿಕ ಗ್ರಂಥಗಳ ಮೇಲೆ ಮೇಧಾವಿಗಳು ಸಂಶೋಧನ ನಡೆಸಿದ್ದಾರೆ. ಸಂಶೋಧನ ಗ್ರಂಥಗಳನ್ನು ಬರೆದಿದ್ದಾರೆ. ಅವರಿಗೆ ಇದರಿಂದಾಗಿ ಉಪಾಧಿಗಳು ದೊರೆಯಲಿಲ್ಲ. ಕೀರ್ತಿಗಾಗಿ ಸಂಶೋಧನ ಕಾರ್ಯ ಮಾಡುತ್ತಾರೆಂದು ಹೇಳೋಣವೆ? ಎಲ್ಲರೂ ತಿಳಿಯತಕ್ಕ ಸಂಗತಿಯಾದರೆ ತಾನೇ ಕೀರ್ತಿ? ಯಾವುದೋ ಜ್ಞಾನದ ಒಂದು ವಿಭಾಗದಲ್ಲಿ, ಭಾಷಾತತ್ತ್ವ ವಿಚಾರದಲ್ಲಿ, ವ್ಯಾಕರಣದ ರಹಸ್ಯದಲ್ಲಿ, ಛಂದಸ್ಸಿನ ಮರ್ಮದಲ್ಲಿ, ಇತಿಹಾಸದ ಅಂಶದಲ್ಲಿ ಮಾಡಿರುವ ಸಂಶೋಧನವು ಸರ್ವ ಜನಾದರಣೀಯ ಹೇಗಾದೀತು? ಕೆಲವರೇ ಓದಿ ತಿಳಿದುದರಿಂದ ಕೃತಿಕಾರನಿಗೆ ಕೀರ್ತಿ ಹೇಗೆ ಬಂದೀತು? ಆದುದರಿಂದ ಇವಾವುವೂ ಸಂಶೋಧನದ ಫಲವಲ್ಲ. ಸಂಶೋಧನ ಗ್ರಂಥಗಳನ್ನು ಮುದ್ರಿಸಿ, ಪ್ರಕಾಶಗೊಳಿಸಿ ಧನಾರ್ಜನೆಯೂ ಆಗದು. ಕೀರ್ತಿ-ಉಪಾಧಿಗಳು ಸಂಶೋಧನದ ಆನುಷಂಗಿಕ ಫಲಗಳು. ಅದರ ಮುಖ್ಯ ಫಲ ಆನಂದ.

ಒಂದು ಜಾತಕ್ಕೆಯ ಲೆಕ್ಕವನ್ನು ಮಾಡಿದಾಗ, ಒಂದು ವಿಶೇಷ ಪದ್ಯದ ಅನ್ವಯಾರ್ಥ ವೇದ್ಯವಾದಾಗ, ಅಪ್ರಸ್ತುತವಾದ ಕಾವ್ಯ ಪ್ರತಿಮೆಯಲ್ಲಿ ಪ್ರಸ್ತುತವು ಹೊಳೆದಾಗ, ಒಂದು ಒಗಟನ್ನು ಬಿಡಿಸಿದಾಗ, ಒಂದು ಮುಂಡೆ ಕತೆಯ ಗುಟ್ಟನ್ನು ಪ್ರಕಟಿಸಿದಾಗ, ಆಗುವ ಆನಂದ ಅನುಪಮ. ಗನಿಯೊಳ ಹೊಕ್ಕು ಅಗೆದವನಿಗೆ ಚಿನ್ನ, ಬಾವಿ ತೋಡಿಸಿದವನಿಗೆ ಸ್ವಚ್ಛಜಲ, ತಪಗೈದ ಮುನಿಗೆ ಬ್ರಹ್ಮಸಾಕ್ಷಾತ್ಕಾರ, ಪರೀಕ್ಷೆಗೆ ಕುಳಿತವನಿಗೆ ವಿಶಿಷ್ಟತರದ ತೇರ್ಗಡೆ ದೊರೆತಂತೆ, ಸ್ವತಃ ನೆಟ್ಟು ಬೆಳೆಸಿದ ಗಿಡದಲ್ಲಿ ಹೂ-ಹಣ್ಣು ಬಂದಂತೆ, ಸಂಶೋಧನದಲ್ಲಿ ಸಮಸ್ಯೆಗಳನ್ನು ಬಿಡಿಸಿದವನಿಗೆ ಅದ್ವಿತೀಯವಾದ ಆನಂದ ಪ್ರಾಪ್ತವಾಗುವುದು. "ಕಾವ್ಯಮಾನಂದಾಯ" ಎಂಡುದುಂಟು. ಸಂಶೋಧನವೂ

ಆನಂದಕ್ಕಾಗಿ ಇರುವಂಥದು. ಈ ಆನಂದದ ಮೊದಲ ಅನುಭವಿ ಸಂಶೋಧಕನಾದರೂ ಇತರರಿಗೂ ಅದೇ ಆನಂದ ಲಭಿಸುತ್ತದೆ. ಇದು ಅಕ್ಷಯ ಆನಂದ; ತೆಗೆದಷ್ಟೂ, ಹಂಚಿದಷ್ಟೂ ಹೆಚ್ಚುವ ಆನಂದ. ಸಂಶೋಧಕನು ಆತ್ಮತೃಪ್ತಿಕರವಾದ ಸಂಶೋಧನದಿಂದ ಪುಳಕೋದ್ಗಮ ತಾಳುವಂತೆ, ಓದುವ ಸಹೃದಯನೂ ಅರ್ಥಲಾಭ ಪಡೆದು, ಪ್ರಸ್ಫುರಿತನಾಗುವನು. ಈ ಆನಂದವೇ ಸತ್ಯ, ಆನಂದವೇ ಸೌಂದರ್ಯ, ಆನಂದವೇ ಜ್ಞಾನ, ಆನಂದವೇ ಪರಮಾತ್ಮ.

ಅನುಬಂಧ ೧

ಪರಿಶಿಷ್ಟ ಲೇಖನಗಳು

೧. ವಟ್ರಸುಳಿ

[‘ಶರಣ ಸಾಹಿತ್ಯ’ ಪತ್ರಿಕೆಯ ಸಂಪುಟ ೨೫. ಸಂಚಿಕೆ ೧೧–೧೨, ರಜತೋತ್ಸವ ವಿಶೇಷ ಸಂಚಿಕೆ, ೧೯೬೪-ಇದರಲ್ಲಿ ಪ್ರಕಟವಾದುದು. ಈ ಗ್ರಂಥದ ೨೬ ನೆಯ ಪುಟಕ್ಕೆ ಅನುಬಂಧಿ.]

ಕನ್ನಡದ ಗುಣಿತಾಕ್ಷರಗಳಲ್ಲಿ ‘ಋಕಾರ’ ಸೇರಿದುದೊಂದು. ಈ ‘ಋ’ ಸ್ವರಸಂಕೇತವನ್ನು (ೃ) “ಋವೊತ್ತು” ಎಂದೂ “ಋಸುಳಿ” ಎಂದೂ ಹೇಳುವರು. ಮೈಸೂರ ಕಡೆ “ವಟ್ರಸುಳಿ, ವಟ್ಟೃಸುಳಿ” ಮುಂತಾಗಿ ಇದನ್ನು ಕರೆಯುವರು. ಇದರ ಅರ್ಥವೇನು? ಯಾವುದು ನಿಜವಾಗಿ ಋಕಾರದ ಸಂಕೇತವನ್ನು ಪ್ರತಿನಿಧಿಸುತ್ತದೆ? ಎಂಬ ಅವಲೋಕನ ಆವಶ್ಯಕ.

ಋಕಾರದ ಸ್ವರ ಸಂಕೇತವನ್ನು “ಋ”ವೊತ್ತು ಎನ್ನುವಂತೆ ಐಕಾರದ ಚಿಹ್ನೆ (ೈ) ವನ್ನು “ಐ”ವೊತ್ತು ಎಂತಲೂ ಹೇಳುವ ರೂಢಿ ಇದೆ. ಕೃ, ಕೈ ಹೀಗೆ. ಗುಣಿತಾಕ್ಷರಗಳ ಕೆಳಗಡೆ ಇವನ್ನು ಒತ್ತುಗಳಂತೆ ಗುರುತಿಸುವುದೇ ಇದಕ್ಕೆ ಕಾರಣವಿರಬಹುದು. ಉಚ್ಚಾರಣೆಯ ದೃಷ್ಟಿಯಿಂದಂತೂ ಈ ಸ್ವರ ಚಿಹ್ನೆಗಳು ಒತ್ತುಗಳಲ್ಲ. ಇವನ್ನು ಒತ್ತಿ ಉಚ್ಚರಿಸುವುದೂ ಇಲ್ಲ. ಒತ್ತುಗಳೆನಿಸಬೇಕಾದರೆ, ಅವು ವ್ಯಂಜನಚಿಹ್ನೆಗಳೇ ಆಗಿರಬೇಕು. ಋಕಾರದ, ಐಕಾರದ ಚಿಹ್ನೆಗಳನ್ನು ಒತ್ತುಗಳೆನ್ನುವುದಾದರೆ, ಇಕಾರದ ದೀರ್ಘ ಚಿಹ್ನೆ ವನ್ನು (ೀ) ಒತ್ತೆನ್ನಬೇಕಾದೀತು. ಇದನ್ನು ಗುಣಿತಾಕ್ಷರದ ಕೆಳಗೆ ಕೊಡದಿದ್ದರೂ ಅರ್ಕಾರೊತ್ತಿನಂತೆ ಬಲಗಡೆ ಕೊಡುವುವರಿಂದ ಇದನ್ನೂ ಒತ್ತೆಂದು ಕರೆಯಬೇಕಾದೀತು. ಆದುದರಿಂದ ಅಕಾರದಿಂದ ಔಕಾರದವರೆಗಿನ ಚಿಹ್ನೆಗಳು ಹ್ರಸ್ವ-ದೀರ್ಘರೂಪಗಳನ್ನುಳ್ಳ ಸ್ವರ ಚಿಹ್ನೆಗಳೆಂದೇ ನಿರ್ಧಾರವಾಗುತ್ತದೆ.

ಋಕಾರದ ಸ್ವರ ಸಂಕೇತವನ್ನು "ಋ ಸುಳಿ" ಎನ್ನುವುದರಲ್ಲಿ ಔಚಿತ್ಯ ಕಾಣುತ್ತದೆ. ಈ ಸುಳಿ 'ಋ' ಎಂಬ ಲಿಪಿಯ ಆದಿಯ ಬಿಲ್ಲಿನ ಭಾಗದ ಕೆಳಗಿನ ಅರ್ಧದ ಸುಳಿಯಾಗಿದ್ದು, ಋಕಾರದ ಸಂಕೇತವಾಗಿರುವುದು ಸ್ಪಷ್ಟವಿದೆ. ನಮ್ಮ ನಾಡ ಕೆಲವೆಡೆ ವಟ್ರಸುಳಿ, ಒಟ್ಟೃಸುಳಿ-ಇತ್ಯಾದಿಯಾಗಿ ಉಚ್ಚಾರಣೆ ಮಾಡುವವರಲ್ಲಿ ಯಾವುದು ಸರಿಯೆಂಬುದು ನಿರ್ಧಾರವಾಗಿರುವಂತೆ ಕಾಣುವುದಿಲ್ಲ. ಹಾಗಿದ್ದರೆ, ಮೊದಲು ಶಬ್ದಕೋಶಗಳ ಕಡೆಗೆ ನೋಡೋಣ.

ರೀವ್ಸ್ ಮತ್ತು ಕಿಟ್ಟೆಲ್-ಇವರ ಶಬ್ದಕೋಶಗಳಲ್ಲಿ **"ವಟ್ರ"** ಎಂಬುದನ್ನು **"ವೃತ್ತ"** ಎಂಬುದರ ಅಪಭ್ರಂಶವಾಗಿ ಪರಿಗಣಿಸಲಾಗಿದೆ. **"ವಟ್ರಸುಳಿ** (ವಟ್ರಸುಡಿ)" ಎಂಬ ಪದಗಳು ಅಲ್ಲಿ ಬಂದಿವೆ. ಇದೇ ಉಚ್ಚಾರಣೆ (ವಟ್ರಸುಡಿ ಎಂಬುದು) ತೆಲುಗಿನಲ್ಲಿಯೂ ಇರುವಂತೆ ಸೂಚಿಸಲಾಗಿದೆ. ಶಬ್ದಕೋಶದಲ್ಲಿ ತಿಳಿಸಿರುವಂತೆ **"ವಟ್ರಸುಳಿ"** ಎಂದರೆ "ಋಕಾರ"ದ ಸುಳಿ—The round twirl; the form of the letter "ಋ" when joined to a consonant (kittel). ಆದರೆ ಈ 'ವಟ್ರಸುಳಿ' ಎಂಬುದು 'ಋಸುಳಿ'ಯನ್ನು ಹೇಗೆ ದ್ಯೋತಿಸುತ್ತದೆ? ಎಂಬುದನ್ನು ನೋಡಬೇಕು.

"**ಸುಳಿ**" ಎಂದರೆ ಸುತ್ತುವ ಕ್ರಿಯೆ, ಅಥವಾ ಸುತ್ತಿರುವುದರ ಭಾವವಾಚಿ. (ಸುಳಿ-ಭ್ರಮಣೇ; ಜಲಾವರ್ತೇ ಚ-ಶ.ದ.) ನಾಮವಾಚಿಯಾಗಿ "ಸುಳಿ" ಎಂಬುದು ಸಮುದ್ರದಲ್ಲಿ, ಜಲಪ್ರವಾಹದಲ್ಲಿ, ಬಾಳೆಯ ಎಳ ಎಲೆಯಲ್ಲಿ (ಬಾಳೆ ತಿರಿಯಲ್ಲಿ), ಜೀವಿಗಳ ತಲೆ-ಮೈಗಳ ಕೂದಲು ಮೊಳೆಯುವಲ್ಲಿ ಕಂಡುಬರುತ್ತದೆ. ಪ್ರಸ್ತುತದ ಸುಳಿ ಅಕ್ಷರ ಲಿಪಿಯ ಸುಳಿ. ಲಿಪಿಯ ಅವಯವವಾಗಿರುವ ಸುಳಿ. ಕನ್ನಡದ ಅಕ್ಷರಗಳ ಲಿಪಿಗೆ ಸೊಬಗನ್ನೀವ ಅಂಶಗಳಲ್ಲಿ ಮಹತ್ವವುಳ್ಳುದು ಸುಳಿ. ಕೆಲವು ಅಕ್ಷರಗಳ ಆದಿಯಲ್ಲಿ ಸುಳಿ ಬರುತ್ತದೆ—ಅ, ಆ, ಇ, ಚ, ಪ, ಬ, ಮ, ವ-ಇವು ಅಂಥವು. ಈ ಸುಳಿಗಳಲ್ಲಿ ಕೆಲವು ಒಳ ಸುಳಿಯವು, ಇನ್ನು ಕೆಲವು ಹೊರ ಸುಳಿಯವು (ಋ, ಚ, ಜ, ಬ-ಇವಕ್ಕೆಲ್ಲ ಹೊರ ಸುಳಿಗಳಿವೆ). ಪ, ಮ, ವ-ಇಂಥವಕ್ಕೆ ಅಡಿಯಲ್ಲಿ ಅಂದರೆ, ಕೆಳಗಡೆ ಒಳ ಸುಳಿಯಿದೆ. ಈ ಕೆಳಗಡೆಯಿರುವ ಸುಳಿ "ಹೊಕ್ಕುಳ

ಸುಳಿ" ಎನಿಸುತ್ತದೆ. ಡ, ದ, ಪ-ಮುಂತಾದುವನ್ನು ಮಹಾಪ್ರಾಣಗಳಾಗಿ ಬರೆವಾಗ 'ಹೊಕ್ಕಳ ಸುಳಿ'ಯಿಂದ ಕೆಳಗೆ (ಢ, ಧ, ಫ-ಎಂಬಂತೆ) ಗೆರೆ ಎಳೆಯುವುದುಂಟು. ಇದನ್ನು 'ಹೊಕ್ಕಳ ಸೀಳುವುದು' ಎನ್ನುತ್ತಾರೆ. ಮನುಷ್ಯ ದೇಹದಲ್ಲಿ ಹೊಕ್ಕಳದ ಆಚೀಚೆಯು ಉಬ್ಬಿಕೊಂಡ ಭಾಗ 'ಹೊಟ್ಟೆ' ಎನಿಸುವಂತೆ ಲಿಪಿ ಶರೀರದಲ್ಲಿಯೂ ಹೊಕ್ಕಳದ ಆಚೀಚೆಯ ಭಾಗಗಳನ್ನು 'ಹೊಟ್ಟೆ' ಅಥವಾ 'ಹೊಟ್ಟು' ಎನ್ನುತ್ತಾರೆ. ಬರೆವಣಿಗೆಯಲ್ಲಿ ಹೊಟ್ಟು-ಹೊಕ್ಕಳಗಳು ಸ್ಪಷ್ಟವಾಗಿ ಬಂದರೆ, ಅದು ಒಳ್ಳೆಯ ಕೈಬರೆಹವೆನಿಸುವುದು. ಗುಣಿತಾಕ್ಷರಗಳಿಗೆ ಕೊಡುವ ಎತ್ವದ ಚಿಹ್ನವನ್ನು "ಮೇಲು ಸುಳಿ" (ಮೇಲೆತ್ವ, ಮೇಲಯ್ತು) ಎನ್ನುವರು. ಹಾಗಿದ್ದರೆ "ವಟ್ರಸುಳಿ" ಎಂದರೇನು ?

"ವಟ್ರ" (ಬಟ್ಟ-ಬಟ್ಟತು) ಎಂಬುದು 'ಉರುಟಾಗಿರುವ' ಎಂಬ ಅರ್ಥವನ್ನು ಕೊಡುತ್ತಿರುವುದರಿಂದ 'ವಟ್ರಸುಳಿ' ಎಂಬೀ ಕೂಡುನುಡಿ "ಉರುಟಾಗಿರುವ ಸುಳಿ" ಎಂದು ಅಥವಾ "ವೃತ್ತದ ಸುಳಿ" ಎಂಬ ಅಭಿಪ್ರಾಯವನ್ನು ನೀಡಬಹುದು. ವೃತ್ತದ ಅಂಶ ಮತ್ತು ಸುಳಿ ಎಂಬ ಎರಡರ ಕೂಟವೇ ಈ "ಋಸುಳಿ" ಎಂಬುದರ ರೂಪವಾಗಿ ಕಾಣುತ್ತದೆ. ಈ ವಿವರಣದಿಂದ ಇದು ಋಕಾರದ ಅಂಶವನ್ನುಳ್ಳುದೆಂದು ಸೂಚಿಸಿದಂತೆ ಆಗುವುದೇ ಇಲ್ಲ. ಕನ್ನಡದಲ್ಲಿ ಯಾವುದೇ ಗುಣಿತಾಕ್ಷರವಿರಲಿ, ದ್ವಿತ್ವಾಕ್ಷರವಿರಲಿ ಅಲ್ಲಿಗೆ ಹೊದ್ದುಗೆಯಾಗುವ ಸ್ವರಚಿಹ್ನೆ ಅಥವಾ ವ್ಯಂಜನಚಿಹ್ನೆ ಆಯಾ ಅಕ್ಷರದ ಅಂಶವೇ ಆಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹೀಗಿರುವಾಗ "ಋತ್ವ ಚಿಹ್ನೆಯನ್ನು 'ಋಸುಳಿ' ಎನ್ನದೆ ಅದನ್ನು "ವೃತ್ತದ ಸುಳಿ" ಎನ್ನುವುದು ಸಮಂಜಸವೆ? ವೃತ್ತದ, ಅಂದರೆ ಅನುಸ್ವಾರದ ಯಾವ ಉಚ್ಚಾರಣಾಂಶವೂ ಇಲ್ಲದ "ಋಸುಳಿ"ಗೆ "ವಟ್ರಸುಳಿ" ಎಂಬ ಹೆಸರೇಕೆ? ಅದೇನಾದರೂ ಅಶುದ್ಧೋಚ್ಚಾರಣವಿರಬಹುದೆ ? ಪ್ರಾಯಶಃ "ವಟ್ಟೃಸುಳಿ" ಎಂಬುದು ಋಕಾರೋಚ್ಚಾರಣೆಯುಳ್ಳುದಾಗಿ ಶುದ್ಧರೂಪವೆನಿಸಬಹುದೆ ?

'ವಟ್ಟೃಸುಳಿ' ವಿಂಗಡಿಸಿದಾಗ "ವಟ್ಟ+ಋಸುಳಿ" ಅಥವಾ "ವಟ್ಟ+ಋ-ಸುಳಿ" ಎಂದಾಗಬಹುದು. 'ವಟ್ಟ' ಎಂಬುದು ಪೂರ್ವಪದವಾಗಿದ್ದರೆ, ಅದು "ಒಟ್ಟು" ಎಂಬುದರ ಅಶುದ್ಧೋಚ್ಚಾರಣವಿರಬಹುದು.

ಹಲವರು ಒನಕೆ, ಒಡವೆ, ಓಲೆ–ಮುಂತಾದುವನ್ನು ವನಕೆ (ವನಿಕೆ), ವಡವೆ, ವೋಲೆ–ಎಂದು ಉಚ್ಚಾರಣೆ ಮಾಡುವರಷ್ಟೆ. ಇದರಂತೆ "ಒಟ್ಟು" ಎಂಬುದನ್ನು "ವಟ್ಟು" ಎನ್ನುವುದು ಅಪರಿತರ ಉಚ್ಚಾರಣೆಗೆ ಹೊರಗಲ್ಲ. ಹಾಗಾದರೆ "ಒಟ್ಟು + ಋಸುಳಿ" ಎಂದರೇನು? ನೋಡೋಣ. ಅಕ್ಷರಮಾಲೆಯಲ್ಲಿ ಪೂರ್ಣಾಕ್ಷರಗಳು (ಅಕಾರಾದಿ ಸ್ವರಗಳು), ಅರ್ಧಾಕ್ಷರಗಳು (ಕಕಾರದಿಂದ ಳಕಾರದ ವರೆಗಿನ ವ್ಯಂಜನಗಳು) ಮತ್ತು ಅನಕ್ಷರಗಳು (ಸ್ವಂತ ಉಚ್ಚಾರಣೆಯೇನೂ ಇಲ್ಲದ ಬಿಂದು ವಿಸರ್ಗಾದಿ ಯೋಗವಾಹಗಳು)–ಎಂಬ ಮೂರು ಬಗೆಯುವು ಸೇರಿಕೊಂಡಿವೆ. ಪೂರ್ಣಾಕ್ಷರವೆನಿಸುವ ಸ್ವರವನ್ನು ಇಲ್ಲಿ "ಒಟ್ಟು" ಎಂಬ ಪೂರ್ವಪದವು ನಿರ್ದೇಶಿಸಿರುತ್ತದೆ. ಒಟ್ಟು + ಋಸುಳಿ" ಎಂಬಲ್ಲಿ ಪೂರ್ಣಾಕ್ಷರವೆನಿಸುವ 'ಋ' ಎಂಬ ಅಕ್ಷರದ ಲಿಪಿಯಿಂದ ತೆಗೆದುಕೊಂಡಿರುವ 'ಸುಳಿ' ಎಂದು ವೇದ್ಯವಾಗುವುದು. 'ಋ' ಎಂಬುದು 'ರ್' ಎಂಬ ವ್ಯಂಜನವಲ್ಲ; ವ್ಯಂಜನದ ಉಚ್ಚಾರಣೆಯುಳ್ಳುದೂ ಅಲ್ಲ. 'ಋ' ಎಂಬುದು ಒಂದು ಹ್ರಸ್ವಸ್ವರ, ಇದು ಪೂರ್ಣಾಕ್ಷರ. ಗುಣಿತಾಕ್ಷರದ ರೂಪ ಪೂರ್ಣತೆಗಾಗಿ ಇದು ತಲೆಕಟ್ಟಿನ ಚಿಹ್ನೆಯನ್ನೂ ಸ್ವೀಕರಿಸಿಕೊಂಡಿದೆ. ಆದರೆ ಹಿಂದಿನ ವೈಯಾಕರಣರಾರೂ 'ಸ್ವರಾಕ್ಷರ' ಎಂಬ ಅರ್ಥದಲ್ಲಿ "ಒಟ್ಟು" ಎಂಬುದನ್ನು ಬಳಸಿಲ್ಲ, ಮಾತ್ರವಲ್ಲ; ಉಚ್ಚಾರಣೆಯಲ್ಲಿಯೂ 'ಒಟ್ಟೃ' ಎಂದಿರುವುದು ಕಂಡುಬಂದಿಲ್ಲ. ಇದರಿಂದ ಇದರ ಇನ್ನಿತರ ಮುಖಗಳನ್ನು ನೋಡಿದಾಗ ಇನ್ನಷ್ಟು ವಿಚಾರಗಳು ಮುಂದೆ ಬರಬಹುದು. ಹಾಗಿದ್ದರೆ ಈ ರೂಪವು "ವೊಟ್ಟು + ಋಸುಳಿ" ಎಂದಾಗಿದ್ದು, ಇದು "ಹೊಟ್ಟು + ಋಸುಳಿ" ಆಗಿರಬಹುದೆ?

'ಋಸುಳಿ'ಯನ್ನು (ಋತ್ವ ಚಿಹ್ನೆಯನ್ನು) ಗುಣಿತಾಕ್ಷರಗಳ ಹೊಟ್ಟೆಯ (ಹೊಟ್ಟೆಯು) ಕಡೆ ಗುರುತಿಸುವುದು ಕ್ರಮ–ಪೃಥ್ವಿ, ಧೃತಿ, ವೃತ್ತಿ ಇತ್ಯಾದಿ. ಹೆಸರಲ್ಲಿ ಪ್ರಯುಕ್ತ ಸ್ಥಾನನಿರ್ದೇಶಕತೆ ಯಾವುದಾದರೊಂದು ಸ್ವರಚಿಹ್ನೆಗೋ ವ್ಯಂಜನ ಚಿಹ್ನೆಗೋ ಬರುವುದಿದ್ದರೆ, ಅದು ಇತರ ಚಿಹ್ನೆಗಳಿಗೂ ಬರಬೇಕಿತ್ತು. ಐತ್ವದ ದೀರ್ಘ ಚಿಹ್ನೆಯನ್ನು ಆಯಾ ಅಕ್ಷರದ ಹೊಟ್ಟೆಯ ಕಡೆಗೇ ಕೊಡುವರಾದರೂ ಆ ಐತ್ವಕ್ಕೆ "ಹೊಟ್ಟೈ" ಎಂಬ ಹೆಸರು ಬಂದಿಲ್ಲ. ಇದರಿಂದ 'ಹೊಟ್ಟು + ಋಸುಳಿ' ಎಂಬ ಉಚ್ಚಾರಣೆಗೆ ಮಾನ್ಯತೆ ಬಾರದು.

'ವಟ್ಟ್ರುಸುಳಿ' (ಖುಸುಳಿ) ವಕಾರದ ಆದಿಯು ಸುಳಿಯಂತೆ ಇರುವುದರಿಂದ ಆ ಹೆಸರನ್ನು ತಾಳಿತೆಂದು ಅಭಿಪ್ರಾಯಪಡುವವರೂ ಇದ್ದಾರೆ. ವಕಾರವೆಂತಲೇ ಏನು? ಪ, ವು ಎಂಬಿವೂ ಸುಳಿಯಿಂದಲೇ ಮೊದಲಾಗುವ ಅಕ್ಷರಗಳಾದುದರಿಂದ ಅವುಗಳ ಹೆಸರೇಕೆ ಬಂದಿಲ್ಲ? ಎಂಬುದಕ್ಕೆ ಇಲ್ಲಿ ಉತ್ತರವಿಲ್ಲ. ಅಲ್ಲದೆ ಉಚ್ಚಾರಣೆಯಲ್ಲಿ ನಡುವೆ 'ಟಕಾರ'ವೇಕೆ ಬಂತೆಂಬುದಕ್ಕೂ ಕಾರಣ ಸಿಗದು. ಇದರಿಂದ ಇಂತಹ ವಿಚಾರಸಾಧನಗಳ ಶೋಧನಗಳ ಆಗೆತದಲ್ಲಿ ನೀರು ದೊರೆವಂತಿಲ್ಲ.

"**ವಟ್ಟ್ರುಸುಳಿ**" ಪದಚ್ಛೇದ ಮಾಡಿದಾಗ "ವಟ್ಟ+ಖುಸುಳಿ" ಎಂದಾಗುವುದಷ್ಟೆ. ಇಲ್ಲಿ ಬಂದ "ವಟ್ಟ" ಏನೆಂದು ನೋಡುವ. ಹಣ ಕೊಟ್ಟು ವಸ್ತುಗಳನ್ನು ಕೊಳ್ಳುವವರಿಗೂ, ಕೊಡುವವರಿಗೂ 'ವಟ್ಟ' ಎಂಬುದು ಪರಿಚಿತ ವಿಷಯ. ವಸ್ತುಗಳಲ್ಲಿ ಒಂದೆರಡನ್ನು ಉಚಿತವಾಗಿ ಹೆಚ್ಚಿಗೆ ಸಲ್ಲಿಸುವುದು 'ವಟ್ಟ'ವೆನಿಸುತ್ತದೆ. 'ವಟ್ಟಾ ಕೊಡು'—to make an allowance (Reeve's). ಇಂಗ್ಲೀಷಿನ extra ಎಂಬುದರ ಸ್ವನಸಾಮ್ಯ-ಅರ್ಥಸಾಮ್ಯಗಳುಳ್ಳ ಶಬ್ದವಿದು. "ವಟ್ಟ+ಖುಸುಳಿ" ಎಂಬುದು ಒಂದು ಅಧಿಕಾಕ್ಷರ ಚಿಹ್ನವಾಗಿ ಕಾಣಿಸಿದರೂ ಅಧಿಕತೆಯು ಮಾತ್ರಾವಹೌಲ್ಯವಿಲ್ಲದುದು. ಸುಕೃತ, ವಿಕೃತಿ-ಇಂತಹ ಕಡೆಗಳಲ್ಲಿ "ಕೃ" ಎಂಬುದು ವಟ್ಟಸುಳಿಯುಳ್ಳ ಗುಣಿತಾಕ್ಷರ. ಈ 'ಖುಸುಳಿ' ವಟ್ಟವಾಗಿರುವುದರಿಂದ ಮಾತ್ರಾಬಾಹುಳ್ಯ ಹೆಚ್ಚಾಗುವುದಿಲ್ಲ. ವಟ್ಟದ ಗುಣವೇ ಹಾಗೆ. ಇದರಿಂದ ಗುಣಿತಾಕ್ಷರಕ್ಕೆ (ಸ್ವರಯುಕ್ತ ವ್ಯಂಜನಕ್ಕೆ) ಕೊಡುವ ಋಕಾರ ಸ್ವರ ಸಂಕೇತವನ್ನು '**ಋತ್ವ ಚಿಹ್ನೆ**' '**ಋಸುಳಿ**' ಎಂಬುದು ಸರಿಯಾದುದೇ; ಆದರೆ 'ವಟ್ರಸುಳಿ' 'ಒಟ್ರುಸುಳಿ' ಎನ್ನುವುದಕ್ಕಿಂತ "**ವಟ್ಟ್ರುಸುಳಿ**" ಎಂದು ಉಚ್ಚಾರಣೆ ಮಾಡುವುದು ಔಚಿತ್ಯಪೂರ್ಣವಲ್ಲವೆ-ಎಂಬುದನ್ನು ವಿದ್ವಾಂಸರು ವಿವೇಚಿಸಿಕೊಳ್ಳುವುದು ಲೇಸು.

೨. ಅಕಾರಾಂತ ಸ್ತ್ರೀಲಿಂಗ ನಾಮಪದಗಳು

(ವ್ಯಾಕರಣ ವಿವೇಚನೆ)

[**"ಕನ್ನಡ ನುಡಿ"** ಮಾಸ ಪತ್ರಿಕೆಯ ಆಗಸ್ಟ್, ೧೯೬೦ ನೆಯ ಸಂಚಿಕೆಯಲ್ಲಿ ಪ್ರಕಟವಾದುದು. ಈ ಗ್ರಂಥದ ೮೪ ನೆಯ ಪುಟಕ್ಕೆ ಅನುಬಂಧಿ.]

ಕನ್ನಡದಲ್ಲಿ ಅಕಾರಾಂತ ಸ್ತ್ರೀಲಿಂಗವಾಗಿರುವ ನಾಮಪದಗಳನ್ನು '**ಸಾಧಿತನಾಮು**'ಗಳೆಂತಲೂ, '**ಸಹಜನಾಮು**'ಗಳೆಂತಲೂ ವಿಭಾಗಿಸ ಬಹುದು. ಸಾಧಿತನಾಮುಗಳೆಂದರೆ ಸಂಸ್ಕೃತದಿಂದ ತದ್ಭವವಾಗಿ ಬಂದವು ಅಥವಾ ಕನ್ನಡದಲ್ಲೇ ಪುಲ್ಲಿಂಗದಲ್ಲಿದ್ದ ಪದಗಳು ಸ್ತ್ರೀಲಿಂಗದ ಪದಗಳಾಗಿ ಪರಿವರ್ತಿತವಾದವು. **"ಸಹಜನಾಮು"**ಗಳನ್ನು **"ರೂಢನಾಮು"** (Common noun) ಮತ್ತು **"ಅಂಕಿತನಾಮು"** (Proper noun) ಎಂತಲೂ ವಿಭಾಗಿಸಿಕೊಳ್ಳಬಹುದು. ಪುಲ್ಲಿಂಗ-ಸ್ತ್ರೀಲಿಂಗಗಳೆರಡರಲ್ಲೂ ಬಹು ವಚನದ ಪ್ರತ್ಯಯ ಒಂದೇ ರೀತಿ.

ಉದಾ:— ಪುರುಷರು-ಸ್ತ್ರೀಯರು, ಅಣ್ಣಂದಿರು-ಅಕ್ಕಂದಿರು, ಉಪಾಧ್ಯಾಯರು-ಉಪಾಧ್ಯಾಯಿನಿಯರು ಇತ್ಯಾದಿ.

ಪುಲ್ಲಿಂಗ-ಸ್ತ್ರೀಲಿಂಗಗಳನ್ನು ಬೇರೆ-ಬೇರೆಯಾಗಿ ದ್ಯೋತಿಸುವ ಪ್ರತ್ಯಯ ವಿರುವುದು ಏಕವಚನದ ರೂಪದಲ್ಲಿ ಮಾತ್ರ. ಪುಲ್ಲಿಂಗದಲ್ಲಿ **"ನು"** (ಅವನು(ಎಂಬುದೂ ಸ್ತ್ರೀಲಿಂಗದಲ್ಲಿ **"ಳು"** (ಅವಳು) ಎಂಬುದೂ ಏಕವಚನದ ಪ್ರತ್ಯಯಗಳಾಗಿವೆ. ಅಕಾರಾಂತದ ಸಾಧಿತನಾಮು ಪದಗಳಲ್ಲಿ ಈ ವ್ಯತ್ಯಾಸ ವನ್ನು ಸ್ಪಷ್ಟವಾಗಿ ಕಾಣಬಹುದು.

ಅಕಾರಾಂತದ ಪುಲ್ಲಿಂಗೈಕವಚನವಾಗುವ ಸಂಖ್ಯೆ, ಸರ್ವನಾಮು, ಕೃದಂತ ಗುಣವಚನ ಶಬ್ದಗಳಿಗೆ "ಳು" ಎಂಬ ಸ್ತ್ರೀ ಪ್ರತ್ಯಯ ಸೇರಿ ಸ್ತ್ರೀಲಿಂಗರೂಪ ಗಳಾಗುವುವು **"ಳುಕ್ಚಸ್ತ್ರಿಯಾಂ"** (ಶ. ಶಾ. ಸೂ. ೧೮೧), **"ಅಡ್ಡಾಶಾಚ್ಚಃ"** (ಸೂ. ೧೮೨) ಎಂಬೀ ಸೂತ್ರಗಳು ಇದನ್ನು ಸ್ಪಷ್ಟಪಡಿಸುತ್ತವೆ.

"**ಲುಪ್ತ ನಃ**" (ಶ. ಶಾ. ಸೂ. ೧೮೩) ಎಂಬ ಸೂತ್ರದ ಪ್ರಕಾರ, ಸ್ತ್ರೀಲಿಂಗದಲ್ಲಿ ಳುಗಾಗಮವಾಗುವಾಗ ಹಿಂದಿನ ಪುಲ್ಲಿಂಗದ 'ನ್' ಎಂಬುದಕ್ಕೆ ಲೋಪ ಬರುತ್ತದೆ. ಇದಕ್ಕೆ ಉದಾಹರಣೆಗಳು :—

	ಪುಲ್ಲಿಂಗ		ಸ್ತ್ರೀಲಿಂಗ
ಸಂಖ್ಯೆಯಲ್ಲಿ :—			
	ಒರ್ವಂ	—	ಒರ್ವಳ್
ಸರ್ವನಾಮದಲ್ಲಿ :—	ಅವಂ	—	ಅವಳ್
	ಇವಂ	—	ಇವಳ್
	ಆವಂ	—	ಆವಳ್
ಕೃದಂತದಲ್ಲಿ :—	ಆಡಿದಂ	—	ಆಡಿದಳ್
	ಓದಿದಂ	—	ಓದಿದಳ್
ಗುಣವಚನದಲ್ಲಿ :—	ಅಲ್ಲಿದಂ	—	ಅಲ್ಲಿದಳ್
	ತೆಂಕಣಂ	—	ತೆಂಕಣಳ್
	ಒಳ್ಳಿದಂ	—	ಒಳ್ಳಿದಳ್
	ನಲ್ಲಂ	—	ನಲ್ಲಳ್

'ತಾಯಿ' ಎಂಬ ಅರ್ಥದಲ್ಲಿ ಸಂಸ್ಕೃತದಲ್ಲಿ ಬರುವ '**ಅಕ್ಕಾ**' ಎಂಬುದರಿಂದ ಮತ್ತು 'ಜ್ಯೇಷ್ಠಭಗಿನಿ' ಎಂಬರ್ಥದಲ್ಲಿ ಬರುವ ,**ಅಕ್ಕ್ರ**' ಎಂಬುದರಿಂದ ಸಾಧಿತವಾಗಿ ಕನ್ನಡದಲ್ಲಿ '**ಅಕ್ಕಳ್**' ಎಂಬ ಪದಪ್ರಯೋಗವಾದುದಕ್ಕೆ ಕಾವ್ಯೋದಾಹರಣೆಗಳಿವೆ (ಪಂಪ ಭಾರತ ೪-೯೪, ೧೨,೧೨೫).

ಮೇಲಿನವೆಲ್ಲವೂ ಸಾಧಿತವಾದ ಅಕಾರಾಂತ ಸ್ತ್ರೀಲಿಂಗದ ನಾಮಪದಗಳಾಗಿವೆ. ಹಳಗನ್ನಡ-ಹೊಸಗನ್ನಡಗಳೆರಡರಲ್ಲಿಯೂ ಇಂತಹ ಅಕಾರಾಂತ ಸ್ತ್ರೀಲಿಂಗ ಶಬ್ದಗಳಿಗೆ ಏಕವಚನದಲ್ಲಿ 'ಳ್' ಅಥವಾ "ಳು" ಎಂಬುದೇ ಪ್ರತ್ಯಯವಾಗಿರುತ್ತದೆ.

ಅಕಾರಾಂತ ಸ್ತ್ರೀಲಿಂಗವಾಗಿರುವ ಸಹಜ ನಾಮಪದಗಳಲ್ಲಿ-'ರೂಢನಾಮ'ಗಳಲ್ಲಿ ಳುಗಾಗಮವಿಲ್ಲ. ಬಂಧುವಾಚಕಗಳಾದ ಅಕ್ಕ, ಅವ್ವ, ಅಮ್ಮ

ಎಂಬಿವೇ ಇದಕ್ಕೆ ಉದಾಹರಣೆಗಳು. ಇವಕ್ಕೆ ವಿಭಕ್ತಿ ಪ್ರತ್ಯಯಗಳು ಪುಲ್ಲಿಂಗದಂತೆಯೆ ಇರುತ್ತವೆ. ಇಂತಹ ಶಬ್ದಗಳ ವಿಭಕ್ತಿ ರೂಪಗಳನ್ನು ಕವಿ ಕೇಶಿರಾಜನು ಸ್ಪಷ್ಟೀಕರಿಸಿದ್ದಾನೆ—

ಪುದಿಗುವುದಂತಕೆ ಪುಲ್ಲಿಂ
ಗದವೊಲ್ ಕಿಱಿದೆಡೆಗಳಲ್ಲಿಯೆಲ್ಲಂ ಸ್ತ್ರೀಲಿಂ
ಗದೊಳಂ......(ಶ.ದ.ಸೂ. ೧೩೨)

ಪ್ರಯೋಗಂ—ಅದಂತ ಸ್ತ್ರೀಲಿಂಗಕ್ಕೆ-ಅಕ್ಕಂ, ಅಕ್ಕನಂ, ಅಕ್ಕನಿಂದೆ ಅಕ್ಕಂಗೆ, ಅಕ್ಕನತ್ತಣಿಂ, ಅಕ್ಕನ, ಅಕ್ಕನೊಳ್; ಅವ್ವಂ, ಅಮ್ಮಂ, ಎಂಬಿವರ್ಕಮಂತಱಿವುದು.

ಹಿಂದೆ ವಿವರಿಸಿದಂತೆ ಸಾಧಿತ ಶಬ್ದಗಳಾದ ಆಕಾರಾಂತ ಸ್ತ್ರೀಲಿಂಗದಲ್ಲಿ ಳುಗಾಗಮವೇ ನಿತ್ಯವಾಗಿದ್ದುದರಿಂದಲೂ ಅಕ್ಕ, ಅಮ್ಮ, ಅವ್ವ ಎಂಬೀ ಮೂರು ಶಬ್ದಗಳಲ್ಲದೆ ಇತರ ಸಹಜ ಶಬ್ದಗಳು ಕಂಡುಬಾರದುದರಿಂದಲೂ ಇವುಗಳಲ್ಲಿ ಪುಲ್ಲಿಂಗದಂತೆ ಪ್ರತ್ಯಯಗಳು ಸೇರುತ್ತವೆಂಬುದನ್ನು ತಿಳಿಸುವಲ್ಲಿ "ಕಿಱಿದೆಡೆಗಳಲ್ಲಿ ಯೆಲ್ಲಂ" ಎಂಬುದಾಗಿ ನಿರ್ದೇಶಿಸಿ ಹೇಳಿದುದು ಕಾಣುತ್ತದೆ. ಹಿಂದೆ ಕನ್ನಡದಲ್ಲಿ ಆಕಾರಾಂತ ಸ್ತ್ರೀಲಿಂಗವಾಗಿರುವ ಅಂಕಿತನಾಮಗಳು ಇರಲೇ ಇಲ್ಲವೆಂದು ತೋರುತ್ತದೆ.

ಸಂಸ್ಕೃತದಲ್ಲಿ ಆಕಾರಾಂತವಾಗಿರುವ ಸ್ತ್ರೀಲಿಂಗ ಶಬ್ದಗಳು ಕನ್ನಡದಲ್ಲಿ ಸಮಸಂಸ್ಕೃತವಾಗಿ ಎಕಾರಾಂತವಾಗಿ ಪ್ರಯೋಗಗೊಳ್ಳುತ್ತವೆ. "**ಎದಾತಃ ಸ್ತ್ರಿಯಾಂ**" (ಶ.ಶಾ.ಸೂ. ೧೧೮) ಎಂಬೀ ಸೂತ್ರದಂತೆ ಬಾಲಾ-ಬಾಲೆ, ಕಾಂತಾ-ಕಾಂತೆ, ಸೀತಾ-ಸೀತೆ, ದಯಾ-ದಯೆ, ಶಾಲಾ-ಶಾಲೆ ಎಂದಾಗುತ್ತವೆ. ಕನ್ನಡದಲ್ಲಿ ಇವು ಆಕಾರಾಂತ ಸ್ತ್ರೀಲಿಂಗ ರೂಪಗಳಲ್ಲ. ಸೀತಾಳನ್ನು ಶಾಲಾದಲ್ಲಿ ಎಂಬಿತ್ಯಾದಿ ವಿಭಕ್ತಿರೂಪಗಳು ಸಾಧುವಲ್ಲ.

ಸಂಸ್ಕೃತದಲ್ಲಿ ಆಕಾರಾಂತ ಸ್ತ್ರೀಲಿಂಗಗಳಾಗಿರುವ ಕೆಲವು ಶಬ್ದಗಳು ಸಮಸಂಸ್ಕೃತವೆನಿಸಿ, ಕನ್ನಡದಲ್ಲಿ ಆಕಾರಾಂತ ನಪುಂಸಕ ಶಬ್ದಗಳೆನಿಸುತ್ತವೆ.

ಉದಾ : ಕಂಧರ, ಕರುಣ, ಉಪತ್ಯಕ, ಗ್ರೀವ-ಇಂಥವು. ಕನ್ನಡದಲ್ಲಿ ಇವು ಸ್ತ್ರೀಲಿಂಗದ ಶಬ್ದಗಳಲ್ಲ.

ಹೊಸಗನ್ನಡದಲ್ಲಿ ಇಂದು ಅಕಾರಾಂತ ಸ್ತ್ರೀಲಿಂಗವಾಗಿರುವ ಅಂಕಿತ ನಾಮಗಳು ಹೇರಳವಾಗಿವೆ. ಕಮಲ, ಕುಸುಮ, ಸುಮನ, ವಸಂತ, ಅನಂತ, ಲಲಿತ, ವಿಮಲ, ಮಂಜುಳ–ಇತ್ಯಾದಿ ಸ್ತ್ರೀಲಿಂಗ ಶಬ್ದಗಳು ಅಂಕಿತನಾಮ ಗಳಾಗಿ ಬಳಕೆಯಲ್ಲಿವೆ. ಇವು ಪುಲ್ಲಿಂಗ ರೂಪದಿಂದ ಸಾಧಿತವಾದವುಗಳಲ್ಲ; ಸಹಜ ಸ್ತ್ರೀಲಿಂಗದ ಶಬ್ದಗಳೇ ಆಗಿವೆ. ಇಂತಹ ಸ್ತ್ರೀಲಿಂಗ ಶಬ್ದಗಳ ಏಕವಚ ನದ ವಿಭಕ್ತಿ ಪ್ರತ್ಯಯಗಳು ಹೇಗಿರಬೇಕು ? ಇವು ಪುಲ್ಲಿಂಗದಂತೆಯೇ ಇರ ಬೇಕೆ ? ಸ್ತ್ರೀಲಿಂಗದಂತೆ ಳುಗಾಗಮದಿಂದ ಕೂಡಿರಬೇಕೆ ? ಎಂಬುದು ವಿಚಾ ರಾರ್ಹವಾಗಿದೆ. ಹೆಚ್ಚಾಗಿ ಕತೆ-ಕಾದಂಬರಿಕಾರರು ಅಕಾರಾಂತ ಸ್ತ್ರೀಲಿಂಗದ ಅಂಕಿತನಾಮಗಳಿಗೆ ಳುಗಾಗಮ ಮಾಡುತ್ತಾರೆ. ಇದರಂತೆ ಕಮಲಳು, ಕಮಲಳನ್ನು, ಕಮಲಳಿಂದ, ಕಮಲಳಿಗೆ, ಕಮಲಳತ್ತಲಿಂದ, ಕಮಲಳ, ಕಮಲಳಲ್ಲಿ–ಎಂದು ವಿಭಕ್ತಿ ರೂಪಗಳನ್ನು ಮಾಡುವರು. ವ್ಯಾಕರಣದ ಮತ್ತು ಅರಿತವರ ಮತದಂತೆ ಅಕಾರಾಂತ ಪುಲ್ಲಿಂಗದ ರೂಪದಲ್ಲಿದ್ದ ಏಕವಚನ ಶಬ್ದವನ್ನು ಸ್ತ್ರೀಲಿಂಗವಾಗಿ ಮಾರ್ಪಡಿಸುವಲ್ಲಿ ಮಾತ್ರ (ಉದಾ : ಅವಂ-ಅವಳ್, ಒಳ್ಪಿದಂ-ಒಳ್ಪಿದಳ್, ಎಂಬಂತೆ) ಪುಲ್ಲಿಂಗದ ಕೊನೆಯ ನಕಾರಕ್ಕೆ ಲೋಪವೂ 'ಳು' ಎಂಬ ಪ್ರತ್ಯಯದ ಆಗಮವೂ ಇರುತ್ತದೆ. ಆದರೆ ಸಹಜ ಸ್ತ್ರೀಲಿಂಗವಾಗಿರುವ ಅಕಾರಾಂತ ಶಬ್ದಗಳಿಗೆ ಳುಗಾಗಮವು ವ್ಯಾಕರಣ ಶುದ್ಧವೂ ಅಲ್ಲ, ತರ್ಕ ಸಿದ್ಧವೂ ಅಲ್ಲ-ಎನಿಸುವುದಿಲ್ಲವೆ ?

ಅಕಾರಾಂತವಾಗಿರುವ ಸಹಜ ಸ್ತ್ರೀಲಿಂಗ ಶಬ್ದಗಳಾದ ಅಕ್ಕ, ಅಮ್ಮ, ಅವ್ವ-ಎಂಬಿವನ್ನು ಪುಲ್ಲಿಂಗದಂತೆಯೇ ಪ್ರಯೋಗಿಸುತ್ತಿರುವಾಗ ಕಮಲ, ಅನಂತ, ಮಂಜುಳ ಇತ್ಯಾದಿ ಅಕಾರಾಂತ ಸ್ತ್ರೀಲಿಂಗದ ಅಂಕಿತನಾಮ ಗಳನ್ನೂ ಪುಲ್ಲಿಂಗದಂತೆಯೇ ಬಳಸುವುದರಲ್ಲಿ ತಪ್ಪೇನು ? "ನಾನು ವಸಂತನ ಮನೆಗೆ ಹೋಗುತ್ತೇನೆ" ಎಂಬಲ್ಲಿ 'ವಸಂತನ' ಎಂಬ ಪದವು ಪುಲ್ಲಿಂಗದ ಭ್ರಾಂತಿಯನ್ನುಂಟುಮಾಡಬಹುದಾದರೂ ಮುಂದಿನ ವಾಕ್ಯದಲ್ಲಿ ಆಕೆ ಅಥವಾ ಅವಳು ಎಂಬ ಸರ್ವನಾಮದಿಂದಲೂ ಇರುತ್ತಾಳೆ, ಹೇಳಿದ್ದಳು-ಇತ್ಯಾದಿ

ಯಾದ ಆಖ್ಯಾತ ಪದಗಳಿಂದಲೂ ಲಿಂಗಭ್ರಾಂತಿ ಪರಿಹಾರವಾಗುವುದು. ಇದೇ ರೀತಿ "ನಾನು ಬರುತ್ತೇನೆ" ಎನ್ನುವಾಗ "ನೀನು ಅಲ್ಲಿ ಇರು" ಎನ್ನುವಾಗ ಲಿಂಗ ಪ್ರತೀತಿಯಾಗುವುದಿಲ್ಲ. ಪೂರ್ವಾಪರ ಜ್ಞಾನದಿಂದ ಮಾತ್ರ ನಾನು, ನೀನು ಎಂಬ ಸರ್ವನಾಮಗಳಿಗೂ ಉತ್ತಮ ಮಧ್ಯಮ ಪುರುಷಗಳ ಆಖ್ಯಾತ ಪದಗಳಿಗೂ ಲಿಂಗ ನಿರ್ಣಯ ಮಾಡಬೇಕಾಗುತ್ತದೆ. ಪುಲ್ಲಿಂಗದಂತೆ ವಿಭಕ್ತಿಪ್ರತ್ಯಯ ಬಂದಲ್ಲಿಯೂ ಹೀಗೆಯೇ ಲಿಂಗನಿರ್ಣಯ ಮಾಡಬಹುದು. ಆದುದರಿಂದ ಅಕಾರಾಂತ ಸ್ತ್ರೀಲಿಂಗದ ಅಂಕಿತನಾಮಗಳ ಏಕವಚನಕ್ಕೆ ಪುಲ್ಲಿಂಗದಂತೆಯೇ ಪ್ರತ್ಯಯ ಹಚ್ಚಿ ಮಾಡುವ ಪ್ರಯೋಗವೇ ಸರಿಯೆನಿಸುವುದು.

ಇಲ್ಲಿ ಇದಕ್ಕೆ ಇನ್ನೊಂದು ಆಕ್ಷೇಪಣೆ ಬರಬಹುದು. ವೈಯಾಕರಣರು ಪ್ರಯೋಗಶರಣರಷ್ಟೆ. ಲಲಿತ, ಕಮಲ-ಮುಂತಾದ ಅಕಾರಾಂತ ಸ್ತ್ರೀಲಿಂಗ ಶಬ್ದಗಳನ್ನು ಹಲವರು ಲಲಿತಳು, ಕಮಲಳು-ಎಂದು ಳುಗಾಗಮದೊಂದಿಗೆ ಪ್ರಯೋಗಿಸುತ್ತಿರುವುದರಿಂದ ಅದನ್ನೇ ಸರಿಯೆಂದೇಕೆ ಪರಿಗಣಿಸಬಾರದು? ಇದಕ್ಕೆ ಉತ್ತರವಿದು :—

ಇಂದು ಕರ್ಣಾಟಕದ ಕೆಲವು ಭಾಗಗಳಲ್ಲಿ ಮನೆಮಾತು ಕನ್ನಡವೇ ಆಗಿರುವವರು ಕಮಲ (ನು), ಕಮಲನನ್ನು ಕಮಲನಿಂದ-ಇತ್ಯಾದಿಯಾಗಿ ಪುಲ್ಲಿಂಗದಂತೆಯೇ ಪ್ರಯೋಗಿಸುವ ಉದಾಹರಣೆಗಳು ಬೇಕಾದಷ್ಟಿವೆ. ಕನ್ನಡಕ್ಕೆ ನಿಕಟವರ್ತಿಯಾಗಿರುವ ತುಳು ಭಾಷೆಯಲ್ಲಂತೂ ಯಾವ ಲಿಂಗದ ನಾಮವಾಚಿಯಾಗಿದ್ದರೂ ದ್ವಿತೀಯೆಯಲ್ಲಿ ಮತ್ತು ಷಷ್ಠಿಯಲ್ಲಿ ಅದಕ್ಕೆ ನಕಾರವೇ ಪ್ರತ್ಯಯವಾಗಿ ಬರುವುದನ್ನು ಕಾಣಬಹುದು. ಉದಾ :— ಸೀತೆನ್ (ದ್ವಿ)-ಸೀತೆನ (ಷ), ಕಮಲನ್ (ದ್ವಿ)-ಕಮಲನ (ಷ), ರಾಮನ್ (ದ್ವಿ)-ರಾಮನ (ಷ), ಪುಚ್ಚೆನ್ (ದಿ)-ಪುಚ್ಚೆನ (ಷ) ಇತ್ಯಾದಿ. ರೂಢಿಯಲ್ಲಿ ಕೂಡ ಪುಲ್ಲಿಂಗದಂತೆಯೇ ಪ್ರತ್ಯಯ ಹಚ್ಚುವ ಪ್ರಯೋಗವು ಇರುವುದರಿಂದ ಅಕಾರಾಂತ ಸ್ತ್ರೀಲಿಂಗದ ಅಂಕಿತನಾಮಗಳ ಏಕವಚನವನ್ನು ಎಲ್ಲರೂ ಪುಲ್ಲಿಂಗದ ರೀತಿಯಲ್ಲಿ ಪ್ರಯೋಗಿಸುವುದೇ ಸಾಧುವೆನಿಸುವುದು. ಅಲ್ಲದೆ ಒಬ್ಬೊಬ್ಬರೂ "ನನಗಿದು ಸರಿ" ಎಂದು ಭಿನ್ನ-ಭಿನ್ನ ರೀತಿಯಲ್ಲಿ ಪ್ರಯೋಗಿಸ

ತೊಡಗಿದರೆ, ಭಾಷಾಭ್ಯಾಸಿಗಳಿಗೆ ಏನು ಗತಿ? ಅವರು ಯಾವುದನ್ನು ಸರಿಯೆಂದು ತಿಳಿಯಬೇಕು? ಕಮಲಳು; ಕಮಲಳನ್ನು-ಎಂಬಲ್ಲಿ ಳುಕಾರವನ್ನು ಸೇರಿಸಿ ಪ್ರಯೋಗಿಸುವುದೂ ಸರಿ; ಕಮಲನು, ಕಮಲನನ್ನು ಎಂದು ಪುಲ್ಲಿಂಗದಂತೆ ಪ್ರಯೋಗಿಸುವುದೂ ಸರಿ ಎನ್ನೋಣವೆ? ಹಾಗಿದ್ದರೆ ಅಕ್ಕಳು, ಅಮ್ಮಳು-ಎಂಬೀ ರೀತಿ ಪ್ರಯೋಗಿಸತೊಡಗೋಣವೆ? ಮತ್ತು ಹೀಗೆಲ್ಲ ಮಾಡಿದ ಪ್ರಯೋಗಗಳನ್ನೂ ಸರಿಯೆನ್ನಲೆ? ಈ ವಿಚಾರವನ್ನು ಕನ್ನಡದ ವೈಯಾಕರಣರು ಹಾಗೂ ಭಾಷಾವಿದರು ಪರಿಶೀಲಿಸಿ-ಚರ್ಚಿಸುವುದು ಆವಶ್ಯಕ.

ಅನುಬಂಧ ೨

ವಿಶಿಷ್ಟ ಶಬ್ದಸಂದರ್ಭ (ಸಂಖ್ಯೆ–ಪುಟಗಳದು)

ಅನುಬಂಧ ೩

ಉದ್ಧರಣಗಳ ಆದಿ (ಸಂಸ್ಕೃತ)

ಕನ್ನಡ

ಸಂದರ್ಭ ಸಾಹಿತ್ಯ

ಕನ್ನಡ

ಈಶ್ವರ ಕವಿ	ಕವಿ ಜಿಹ್ವಾಬಂಧನ (ಮದ್ರಾಸ್ ಪ್ರತಿ)
ಕಡವ ಶಂಭುಶರ್ಮ	ಸೌಂದರನಂದ (ಕಾವ್ಯ)
"ಕನೀಯಂ"	೧. ಅನನ್ಯದೇಶೀಕೋಶ (ಪ್ರ. ಕ ಸಂ. ೪೬—೨, ೩)
	೨. ಗೀತಾಸ್ಕಂಧ.
ಕುಮಾರವ್ಯಾಸ	ಕನ್ನಡ ಭಾರತ.
ಕುಲಕರಣಿ ಪ್ರ. ಗೋ.	ಕನ್ನಡ ಭಾಷೆಯ ಚರಿತ್ರೆ.
ಕೇಶವ ಭಟ್ಟ, ಟಿ.	೧. ಬಸವ ವಚನ ವೃತ್ತ ಶತಕ
	೨. ಹಾಡಿನ ಚೂಡಾಮಣಿ
ಕೇಶಿರಾಜ	ಶಬ್ದಮಣಿ ದರ್ಪಣ
ಡಾ॥ ಎಂ. ಚಿದಾನಂದ ಮೂರ್ತಿ	೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
	೨. ಸಂಶೋಧನೆ
ಡಾ॥ ಡಿ. ಎಸ್. ಕರ್ಕಿ	ಛಂದೋವಿಕಾಸ (೧೯೬೨)
ಡಾ॥ ಮಾಸ್ತಿ	ನಮ್ಮ ನುಡಿ (೧೯೬೦)
ಡಾ॥ ರಂ. ಶ್ರೀ. ಮುಗಳಿ	೧. ಕನ್ನಡ ಸಾಹಿತ್ಯ ಚರಿತ್ರೆ (೧೯೫೩)
	೨. ಕನ್ನಡ ಸಾಹಿತ್ಯದ ಇತಿಹಾಸ (೧೯೬೩)
ಡಾ॥ ವಿ. ಕೆ. ಗೋಕಾಕ	ನವ್ಯತೆ ಹಾಗೂ ಕಾವ್ಯ ಜೀವನ (೧೯೫೫)
ದೇವಪ್ಪ ಕವಿ	ರಾಮ ವಿಜಯ ಕಾವ್ಯ (ಸಂ: ಟಿ. ಕೇಶವ ಭಟ್ಟ)
ನರಸಿಂಹಾಚಾರ್ಯ. ಆರ್.	೧. ಕರ್ಣಾಟಕ ಕವಿಚರಿತೆ ಭಾಗ–I, II, III.
	೨. ನೀತಿ ಮಂಜರಿ
	೩. ಶಾಸನ ಪದ್ಯ ಮಂಜರಿ
ನಾಗವರ್ಮ I	ಛಂದೋಂಬುಧಿ (ಕಿಟ್ಟೆಲ್ ಮುದ್ರಣ)
ನಾಗವರ್ಮ II	೧. ಕಾವ್ಯಾವಲೋಕನ
	೨. ಭಾಷಾಭೂಷಣ

ನೇಮಿಚಂದ್ರ	೧. ನೇಮಿನಾಥ ಪುರಾಣ
	೨ ಲೀಲಾವತೀ ಪ್ರಬಂಧ
ಪಂ.॥ ಜೆ. ರಘುಪತ್ಯಾಚಾರ್ಯ	ಶ್ರೀ ನರಸಿಂಹರಾಜ ಕರ್ಣಾಟಕ ಛಂದೋ ರಾಜಂ (೧೯೨೬)
ಪಂಪ	ವಿಕ್ರಮಾರ್ಜುನ ವಿಜಯ
ಪ್ರೊ ಎಂ ಮರಿಯಪ್ಪ ಭಟ್ಟ	ಕನ್ನಡ ಸಂಸ್ಕೃತಿ (೧೯೬೮)
ಬಿ. ಎಂ. ಶ್ರೀ	೧. ಅಶ್ವತ್ಥಾಮನ್
	೨. ಕನ್ನಡ ಬಾವುಟ
ಭಟ್ಟಾಕಲಂಕ	ಶಬ್ದಾನುಶಾಸನ
ಮಂಗರಾಜ II	ಅಭಿನವಾಭಿಧಾನಂ
ಮಾಬೆನ್ ಟಿ. ಜಿ.	ಕನ್ನಡ ವ್ಯಾಕರಣ ಬೋಧಿನಿ (೧೮೯೬)
ಮುನಿಷಿ ಶ್ರೀನಿವಾಸಯ್ಯ	ಪದ್ಯಕಾವ್ಯ ವ್ಯಾಕರಣ (೧೮೩೭)
ಮುಳಿಯ ತಿಮ್ಮಪ್ಪಯ್ಯ	ನಾಡೋಜ ಪಂಪ (೧೯೩೮)
ರನ್ನ	ಗದಾಯುದ್ಧ
ರಾಘವಾಂಕ	ಸೋಮನಾಥ ಚಾರಿತ್ರ
ವೆಂಕಟರಾವ್ ಎಚ್. ಪಿ.	ಋಗ್ವೇದ ಸಂಹಿತಾ (ಸಾಯಣಭಾಷ್ಯ ಸಮೇತ) ಶ್ರೀ ಜಯಚಾಮರಾಜೇಂದ್ರ ವೇದ ರತ್ನಮಾಲಾ
ವೇದವ್ಯಾಸ	ಭಗವದ್ಗೀತೆ
ಶಂ. ಬಾ. ಜೋಶಿ	೧. ಕಣ್ಮರೆಯಾದ ಕನ್ನಡ
	೨. ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ, ದ್ವಿತೀಯ ಭಾಗ
ಶ್ರೀನಿವಾಸ ರಾಘವಾಚಾರ್ಯ	ಛಂದೋಮಾಲಿಕೆ
ಶ್ರೀ ವಿಜಯ	ಕವಿರಾಜಮಾರ್ಗ
ಷಡಕ್ಷರದೇವ	ರಾಜಶೇಖರ ವಿಳಾಸಂ, ೧೯೬೨
ಸಿದ್ಧನಂಜೇಶ	ರಾಘವಾಂಕ ಚಾರಿತ್ರ

ಸುಂದರೇಶನ್, ಚ. ತಲೆಕಟ್ಟು (೧೯೬೩)
ಸೇಡಿಯಾಪು ಕೃಷ್ಣಭಟ್ಟ ಕನ್ನಡ ವ್ಯಾಕರಣದ ಕೆಲವು ಸಮಸ್ಯೆಗಳು (ಪ್ರಥಮ ಭಾಗ) ಕನ್ನಡ ವರ್ಣಗಳು, (೧೯೫೫) ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ
ಸೋಮರಾಜ ಉದ್ಭಟ ಕಾವ್ಯ
ಹಂ ಪ ನಾ ದ್ರಾವಿಡ ಭಾಷಾವಿಜ್ಞಾನ (೧೯೬೬)
ಹರಿಹರ ಗಿರಿಜಾಕಲ್ಯಾಣ ಮಹಾಪ್ರಬಂಧಂ (೧೮೮೬)
ಹಲವು ಲೇಖಕರು ಕನ್ನಡ ಕೈಪಿಡಿ (೧೯೫೫)
ಹಲವು ಲೇಖಕರು ತೆಂಕನಾಡು (೧೯೪೭)
ಹಲಸಂಗಿ ಗೆಳೆಯರು ಗರತಿಯ ಹಾಡು (೧೯೩೭)

ಸಂಸ್ಕೃತ

ಕವಿ ಕಾಳಿದಾಸ ಅಭಿಜ್ಞಾನ ಶಾಕುಂತಲಂ
ಕಾಳಿದಾಸ ಶ್ರುತಬೋಧ
ಕೇದಾರಭಟ್ಟ ವೃತ್ತ ರತ್ನಾಕರ
ಜಯಕೀರ್ತಿ ಛಂದೋನುಶಾಸನ
ಪಂಡಿತ ರಘುನಂದನ ಶರ್ಮಾ ವೈದಿಕ ಸಂಪತ್ತಿ (ಹಿಂದೀ)
ಪಿಂಗಲಾಚಾರ್ಯ ೧. ಛಂದಃಶ್ಯಾಸ್ತ್ರಂ (ಹಲಾಯುಧ ಪ್ರಣೀತ ವೃತ್ತಿಸಮೇತಂ)
೨. ಪ್ರಾಕೃತ ಪೈಂಗಲ
ಶಾಂರ್ಙ್ಗದೇವ ಸಂಗೀತ ರತ್ನಾಕರ (Adyar Ed. 1944)
ಶ್ರೀ ಮದ್ವಾಲ್ಮೀಕಿ ರಾಮಾಯಣ
ಹೇಮಚಂದ್ರ ಛಂದೋನುಶಾಸನಂ

ಕನ್ನಡ ಪತ್ರಿಕೆಗಳು

ಕನ್ನಡ ನುಡಿ–ಕ. ಸಾ. ಪರಿಷತ್ತು, ಆಗಸ್ಟ್ ೧೯೬೦.
ಪ್ರಬುದ್ಧ ಕರ್ಣಾಟಕ–ಸಂ. ೨೬-೨, ೪೫–೨, ೪೬–೨, ೩, ೪೭–೧.
ರಾಷ್ಟ್ರಬಂಧು–ಮಂಗಳೂರು, ಯುಗಾದಿ ಕಾಣಿಕೆ, ೧೯೨೯
ರಾಷ್ಟ್ರಮತ–ಮಂಗಳೂರು, ೪–೧೧–೧೯೬೨ನೆಯ ಸಂಚಿಕೆ
ಶರಣ ಸಾಹಿತ್ಯ (ಮಾಸ ಪತ್ರಿಕೆ)–ರಜತ ಸಂಚಿಕೆ, ೧೯೬೩.

ENGLISH

Arthur Melvelle Clark–Studies in Literary Modes.
Caldwell–Comparative Grammar of Dravidian Languages, 1956.
Charles Philip Brown, M.R.A.S.–Sanskrit Prosody.
Epigraphia Carnatica Vol. VIII
H. K. Bhattacharya–The Language and Scripts of Ancient India (1959)
Indian Antiquary Vol. X, 1881
R. Narasimhacharya–History of Kannada Language.
Sir Arthur Quiller Couth–On the Art of Writing.
T. S. Omond–A Study of Metre (1920)

ಲೇಖನಗಳ ಪೂರ್ವಪ್ರಕಟನ ವಿವರ

ಅಕ್ಷರ ಸಂಜ್ಞಾಕಾರ—'ಅಧ್ಯಯನ' ಸೆಂಟ್ರಲ್ ಕಾಲೇಜು, ಬೆಂಗಳೂರು ೬೮.
ಪ್ರಥಮಾವಿಭಕ್ತಿ—'ದೇವಗಂಗೆ' ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿ ಸಂಭಾವನಾ ಗ್ರಂಥ ೬೮.
ಚತುರ್ಥೀ ವಿಭಕ್ತಿ—'ಸಾಹಿತ್ಯ ನಂದನ' ಉಪಾಧ್ಯಾಯ ಶಿಕ್ಷಣ ಮಹಾ ಪಾಠಶಾಲೆ, ಮೈಸೂರು–೧೯೬೩.
ಭಾಷಾಶುದ್ಧತೆಯ ರಹಸ್ಯ—ಕ. ಸಾ. ಪರಿಷತ್ಪತ್ರಿಕೆ, ಸಂ. ೫೧–೧, ೨. ೧೯೬೬.
ಛಂದಸ್ಸು ಮತ್ತು ಗುರುಲಘುಗಳ ರಹಸ್ಯ— ಪ್ರ. ಕ. ಸಂ. ೪೪–೨, ೩, ೧೯೬೨.
ಪದ್ಯರಚನೆಯ ರಹಸ್ಯ—ಕ. ಸಾ. ಪ. ಸಂ. ೫೦–೧, ೨, ೧೯೬೫.
ಒನಕೆವಾಡು—'ದೀವಿಗೆ' ಗೋವಿಂದಪೈ ಸ್ಮಾರಕ ಗ್ರಂಥ, ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ, ೧೯೬೪.

ಅನುಬಂಧ ೫

ವಿದ್ವಜ್ಜನರ ಅಭಿಪ್ರಾಯಗಳು

ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ.
ಸಂಸ್ಕೃತದ ವಿಭಾಗ ಮುಖ್ಯರು ಮತ್ತು ಪ್ರಾಧ್ಯಾಪಕರು.
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಧಾರವಾಡ
೪—೮—೧೯೬೯.

ಅಭಿಪ್ರಾಯ

ಶ್ರೀ ಕೇಶವ ಭಟ್ಟರ 'ಸಂಶೋಧನ ರತ್ನಮಾಲಿಕೆ'ಯನ್ನು ಅವಸರದಲ್ಲಿ ಓದಿದರೂ ನನಗಾದ ಆನಂದವನ್ನು ಸೂಚಿಸಲು ಈ ಎರಡು ಮಾತುಗಳನ್ನು ಬರೆಯುತ್ತಿದ್ದೇನೆ:—ಕನ್ನಡದ ಬಗೆಗೆ ಅನ್ಯಾಯವಾಯಿತೆಂದು ಚಳುವಳಿ ಮಾಡುವವರಿದ್ದಾರೆ; ಅದರ ಮಹಿಮೆಯನ್ನು ಪ್ರಚಾರ ಮಾಡುವವರಿದ್ದಾರೆ; ಆದರೆ ಅದರ ಒಂದೊಂದೂ ಪದದ ಶುದ್ಧಿಯ ಅಥವಾ ರೂಪಸಿದ್ಧಿಯ ಕುರಿತು ವಿಚಾರ ಮಾಡುವ ಅಭ್ಯಾಸಶೀಲರೆಷ್ಟು ?

ಉನ್ನತ ವ್ಯಾಸಂಗಕ್ಕಾಗಿ ಕನ್ನಡವನ್ನಾಯ್ದುಕೊಳ್ಳುವವರು ಕೂಡ ಪ್ರಾಯಿಕವಾಗಿ ಸ್ವೀಕೃತಪ್ರಾಯವಾದ ಅಭಿಪ್ರಾಯಗಳನ್ನು ಗೃಹೀತ ಹಿಡಿಯುವುದು ವಾಡಿಕೆಯಾಗಿ ಹೋಗಿದೆ. ಅವುಗಳನ್ನು ವಸ್ತುನಿಷ್ಠವೂ ತರ್ಕಬದ್ಧವೂ ಆದ ಪುನರ್ವಿಮರ್ಶೆಗೆ ಗುರಿ ಮಾಡುವ ಪ್ರವೃತ್ತಿ ಕಡಮೆಯಾಗಿದೆಯೋ ಎನಿಸುತ್ತದೆ. ಆಧುನಿಕ ವಿಚಾರಪರಂಪರೆಗಳ ಮಹಾಪ್ರವಾಹಕ್ಕೆ ಎದುರಾಗಿ ಈಸಬಲ್ಲ ವಿದ್ವಾಂಸರು ಕೂಡ ಎಷ್ಟು ಜನ? ಅದಕ್ಕೆ ಅವಶ್ಯವಾದ ವ್ಯಾಕರಣ, ಛಂದಸ್ಸು, ಅಲಂಕಾರಾದಿ ಪೂರ್ವ ಶಾಸ್ತ್ರಗಳ ಸಂಪೂರ್ಣ ಪಾಂಡಿತ್ಯ ಮತ್ತು ಅಬಾಧಿತವಾದ ಅಭ್ಯಾಸ-ಇವುಗಳಿಗೆ ಜನತೆಯೀಯುತ್ತಿರುವ ಪ್ರಾಶಸ್ತ್ಯವೆಷ್ಟು ? ಮನ್ನಣೆಯೆಷ್ಟು ? ನಮ್ಮ ಇಂದಿನ ವ್ಯಾಸಂಗ ಕ್ರಮಗಳು ನಮ್ಮ ನಾಡಿನ ಪ್ರಾಚೀನ ರೀತಿಯ ಪಾಂಡಿತ್ಯಕ್ಕೆ ಯೋಗ್ಯ ಸ್ಥಾನವನ್ನಿತ್ತಿವೆಯೆ ?

ಇತ್ಯಾದಿ ಪ್ರಶ್ನಪರಂಪರೆಗಳು ಪ್ರಶ್ನಾರ್ಥಕವಾಗಿಯೇ ಇನ್ನೂ ಉಳಿಯುವಂತಾಗಿರುವುದು ಕರ್ನಾಟಕದ ದುರ್ದೈವ.

ಇಂದೂ ಹಿಂದಿನ ಮಹಾಕವಿಗಳನ್ನು ಮೀರಿಸುವಂತಹ "ಸತ್ಯಾಲೋಕನ"ವೆಂಬ ಚಂಪೂ ಕಾವ್ಯವನ್ನು ಹಳಗನ್ನಡದಲ್ಲಿ ಬರೆದು ತೋರಿಸುವ ಶಕ್ತಿಯನ್ನುಳ್ಳ ಮಾನ್ಯ ಲೇಖಕರು ಸರ್ವ ಕನ್ನಡ ಭಾಷಾಭ್ಯಾಸಿಗಳನ್ನೂ ಎದುರಿಸುವ ಮೂಲಭೂತ ವಿಚಾರಗಳನ್ನೇ ಪ್ರಕೃತ ಗ್ರಂಥದಲ್ಲಿ ನಿಶಿತವೂ ಖಚಿತವೂ ಶಾಸ್ತ್ರೀಯವೂ ಆದ ವಿವೇಚನೆಗೆ ಗುರಿ ಮಾಡಿದ್ದಾರೆ. 'ಅಕ್ಷರ'–'ವರ್ಣ' ಈ ಎರಡರ ಇಂಗಿತದಲ್ಲಿ ವ್ಯತ್ಯಾಸವೇನು? ಸಂಸ್ಕೃತ ಹಾಗು ಹಳಗನ್ನಡ ವ್ಯಾಕರಣಕಾರರು ಈ ಬಗೆಗೆ ಹೇಳುವ ತೀರ್ಮಾನವೇನು? ಪ್ರಾಥಮಿಕ ಶಾಲೆಗಳಲ್ಲಿ ಕೂಡ ಧಾರಾಳವಾಗಿ ಬಳಸಲಾಗುತ್ತಿರುವ 'ಕಾಗುಣಿತ', 'ಪಟ್ರಸುಳಿ', 'ಅಕಾರವತ್ತು' ಮುಂತಾದವುಗಳ ಶಾಸ್ತ್ರೀಯ ವಿವರಣೆಯೇನು? ಇವು ಸಾಧು ರೂಪಗಳೋ ಇಲ್ಲವೆ ಅಪಭ್ರಂಶಗಳೋ? ಕನ್ನಡದಲ್ಲಿ ಪ್ರಥಮಾವಿಭಕ್ತಿಪ್ರತ್ಯಯವಿದೆಯೆ? ಇರುವುದಾದರೆ ಅದಾವುದು? ಹಾಗೆಯೇ ಪಂಚಮೀ ವಿಭಕ್ತಿಯ ಪ್ರತ್ಯಯದ ಸ್ವರೂಪ ಮತ್ತು ಇತಿಹಾಸವೇನು? 'ನೋಡಲೆತ್ನಿಸು' 'ಕುವೆಂಪುರವರು', ಇವು ಭಾಷಾದೋಷಗಳೇಕೆ? "'ನಮ್ಮ ಅಕ್ಕನು ಕಮಲನು', 'ನಮ್ಮ ಅಕ್ಕ ಕಮಲ', 'ನಮ್ಮ ಅಕ್ಕಳು ಕಮಲಳು' " ಇವುಗಳಲ್ಲಿ ಸಾಧುತ್ವ ನಿರ್ಣಯ ಹೇಗೆ? ಪ್ರಯೋಗಗಳ ಸಾಧುತ್ವದ ವಿಚಾರದಲ್ಲಿ 'ರೂಢಿ' ಮತ್ತು 'ಯೋಗ'ಗಳ ಮಹತ್ವವೆಷ್ಟು? 'ಲಲಿತಂಗಳ್' ಎನ್ನುವಾಗ 'ಗಳ್' ಎಂಬುದು ಏಕೆ 'ಗುರು'ವಾಗುತ್ತದೆ? 'ಅರಸುಗಳಿಗಿದು ವೀರ ದ್ವಿಜರಿಗೆ' ಎಂಬಲ್ಲಿ ರೇಫಕ್ಕೆ ಲಘುತ್ವಸಿದ್ಧಿ ಹೇಗೆ? ಗುರುವನ್ನೂ ಲಘುವನ್ನೂ ನಿರ್ದೇಶಿಸಲು —∩ ಎಂಬ ಚಿಹ್ನೆಗಳಿಗಿಂತ ∩ | ಎಂಬ ಚಿಹ್ನೆಗಳು ಹೇಗೆ ಹೆಚ್ಚು ಶಾಸ್ತ್ರೀಯ? ಕನ್ನಡ ಜಾನಪದ ವೃತ್ತಗಳ ರಹಸ್ಯವನ್ನು ಯಾವ ಲೆಕ್ಕದಿಂದ ವಿವರಿಸಲು ಸಾಧ್ಯ? ಪದ್ಯ ಭಾಷಾಂತರದ ಜೀವನಾಡಿ ಯಾವುದು? 'ತ್ರಿಪದಿ'ಯನ್ನೇಕೆ 'ತ್ರಿವಿಧಿ'ಯೆಂದರು? ಸಾಂಗತ್ಯದ ಸೊಬಗನ್ನು ಯಾವ ವೈಶಿಷ್ಟ್ಯದಿಂದ ಗುರುತಿಸಬಹುದು? ಹವ್ಯಕರ ಕನ್ನಡದ ಸ್ವರೂಪವೆಂತಹದು? ಸಂಶೋಧಕ ಕರ್ಮದ ಲಕ್ಷ್ಯವೇನು? ಇವೇ ಮುಂತಾದ ನೂರಾರು ಆಕರ್ಷಣೀಯ ವಿಷಯಗಳ ಮೇಲೆ ಇಲ್ಲಿ ಕೇಶವಭಟ್ಟರು ತಮ್ಮ ಪಾಂಡಿತ್ಯದೃಷ್ಟಿಯನ್ನು ಆಕ್ಷಿಪ್ತವಾಗಿ

ಹರಿಯಿಸಿ ನಿಷ್ಕೃಷ್ಟ ನಿರ್ಣಯಗಳಿಗೆ ಬಂದಿದ್ದಾರೆ. 'ಕಿಂ ಪಾಂಡಿತ್ಯಂ ?' ಎಂಬ ಯಕ್ಷ ಪ್ರಶ್ನೆಗೆ 'ಪರಿಚ್ಛೇದಃ' ಎಂದು ಧರ್ಮರಾಯನು ಉತ್ತರವಿತ್ತನಂತೆ. ಸಂಶಯಕ್ಕೆಡೆಯಿಲ್ಲದಂತೆ ಹಿಂದಿನ ಮತ್ತು ಇಂದಿನ ಶಾಸ್ತ್ರೀಯ ವಿಚಾರಸಾರವನ್ನೆಲ್ಲ ಸ್ವಮನೀಷೆಯಿಂದ ಮಥನ ಮಾಡಿ, ಐತಿಹಾಸಿಕ ಹಾಗು ಸಂಶೋಧನ ಮಾರ್ಗಕ್ಕೆ ಎಲ್ಲಿಯೂ ಅಪೋಹ ಬಾರದಂತೆ ಪಂಡಿತೋಚಿತವಾದ ವಿನಯದಿಂದಲೇ ಇಲ್ಲಿ ವಿಚಾರಗಳನ್ನು ಮಂಡಿಸಿರುವುದು ಸ್ತುತ್ಯರ್ಹವಷ್ಟೇ ಅಲ್ಲ, ಮಾದರಿಯೂ ಆಗಿದೆಯೆನ್ನಬಹುದು. ಚರ್ಚಾಸ್ಪನ್ನವಾದ ಎಷ್ಟೋ ವಿಷಯಗಳಿದ್ದು ವಿದ್ವಾಂಸರು ಅವನ್ನು ತಟ್ಟನೆ ಒಪ್ಪಿಯೇ ತೀರುವರೆಂದು ಹೇಳಬರುವಂತಿಲ್ಲವಾದರೂ ನಮ್ಮ ಭಾಷಾಭ್ಯಾಸ ಆಳವೂ ಖಚಿತವೂ ಆಗಲು ಈ ಬರೆಹ ದಾರಿದೀಪವಾಗಿದೆಯೆಂದು ಹೇಳಲಡ್ಡಿಯಿಲ್ಲ.

ಇಂತಹ ಉತ್ಕೃಷ್ಟ ಗ್ರಂಥವನ್ನು ಪ್ರಕಾಶನಗೊಳಿಸಲು ಮತ್ತಾರೂ ಮುಂದೆ ಬಾರದೆ ತಾನೇ ಅದರ ಹೊರೆಯನ್ನು ಹೊತ್ತಿರುವುದು ಅಭಿನಂದನೀಯ ; ಆ ಹೊರೆಯನ್ನು ಕನ್ನಡಪ್ರೇಮಿಗಳು ಇಳಿಸಲೆಂದು ಹಾರೈಸುತ್ತೇನೆ. ಇಂತಹ ಗ್ರಂಥಗಳಿಂದ ನಮ್ಮ ಶಾಸ್ತ್ರ ಸಾಹಿತ್ಯದ ಶ್ರೀಮಂತಿಕೆ ನಿಜವಾಗಿಯೂ ಹೆಚ್ಚುತ್ತದೆಂದು ನನ್ನ ಭಾವನೆ.

* * *

ಪ್ರೊ|| ಸ. ಸ. ಮಾಳವಾಡ, ಎಂ.ಎ.

ಧಾರವಾಡ

೮ - ೮ —೧೯೬೯

ಹಾರೈಕೆ

ಶ್ರೀ ಟಿ. ಕೇಶವ ಭಟ್ಟರ "ಸಂಶೋಧನ ರತ್ನಮಾಲಿಕೆ"ಯನ್ನು ಓದಿ ನಾನು ಸಂತೋಷಪಟ್ಟಿದ್ದೇನೆ. ವ್ಯಾಕರಣ, ಛಂದಸ್ಸು ಹಾಗೂ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ವಿಷಯಗಳ ಬಗೆಗೆ ಬಹಳ ಉತ್ತಮವಾದ ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಶಾಸ್ತ್ರ ಸಾಹಿತ್ಯವನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿದ ಹಾಗೂ ಉತ್ತಮವಾದ ಬರೆಯುವ ಶಕ್ತಿಯುಳ್ಳ ಕೆಲವೇ ಜನರಲ್ಲಿ ಕೇಶವ ಭಟ್ಟರೂ ಒಬ್ಬರಾಗಿದ್ದಾರೆ. ಅವರು 'ವಿದ್ವಾನ್'

ಪರಂಪರೆಗೆ ಸೇರಿದವರಾಗಿರುವರು. ಇತ್ತೀಚೆಗೆ ವ್ಯಾಕರಣ, ಛಂದಸ್ಸು, ಭಾಷಾ ಶಾಸ್ತ್ರಗಳಂಥ ಗಂಭೀರ ವಿಷಯುಗಳನ್ನು ಕೇವಲ ಪರೀಕ್ಷೆಗಳ ಮಟ್ಟಿಗೆ ಮಾತ್ರ ಓದಿ ಬಿಡುವ ಜನರೇ ಹೆಚ್ಚಾಗಿರುವರು. ಈ ಬಗೆಯ ನೀರಸ ಮತ್ತು ಕ್ಲಿಷ್ಟ ವಿಷಯುಗಳ ವ್ಯಾಸಂಗ ಕೈಕೊಂಡು ಅದರಲ್ಲಿ ನಿರತರಾಗಿರುವವರು ತೀರ ವಿರಳ. ಶ್ರೀ ಕೇಶವ ಭಟ್ಟರು ಅಂತಹ ವಿರಳರ ಗುಂಪಿಗೆ ಸೇರಿದ್ದಾರೆ. ಇಲ್ಲಿಯ ಲೇಖನಗಳು ಅವರ ಅಧ್ಯಯನದ ಆಸ್ಥೆ ವಿಸ್ತಾರ ಎತ್ತಿ ತೋರಿಸುವಂತಿವೆ. ಕೇಶವಭಟ್ಟರ ಲೆಕ್ಕಣಿಕೆಗೆ ಶಕ್ತಿ ಹಾಗೂ ತೇಜಸ್ಸುಗಳು ಒದಗಿ ಬಂದು ಅವರಿಂದ ಇಂತಹ ಕೃತಿರಚನೆ ಇನ್ನೂ ಹೆಚ್ಚಾಗಿ ನಡೆಯಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

* * *

ಶ್ರೀ ಎಂ ವಿ. ಸೀತಾರಾಮಯ್ಯ, ಎಂ ಎ.
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಯು.ಜಿ.ಸಿ. ಸಂಶೋಧನ ವಿದ್ವಾಂಸರು

ಬೆಂಗಳೂರು
ತಾ|| ೧೩—೮—೧೯೬೯

ಅವಲೋಕನ

ನನ್ನ ಪರಮಮಿತ್ರರೂ ಕವಿಗಳೂ ವಿದ್ವಾಂಸರೂ ಆದ ಶ್ರೀಮಾನ್ ಟಿ. ಕೇಶವ ಭಟ್ಟ, ಎಂ ಎ. ಅವರು ಬರೆದಿರುವ 'ಸಂಶೋಧನ ರತ್ನಮಾಲಿಕೆ' ಎಂಬ ವಿದ್ವತ್ತಪೂರ್ಣವೂ ಸಂಶೋಧನಾತ್ಮಕವೂ ಆದ ಲೇಖನಗಳ ಸಂಕಲನವನ್ನು ಆಮೂಲಾಗ್ರವಾಗಿ ಓದಿದೆನು. ಈ ಮುನ್ನ ಇವರು 'ಸತ್ವಾಲೋಕನಂ' ಎಂಬ ಚಂಪೂಕಾವ್ಯದ ಕವಿ ಎಂದು, ನಗರದ ಪ್ರಮುಖ ಕಾಲೇಜೊಂದರ ಉತ್ತಮ ವರ್ಗದ ಅಧ್ಯಾಪಕರು ಎಂದು, ಬಸವಣ್ಣನವರ ವಚನಗಳ ಪಾಕವನ್ನು ಅಕ್ಷರವೃತ್ತಗಳ ಅಚ್ಚಿಗೆ ಎರಕ ಹೊಯ್ಯಬಲ್ಲ ಪದ್ಯರಚನಾ ನಿಪುಣ ಎಂದು ನನ್ನ ಮೆಚ್ಚುಗೆ ಗೌರವಗಳಿಗೆ ಪಾತ್ರರಾಗಿದ್ದರು. ('ಪದ್ಯರಚನೆಯ ರಹಸ್ಯ'ವನ್ನು ಕುರಿತು ನಿದರ್ಶನ ಸಮೇತ ಇವರು ಬರೆದಿರುವ ಸ್ವಾರಸ್ಯವಾದ ಲೇಖನ ಈ ಗ್ರಂಥದಲ್ಲಿ ಸೇರ್ಪಡೆಯಾಗಿದೆ). ಈ ಗ್ರಂಥವನ್ನು ಓದಿದ ಮೇಲೆ ಇವರು

ಮೇಲ್ಮಟ್ಟದ ಸಂಶೋಧಕರೂ ಆಗಿದ್ದಾರೆ ಎಂಬುದನ್ನರಿತು ನನಗೆ ತುಂಬ ಸಂತೋಷವಾಗಿದೆ.

'ಸಂಶೋಧನ ರತ್ನಮಾಲಿಕೆ' ಎಂಬ ಗ್ರಂಥನಾಮ ಕುತೂಹಲಕಾರಿಯಾಗಿದೆ; ಅನ್ವರ್ಥವಾಗಿದೆ. ತಮ್ಮ ಸಂಶೋಧನ ಲೇಖನಗಳೆಲ್ಲವೂ ರತ್ನಪ್ರಾಯ ಎಂಬ ಅಹಮಹಮಿಕೆ ಶ್ರೀ ಕೇಶವಭಟ್ಟರಿಗೆ ಇಲ್ಲವೆಂದೇ ವಿದ್ಯಾವಿನಯ ಸಂಪನ್ನರಾದ ಅವರನ್ನು ಬಲ್ಲವನಾಗಿ ಹೇಳಬಲ್ಲೆ. ಹಾಗಿದ್ದ ಮೇಲೆ, ಗ್ರಂಥಾಭಿಧಾನದ ಅರ್ಥವೇನು? (ಈ ಅರ್ಥಾನ್ವೇಷಣೆಯೂ ಒಂದು ಚಿಕ್ಕ ಸಂಶೋಧನೆಯೆ!) ಯಾವ ಕ್ಷೇತ್ರದಲ್ಲಿಯೇ ಆಗಲಿ ಸಂಶೋಧನೆಯ ಪರಮ ಧ್ಯೇಯ ಸತ್ಯಾನ್ವೇಷಣೆ. ರತ್ನಾನ್ವೇಷಕರು ಗಣಿಯನ್ನು ಅಗೆದಾಗ ತೋರವಾದ ರತ್ನಗಳು ದೊರೆಯುವಂತೆ ಚಿಕ್ಕವೂ ದೊರೆಯುತ್ತವೆ; ರತ್ನಪರೀಕ್ಷಕನ ದೃಷ್ಟಿಯಲ್ಲಿ ಎರಡೂ ರತ್ನಗಳೇ. ರತ್ನ ರತ್ನವೆನಿಸುವುದು ಅದರ ರತ್ನಮೌಲ್ಯದಿಂದಲೇ ಹೊರತು ಗಾತ್ರಮೌಲ್ಯದಿಂದಲ್ಲ ಹಾಗೆಯೇ, ಸಂಶೋಧಕನು ತಾನು ಆಯ್ದುಕೊಂಡ ಜ್ಞಾನವಿಭಾಗಗಳಲ್ಲಿ ತನ್ನ ವಿದ್ವದುಪಕರಣವನ್ನು ಪ್ರಯೋಗಿಸಿ, ಸಣ್ಣವೋ ದೊಡ್ಡವೋ ಆದ 'ವಿಚಾರ' ರತ್ನಗಳನ್ನೋ 'ಸತ್ಯ' ವಜ್ರಗಳನ್ನೋ 'ಸಿದ್ಧಾಂತ' ಮಣಿಗಳನ್ನೋ ಹೊರ ತೆಗೆಯುತ್ತಾನೆ. ಇದು ದ್ವಿಮುಖವಾದ ಕಾರ್ಯ. ಒಂದು, ಅಗೆಯುವ ಕೆಲಸ-ಪರಿಶ್ರಮೈಕ ಸಾಧ್ಯವಾದದ್ದು; ಇನ್ನೊಂದು, ರತ್ನಪರೀಕ್ಷೆಯ ಕೆಲಸ-ಅನುಭವ, ಊಹೆ, ಪ್ರತಿಭೆಗಳಿಂದ ಫಲಕಾರಿಯಾಗತಕ್ಕದ್ದು. (ಹೊರ ತೆಗೆದದ್ದು ರತ್ನವಾಗಿರಬಹುದು, ರತ್ನಭ್ರಾಂತಿಯಿಂದ ಪಡೆದ ಸಾಧಾರಣ ಹರಳಾಗಿರಬಹುದು.) ಈ ಎಲ್ಲ ಅರ್ಹತೆಗಳನ್ನೂ ಹೊಂದಿರುವ ಶ್ರೀಯುತರು ಪ್ರಕೃತ ಗ್ರಂಥದಲ್ಲಿ ತಮ್ಮ ವಿದ್ವತ್ತಿನ ಪರಿಶ್ರಮದಿಂದ ಹಲವಾರು ನೂತನ ವಿಚಾರ ರತ್ನಗಳನ್ನು-ತಮ್ಮ ಸಂಶೋಧನೆಯ ಫಲಗಳನ್ನು-ಕೋದು ಕನ್ನಡ ಶಾರದೆಯ ಕೊರಲಿಗೆ ಹಾಕಿದ್ದಾರೆ. ಇದು ತುಂಬ ಸಾರ್ಥಕವಾದ ಕೆಲಸ.

'ಸಂಶೋಧನ ರತ್ನಮಾಲಿಕೆ'ಯಲ್ಲಿ ಮುಖ್ಯವಾಗಿ ಮೂರು ಶಾಸ್ತ್ರ ಕ್ಷೇತ್ರಗಳಿಂದ (ವ್ಯಾಕರಣ, ಭಾಷಾಶಾಸ್ತ್ರ, ಛಂದಸ್ಸು) ಹೊರ ತೆಗೆದ ವಿಚಾರಗಳಿವೆ. ವಾಸ್ತವವಾಗಿ, ಅನೇಕ ಲೇಖನಗಳು ವಿಚಾರ ಮಾಲಿಕೆಗಳೇ ಆಗಿವೆ.

ಉದಾಹರಣೆಗೆ, 'ಅಕ್ಷರ ಸಂಜ್ಞಾಕಾರ' ಎಂಬ ಲೇಖನದಲ್ಲಿ 'ಅರ್ಕಾವೊತ್ತು,' 'ವಟ್ಟೈಸುಳಿ' ಇತ್ಯಾದಿಗಳ ವಿಚಾರಗಳು ಪ್ರತ್ಯೇಕ ಸಂಶೋಧನಾ ಟಿಪ್ಪಣಿಗಳಾಗಿಯೇ ನಿಲ್ಲಲು ಅರ್ಹವಾಗಿವೆ. 'ಸಾಂಗತ್ಯದ ಧಾಟಿ ಮತ್ತು ಛಂದಸ್ಸು' ಎಂಬ ಲೇಖನದಲ್ಲಿ 'ಸಾಂಗತ್ಯವನ್ನು ಎಲ್ಲ ತಾಳಗಳಲ್ಲಿಯೂ ಹಾಡಬಹುದು' ಎಂಬ ತಮ್ಮ ನಿಲವನ್ನು ಪ್ರಸ್ಥಾಪಿಸಿರುವಂತೆ, ಇತರ ಕೆಲವು ಲೇಖನಗಳಲ್ಲಿ ಒಂದೊಂದೇ ವಿಷಯವನ್ನು ('ಛಂದಸ್ಸು ಮತ್ತು ಗುರುಲಘುಗಳ ರಹಸ್ಯ') ಸೂಕ್ಷ್ಮ ಪರೀಕ್ಷೆಗೆ ಒಳಪಡಿಸಿದ್ದಾರೆ. ಹೀಗೆ, ಶ್ರೀಯುತರು ವಿವೇಚನೆಗೆ ಎತ್ತಿಕೊಂಡ ವಿಷಯದ ಹರವು ಕಿರಿದಾಗಿರಲಿ, ಹಿರಿದಾಗಿರಲಿ, ಸಂಶೋಧನೆಯ ದೃಷ್ಟಿಯಿಂದ ಬೆಲೆಯುಳ್ಳವು. ಪೂರ್ವವಿದ್ವಾಂಸರ ವಿಚಾರ ವಿಮರ್ಶೆಯನ್ನು ಮುಂದುವರಿಸುವಲ್ಲಿ 'ಪರಪ್ರತ್ಯಯನೇಯ ಬುದ್ಧಿ'ಯವರಾಗದೆ ಆತ್ಮಪ್ರತ್ಯಯವನ್ನು ಯಥೋಚಿತವಾಗಿ ಮೆರೆದಿದ್ದಾರೆ. ಇವರ ಸಂಶೋಧನ ಪ್ರಜ್ಞೆ ಸಾಧಾರಣವಾಗಿ ಪಾಂಡಿತ್ಯದ ಗಟ್ಟಿನೆಲದ ಮೇಲೆಯೆ ಸಾಗಿ (ಉದಾ: ಸಾಂಗತ್ಯವನ್ನು ವಿವಿಧ ತಾಳಗಳಿಗೆ ಅಳವಡಿಸುವ ಪ್ರಯತ್ನ) ಸ್ವಾನುಭೂತಿ ಪ್ರಮಾಣವಾಗಿ ಗರಿಕಟ್ಟಿಕೊಂಡು ಮೇಲೆ ಹಾರಿ, ಅದೊಂದು ವಿಧದ ಸಂತೋಷವನ್ನು ಕೊಡುವುದೂ ಉಂಟು. ಹಲವಾರು ವರ್ಷ ಅಧ್ಯಾಪಕರಾಗಿ ಪಡೆದಿರುವ ಇವರ ಅಮೂಲ್ಯವಾದ ಅನುಭವ ಸಂಪತ್ತು, ವಿದ್ಯಾರ್ಥಿಗಳಿಗೂ ಲೇಖಕರಿಗೂ ಪ್ರಯೋಜನವಾಗುವಂತೆ, 'ಭಾಷಾಶುದ್ಧತೆಯ ರಹಸ್ಯ' ಎಂಬ ಲೇಖನದಲ್ಲಿ ಪ್ರಕಟಗೊಂಡಿವೆ.

ಕನ್ನಡದಲ್ಲಿ ಸಾಹಿತ್ಯಸೃಷ್ಟಿಯ ಜೊತೆಗೆ ಪಾಂಡಿತ್ಯ ಸಂಶೋಧನೆಗಳ ಕೆಲಸವೂ ತಕ್ಕ ಪ್ರಮಾಣದಲ್ಲಿ ನಡೆಯಬೇಕೆಂದು ಬಯಸುವವರೆಲ್ಲ ಈ ಉತ್ತಮ ಸಂಶೋಧನ ಗ್ರಂಥವನ್ನು ಅತ್ಯಾದರದಿಂದ ಸ್ವಾಗತಿಸಿ ಗ್ರಂಥಕರ್ತರ ಶ್ರಮವನ್ನು ಸಾರ್ಥಕಗೊಳಿಸುವರೆಂದು ನಂಬಿದ್ದೇನೆ.

* * *

ಪ್ರೊ॥ ಎಸ್. ವಿ. ಪರಮೇಶ್ವರ ಭಟ್ಟ, ಎಂ.ಎ.
ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ಕೇಂದ್ರ,
ಮಂಗಳೂರು.

ಮಂಗಳೂರು
೧೪—೮—೧೯೭೯

ಸದಾಶಯ

ಶ್ರೀ ಟಿ. ಕೇಶವ ಭಟ್ಟ, ಎಂ.ಎ. ಅವರು ಬಹಳ ಕಾಲದಿಂದ ಸಂಶೋಧನ ಕಾರ್ಯದಲ್ಲಿ ನಿರತರಾಗಿರುವ ಧೀಸಂಪನ್ನರು. ಈಗ ತಾವು ಬರೆದ ಈ ಸಂಬಂಧವಾದ ಒಂಬತ್ತು ಲೇಖನಗಳನ್ನು ಒಟ್ಟುಗೂಡಿಸಿ ತಾವೇ ಪ್ರಕಟಿಸಿ ಧೈರ್ಯಸಂಪನ್ನರೂ ಆಗಿದ್ದಾರೆ. ಇದು ಮೆಚ್ಚತಕ್ಕ ಅಂಶ.

ಶ್ರೀಯುತರ ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸ ಇವುಗಳಿಗೆ ಈ ಲೇಖನಗಳು ಕನ್ನಡಿ ಹಿಡಿದಿವೆ. ಈ ಎಲ್ಲ ಲೇಖನಗಳಲ್ಲಿಯೂ ಒಂದು ಅಪೂರ್ವ ಗುಣ ಕಾಣುತ್ತದೆ. ಭಾಷೆ, ಲಿಪಿ, ವ್ಯಾಕರಣ, ಛಂದಸ್ಸು, ಕಾವ್ಯ ಈ ವಿಷಯಗಳನ್ನು ಕುರಿತು ಆಳವಾಗಿ ಅಭ್ಯಾಸ ಮಾಡಿ ದೀರ್ಘವಾಗಿ ಆಲೋಚಿಸಿ ಲೇಖಕರು ತಾವು ಆರಿಸಿಕೊಂಡ ಈ ಶಾಸ್ತ್ರಗಳಲ್ಲಿ ಕೆಲ ಕೆಲವು ಸಂಗತಿಗಳನ್ನೆತ್ತಿಕೊಂಡು ಆ ಕುರಿತು ಅಧ್ಯಯನ ಮಾಡಿ ಸಂಶೋಧನಾತ್ಮಕವಾದ ಹೊಸಹೊಸ ತೀರ್ಮಾನಗಳನ್ನು ಹೇಳಿದ್ದಾರೆ.

ತೀರ್ಮಾನಗಳ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಹಜ. 'ಇದಮಿತ್ಥಂ' ಎಂದು ಹೇಳುವುದಕ್ಕೆ ಯಾವ ಕಾಲಕ್ಕೂ ಆಗದಂತಹ ವಿಷಯಗಳು ಎಷ್ಟಿಲ್ಲ ಲೋಕದಲ್ಲಿ ? ಹಾಗೆಂದು ಅಂತಹವುಗಳನ್ನು ಕುರಿತು ಆಲೋಚಿಸಿಯೇ ಇಲ್ಲವೆ ?

ಛಂದಸ್ಸು, ಪದ್ಯರಚನೆ, ಭಾಷಾಶುದ್ಧಿ—ಇವುಗಳನ್ನು ಕುರಿತು ಕೆಲವು 'ರಹಸ್ಯ'ಗಳನ್ನು ಶ್ರೀ ಕೇಶವ ಭಟ್ಟರು ಬಯಲುಗೈದಿದ್ದಾರೆ. ಇದು ಮೆಚ್ಚತಕ್ಕದ್ದೇ. ಆದರೆ ಅದು 'ಶಿವರಹಸ್ಯ'. ಒಬ್ಬ ಕವಿಗೆ ಇನ್ನೊಬ್ಬ ಸಹೃದಯನಿಗೆ ಹೀಗೆ ಇಬ್ಬರಿಗಲ್ಲದೆ ಮೂರನೆಯವನಿಗೆ ಆ ರಹಸ್ಯ ಬಯಲಾದೀ

ತೆಂತು? ಸಿದ್ಧವಾದ ಕಾವ್ಯವೊಂದನ್ನು ಕಣ್ಣೆದುರಿಗಿರಿಸಿಕೊಂಡು ಇಲ್ಲಿ ಇದು ಗುರು ಇಲ್ಲಿ ಇದು ಲಘು ಎನ್ನಬಹುದು. ಇದು ಈ ರಾಗ, ಇದು ಈ ತಾಳ ಎನ್ನಬಹುದು. ಇಲ್ಲಿ ಪ್ರಾಸವಿದೆ, ಇಲ್ಲಿ ಯತಿಯಿದೆ, ಇಲ್ಲಿ ಮುಡಿಯಿದೆ ಎನ್ನಬಹುದು. ಹೀಗೆಯೇ ರೀತಿ, ಮಾರ್ಗ, ಪಾಕ, ಶೈಲಿ, ಅಲಂಕಾರ, ಗುಣ, ರಸ, ಧ್ವನಿ, ಔಚಿತ್ಯ ಈ ಎಲ್ಲ ವಿಷಯಗಳನ್ನೂ ಆ ಬಳಿಕ ಗುರುತಿಸಬಹುದು. ಇದು ಆಗಮಬಲಶಾಲಿಗಳ ಕೆಲಸ. ಆದರೆ ಇಂತಹ ಕಾವ್ಯ ಮೈ ತಳೆವ ಮೊದಲು ಕವಿಯ ಮನಸ್ಸಿನಲ್ಲಿ ನಡೆದ ವ್ಯಾಪಾರ ವಿಶೇಷಗಳಾವುವು ಎಂದು ಹೇಳುವುದು ಹೇಗೆ? ಆದರೆ ಬುದ್ಧಿಗಮ್ಯವಾದ ಭಾವಾತೀತವಾದ ಹೃತ್ಸಂವೇದ್ಯ ಮಾತ್ರವಾದ ಆ 'ಕವಿವ್ಯಾಪಾರ'ವನ್ನೂ ಸಂಶೋಧನೆಗೆ ಗುರಿಗೈದಿರುವ ಶ್ರೀ ಕೇಶವ ಭಟ್ಟರಿಗೆ ನಮ್ಮ ಕೃತಜ್ಞತೆಗಳು ಸಲ್ಲಬೇಕು.

ಈ ಸಂಶೋಧನ ಬರಹಗಳಲ್ಲಿ ಅಕ್ಷರ ಸಂಜ್ಞಾಕಾರ, ಒನಕೆವಾಡು ಇವು ನನಗೆ ಉಳಿವವುಗಳಿಗಿಂತ ಹೆಚ್ಚು ಮೆಚ್ಚಿಕೆಯಾದವು. ಮುಖ್ಯವಾಗಿ ಹೇಳಬೇಕಾದದ್ದು ಇಷ್ಟು: ಕನ್ನಡ ಸಂಶೋಧನ ಸಾಹಿತ್ಯ ಭಂಡಾರಕ್ಕೆ ಶ್ರೀ ಕೇಶವ ಭಟ್ಟರು ಒಂದು ಹೊಸ ಕೊಡುಗೆ ಕೊಟ್ಟಿದ್ದಾರೆ. ಈ ಕಾರಣದಿಂದಾಗಿ ಇದು ಎಲ್ಲರಿಗೂ ಅಚ್ಚು-ಮೆಚ್ಚು ಆಗುತ್ತದೆ. ಇಲ್ಲಿ ಒಂಬತ್ತು ಲೇಖನಗಳು ಇವೆ ಎಂಬ ಒಂದು ಕಾರಣದಿಂದ, ಇಲ್ಲಿ ಹೊಸ ವಿಷಯಗಳನ್ನು ಹೇಳಿದ್ದಾರೆ ಎಂಬ ಇನ್ನೊಂದು ಕಾರಣದಿಂದ (ಇದೇ ಮುಖ್ಯ ಕಾರಣ) ಈ ಸಂಶೋಧನ ರತ್ನಮಾಲಿಕೆ "ಸಂಶೋಧನ ನವರತ್ನಮಾಲಿಕೆ"ಯಾಗಿದೆ. ಶ್ರೀಯುತರು ಈ ಬಗೆಯ ಸಾಹಿತ್ಯವನ್ನು ಹೆಚ್ಚು ಹೆಚ್ಚಾಗಿ ಬರೆದು ತಮ್ಮ ಸಂಶೋಧನೆಯ ವಾಙ್ಮಯ ತಪಸ್ಸಿನಿಂದ ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಕಾವ್ಯ ಮುಂತಾದ ನಮ್ಮ ಜ್ಞಾನದ ದಿಗಂತವನ್ನು ದಿನದಿನಕ್ಕೆ ವಿಸ್ತರಿಸುತ್ತ ಹೋಗಲಿ ಎಂದು ಆಶಿಸುತ್ತೇನೆ

*   *   *

ಡಾ॥ ರಂ. ಶ್ರೀ. ಮುಗಳಿ, ಎಂ.ಎ.,ಬಿ.ಟಿ.,ಡಿ.ಲಿಟ್.
ಕನ್ನಡದ ವಿಭಾಗ ಮುಖ್ಯರು ಮತ್ತು ಪ್ರಾಧ್ಯಾಪಕರು,
ಬೆಂಗಳೂರು ವಿಶ್ವವಿದ್ಯಾಲಯ.

ಬೆಂಗಳೂರು
೧೫—೮—೧೯೬೯

ನಿರ್ದೇಶ

ಅಧ್ಯಾಪಕ ಮಿತ್ರರಾದ ಶ್ರೀ ಟಿ. ಕೇಶವ ಭಟ್ಟರು ಬರೆದಿರುವ ಕೆಲವು ಸಂಶೋಧನಾತ್ಮಕವಾದ ಲೇಖನಗಳು 'ಸಂಶೋಧನ ರತ್ನಮಾಲಿಕೆ'ಯಾಗಿ ಪ್ರಕಟವಾಗುತ್ತಿವೆ. ಇದರಲ್ಲಿ ಕನ್ನಡ ವ್ಯಾಕರಣ, ಛಂದಸ್ಸು ಇವಕ್ಕೆ ಸಂಬಂಧಿಸಿದ ಮೌಲಿಕ ವಿಚಾರಗಳಿವೆ. ಹವಿಕರ ಕನ್ನಡ, ಸಂಶೋಧನೆಯ ನೆಲೆ ಎಂಬ ಲೇಖನಗಳೂ ಅನುಬಂಧಗಳೂ ಇರುತ್ತವೆ. ಈ ಎಲ್ಲ ಬರೆವಣಿಗೆಯಲ್ಲಿ ಜಾಗೃತವಾದ ಜಿಜ್ಞಾಸೆಯಿದೆ, ನವೀನ ವಿಚಾರವಿದೆ ಮತ್ತು ವಿನಯಪೂರ್ವಕವಾದ ಪಾಂಡಿತ್ಯವಿದೆ.

ಶ್ರೀ ಕೇಶವ ಭಟ್ಟರ ಸಂಶೋಧನ ಕಾರ್ಯವು ಮುಂದುವರಿಯಲಿ ಎಂದೂ ವಿದ್ವಾಂಸರಿಂದ ಮನ್ನಣೆ ಪಡೆಯಲಿ ಎಂದೂ ಹಾರೈಸುತ್ತೇನೆ.

* * *

ಡಾ॥ ವಿ. ಕೃ. ಗೋಕಾಕ್, ಎಂ ಎ.,
ಉಪಕುಲಪತಿಗಳು,
ಬೆಂಗಳೂರು ವಿಶ್ವವಿದ್ಯಾಲಯ.

ಬೆಂಗಳೂರು
೨೧—೮—೧೯೬೯

ಸಮೀಕ್ಷೆ

ಶ್ರೀಮಾನ್ ಟಿ. ಕೇಶವ ಭಟ್ಟ, ಎಂ.ಎ. ಅವರು ತಮ್ಮ "ಸಂಶೋಧನ ರತ್ನಮಾಲಿಕೆ" ಎಂಬ ಪ್ರಬಂಧ ಸಂಕಲನವನ್ನು ಅಭಿಪ್ರಾಯಕ್ಕಾಗಿ ನನಗೆ ಕೊಟ್ಟಿದ್ದಾರೆ. ಭಾಷಾಶಾಸ್ತ್ರ ಹಾಗು ಛಂದಃಶಾಸ್ತ್ರದ ದೃಷ್ಟಿಯಿಂದ ಕನ್ನಡದ ಹಲವಾರು ಸಮಸ್ಯೆಗಳನ್ನು ಇಲ್ಲಿ ಪರೀಕ್ಷಿಸಲಾಗಿದೆ. ಈ ಎಲ್ಲ

ಪ್ರಶ್ನೆಗಳನ್ನು ವಿಶೇಷ ಪರಿಶ್ರಮವನ್ನು ವಹಿಸಿ ಪಾಂಡಿತ್ಯಪೂರ್ವಕವಾಗಿ ಶ್ರೀಮಾನ್ ಭಟ್ ಅವರು ಪರೀಕ್ಷಿಸಿರುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಅವರಿಗೆ ಎಲ್ಲ ಯಶಸ್ಸಿರಲಿ.

* * *

ಶ್ರೀ ಸಿ. ಮಹಾದೇವಪ್ಪ, ಎಂ.ಎ.
ಕನ್ನಡ ಪ್ರಾಧ್ಯಾಪಕರು

ಬೆಂಗಳೂರು
೨೬-೮-೬೯

ಅಭಿನಂದನೆ

ಮಾನ್ಯ ಮಿತ್ರರಾದ ಶ್ರೀಮಾನ್ ಟಿ. ಕೇಶವ ಭಟ್ಟ, ಎಂ.ಎ. ಅವರು ರಚಿಸಿರುವ 'ಸಂಶೋಧನ ರತ್ನಮಾಲಿಕೆ'ಯನ್ನು ನಾನು ಆಸಕ್ತಿಯಿಂದ ಓದಿದ್ದೇನೆ. 'ಅಕ್ಷರ ಸಂಜ್ಞಾಕಾರ' ಪ್ರಬಂಧದಲ್ಲಿ ಕನ್ನಡದ ಬರೆವಣಿಗೆಯ ವೈಶಿಷ್ಟ್ಯವನ್ನು ಕುರಿತ ವಿಚಾರಸರಣಿಯಿದೆ. ಅದರಲ್ಲಿ ಭಾಷಾಭ್ಯಾಸಿಗಳ ಅನೇಕ ಸಮಸ್ಯೆಗಳಿಗೆ ಉತ್ತರವನ್ನು ಸಕಾರಣವಾಗಿ ದೊರಕಿಸುವ ಪ್ರಯತ್ನ ನಡೆದಿದೆ. 'ವಟ್ಟೃಸುಳಿ' ಶಬ್ದರೂಪದ ಬಗೆಗೆ ನೀಡುವ ವಿವರಣೆಗೆ ಪರಿಪೋಷಕವಾಗುವಂತೆ ಅನುಬಂಧವೂ ಇದೆ. " 'ವಟ್ರಸುಳಿ', 'ಒಟ್ರುಸುಳಿ' ಎನ್ನುವುದಕ್ಕಿಂತ 'ವಟ್ಟೃಸುಳಿ' ಎಂದು ಉಚ್ಚಾರಣೆ ಮಾಡುವುದು ಔಚಿತ್ಯ ಪೂರ್ಣವಲ್ಲವೆ ಎಂಬುದನ್ನು ವಿದ್ವಾಂಸರು ವಿವೇಚಿಸಿಕೊಳ್ಳುವುದು ಲೇಸು " ಎಂದು ಅನುಬಂಧದಲ್ಲಿ ಸೂಚಿಸಿದ್ದಾರೆ.

ಋಕಾರದ ಸ್ವರಚಿಹ್ನೆಯಾದ 'ೃ' ಎಂಬುದನ್ನು 'ಋ ಸುಳಿ' ಎಂದಷ್ಟೇ ಕರೆಯುವ ಬದಲು ಕೆಲವರು ಋಕಾರದ ಆದಿಯ ಆಕೃತಿಯನ್ನು ಗಮನಿಸಿ ಅದರಂತೆ ಬಟ್ಟೆತ್ತಾಗಿರುವ ಸುಳಿಯೆಂದು ವಿವರಣಾತ್ಮಕವಾಗಿ 'ವಟ್ಟ ಋ ಸುಳಿ' ಎಂದು ಕರೆದಿದ್ದಾರೆ. ವಟ್ಟ-ಋ-ಸುಳಿ ಎಂದು ಶುದ್ಧವಾಗಿ ಬಿಡಿಸಿಯೇ ಹೇಳಬಹುದಾದುದನ್ನು ಕೂಡಿಸಿ ತ್ವರಿತವಾಗಿ ಉಚ್ಚರಿಸಿದಾಗ ಅದು ವಟ್ಟರ್ಸುಳಿ > ವಟ್ಟರ್ಸುಳಿ > ವಟ್ರ್ರಸುಳಿ > ವಟ್ರಸುಳಿ ಆಗಿ

ಪರಿವರ್ತನೆಗೊಂಡಿರುವಂತಿದೆ. ಈ ಮಾರ್ಪಟ್ಟ ರೂಪ ತೆಲುಗಿನ 'ವಟ್ರಸುಡಿ' ರೂಪಕ್ಕೂ ಹೊಂದಿಕೆಯಾಗಿರುವುದು ಕಂಡು ಬರುತ್ತದೆ. ಉಚ್ಚಾರಣಾ ಸೌಲಭ್ಯದ ದೃಷ್ಟಿಯಿಂದ'ವಟ್ರಸುಳಿ' ಎನ್ನುವುದಕ್ಕಿಂತ ವಟ್ಟೃಸುಟಿ' ಎಂದಾಗಲಿ, 'ವಟ್ಟೃಸುಳಿ' ಎಂದಾಗಲಿ ಉಚ್ಚರಿಸುವುದು ಕಷ್ಟಸಾಧ್ಯವೆಂದು ತೋರದಿರದು. ಆ ಕಾರಣ 'ವಟ್ರಸುಳಿ' ಎಂಬ ಶಬ್ದರೂಪವೆ ಉಚ್ಚಾರಣೆಯ ಬಳಕೆಯಲ್ಲಿ ಉಳಿದುಕೊಳ್ಳುತ್ತದೆಯೆಂದು ತೋರುತ್ತದೆ.

'ನಾಮ ವಿಭಕ್ತಿಗಳು' ಎಂಬ ಭಾಗದಲ್ಲಿ ವಿಭಕ್ತಿ ಪ್ರತ್ಯಯಗಳ ಸ್ವರೂಪ, ಸಂಖ್ಯೆಗಳ ಬಗೆಗೆ ಇರುವ ಪಂಡಿತರ ಅಭಿಪ್ರಾಯಗಳ ಕೂಲಂಕಷವಾದ ಜಿಜ್ಞಾಸೆಯನ್ನು ಕಾಣಬಹುದು. ವ್ಯಾಕರಣದ ಈ ಒಂದು ಸೂಕ್ಷ್ಮ ವಿಷಯವನ್ನು ಇಲ್ಲಿ ಆಳವಾಗಿ ಪರ್ಯಾಲೋಚಿಸಿರುವುದನ್ನು ಗಮನಿಸಬಹುದು. ಈ ಅಧ್ಯಾಯ ಗ್ರಂಥಕರ್ತರ ಶಾಸ್ತ್ರೀಯ ದೃಷ್ಟಿ ಹಾಗೂ ವಿಚಾರ ಶಕ್ತಿಗೆ ದ್ಯೋತಕವಾಗಿದೆಯೆನ್ನಬಹುದು.

ಭಾಷಾ ಶುದ್ಧತೆ, ಛಂದಸ್ಸು ಮತ್ತು ಗುರುಲಘುಗಳ ರಹಸ್ಯವನ್ನು ಕುರಿತ ದೀರ್ಘ ಲೇಖನಗಳು ಕಾವ್ಯಾಭ್ಯಾಸಿಗಳಿಗೆ ಬಹಳ ಉಪಯುಕ್ತವಾದ ವಿಷಯಗಳನ್ನು ಕುರಿತಿವೆ. 'ಪದ್ಯರಚನೆಯ ರಹಸ್ಯ'ವನ್ನು ಕುರಿತ ಲೇಖನ ಅವರ ಕವಿತಾ ಸಾಮರ್ಥ್ಯಕ್ಕೆ ಕೈಗನ್ನಡಿಯಾಗಿದೆ.

ಕನ್ನಡ ಭಾಷಾಶಾಸ್ತ್ರದ ಅಧ್ಯಯನಕ್ಕೆ ಸಹಾಯಕವಾದ ಸಾಮಗ್ರಿಯನ್ನೊದಗಿಸುವ ಹವ್ಯಕ ಭಾಷೆಯ ಲಕ್ಷಣವನ್ನೂ ವೈಶಿಷ್ಟ್ಯವನ್ನೂ ವಿವರಿಸುವ ಅಧ್ಯಾಯವು ಭಾಷಾಭ್ಯಾಸಿಗಳ ಆಸಕ್ತಿಯನ್ನು ಕೆರಳಿಸುವುದು. ಈಗಾಗಲೇ ಹವಿಕರ ಕನ್ನಡ ಶಬ್ದಕೋಶವನ್ನು ಪದ್ಯರೂಪದಲ್ಲಿ ಕನ್ನಡ ವಾಗ್ದೇವಿಗೆ ಸೇವೆ ಸಲ್ಲಿಸಿರುವುದು ಸ್ತುತ್ಯರ್ಹವಾಗಿದೆ.

ಸಂಶೋಧಕನಿಗಿರಬೇಕಾದ ಸಮಗ್ರ ದೃಷ್ಟಿಯ ವೈಶಿಷ್ಟ್ಯವನ್ನು ಸ್ವಾನುಭವದಿಂದ ಸಾಧಾರವಾಗಿ ನಿರೂಪಿಸಿರುವ ಅಧ್ಯಾಯ ಸಂಶೋಧನದ ನೆಲೆಯ ದಿಗ್ದರ್ಶನವನ್ನು ಮಾಡುತ್ತದೆ. ಗ್ರಂಥಾಂತ್ಯದಲ್ಲಿನ ಅನುಬಂಧಗಳು ಓದುಗನಿಗೆ ಉಪಯುಕ್ತವಾಗಿ ಗ್ರಂಥದ ಮೌಲ್ಯವನ್ನು ಹೆಚ್ಚಿಸಿವೆ.

ಕವಿ ಕೇಶವ ಭಟ್ಟರ 'ಸತ್ವಾಲೋಕನಂ' ಎಂಬ ಚಂಪೂಕೃತಿಗೆ ಘನ ಸರ್ಕಾರದ ಪುರಸ್ಕಾರ ದೊರೆತಿರುವುದು ಹೆಮ್ಮೆಯ ಸಂಗತಿ. ಭಾರತೀಯ ಜ್ಞಾನ ಪೀಠದ ಕನ್ನಡ ಸಾಹಿತ್ಯಪ್ರಕಾಶನದ ಮೊದಲ ಗ್ರಂಥವಾಗಿ ಪ್ರಕಟವಾಗಿರುವ ದೇವಪ್ಪ ಕವಿಯ 'ರಾಮ ವಿಜಯ ಕಾವ್ಯ' ಗ್ರಂಥ ಸಂಪಾದನೆಯ ಕಾರ್ಯದಲ್ಲಿ ಅವರಿಗಿರುವ ಆಳವಾದ ಅನುಭವವನ್ನೂ ಸಿಷ್ಪಷ್ಟವಾದ ಪಾಂಡಿತ್ಯವನ್ನೂ ವ್ಯಕ್ತಪಡಿಸಿದೆ. ಹಳಗನ್ನಡದಲ್ಲಷ್ಟೇ ಅಲ್ಲದೆ ಹೊಸಗನ್ನಡದಲ್ಲಿಯೂ ಕವನಗಳನ್ನು ಸರಸವಾಗಿ ರಚಿಸಬಲ್ಲ ಶಕ್ತಿ ಅವರಿಗಿದೆಯೆಂಬುದಕ್ಕೆ ಅವರ 'ತೂಗು ದೀವಿಗೆ—' ಕವನ ಸಂಕಲನವು ಸಾಕ್ಷಿಯಾಗಿದೆ.

ಪ್ರಸ್ತುತ 'ಸಂಶೋಧನ ರತ್ನಮಾಲಿಕೆ'ಯ ಕೆಲವು ಲೇಖನಗಳು ಈಗಾಗಲೇ ಕನ್ನಡ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ಣಾಟಕ ಮೊದಲಾದುವುಗಳಲ್ಲಿ ಪ್ರಕಟವಾಗಿದ್ದು ವಿದ್ವನ್ಮಂಡಲಿಗೆ ಪರಿಚಯವಾಗಿದ್ದುವಾದರೂ ಗ್ರಂಥರೂಪದಲ್ಲಿ ಇನ್ನಿತರ ಸಂಶೋಧನ ಲೇಖನಗಳೊಡನೆ ಒಟ್ಟಿಗೆ ಒಂದೆಡೆ ಅವು ದೊರೆಯುವಂತೆ ಮಾಡಲು ಶ್ರೀ ಭಟ್ಟರು ಹೊತ್ತ ಹೊಣೆಗೆ ತಕ್ಕ ಪ್ರೋತ್ಸಾಹವನ್ನು ವಿದ್ಯಾಸಂಸ್ಥೆಗಳಾದರೂ ನೀಡಿದಲ್ಲಿ ಅವರ ಶ್ರಮಕ್ಕೆ ತಕ್ಕ ಪುರಸ್ಕಾರ ಲಭಿಸಿದಂತಾಗುತ್ತದೆ. ಭಾಷಾ ಸಾಹಿತ್ಯಗಳ ಸಂಶೋಧನೆಯ ಕ್ಷೇತ್ರದಲ್ಲಿ ಆಗುತ್ತಿರುವ ಪ್ರಗತಿಗೆ ಇಂತಹ ಗ್ರಂಥಗಳು ಪ್ರೇರಕ ಶಕ್ತಿಯಾಗಿ ಉಳಿಯುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಅವರ ಮೆಚ್ಚಿನ ಸಂಶೋಧನೆಯ ಸಾಹಿತ್ಯಸೇವೆ ನಿರಂತರವಾಗಿ ಸಾಗಲೆಂದು ಅವರನ್ನು ಹೃತ್ಪೂರ್ವಕ ಅಭಿನಂದಿಸಿ, ಹಾರೈಸುತ್ತೇನೆ.

* * *

ಪ್ರೊ|| ಎಂ. ಮರಿಯಪ್ಪ ಭಟ್ಟ, ಎಂ. ಎ
ಮದ್ರಾಸ್ ವಿಶ್ವವಿದ್ಯಾಲಯ.

೬-೯-೧೯೬೯.

ಮೆಚ್ಚುಗೆ

ಶ್ರೀ ಟಿ ಕೇಶವ ಭಟ್ಟರು ಅಹರ್ನಿಶ ಶ್ರಮಿಸುವ ಘನ ವಿದ್ವಾಂಸರು. ಪ್ರತಿಭೆಯೆಂದರೆ ಶೇಕಡ ೯೯ ಬೆವರು (Perspiration) ಉಳಿದ ಶೇಕಡ

೧ ಸ್ಫೂರ್ತಿ (Inspiration) ಎಂಬ ನಿರ್ವಚನಕ್ಕೆ ಆವರೊಂದು ಉದಾಹರಣೆ. ಒಳ್ಳೆಯ ಲೇಖಕರು, ಸಂಶೋಧಕರು, ಅಧ್ಯಾಪಕರು. 'ಸತ್ವಾಲೋಕನ'ವೆಂಬ ಅವರ ಚಂಪೂ ಕೃತಿ ಅವರ ಕವಿತಾ ಶಕ್ತಿಯನ್ನು ಬೊಟ್ಟಿಟ್ಟು ತೋರುವುದು.

ಇದೀಗ ಒಂಬತ್ತು ಲೇಖನಗಳನ್ನೊಳಗೊಂಡ 'ಸಂಶೋಧನ ರತ್ನಮಾಲಿಕೆ'ಯಲ್ಲಿ ಕನ್ನಡ ಸಂಶೋಧನೆಗೆ ಸಂಬಂಧಿಸಿದ ನವರತ್ನಗಳನ್ನು ಕನ್ನಡಿಗರಿಗೆ ನೀಡಿದ್ದಾರೆ. ಅಕ್ಷರ ಸಂಜ್ಞಾಕಾರ, ನಾಮವಿಭಕ್ತಿಗಳು, ಭಾಷಾಶುದ್ಧತೆಯ ರಹಸ್ಯ, ಛಂದಸ್ಸು ಮತ್ತು ಗುರುಲಘುಗಳ ರಹಸ್ಯ, ಪದ್ಯರಚನೆಯ ರಹಸ್ಯ, ಒನಕೆವಾಡು, ಸಾಂಗತ್ಯದ ಧಾಟಿ ಮತ್ತು ಛಂದಸ್ಸು, ಹವಿಕರ ಕನ್ನಡ, ಸಂಶೋಧನದ ನೆಲೆ ಎಂಬಿವೇ ಆ ರತ್ನಗಳು. ಈ ಸಂಕಲನದಲ್ಲಿ ವ್ಯಾಕರಣ, ಭಾಷಾಶಾಸ್ತ್ರ, ಛಂದಶ್ಶಾಸ್ತ್ರಗಳ ಆಧಾರದ ಮೇಲೆ ಅಮೂಲ್ಯವಾದ ಅಭಿಪ್ರಾಯಗಳನ್ನು ಮಂಡಿಸಿರುತ್ತಾರೆ. 'ಸಂಶೋಧನದ ನೆಲೆ'ಎಂಬ ಲೇಖನದಲ್ಲಿ ಸಂಶೋಧಕರು ಪೂರ್ವಗ್ರಹ ಪೀಡಿತರಾಗಿ ಅನ್ವೇಷಣೆ ನಡೆಸಬಾರದೆಂಬುದನ್ನು ಯುಕ್ತವಾಗಿ ಹೇಳಿರುತ್ತಾರೆ. 'ಸಮಸ್ತ ಭಾರತ'ದ ವಿಷಯವಾಗಿ ಅವರು ಕೊಟ್ಟ ವಿವರಣೆಗಳು ಸ್ವಾರಸ್ಯವಾಗಿವೆ. ಲಿಪಿಯ ವಿಕಾಸ, ತಲೆಕೊಟ್ಟುಗಳು, ಒತ್ತುಗಳು–ಮುಂತಾದವುಗಳ ವಿಚಾರದಲ್ಲಿ ಅವರ ಸಂಶೋಧನಾ ದೃಷ್ಟಿಯನ್ನು ಕಾಣಬಹುದು. ವಿಭಕ್ತಿಗಳ ಕುರಿತು ಈ ವರೆಗೆ ನಡೆದ ವಾದ ವಿವಾದಗಳನ್ನು ಅವಗಾಹನೆಗೆ ತೆಗೆದುಕೊಂಡು ಅವರ ಅಭಿಪ್ರಾಯವನ್ನು ಪ್ರತಿಪಾದಿಸಿರುತ್ತಾರೆ. ಒಟ್ಟಿನಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಇದೊಂದು ಉಪಯುಕ್ತ ಸ್ವಾಗತಾರ್ಹ ಕೃತಿ.

* * *

ಮೈಸೂರು.
10-10-1969

ಪ್ರೊ|| ದೇ. ಜವರೇಗೌಡ, ಎಂ. ಎ.
ಪ್ರಾಧ್ಯಾಪಕರು, ಕನ್ನಡ ಮತ್ತು ಜಾನಪದ ವಿಭಾಗ.
ನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ. ಮಾನಸ ಗಂಗೋತ್ರಿ,
ಮೈಸೂರು ವಿಶ್ವ ವಿದ್ಯಾನಿಲಯ.

ಶ್ರೀ ಕೇಶವ ಭಟ್ಟರು ತಮ್ಮ 'ಸಂಶೋಧನ ರತ್ನಮಾಲಿಕೆ'ಗೆ ನನ್ನ ಅಭಿಪ್ರಾಯ ಬೇಕೆಂದು ಕೇಳಿದ್ದಾರೆ. ಒಳ್ಳೆಯ ಗ್ರಂಥಕ್ಕೆ ಯಾರ ವಕೀಲಿಯೂ ಬೇಕಿಲ್ಲ. ಇಲ್ಲಿ ಸಂಗ್ರಹಗೊಂಡಿರುವ ಅವರ ಲೇಖನಗಳನ್ನು ಈ ಮೊದಲೇ ಓದಿದ್ದೇನೆ, ಮೆಚ್ಚಿಕೊಂಡಿದ್ದೇನೆ. ಬಹು ಜಟಿಲವಾದ ಹಾಗೂ ಸಮಸ್ಯಾತ್ಮಕವಾದ ವಿಷಯಗಳನ್ನಾರಿಸಿಕೊಂಡು, ಆಳವಾಗಿ ಅಭ್ಯಸಿಸಿ, ನಾಲ್ಕಾರು ಕಡೆಗಳಿಂದ ಪೋಷಕ ಸಾಮಗ್ರಿಯನ್ನು ಕ್ರೋಢೀಕರಿಸಿ, ಸ್ವಂತವಾಗಿ ವಿಶ್ಲೇಷಿಸಿ, ವಿಚಾರಿಸಿ, ಭಾಷಾಶಾಸ್ತ್ರ ಛಂದಶ್ಶಾಸ್ತ್ರಗಳಿಗೆ ಸಂಬಂಧಿಸಿದ ಕೆಲವು ವಿಷಯಗಳ ಮೇಲೆ ಇಲ್ಲಿ ಅಪಾರವಾದ ಬೆಳಕನ್ನು ಚೆಲ್ಲಿದ್ದಾರೆ. ಅಕ್ಷರಗಳ ವಿಷಯದಲ್ಲಿ ಗುರುಲಘು ಸಾಂಗತ್ಯಗಳ ವಿಚಾರದಲ್ಲಿ ಅವರು ಕೈಗೊಂಡಿರುವ ಕೆಲವು ನಿರ್ಣಯಗಳು ನಿಜಕ್ಕೂ ಆಯಾಯ ಶಾಖೆಗಳ ಜ್ಞಾನನಿಧಿಗೆ ವಿಶೇಷ ಕೊಡುಗೆಗಳಾಗಿವೆ.

ಶ್ರೀ ಭಟ್ಟರ ಪ್ರತಿಭೆ ಪಾಂಡಿತ್ಯ ವಿಚಾರಶಕ್ತಿ ಸತ್ಯಾನುರಕ್ತಿ ಅನ್ವೇಷಣ ಕುತೂಹಲ ಜ್ಞಾನೋಪಾಸನಾ ನಿಷ್ಠೆ ಮೊದಲಾದ ಗುಣಗಳು ಪ್ರತಿಯೊಂದು ಲೇಖನದಲ್ಲಿಯೂ ಮಿಡಿಯುತ್ತವೆ. ಇಂಥ ಅಮೂಲ್ಯ ಲೇಖನಗಳಿಂದ ಕನ್ನಡ ಸಂಶೋಧನ ಕ್ಷೇತ್ರವನ್ನು ಹುಲುಸುಗೊಳಿಸಿರುವ ಶ್ರೀ ಭಟ್ಟರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

* * *

ಇದೇ ಲೇಖಕನ ಪ್ರಕಟಿತ ಗ್ರಂಥಗಳು

೧. **ಭಾಷಾದೀಪಿಕೆ**– ವ್ಯಾಕರಣ ಛಂದೋಲಂಕಾರ ವಿಷಯಕ (೧೯೫೬). ಬೆಲೆ ರೂ. ೧-೨೫

೨. **ಭಾಷಾಭಾಸ್ಕರ**– ವ್ಯಾಕರಣ ಮತ್ತು ಪ್ರಬಂಧ ವಿಷಯಕ (೧೯೫೯). ರೂ. ೦-೭೫

೩. **ಸತ್ವಾಲೋಕನ ಕಾವ್ಯ**—ಸರಕಾರದಿಂದ ಬಹುಮಾನ ಪಡೆದ ಹಳಗನ್ನಡ ಶೈಲಿಯ ಹೊಸ ಚಂಪೂಕಾವ್ಯ. ಬೆಲೆ ರೂ. ೩–೫೦, ಉತ್ತಮ ಪ್ರತಿ ರೂ. ೫-೦೦

೪. **ತೂಗುದೀವಿಗೆ**—ಕವನಸಂಕಲನ (೧೯೬೧) ಬೆಲೆ ರೂ. ೧-೦೦

೫. **ರಾಮವಿಜಯ ಕಾವ್ಯ**– (ಸಂಪಾದಿತ) ದೇವಪ್ಪಕವಿ ಕೃತ ಸಾಂಗತ್ಯ ಗ್ರಂಥ. ಭಾರತೀಯ ಜ್ಞಾನಪೀಠದ ಕನ್ನಡ ಪ್ರಕಾಶನದ ಮೊದಲ ಗ್ರಂಥವಿದು (೧೯೬೯).

'ಸತ್ವಾಲೋಕನ'ದ—ಕುರಿತು. . .

ಕೇಶವ ಕವಿಕೃತ ಕಾವ್ಯಂ। ಪ್ರಾಶನಯೋಗ್ಯಂ ಸದಂತರಂಗಂ ತೀರ್ಥಂ
ಆ ಶಿವನುಂ ಕೇಶವನುಂ। ಪೋಷಿತರೇಕಾಂಗವಾಗಿ ನಿಂದರ್ ಕೃತಿಯೊಳ್ ॥

—ಡಾ॥ ದ. ರಾ. ಬೇಂದ್ರೆ.

ಇದು ಕನ್ನಡ ಸಾಹಿತ್ಯದಲ್ಲಿ ಪರಂಪರಾಗತವಾಗಿ ಬಂದಿರುವ ಶಬರಶಂಕರ ವಿಲಾಸವೇ ಮೊದಲಾದ ಕಾವ್ಯಗಳಂತೆ ಚೆನ್ನಾಗಿದೆ.

—ಮಂ. ಗೋವಿಂದ ಪೈ.

ಕಂದವೃತ್ತಗಳನ್ನು ಬರೆವುದರಲ್ಲಿ ಭಟ್ಟರು ಸಿದ್ಧಹಸ್ತರು. ಒಳ್ಳೆಯ ಗಮಕಿ ಮನಸ್ಸು ಮಾಡಿದರೆ ಅವನ್ನು ಕುಣಿಸಬಹುದು.

—ನಂ. ಅಶ್ವತ್ಥನಾರಾಯಣ, ಗಮಕ ವಿದ್ವಾನ್.

ಸತ್ವಾಲೋಕನ ಕಾವ್ಯಮ। ನತ್ಯಾದರದಿಂದವೋದಿ ರಸದುನ್ನತಿಯಂ
ತತ್ವಾಲೋಕನಮಂ ಮೇಣ್। ಬಿತ್ತರಿಸುವ ಕೃತಿಗೆ ಮೆಚ್ಚದರಾರೀ ಧರೆಯೊಳ್ ॥

—ಡಾ॥ ಆರ್. ಸಿ. ಹಿರೇಮಠ.

ಬೇಗನೆ ಪ್ರಕಟವಾಗುವವು

೧. **ಹಾಡಿನ ಚೂಡಾಮಣಿ**—ಜನಪದ ಗೀತ ಸಂಕಲನ. ಇದರ ಕೈ ಬರೆಹದ ಪ್ರತಿಗೆ ಸರಕಾರದಿಂದ ೧೯೬೨ ರಲ್ಲಿ ಬಹುಮಾನ ಧನ ದೊರಕಿದೆ.

೨. **ಪ್ರಶ್ನೋತ್ತರ ರತ್ನಮಾಲಿಕೆ**—ಅಮೋಘವರ್ಷ (ನೃಪತುಂಗ) ಕೃತ ಸಂಸ್ಕೃತ ನೀತಿಗ್ರಂಥ. ಹಳಗನ್ನಡದ ಟೀಕೆಯುಳ್ಳುದು, ಸ್ವಕೃತ ಕಂದಗಳಲ್ಲಿ ಅನುವಾದವುಳ್ಳುದು. ವಿಮರ್ಶೆಯುಕ್ತ ಪ್ರಸ್ತಾವನೆಯುಳ್ಳುದು.

೩. **ಬಸವ ವಚನ ವೃತ್ತಶತಕ**—ಬಸವಣ್ಣನವರ ವಚನಗಳಿಂದ ಆಯ್ದ ನೂರೆಂಟನ್ನು ಸಮವೃತ್ತಗಳಲ್ಲಿ ನಿರೂಪಿಸುವ ಶತಕ ಕಾವ್ಯ.

ಇವುಗಳ ಪ್ರಕಟನಕ್ಕಾಗಿ

ಚಿರಸಾಹಿತ್ಯ ಪ್ರಕಾಶನ
೨೮, ಮಾಳಿಗೆ, ೩ ನೇ ಮೆಯಿನ್ ರಸ್ತೆ,
ಎಸ್.ಆರ್. ಕಾಲೊನಿ, ಬೆಂಗಳೂರು-೧೯

ಪ್ರಕಾಶಕ :
ಟಿ. ಕೇಶವ ಭಟ್ಟ, ಎಂ.ಎ., ಬಿ.ಓ.ಎಲ್.
ವಿದ್ವಾನ್, ವಿಶಾರದ.

ಇಲ್ಲಿ—

ಉತ್ತಮ ಸಾಹಿತ್ಯ (ಜಾನಪದ ಮತ್ತು ಇತರ), ಸಾಹಿತ್ಯಶಾಸ್ತ್ರ, ಸಂಶೋಧನ, ಸಂಪಾದನ, ವಿಮರ್ಶನ, ಸಂಗ್ರಹಣ—ಮುಂತಾದ ವಿಚಾರ ಗರ್ಭಿತ ಚಿರಂತನ ರಚನೆಗಳ ಸುಂದರ ಪ್ರಕಟನ. ವರ್ಷದಲ್ಲಿ ೧೮ ರೂ.ಗಳಿಗೆ ಕಡಮೆಯಾಗದ ಬೆಲೆಯ ಅಮೂಲ್ಯ ಸಾಹಿತ್ಯ ಕೃತಿಗಳನ್ನು ಪಡೆವ ಸೌಲಭ್ಯ.

ಇದಕ್ಕೆ—

ವಾರ್ಷಿಕ ವರ್ಗಣಿ ರೂ. ೧೫-೦೦ ಮಾತ್ರ. ವರ್ಷಾವಧಿ-ಯುಗಾದಿ.

[ಪ್ರಕಾಶನಕ್ಕೆ ಪೋಷಕರನ್ನು ಸ್ವಾಗತಿಸುವ ವ್ಯವಸ್ಥೆ ಬೇರೆಯಿದೆ. ವಾರ್ಷಿಕ ವರ್ಗಣಿಯೊಡನೆ ಪ್ರೋತ್ಸಾಹ ಧನವನ್ನು ಹಾಗೂ ಒಂದು ವರ್ಷಕ್ಕಿಂತ ಹೆಚ್ಚು ವರ್ಷಗಳ ವರ್ಗಣಿಯನ್ನು ಮುಂದಾಗಿ ಸಲ್ಲಿಸಲು ಪ್ರಾರ್ಥನೆಯಿದೆ.]

ಇಂದೇ ಗ್ರಾಹಕರಾಗಿ, ಪೋಷಕರಾಗಿ, ಪ್ರೋತ್ಸಾಹಕರಾಗಿ !
ವಾಗ್ದೇವಿಯ ಕೃಪೆಗೆ ಪಾತ್ರರಾಗಿರಿ !

* * *

Shri T. Keshava Bhatta is a gifted writer with research aptitude. From the edition of Ramavijaya Kavya prepared by him for the **Jnanapitha** Kannada Series, I can say that he has mastered the technique of critically editing Kannada Classics. His essays in the **Samsodhana Ratnamalike** bear testimony to his deep understanding of the nature of language and metrics. They are of great help to Kannada readers. The author deserves our Congratulations.

Dr. A. N. UPADHYE

ಆಳವಾದ ಅಧ್ಯಯನದ, ಆಧಾರಯುಕ್ತ ವಿವೇಚನೆಯ, ದೀರ್ಘಪರ್ಯಾಲೋಚನೆಯ ಫಲಿತಾಂಶವೇ ಈ ಗ್ರಂಥರಚನೆ.

ಪ್ರೊ॥ ಡಿ. ಎಲ್. ನರಸಿಂಹಾಚಾರ್
(ಮುನ್ನುಡಿಯಿಂದ)